ಶುಕ್ರವಾರ, ಸೆಪ್ಟೆಂಬರ್ 17, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 259 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಕನಸು ಕಾಣುವುದಿಲ್ಲ ಎಂದಿರುವ 'ಶುಗರ್ ಫ್ಯಾಕ್ಟರಿ' ಬೆಡಗಿ, ನಟ ಅದ್ವಿತಿ ಶೆಟ್ಟಿ ಕೈಯಲ್ಲಿ 'ಧೀರ ಸಾಮ್ರಾಟ್' ಹಾಗೂ 'ಡಾ.ಅಭಿ 007' ಎಂಬ ಎರಡು ಹೊಸ ಚಿತ್ರಗಳಿವೆ



ಪ್ರಧಾನಿ ನರೇಂದ್ರ ಮೋದಿ ಅವರ 71ನೇ ಜನ್ಮದಿನ ಸಂದರ್ಭದ ವಿಶೇಷ ಪುಟ 9

ಗುಜರಾತ್ ಸಂಪುಟ: ಹಳಬರೆಲ್ಲರಿಗೂ ಕೊಕ್ 11

ಸೆನ್ಸೆಕ್ಸ್	ನಿಫ್ಟಿ	₹/$
59,141 ▲	17,629 ▲	73.52 ▼

ಶಾಲಾ ಶುಲ್ಕ: ರಿಯಾಯಿತಿಯನ್ನು ಶೇ 15ಕ್ಕೆ ನಿಗದಿಪಡಿಸಿದ ಹೈಕೋರ್ಟ್

ಶುಲ್ಕ: ಆದೇಶ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣಕ್ಕೆ ಖಾಸಗಿ ಶಾಲೆಗಳಲ್ಲಿನ 2020–21ನೇ ಸಾಲಿನ ಬೋಧನಾ ಶುಲ್ಕವನ್ನು ಶೇ 30ರಷ್ಟು ಕಡಿತಗೊಳಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶ ರದ್ದುಪಡಿಸಿರುವ ಹೈಕೋರ್ಟ್, ಶೇ 15ರಷ್ಟು ಮಾತ್ರ ರಿಯಾಯಿತಿ ನೀಡುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸೂಚಿಸಿದೆ.

ಸರ್ಕಾರದ ಆದೇಶ ಅನುಸರಿಸಿ 2020–21ರಲ್ಲಿ ಶೇ 70ರಷ್ಟು ಶುಲ್ಕ (2019–20ರಲ್ಲಿ ಪಾವತಿಸಿದ್ದ ಬೋಧನಾಶುಲ್ಕದ) ಪಾವತಿಸಿದ್ದ ಪೋಷಕರು, ಹಿಂದಿನ ಸಾಲಿನ ಲೆಕ್ಕದಲ್ಲಿ ಹೆಚ್ಚುವರಿಯಾಗಿ ಶೇ 15ರಷ್ಟನ್ನು ಪಾವತಿಸಬೇಕಾಗುತ್ತದೆ. 2021–22ರ ಶೈಕ್ಷಣಿಕ ಸಾಲಿಗೆ ಇದು ಅನ್ವಯವಾಗುವುದಿಲ್ಲ.

ಸರ್ಕಾರ ಹೊರಡಿಸಿದ್ದ ಶುಲ್ಕ ರಿಯಾಯಿತಿ ಆದೇಶ ಪ್ರಶ್ನಿಸಿ ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ (ಕ್ಯಾಮ್ಸ್) ಹೈಕೋರ್ಟ್‌ನಲ್ಲಿ ತಕರಾರು ಅರ್ಜಿ ಸಲ್ಲಿಸಿತ್ತು. ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ಪೀಠ ಗುರುವಾರ ಪ್ರಕಟಿಸಿತು.

ಅಲ್ಲದೇ, ಖಾಸಗಿ ಶಾಲೆಗಳ ಶುಲ್ಕ ನಿಗದಿಪಡಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕ ಸದಸ್ಯ ಪೀಠ, ಕೋವಿಡ್ ಕಾರಣದಿಂದ ಬೋಧನಾ ಶುಲ್ಕದಲ್ಲಿ ಶೇ 30ರಷ್ಟು ರಿಯಾಯಿತಿ ನೀಡಿ 2021ರ ಜ.29ರಂದು ಸರ್ಕಾರ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಿದೆ.

ಇಂಡಿಯನ್ ಸ್ಕೂಲ್ ಆಫ್ ಜೋಧಪುರ ಹಾಗೂ ರಾಜಸ್ತಾನ ಸರ್ಕಾರದ ನಡುವಿನ ಪ್ರಕರಣದಲ್ಲಿ 2021ರ ಮೇ 3ರಂದು ತೀರ್ಪು ನೀಡಿರುವ ಸುಪ್ರೀಂ ಕೋರ್ಟ್, ಬೋಧನಾ ಶುಲ್ಕದಲ್ಲಿ ಶೇ 15ರಷ್ಟು ರಿಯಾಯಿತಿ ನೀಡುವಂತೆ ತಿಳಿಸಿತ್ತು. ಇದನ್ನು ಆಧರಿಸಿ ಹೈಕೋರ್ಟ್ ಪೀಠ ಈ ಆದೇಶ ನೀಡಿದೆ.

'ಸರ್ಕಾರದ ಆದೇಶದಿಂದ ಶಾಲೆಗಳಲ್ಲಿ ಕಡಿಮೆ ಶುಲ್ಕ ಸಂಗ್ರಹವಾಗಲಿದೆ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ವೇತನ ಪಾವತಿಸಲು ಕಷ್ಟವಾಗುತ್ತದೆ. ಶಾಲೆಗಳ ಸಮರ್ಪಕ ಕಾರ್ಯನಿರ್ವಹಣೆ ಸಾಧ್ಯವಾಗುವುದಿಲ್ಲ. ಆನ್‌ಲೈನ್ ಶಿಕ್ಷಣ ನೀಡುತ್ತಿರುವುದರಿಂದ ಖರ್ಚು ಹೆಚ್ಚಾಗುತ್ತಿದೆ' ಎಂದು ಒಕ್ಕೂಟ ಅರ್ಜಿಯಲ್ಲಿ ತಿಳಿಸಿತ್ತು.

'ಕಳೆದ ವರ್ಷ ನಿಗದಿಪಡಿಸಿದ್ದ ಶುಲ್ಕವನ್ನೇ ಪೋಷಕರು ಪಾವತಿಸಿಲ್ಲ. ಕೋವಿಡ್ ಪರಿಸ್ಥಿತಿ ಉಲ್ಲೇಖಿಸಿ ಬೋಧನಾ ಶುಲ್ಕ ಕಡಿಮೆ ಮಾಡಲು ರಾಜ್ಯ ಸರ್ಕಾರಕ್ಕೆ ಹಕ್ಕಿಲ್ಲ. ಈ ಆದೇಶ ಶಿಕ್ಷಣ ಕಾಯ್ದೆಯ ನಿಯಮಗಳಿಗೆ ವಿರುದ್ಧವಾಗಿದೆ' ಎಂದೂ ಒಕ್ಕೂಟ ವಾದಿಸಿತ್ತು.

ತೀರ್ಪು ಸ್ವಾಗತಾರ್ಹ: ಖಾಸಗಿ ಶಾಲೆಗಳ ಒಕ್ಕೂಟ

'ಶಾಲಾ ಶುಲ್ಕ ಗೊಂದಲಕ್ಕೆ ಹೈಕೋರ್ಟ್ ತೆರೆ ಎಳೆದಿದೆ. ಶೇ 15ರಷ್ಟು ಶುಲ್ಕ ಕಡಿತಗೊಳಿಸಬೇಕೆಂಬ ತೀರ್ಪು ಸ್ವಾಗತಾರ್ಹ' ಎಂದು ಖಾಸಗಿ ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಹೇಳಿದರು.

'ಇಡೀ ದೇಶಕ್ಕೆ ಅನ್ವಯವಾಗುವಂತೆ ಈ ಹಿಂದೆಯೇ ಶೇ 15ರಷ್ಟು ಶುಲ್ಕ ಕಡಿತಕ್ಕೆ ಸುಪ್ರೀಂ ಕೋರ್ಟ್ ಸಲಹೆ ನೀಡಿತ್ತು. ಅದಕ್ಕೆ ಪೂರಕವಾಗಿ ಹೈಕೋರ್ಟ್ ಕೂಡಾ ತೀರ್ಪು ನೀಡಿದೆ' ಎಂದರು.

'ರಾಜ್ಯ ಸರ್ಕಾರ ಅವೈಜ್ಞಾನಿಕವಾಗಿ ಶುಲ್ಕ ಕಡಿತ ಮಾಡಿತ್ತು. ಅಲ್ಲದೆ, ಶೇ 30ರಷ್ಟು ಕಡಿತ ಎಂದು ಹೇಳಿದ್ದರೂ ಇತರ ಶುಲ್ಕ ಕಡಿತಗಳನ್ನು ಸೇರಿಸಿದರೆ ಒಟ್ಟು ಪ್ರತಿ ಶಾಲೆಗೆ ಶೇ 40ರಿಂದ ಶೇ 50ರಷ್ಟು ಆಗುತ್ತಿತ್ತು. ಹೀಗಾಗಿ, ಸರ್ಕಾರದ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೆವು' ಎಂದು ಅವರು ತಿಳಿಸಿದರು.

'ಕೆಲವು ಶಾಲೆಗಳು ಈಗಾಗಲೇ ಶೇ 15ಕ್ಕಿಂತ ಹೆಚ್ಚು ಶುಲ್ಕ ಕಡಿತ ಮಾಡಿವೆ. ಅವೈಜ್ಞಾನಿಕವಾಗಿ ಶುಲ್ಕ ಕಡಿಮೆ ಮಾಡಿದ್ದರಿಂದ ಸಣ್ಣಪುಟ್ಟ ಶಾಲೆಗಳು ತೀವ್ರ ಆರ್ಥಿಕ ಸಮಸ್ಯೆಗೆ ಸಿಲುಕಿದ್ದವು. ಶುಲ್ಕ ಪಾವತಿಸಲು ಸಮಸ್ಯೆ ಇರುವ ಪೋಷಕರು ಆಯಾ ಶಿಕ್ಷಣ ಸಂಸ್ಥೆಗಳಿಗೆ ತೆರಳಿ ವಿನಾಯಿತಿ ಕೇಳಿ ಪಡೆದುಕೊಳ್ಳಬಹುದು' ಎಂದೂ ಹೇಳಿದರು.

'ಹೈಕೋರ್ಟ್ ನಿರ್ದೇಶನವನ್ನು ಪಾಲಿಸಲು ನಾವು ಬದ್ಧರಿರುತ್ತೇವೆ' ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಸಂಘಟನೆಯ (ರುಪ್ಸಾ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಹೇಳಿದರು.



ಗಜಪಡೆ ದಸರೆಯಲ್ಲಿ ಭಾಗವಹಿಸಲಿರುವ ಗಜಪಡೆಯನ್ನು ಮೈಸೂರು ಅರಮನೆ ಆವರಣಕ್ಕೆ ಗುರುವಾರ ಕರೆತರಲಾಯಿತು

ಗೃಹಸಾಲ: ಎಸ್‌ಬಿಐನಿಂದ ಗ್ರಾಹಕರಿಗೆ ಹಬ್ಬದ ಕೊಡುಗೆ

ಮುಂಬೈ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಗೃಹಸಾಲ ಪಡೆಯುವ ಗ್ರಾಹಕರಿಗೆ ಹಬ್ಬದ ಕೊಡುಗೆಗಳನ್ನು ಪ್ರಕಟಿಸಿದೆ. ಕ್ರೆಡಿಟ್ ಸ್ಕೋರ್ ಆಧಾರದ ಮೇಲೆ ಗೃಹಸಾಲದ ಮೊತ್ತ ಎಷ್ಟೇ ಇದ್ದರೂ ಶೇಕಡ 6.70ರಿಂದ ಬಡ್ಡಿದರ ಆರಂಭವಾಗಲಿದೆ.

ಈ ಹಿಂದೆ, ₹ 75 ಲಕ್ಷಕ್ಕಿಂತ ಅಧಿಕ ಮೊತ್ತದ ಗೃಹಸಾಲ ಪಡೆಯುವವರು ಶೇ 7.15ರಷ್ಟು ಬಡ್ಡಿ ನೀಡಬೇಕಿತ್ತು. ಹೊಸ ಕೊಡುಗೆಯ ಅಡಿ, ಗ್ರಾಹಕರು ಶೇ 6.70ರ ಬಡ್ಡಿ ದರದಲ್ಲಿ ಯಾವುದೇ ಮೊತ್ತದ ಗೃಹಸಾಲ ಪಡೆಯಬಹುದು ಎಂದು ಎಸ್‌ಬಿಐ ಪ್ರಕಟಣೆಯಲ್ಲಿ ತಿಳಿಸಿದೆ.



ಹೊಸ ಕೊಡುಗೆಯಿಂದಾಗಿ, ಬಡ್ಡಿ ಪಾವತಿಯಲ್ಲಿ ಶೇ 0.45ರಷ್ಟು ಉಳಿತಾಯ ಆಗಲಿದೆ. 30 ವರ್ಷಗಳ ಅವಧಿಗೆ ₹ 75 ಲಕ್ಷದ ಗೃಹಸಾಲ ಪಡೆದರೆ ₹ 8 ಲಕ್ಷಕ್ಕೂ ಹೆಚ್ಚಿನ ಮೊತ್ತವನ್ನು ಬಡ್ಡಿಯ ರೂಪದಲ್ಲಿ ಪಾವತಿಸುವುದು ಉಳಿಯಲಿದೆ ಎಂದು ಮಾಹಿತಿ ನೀಡಿದೆ.


ಈ ಮೊದಲು, ಮಾಸಿಕ ವೇತನ ಇಲ್ಲದ ಗ್ರಾಹಕರು ಗೃಹಸಾಲ ಪಡೆದಾಗ ಅವರು ವೇತನದಾರರು ಪಾವತಿಸುವುದಕ್ಕಿಂತ ಶೇ 0.15ರಷ್ಟು ಹೆಚ್ಚು ಬಡ್ಡಿ ಪಾವತಿಸಬೇಕಿತ್ತು. ಈಗ ಬ್ಯಾಂಕ್ ಈ ನಿಯಮವನ್ನು ಇಲ್ಲವಾಗಿಸಿದೆ. ಈಗ, ಗೃಹಸಾಲ ಪಡೆಯುವವರಿಗೆ ಅವರ ಉದ್ಯೋಗದ ಆಧಾರದ ಮೇಲೆ ಹೆಚ್ಚುವರಿ ಬಡ್ಡಿ ಇರುವುದಿಲ್ಲ. ಇದರಿಂದಾಗಿ ವೇತನ ಪಡೆಯದ ಗ್ರಾಹಕರಿಗೆ ಬಡ್ಡಿದರ ಪಾವತಿಯಲ್ಲಿ ಶೇ 0.15ರಷ್ಟು ಉಳಿತಾಯ ಆಗಲಿದೆ.

'ಸಾಮಾನ್ಯವಾಗಿ, ರಿಯಾಯಿತಿ ಬಡ್ಡಿದರಗಳು ನಿರ್ದಿಷ್ಟ ಮಿತಿವರೆಗಿನ ಸಾಲಕ್ಕೆ ಮಾತ್ರ ಅನ್ವಯ ಆಗುತ್ತವೆ, ಅವು ಗೃಹಸಾಲ ಪಡೆಯುವವರ ಉದ್ಯೋಗವನ್ನು ಅವಲಂಬಿಸಿರುತ್ತವೆ. ಆದರೆ, ಈ ಬಾರಿ ಸಾಲದ ಮೊತ್ತ ಮತ್ತು ಉದ್ಯೋಗವನ್ನು ಪರಿಗಣಿಸದೆಯೇ ಕೊಡುಗೆಗಳನ್ನು ಪ್ರಕಟಿಸಲಾಗಿದೆ' ಎಂದು ಬ್ಯಾಂಕ್‌ನ ರಿಟೇಲ್ ಮತ್ತು ಡಿಜಿಟಲ್ ಬ್ಯಾಂಕಿಂಗ್ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಸಿ.ಎಸ್. ಶೆಟ್ಟಿ ತಿಳಿಸಿದ್ದಾರೆ.

ಸಂಸ್ಕರಣಾ ಶುಲ್ಕವನ್ನು ಕೈಬಿಟ್ಟಿರುವುದಾಗಿ ಬ್ಯಾಂಕ್ ತಿಳಿಸಿದೆ.

ಉತ್ತಮ ರಸ್ತೆಗಳು ಬೇಕು ಎಂದರೆ ಹಣ ನೀಡಬೇಕು: ಗಡ್ಕರಿ

ಸೋಹನಾ, ಹರಿಯಾಣ (ಪಿಟಿಐ): 'ದೇಶದಲ್ಲಿ ಉತ್ತಮ ರಸ್ತೆಗಳು, ಸಂಚಾರಕ್ಕಾಗಿ ಮೂಲಸೌಕರ್ಯಗಳು ಬೇಕು ಎಂದರೆ ಜನರು ಹಣ ನೀಡಬೇಕಾಗುತ್ತದೆ' ಎಂದು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಗುರುವಾರ ಹೇಳಿದರು.



ದೆಹಲಿ–ಮುಂಬೈ ಎಕ್ಸ್‌ಪ್ರೆಸ್‌ವೇ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದ ನಂತರ ಅವರು ಮಾತನಾಡಿದರು.

ಟೋಲ್ ಶುಲ್ಕಗಳಿಂದಾಗಿ ಪ್ರಯಾಣದ ವೆಚ್ಚ ಹೆಚ್ಚುತ್ತಿದೆ ಎಂಬ ದೂರುಗಳನ್ನು ಪ್ರಸ್ತಾಪಿಸಿದ ಅವರು,' ಹವಾ ನಿಯಂತ್ರಿತ ಕಲ್ಯಾಣಮಂಟಪದಲ್ಲಿ ಮದುವೆ ಮಾಡಬೇಕು ಎಂದರೆ ನೀವು ಹಣ ನೀಡಬೇಕು. ಇಲ್ಲದಿದ್ದರೆ, ಹೊಲದಲ್ಲಿಯೇ ಮದುವೆ ಕಾರ್ಯಕ್ರಮ ಆಯೋಜಿಸಬೇಕು' ಎಂದು ಹೇಳಿದರು.


12ನೇ ಪುಟ ನೋಡಿ

ಸ್ಥಳೀಯ ಸಂಸ್ಥೆ: 2 ತಿಂಗಳಲ್ಲಿ ಮೀಸಲಾತಿ ಪ್ರಕಟಿಸಿ –ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 56 ನಗರ ಸ್ಥಳೀಯ ಸಂಸ್ಥೆಗಳಿಗೆ ಎರಡು ತಿಂಗಳಲ್ಲಿ ಮೀಸಲಾತಿ ಅಧಿಸೂಚನೆ ಹೊರಡಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಸ್ವಯಂ ಪ್ರೇರಿತ ಅರ್ಜಿ ದಾಖಲಿಸಿಕೊಂಡಿರುವ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ನೇತೃತ್ವದ ವಿಭಾಗೀಯ ಪೀಠ, ರಾಜ್ಯ ಚುನಾವಣಾ ಆಯೋಗ (ಎಸ್‌ಇಸಿ) ನೀಡಿದ



ವಸ್ತುಸ್ಥಿತಿ ವರದಿ ಪರಿಶೀಲಿಸಿತು.

'ಹಲವು ಸ್ಥಳೀಯ ಸಂಸ್ಥೆಗಳ ಅವಧಿ 2021ರ ಜೂನ್‌ನಲ್ಲೇ ಮುಕ್ತಾಯವಾಗಿದೆ. ಕಲಬುರ್ಗಿ, ಬೆಳಗಾವಿ, ಹುಬ್ಬಳ್ಳಿ– ಧಾರವಾಡ ಪಾಲಿಕೆಗಳಿಗೆ ಸೆ.6ರಂದು ಯಶಸ್ವಿಯಾಗಿ ಚುನಾವಣೆ ನಡೆಸಲಾಗಿದೆ. ಮೀಸಲಾತಿ ಪಟ್ಟಿ ಇಲ್ಲದೆ ಉಳಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣಾ ಪ್ರಕ್ರಿಯೆ ಆರಂಭಿಸಲು ಆಗುತ್ತಿಲ್ಲ' ಎಂದು ಆಯೋಗದ ಪರ ವಕೀಲ ಕೆ.ಎನ್. ಫಣೀಂದ್ರ ವಿವರಿಸಿದರು.

ಮೀಸಲಾತಿ ಪಟ್ಟಿಯನ್ನು ಕೂಡಲೇ ಪ್ರಕಟಿಸುವಂತೆ ಸರ್ಕಾರಕ್ಕೆ ಸೂಚಿಸಿದ ಪೀಠ, ನ.17ಕ್ಕೆ ವಿಚಾರಣೆ ಮುಂದೂಡಿತು.

₹ 600 ಕೋಟಿ ಮೌಲ್ಯದ ಸ್ಕೂಟರ್‌ಗಳ ಮಾರಾಟ: ಓಲಾ

ನವದೆಹಲಿ (ಪಿಟಿಐ): ಓಲಾ ಎಸ್1 ವಿದ್ಯುತ್ ಚಾಲಿತ ಸ್ಕೂಟರ್ ಬಿಡುಗಡೆ ಮಾಡಿದ 24 ಗಂಟೆಗಳ ಒಳಗಾಗಿ ₹ 600 ಕೋಟಿಗೂ ಹೆಚ್ಚಿನ ಮೌಲ್ಯದ ಸ್ಕೂಟರ್‌ಗಳು ಮಾರಾಟ ಆಗಿವೆ ಎಂದು ಕಂಪನಿಯ ಸಹ ಸ್ಥಾಪಕ ಭವಿಷ್ ಅಗರ್ವಾಲ್ ಗುರುವಾರ ತಿಳಿಸಿದ್ದಾರೆ.

ಪ್ರತಿ ಸೆಕೆಂಡ್‌ಗೆ ನಾಲ್ಕು ಸ್ಕೂಟರ್‌ಗಳನ್ನು ಮಾರಾಟ ಮಾಡಲಾಗಿದೆ. ಗುರುವಾರ ಮಧ್ಯರಾತ್ರಿ ವೇಳೆಗೆ ಖರೀದಿ ಪ್ರಕ್ರಿಯೆ ಸ್ಥಗಿತಗೊಳ್ಳಲಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಒಳ ಪುಟಗಳಲ್ಲಿ
'ಶಿಕ್ಷಕರ ವೇತನ ತಾರತಮ್ಯ ನಿವಾರಣೆಗೆ ಸಭೆ' 4



ಮಕ್ಕಳಲ್ಲಿ ಹೆಚ್ಚಿದ ವೈರಾಣು ಸೋಂಕು: ಹಾಸಿಗೆ ಸಿಗದೆ ಪರದಾಟ 10
ಹರ್ಷ ಮಂದರ್ ಮನೆ ಮೇಲೆ ಇ.ಡಿ ದಾಳಿ 12

ಟಿ20 ನಾಯಕತ್ವ ಬಿಡಲಿರುವ ಕೊಹ್ಲಿ

ದುಬೈ (ಪಿಟಿಐ): ಮುಂಬರಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ನಂತರ ಭಾರತ ಟಿ20 ತಂಡದ ನಾಯಕತ್ವ ಬಿಡುವುದಾಗಿ ವಿರಾಟ್ ಕೊಹ್ಲಿ ಘೋಷಿಸಿದ್ದಾರೆ.



ಗುರುವಾರ ಸಂಜೆ ಟ್ವೀಟ್ ಮಾಡಿರುವ ಅವರು, 'ಏಕದಿನ, ಟೆಸ್ಟ್ ತಂಡಗಳಿಗೆ ನಾಯಕನಾಗಿ ಮತ್ತು ಚುಟುಕು ತಂಡದಲ್ಲಿ ಬ್ಯಾಟ್ಸ್‌ಮನ್ ಆಗಿ ಮುಂದುವರಿಯುತ್ತೇನೆ' ಎಂದಿದ್ದಾರೆ. ವಿರಾಟ್ ನಂತರ ರೋಹಿತ್ ಶರ್ಮಾಗೆ ಪಟ್ಟ ಕಟ್ಟುವುದು ಬಹುತೇಕ ಖಚಿತವಾಗಿದೆ. 13

ಚಿನಕುರಳಿ
ಪ್ರಕಾಶ್ ಶೆಟ್ಟಿ



ಸಿಸಿಬಿ ಕಾರ್ಯಾಚರಣೆ: ₹2 ಕೋಟಿ ಮೌಲ್ಯದ ಡ್ರಗ್ಸ್ ವಶ

ಮನೆಯಲ್ಲೇ ಡ್ರಗ್ಸ್ ತಯಾರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಡಿಗೆ ಮನೆಯಲ್ಲೇ ವ್ಯವಸ್ಥಿತ ಪ್ರಯೋಗಾಲಯ ಮಾಡಿಕೊಂಡು ಡ್ರಗ್ಸ್ ತಯಾರಿಸುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ₹ 2 ಕೋಟಿ ಮೌಲ್ಯದ ಎಂಡಿಎಂಎ ಜಪ್ತಿ ಮಾಡಿದ್ದಾರೆ.

'ಎಲೆಕ್ಟ್ರಾನಿಕ್ ಸಿಟಿ ಒಂದನೇ ಹಂತದ ಬೆಟ್ಟದಾಸಪುರದ ಚಾಮುಂಡಿ ಲೇಔಟ್‌ನಲ್ಲಿರುವ ಮನೆಯೊಂದರಲ್ಲಿ ಅನುಮಾನಾಸ್ಪದ ಚಟುವಟಿಕೆ ನಡೆಯುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಮನೆ ಸುತ್ತಮುತ್ತ ಓಡಾಡಿ ಮಾಹಿತಿ ಖಚಿತಪಡಿಸಿಕೊಂಡು ಬುಧವಾರ ದಾಳಿ ಮಾಡಲಾಯಿತು' ಎಂದು ಸಿಸಿಬಿಯ ಜಂಟಿ ಕಮಿಷನರ್ ಸಂದೀಪ್ ಪಾಟೀಲ ಹೇಳಿದರು.

'ಪ್ರಯೋಗಾಲಯದಲ್ಲಿ ಡ್ರಗ್ಸ್ ತಯಾರಿಸುತ್ತಿದ್ದ ನೈಜೀರಿಯಾ ಪ್ರಜೆ ಜಾನ್‌ನನ್ನು ಬಂಧಿಸಲಾಗಿದೆ. ಲ್ಯಾಬ್‌ನಲ್ಲಿದ್ದ ರಾಸಾಯನಿಕ ಹಾಗೂ ಆಧುನಿಕ ಪರಿಕರಗಳನ್ನೂ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

'ಕೆಲ ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ ಆರೋಪಿ ಜಾನ್, ಬಾಡಿಗೆ ಮನೆಯಲ್ಲಿ ನೆಲೆಸಿದ್ದ. ವಿದ್ಯಾಭ್ಯಾಸ, ಅದರ ಜೊತೆಯಲ್ಲಿ ವ್ಯಾಪಾರ ಮಾಡುತ್ತಿರುವುದಾಗಿ ಮಾಲೀಕರಿಗೆ ಹೇಳಿದ್ದ. ಡ್ರಗ್ಸ್ ತಯಾರಿಕೆಯಲ್ಲಿ ಪರಿಣಿತನಾಗಿದ್ದ ಜಾನ್, ಮನೆಯ ಕೊಠಡಿಯಲ್ಲಿ ಆಧುನಿಕ ಪರಿಕರಗಳನ್ನು ಬಳಸಿಕೊಂಡು ಪ್ರಯೋಗಾಲಯ ಮಾಡಿಕೊಂಡಿದ್ದ.'

'ಕಚ್ಚಾ ಸಾಮಗ್ರಿ, ರಾಸಾಯನಿಕ ಹಾಗೂ ಇತರೆ ವಸ್ತುಗಳನ್ನು ನಗರದ ಮಾರುಕಟ್ಟೆ ಮತ್ತು ಆನ್‌ಲೈನ್ ಮೂಲಕ ಖರೀದಿಸುತ್ತಿದ್ದ. ಪರಿಕರಗಳಲ್ಲಿ ಕಚ್ಚಾ ಸಾಮಗ್ರಿ ಹಾಗೂ ರಾಸಾಯನಿಕವನ್ನು ಸಂಸ್ಕರಿಸಿ ಎಂಡಿಎಂಎ ಡ್ರಗ್ಸ್ ತಯಾರಿಸುತ್ತಿದ್ದ. ದಾಳಿ ಸಂದರ್ಭದಲ್ಲೇ ಪ್ರಯೋಗಾಲಯದಲ್ಲಿ 4 ಕೆ.ಜಿ ತೂಕದ ಎಂಡಿಎಂಎ ಡ್ರಗ್ಸ್ ಪತ್ತೆಯಾಯಿತು' ಎಂದೂ ತಿಳಿಸಿದರು.



ಜಪ್ತಿ ಮಾಡಲಾದ ಪ್ರಯೋಗಾಲಯದ ಪರಿಕರಗಳು

ಬೂಟಿನಲ್ಲಿ ಡ್ರಗ್ಸ್ ಸಾಗಣೆ: 'ವ್ಯವಸ್ಥಿತ ಜಾಲದ ಮೂಲಕ ಆರೋಪಿಗಳು, ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದರು. ಬೂಟಿನಲ್ಲಿ ಡ್ರಗ್ಸ್ ಬಚ್ಚಿಟ್ಟು ಕೊರಿಯರ್ ಮೂಲಕ ವಿದೇಶಗಳಿಗೂ ಕಳುಹಿಸುತ್ತಿದ್ದರು' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಗ್ರಾಹಕರಾಗಿದ್ದರು. ಜಾಲದಲ್ಲಿ ಭಾಗಿಯಾಗಿದ್ದ ಕೆಲವರು ತಲೆಮರೆಸಿಕೊಂಡಿದ್ದಾರೆ. ಕೆಲವರು, ವಿದೇಶದಲ್ಲೂ ನೆಲೆಸಿದ್ದಾರೆ. ಇವರೆಲ್ಲರ ವಿರುದ್ಧ ಎಲೆಕ್ಟ್ರಾನಿಕ್ ಸಿಟಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ' ಎಂದೂ ತಿಳಿಸಿದರು.

'ಆವಕ ಕಡಿಮೆಯಾದ ಪರಿಣಾಮ ಬೆಲೆ ಏರಿಕೆ'

ಹತ್ತಿಗೆ ದಾಖಲೆ ದರ: ಕ್ವಿಂಟಲ್‌ಗೆ ₹ 12,886

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹತ್ತಿಗೆ ಸಾರ್ವಕಾಲಿಕ ದರ ಸಿಕ್ಕಿದ್ದು, ಡಿಸಿಎಚ್ ತಳಿಯ ಕ್ವಿಂಟಲ್ ಹತ್ತಿ ಗುರುವಾರ ₹ 12,886ಕ್ಕೆ ಮಾರಾಟವಾಗಿದೆ. ಹತ್ತಿ ಆವಕ ಈಗಷ್ಟೇ ಆರಂಭವಾಗಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ಚಿತ್ರದುರ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣದಲ್ಲಿ ದಿನ ಬಿಟ್ಟು ದಿನ ಹತ್ತಿ ಆವಕ ನಡೆಯುತ್ತದೆ. ಚಿತ್ರದುರ್ಗ, ದಾವಣಗೆರೆ, ತುಮಕೂರು ಹಾಗೂ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯಿಂದಲೂ ಇಲ್ಲಿಗೆ ಹತ್ತಿ ಬರುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ದರ ಬಹುತೇಕ ದ್ವಿಗುಣಗೊಂಡಿದೆ.

ಕರ್ನಾಟಕ, ಗುಜರಾತ್, ಮಧ್ಯ ಪ್ರದೇಶ, ಉತ್ತರಪ್ರದೇಶ, ಆಂಧ್ರಪ್ರದೇಶದಲ್ಲಿ ಹತ್ತಿಯನ್ನು ಪ್ರಮುಖವಾಗಿ ಬೆಳೆಯಲಾಗುತ್ತದೆ. ಉತ್ತರ ಭಾರತದ ಹಲವೆಡೆ ಭಾರಿ ಮಳೆಯಾಗಿದ್ದು, ಹತ್ತಿ ಬೆಳೆಗೆ ಹಾನಿಯಾಗಿದೆ. ಇದರಿಂದ ಉತ್ಪಾದನೆ ಕುಸಿತ ಕಾಣುತ್ತಿದೆ. ಆವಕ ಕಡಿಮೆಯಾದ ಪರಿಣಾಮ ಬೆಲೆ ಏರಿಕೆಯಾಗುತ್ತಿದೆ ಎಂಬುದು ಚಿತ್ರದುರ್ಗ ಎಪಿಎಂಸಿ ಜಂಟಿ ನಿರ್ದೇಶಕ ವಿ. ರಮೇಶ್ ಅವರ ಅಭಿಪ್ರಾಯ.



ಚಿತ್ರದುರ್ಗ ಎಪಿಎಂಸಿ ಮಾರುಕಟ್ಟೆಗೆ ಬಂದಿರುವ ಹತ್ತಿ

> **ಕರ್ನಾಟಕದಲ್ಲಿ ಉತ್ತಮ ಗುಣಮಟ್ಟದ ಹತ್ತಿ ಮಾರುಕಟ್ಟೆಗೆ ಬರುತ್ತಿದೆ. ಇದರಿಂದ ಗರಿಷ್ಠ ಬೆಲೆ ಸಿಗುತ್ತಿದೆ. ಇಷ್ಟು ದರ ಯಾವ ವರ್ಷವೂ ರೈತರಿಗೆ ಸಿಕ್ಕಿರಲಿಲ್ಲ**
> **ವಿ. ರಮೇಶ್**
> ಜಂಟಿ ನಿರ್ದೇಶಕ, ಎಪಿಎಂಸಿ

ಹತ್ತಿ ಬೆಳೆಯ ಹಂಗಾಮು ಈಗಷ್ಟೇ ಆರಂಭವಾಗಿದೆ. ಡಿಸಿಎಚ್ ಹಾಗೂ ಬನ್ನಿ ತಳಿಯ ಹತ್ತಿ ಮಾರುಕಟ್ಟೆಗೆ ಬರುತ್ತಿದೆ. ಜುಲೈನಲ್ಲಿ 662 ಕ್ವಿಂಟಲ್, ಆಗಸ್ಟ್‌ನಲ್ಲಿ 12 ಸಾವಿರ ಕ್ವಿಂಟಲ್ ಹಾಗೂ ಸೆ.1ರಿಂದ ಈವರೆಗೆ 15 ಸಾವಿರ ಕ್ವಿಂಟಲ್ ಹತ್ತಿ ಬಂದಿದೆ. ಡಿಸೆಂಬರ್‌ವರೆಗೂ ಆವಕ ಆಗಲಿದ್ದು, ಬೆಲೆಯಲ್ಲಿ ಇನ್ನಷ್ಟು ಬದಲಾವಣೆ ಆಗುವ ಸಾಧ್ಯತೆ ಇದೆ.

2020ರ ಸೆಪ್ಟೆಂಬರ್ ತಿಂಗಳಲ್ಲಿ ಪ್ರತಿ ಕ್ವಿಂಟಲ್ ಹತ್ತಿ ₹ 6,550ಕ್ಕೆ ಮಾರಾಟವಾಗಿತ್ತು. ಕಳೆದ ವರ್ಷ ಗರಿಷ್ಠ ₹ 8 ಸಾವಿರದವರೆಗೆ ದರ ಸಿಕ್ಕಿತ್ತು. 2021ರ ಮಾರ್ಚ್ ತಿಂಗಳಿಂದ ಉತ್ತಮ ದರಕ್ಕೆ ಮಾರಾಟವಾಗಿತ್ತು. ಕ್ವಿಂಟಲ್ ಹತ್ತಿ ಗರಿಷ್ಠ ₹ 8,833 ದರ ಸಿಕ್ಕಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ಸರಾಸರಿ ₹ 10,567 ದರ ದಾಖಲಾಗಿದೆ.

ಹತ್ತಿ ಉತ್ಪಾದನೆ ಆಧರಿಸಿ ದರ ನಿಗದಿಯಾಗುತ್ತದೆ. ಕರ್ನಾಟಕವೂ ಸೇರಿ ಹಲವು ರಾಜ್ಯದ ರೈತರು ಹತ್ತಿ ಬದಲು ಪರ್ಯಾಯ ಬೆಳೆಯ ಮೊರೆ ಹೋಗಿದ್ದಾರೆ. ಚಿತ್ರದುರ್ಗ ಮಾರುಕಟ್ಟೆಗೆ 2011–12ರಲ್ಲಿ 4.16 ಲಕ್ಷ ಕ್ವಿಂಟಲ್ ಹತ್ತಿ ಆವಕವಾಗಿತ್ತು. 2020–21ರ ವೇಳೆಗೆ ಇದು 1.88 ಲಕ್ಷ ಕ್ವಿಂಟಲ್‌ಗೆ ಕುಸಿದಿದೆ. ಇದು ಕೂಡ ಬೆಲೆ ಏರಿಕೆಗೆ ಕಾರಣ ಎಂಬುದು ಎಪಿಎಂಸಿ ಅಧಿಕಾರಿಗಳ ಅಭಿಪ್ರಾಯ.

ಟಟಿಡಿ ಸದಸ್ಯರಾಗಿ ಶರವಣ ನೇಮಕ

ಬೆಂಗಳೂರು: ಆಂಧ್ರಪ್ರದೇಶದ ತಿರುಪತಿ ತಿರುಮಲ ದೇವಸ್ಥಾನ(ಟಟಿಡಿ) ಟ್ರಸ್ಟ್‌ ಮಂಡಳಿಯ ವಿಶೇಷ ಆಹ್ವಾನಿತ ಸದಸ್ಯರಾಗಿ ಟಿ.ಎ.ಶರವಣ ಅವರನ್ನು ಆಂಧ್ರ ಪ್ರದೇಶ ಸರ್ಕಾರ ನೇಮಕ ಮಾಡಿದೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಆದೇಶ ಹೊರಡಿಸಿದ್ದಾರೆ.

'ಮನೆಯಂಗಳದಲ್ಲಿ ಮಾತುಕತೆ' ನಾಳೆ ಪುನರಾರಂಭ

ಬೆಂಗಳೂರು: ಕೊರೊನಾ ಸೋಂಕು ಕಾಣಿಸಿಕೊಂಡ ಬಳಿಕ ಸ್ಥಗಿತಗೊಂಡಿದ್ದ 'ಮನೆಯಂಗಳದಲ್ಲಿ ಮಾತುಕತೆ' ತಿಂಗಳ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪುನರಾರಂಭಿಸಿದೆ.

ಒಂದು ವರ್ಷದ ಬಳಿಕ ಈ ಕಾರ್ಯಕ್ರಮ ನಡೆಯುತ್ತಿದ್ದು, ಇದೇ 18ರಂದು ಸಂಜೆ 4 ಗಂಟೆಗೆ ಕನ್ನಡ ಭವನದ ನಯನ ಸಭಾಂಗಣದಲ್ಲಿ 216ನೇ ಕಾರ್ಯಕ್ರಮವನ್ನು ಇಲಾಖೆ ಆಯೋಜಿಸಿದೆ. ತಿಂಗಳ ಅತಿಥಿಯಾಗಿ ರಂಗ ತಜ್ಞ ಹಾಗೂ ನಿರ್ದೇಶಕ ಬಿ.ವಿ. ರಾಜಾರಾಮ್ ಭಾಗವಹಿಸಲಿದ್ದಾರೆ.



ಬಿ.ವಿ. ರಾಜಾರಾಮ್

ಕಲೆ, ಸಾಹಿತ್ಯ, ವಿಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರ ಸಾಧನೆ ಪರಿಚಯಿಸುವ ಜತೆಗೆ ಅವರನ್ನು ಸಾರ್ವಜನಿಕರೊಂದಿಗೆ ಮುಖಾಮುಖಿಯಾಗಿಸುವುದು ಕಾರ್ಯಕ್ರಮದ ಉದ್ದೇಶ. ಇದನ್ನು 2001ರಲ್ಲಿ ಪ್ರಾರಂಭಿಸಲಾಗಿತ್ತು. 215ನೇ ಕಾರ್ಯಕ್ರಮದ ಅತಿಥಿಯಾಗಿ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಬಿ. ಮಂಜಮ್ಮ ಜೋಗತಿ ಭಾಗವಹಿಸಿದ್ದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಭಿಮತ

'ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಗೆ ನೀತಿ ಪೂರಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆಗಲಿವೆ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ತಿಳಿಸಿದರು.

ವಿದ್ಯಾಶಿಲ್ಪ ಶಿಕ್ಷಣ ಸಮೂಹ ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾಶಿಲ್ಪ ವಿಶ್ವವಿದ್ಯಾಲಯವನ್ನು (ಎಸ್‌ಡಿಯು) ... ಪಿ. ದಯಾನಂದ ಪೈ, ಮಾತನಾಡಿದರು. 'ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ರಾಷ್ಟ್ರೀಯ ಶಿಕ್ಷಣ ನೀತಿ ಸಹಕಾರಿಯಾಗಲಿದೆ. ಸಾಂಪ್ರದಾಯಿಕ ಶಿಕ್ಷಣದ ಜೊತೆಗೆ ಪ್ರಾಯೋಗಿಕ ಶಿಕ್ಷಣಕ್ಕೂ ಆದ್ಯತೆ ನೀಡಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳು ಬಹು ಕೌಶಲಗಳನ್ನು ಬೆಳೆಸಿಕೊಳ್ಳಬಹುದಾಗಿದೆ' ಎಂದು ಹೇಳಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವೃತ್ತಿಪರ ಶಿಕ್ಷಣ ಬೋಧನೆ ಮಾಡಲು ಅವಕಾಶ ಮಾಡಿಕೊಟ್ಟ ದೇಶದ ಮೊದಲ ರಾಜ್ಯ ಕರ್ನಾಟಕ. ಸರ್ಕಾರಿ ಸಂಸ್ಥೆಗಳ ಜೊತೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳೂ ಗುಣಮಟ್ಟದ ಶಿಕ್ಷಣಕ್ಕೆ ದೊಡ್ಡ ಕೊಡುಗೆ ನೀಡುತ್ತಿವೆ. ಹಾಗಾಗಿ, ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಸುಸ್ಥಿರಗೊಳಿಸುವ ... ಗುಣಮಟ್ಟದ ಶಿಕ್ಷಣಕ್ಕೂ ಸರ್ಕಾರ ಗಣನೀಯ ಪ್ರೋತ್ಸಾಹ ನೀಡುತ್ತಿದೆ' ಎಂದರು.

ವಿಶ್ವವಿದ್ಯಾಲಯದ ಕುಲಪತಿ ಪಿ. ದಯಾನಂದ ಪೈ, 'ಮುಂದಿನ ಪೀಳಿಗೆಯ ನಾಯಕರನ್ನು ನಿರ್ಮಿಸಲು ವಿ.ವಿ. ಶ್ರಮಿಸಲಿದೆ. ಪಠ್ಯದ ಜೊತೆಗೆ ಸಂಶೋಧನೆಗೆ ಕೂಡ ಆದ್ಯತೆ ನೀಡಲಾಗುತ್ತದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಯೋಜನೆಗಳನ್ನು ರೂಪಿಸಲಾಗುತ್ತಿದ್ದು, ಐದು ವರ್ಷಗಳಲ್ಲಿ ₹ 600 ಕೋಟಿ ಹೂಡಿಕೆ ಮಾಡಲಾಗುತ್ತದೆ' ಎಂದರು.



ವಿದ್ಯಾಶಿಲ್ಪ ವಿಶ್ವವಿದ್ಯಾಲಯ ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ವಿಶ್ವವಿದ್ಯಾಲಯದ ಕೃತಿ ಬಿಡುಗಡೆ ಮಾಡಿದರು. (ಎಡದಿಂದ) ಪಿ. ದಯಾನಂದ ಪೈ, ಥಾವರಚಂದ್ ಗೆಹಲೋತ್ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಬಿ. ತಿಮ್ಮೇಗೌಡ ಇದ್ದರು – ಪ್ರಜಾವಾಣಿ ಚಿತ್ರ

ಸ್ವೆಟರ್ ವಿತರಣೆ: ಟಿವಿಸಿಸಿ ತನಿಖೆಗೆ ಸೂಚನೆ

ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನಗರಾಭಿವೃದ್ಧಿ ಇಲಾಖೆ ಎಸಿಎಸ್ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಆಡಳಿತದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ 2020–21ನೇ ಸಾಲಿನಲ್ಲಿ ವಿತರಿಸಲು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ (ಕೆಎಚ್‌ಡಿಸಿ) ಸ್ವೆಟರ್‌ಗಳು ಪೂರೈಕೆಯ ಬಗ್ಗೆ ಆಯುಕ್ತರ ತಾಂತ್ರಿಕ ಜಾಗೃತ ಕೋಶದಿಂದ (ಟಿವಿಸಿಸಿ) ತನಿಖೆ ನಡೆಸಿ ಸ್ಪಷ್ಟ ಅಭಿಪ್ರಾಯದಿಂದ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಪತ್ರ ಬರೆದಿದ್ದಾರೆ.

'ಸ್ವೆಟರ್ ವಿತರಣೆ ಪ್ರಕ್ರಿಯೆಯಲ್ಲಿ ಲೋಪವಾಗಿದೆ. ಕೆಎಚ್‌ಡಿಸಿಗೆ ₹ 1.72 ಕೋಟಿ ಪಾವತಿಸಲಾಗಿದೆ. ಪಾಲಿಕೆ ಹಾಗೂ ಕೆಎಚ್‌ಡಿಸಿ ಮಾಡಿಕೊಂಡ ಒಪ್ಪಂದ ಹಾಗೂ ಕಾರ್ಯಾದೇಶಗಳ ಪ್ರಕಾರ ಕ್ರಮಗಳನ್ನು ಜರುಗಿಸಿಲ್ಲ. ವಿದ್ಯಾರ್ಥಿಗಳಿಗೆ ಸ್ವೆಟರ್ ವಿತರಿಸದೇ ಭ್ರಷ್ಟಾಚಾರ ನಡೆಸಲಾಗಿದೆ' ಎಂದು ದಲಿತ ಸಂಘರ್ಷ ಸಮಿತಿಯ ಅಧ್ಯಕ್ಷ ಸಿ.ಎಸ್. ರಘು ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದರು. ಈ ದೂರಿನ ಪ್ರತಿಯನ್ನೂ ಎಸಿಎಸ್ ಅವರು ಪತ್ರದ ಜೊತೆ ಲಗತ್ತಿಸಿದ್ದಾರೆ.

'ಸ್ವೆಟರ್ ವಿತರಣೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಬಗ್ಗೆ ಈ ಹಿಂದೆ ದೂರು ಸಲ್ಲಿಸಿದಾಗ ಬಿಬಿಎಂಪಿ ಮುಖ್ಯ ಆಯುಕ್ತರು ಈ ಬಗ್ಗೆ ಶಿಕ್ಷಣ ವಿಭಾಗದಿಂದ ವಿವರಣೆ ಕೇಳಿದ್ದರು. 2020–21ನೇ ಸಾಲಿನಲ್ಲಿ ಕೆಎಚ್‌ಡಿಸಿಯಿಂದ ಒಟ್ಟು 18,600 ಸ್ವೆಟರ್‌ಗಳನ್ನು ಪೂರೈಕೆ ಆಗಿವೆ. ಇದುವರೆಗೆ 16,218 ಸ್ವೆಟರ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ ಎಂದು ಶಿಕ್ಷಣ ವಿಭಾಗದ ಸಹಾಯಕ ಆಯುಕ್ತರು ತಿಳಿಸಿದ್ದರು. ಸ್ವೆಟರ್ ಹಂಚಿಕೆ ಕುರಿತ ಶಾಲಾವಾರು ವಿವರವನ್ನೂ ಒದಗಿಸಿದ್ದರು.

2020ರ ಡಿ.23ರಂದು ಶಿಕ್ಷಣ ಇಲಾಖೆ ಹೊರಡಿಸಿದ ಸುತ್ತೋಲೆಯಂತೆ 6ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳು ಹಾಗೂ ಎಸ್ಸೆಸ್ಸೆಲ್ಸಿ ಮತ್ತು ಪಿಯು ಕಾಲೇಜು ವಿದ್ಯಾರ್ಥಿಗಳಿಗೆ 2021ರ ಜನವರಿಯಿಂದ ಭೌತಿಕವಾಗಿ ತರಗತಿಗಳು ನಡೆದಿವೆ. ಆಗ ತರಗತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಮಾತ್ರ ಸ್ವೆಟರ್‌ಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದ್ದರು.

ಶ್ರೀನಿವಾಸನ್ ಟ್ರಸ್ಟ್ ಕುರಿತ ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿವಿಎಸ್ ಮೋಟರ್ ಕಂಪನಿಯ ಅಧ್ಯಕ್ಷ ವೇಣು ಶ್ರೀನಿವಾಸನ್ ಅವರು 'ಎ ಸ್ಟೆಲ್ಲಾರ್ ರೆವಲ್ಯೂಷನ್ – ದಿ ಜರ್ನಿ ಆಫ್ ದಿ ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್' ಪುಸ್ತಕವನ್ನು ಸೆಪ್ಟೆಂಬರ್ 22ರಂದು ಬಿಡುಗಡೆ ಮಾಡಲಿದ್ದಾರೆ.

ಟಿವಿಎಸ್ ಕಂಪನಿಯ ಸಮಾಜ ಸೇವಾ ಅಂಗಸಂಸ್ಥೆಯಾದ ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್‌ನ 25 ವರ್ಷಗಳ ಪಯಣವನ್ನು ಈ ಪುಸ್ತಕ ದಾಖಲಿಸಿದೆ.

ಹಾರ್ಪರ್ ಕಾಲಿನ್ಸ್ ಪ್ರಕಾಶನ ಸಂಸ್ಥೆ ಇದನ್ನು ಪ್ರಕಟಿಸಿದ್ದು, ಸ್ಮಿತ ಪರುಪುದಿ ಅವರು ಪುಸ್ತಕ ಬರೆದಿದ್ದಾರೆ.

'ಟ್ರಸ್ಟ್ ಸ್ಥಾಪಿಸಿದಾಗ ನಮಗೆ ನಮ್ಮ ಸಾಮಾಜಿಕ ಕೆಲಸಗಳು ಯಾವ ರೂಪ ಪಡೆದುಕೊಳ್ಳುತ್ತವೆ ಎಂಬುದರ ಸ್ಪಷ್ಟತೆ ಇರಲಿಲ್ಲ. ಸುಸ್ಥಿರ ಅಭಿವೃದ್ಧಿ ಸಾಧ್ಯವಾಗಬೇಕು ಎಂಬುದು ನಮ್ಮ ಆಶಯವಾಗಿತ್ತು ...' ಎಂದು ವೇಣು ಶ್ರೀನಿವಾಸನ್ ಅವರು ಹೇಳಿದ್ದಾರೆ.

ಈ ಪುಸ್ತಕವು ಸೆಪ್ಟೆಂಬರ್ 20ರ ನಂತರ ಅಮೆಜಾನ್‌ನಲ್ಲಿ, ಫ್ಲಿಪ್‌ಕಾರ್ಟ್ ಹಾಗೂ ಸ್ಥಳೀಯ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೆಟ್ರೊ ಸಂಚಾರ ಅವಧಿ ವಿಸ್ತರಣೆಗೆ ಸಚಿವರ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಸೇವೆಯ ಅವಧಿಯನ್ನು ರಾತ್ರಿ 8 ಗಂಟೆ ಬಳಿಕವೂ ವಿಸ್ತರಿಸಬೇಕು ಎಂಬ ಬೇಡಿಕೆಗೆ ಸಚಿವರೂ ಸಹಮತ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಆದಷ್ಟು ಬೇಗ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

'11 ಗಂಟೆವರೆಗೂ ವಿಸ್ತರಿಸಬೇಕು'



ರಾತ್ರಿ ಕರ್ಫ್ಯೂ 9 ಗಂಟೆವರೆಗೆ ಇದೆ. ಅಲ್ಲಿಯವರೆಗೆ ಅಂಗಡಿ ಮಳಿಗೆಗಳು, ಹೋಟೆಲ್‌ಗಳು ತೆರೆದೇ ಇರುತ್ತವೆ. ಇಂತಹ ಕಡೆ ಕೆಲಸ ಮಾಡುವ ಬಡವರು ಮನೆ ತಲುಪಲು ಸಮಸ್ಯೆ ಆಗುತ್ತಿದೆ. ಮೆಟ್ರೊ ಸೇವೆಯನ್ನು ರಾತ್ರಿ 8 ಗಂಟೆಗೆ ಸ್ಥಗಿತಗೊಳಿಸುವುದು ಅವೈಜ್ಞಾನಿಕ. ಇದರಿಂದ ಜನಸಾಮಾನ್ಯರಿಗೆ ಸಾಕಷ್ಟು ಸಮಸ್ಯೆ ಆಗುತ್ತಿದೆ. ಹಾಗಾಗಿ ನಮ್ಮ ಮೆಟ್ರೊ ಸೇವೆಯನ್ನು ರಾತ್ರಿ 11 ಗಂಟೆ ವರೆಗೆ ವಿಸ್ತರಿಸಿದರೆ ಒಳ್ಳೆಯದು. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜೊತೆ ನಾನು ಚರ್ಚಿಸುತ್ತೇನೆ. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆಯುತ್ತೇನೆ.

ವಿ.ಸೋಮಣ್ಣ, ವಸತಿ ಸಚಿವ

ಬಿಎಂಆರ್‌ಸಿಎಲ್ ಜೊತೆ ಪಿ.ಸಿ ಮೋಹನ್ ಚರ್ಚೆ

ಸಂಸದ ಪಿ.ಸಿ.ಮೋಹನ್ ಅವರು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಅವರನ್ನು ಗುರುವಾರ ಭೇಟಿ ಮಾಡಿ ಮೆಟ್ರೊ ಸೇವೆಯ ಅವಧಿ ವಿಸ್ತರಿಸುವಂತೆ ಒತ್ತಾಯಿಸಿದರು.



ಅಂಜುಂ ಪರ್ವೇಜ್ ಅವರಿಗೆ ಪಿ.ಸಿ.ಮೋಹನ್ ಮನವಿ ಸಲ್ಲಿಸಿದರು

'ರಾತ್ರಿ 9 ಗಂಟೆ ನಂತರ ಕರ್ಫ್ಯೂ ಜಾರಿಯಲ್ಲಿರುತ್ತದೆ. ಹಾಗಾಗಿ ಮೆಟ್ರೊ ಸೇವೆಯನ್ನು ರಾತ್ರಿ 8ಕ್ಕೆ ಸ್ಥಗಿತಗೊಳಿಸುತ್ತಿದ್ದೇವೆ ಎಂದು ಅಂಜುಂ ಪರ್ವೇಜ್ ತಿಳಿಸಿದ್ದಾರೆ. ಇದರಿಂದ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಯನ್ನು ಅವರಿಗೆ ವಿವರಿಸಿದ್ದೇನೆ. ಈ ಬಗ್ಗೆ ರಾಜ್ಯ ಸರ್ಕಾರದ ಗಮನವನ್ನೂ ಸೆಳೆಯುತ್ತೇನೆ. ಮೆಟ್ರೊ ಸೇವೆಯ ಅವಧಿ ವಿಸ್ತರಣೆ ಶೀಘ್ರವೇ ಕಾರ್ಯಗತವಾಗಲಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಸಿ.ಎಂ ಜತೆ ಸಮಾಲೋಚಿಸುವೆ'



ರಾತ್ರಿ 8 ಗಂಟೆಗೆ ಮೆಟ್ರೊ ಸೇವೆ ಸ್ಥಗಿತಗೊಳ್ಳುತ್ತಿರುವುದರಿಂದ ಜನರಿಗೆ ಸಮಸ್ಯೆಯಾಗುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚಿಸಿ ಅವಧಿ ವಿಸ್ತರಣೆಗೆ ಕೆಲವೇ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು.

ಆರ್.ಅಶೋಕ, ಕಂದಾಯ ಸಚಿವ

'ಮಧ್ಯಮ ವರ್ಗದ ಜನರಿಗೆ ಸಮಸ್ಯೆ'



ಎಂಟು ಗಂಟೆಗೆ ಮೆಟ್ರೊ ಸೇವೆ ಸ್ಥಗಿತವಾಗುತ್ತಿರುವುದರಿಂದ ಬಡವರು ಹಾಗೂ ಮಧ್ಯಮ ವರ್ಗದವರಿಗೆ ಬಹಳ ಸಮಸ್ಯೆ ಆಗುತ್ತಿದೆ. ಹೀಗಾಗಿ, ಸಂಚಾರದ ಅವಧಿಯನ್ನು ವಿಸ್ತರಿಸುವ ಅಗತ್ಯ ಇದೆ. ಈ ಬಗ್ಗೆ ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚನೆ ಮಾಡುತ್ತೇನೆ.

ಮುನಿರತ್ನ, ತೋಟಗಾರಿಕಾ ಸಚಿವ

ವಾಟ್ಸ್ ಆ್ಯಪ್: ಸಿಲಿಂಡರ್ ಕಾಯ್ದಿರಿಸಲು ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಟ್ಸ್ ಆ್ಯಪ್ ಸಂದೇಶಗಳ ಮೂಲಕ ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳ ಮರುಪೂರಣ ಹಾಗೂ ಕಾಯ್ದಿರಿಸುವ ಅವಕಾಶವನ್ನು ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ (ಬಿಪಿಸಿಎಲ್) ನೀಡಿದೆ.

'ಹಲೋ' ಸಂದೇಶವನ್ನು 1800224344 ಸಂಖ್ಯೆಗೆ ಕಳಿಸಿ, ಈ ಸೇವೆಯನ್ನು ಪಡೆಯಬಹುದು. ಹೆಚ್ಚುವರಿ ಸಿಲಿಂಡರ್, ಹೊಸ ಸಂಪರ್ಕ, ವಿಳಾಸ ಬದಲಾವಣೆ, ವಿತರಕರ ಕುರಿತ ಮಾಹಿತಿ ಮತ್ತು ಸಿಲಿಂಡರ್ ದರಗಳ ಮಾಹಿತಿಯನ್ನೂ ವಾಟ್ಸ್ ಆ್ಯಪ್ ಸಂದೇಶದ ಮೂಲಕ ಪಡೆಯಬಹುದು ಎಂದು ಸಂಸ್ಥೆ ಮಾಹಿತಿ ನೀಡಿದೆ.

ವಿಧಾನಸೌಧ ಎದುರೇ ರಸ್ತೆ ಕುಸಿತ: ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧ ಕೆಂಗಲ್ ಗೇಟ್ ಎದುರಿನ ರಸ್ತೆಯಲ್ಲಿ ಡಾಂಬರು ಕುಸಿದು ದೊಡ್ಡ ರಂಧ್ರ ಬಿದ್ದಿದ್ದರಿಂದ ಸ್ಥಳದಲ್ಲಿ ಕೆಲ ಹೊತ್ತು ಆತಂಕ ಸೃಷ್ಟಿಯಾಗಿತ್ತು.

ಅಧಿವೇಶನ ನಡೆಯುತ್ತಿದ್ದರಿಂದ ವಿಧಾನಸೌಧ ಸುತ್ತಮುತ್ತ ಬಿಗಿ ಭದ್ರತೆ ಇದೆ. ಇದರ ನಡುವೆಯೇ ಸಾಕಷ್ಟು ಮಂದಿ, ವಿಧಾನಸೌಧ ಅಕ್ಕ–ಪಕ್ಕದಲ್ಲಿ ಓಡಾಡುತ್ತಿದ್ದಾರೆ. ಕೆಂಗಲ್ ಗೇಟ್ ಎದುರೇ ಗುರುವಾರ ಸಂಜೆ ಡಾಂಬರು ಕಿತ್ತು ರಸ್ತೆ ಕುಸಿದಿತ್ತು. ರಸ್ತೆಯ ಕೆಳಭಾಗದಲ್ಲಿ ಗುಹೆ ಆಕಾರದ ಜಾಗ ಕಂಡಿತ್ತು. ಕುಸಿದ ಸ್ಥಳವನ್ನು ಗಮನಿಸಿದ ಪೊಲೀಸರು, ಸುತ್ತಮುತ್ತ ಬ್ಯಾರಿಕೇಡ್ ನಿಲ್ಲಿಸಿದರು. ಸ್ಥಳದ ಬಳಿ ಯಾರೂ ಸಂಚರಿಸದಂತೆ ತಡೆದರು.



ವಿಧಾನಸೌಧ ಎದುರು ರಸ್ತೆ ಕುಸಿದಿದ್ದ ಸ್ಥಳ

'ರಸ್ತೆಯಲ್ಲಿ ಗುರುವಾರ ಬೆಳಿಗ್ಗೆಯಿಂದ ವಾಹನಗಳ ಓಡಾಟ ಹೆಚ್ಚಿತ್ತು. ಸಂಜೆ ರಸ್ತೆ ಕುಸಿದಿದ್ದರಿಂದ ಆತಂಕ ಉಂಟಾಗಿತ್ತು. ಅದೃಷ್ಟವಶಾತ್ ಯಾವುದೇ ಹಾನಿ ಉಂಟಾಗಿಲ್ಲ. ರಸ್ತೆ ಕುಸಿತಕ್ಕೆ ಕಾರಣವೇನು ಎಂಬುದು ಗೊತ್ತಾಗಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕಳಪೆ ಕಾಮಗಾರಿ ಕಾರಣವಿರಬಹುದು. ಈ ಬಗ್ಗೆ ಸಂಬಂಧಪಟ್ಟ ಎಂಜಿನಿಯರ್ ಅವರಿಗೆ ಮಾಹಿತಿ ನೀಡಲಾಗಿದೆ' ಎಂದೂ ತಿಳಿಸಿದರು.

ನಗರದಲ್ಲಿ ಇಂದು

'ತೇಜಸ್ವಿ ಜೀವಲೋಕ–9, ಕುರಿಂಜಿ ಲೋಕ' ಛಾಯಾಚಿತ್ರ, ಸಾಕ್ಷ್ಯಚಿತ್ರ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮ : ಆಯೋಜನೆ: ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆ, ಕರ್ನಾಟಕ ಚಿತ್ರಕಲಾ ಪರಿಷತ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಹಾಗೂ ಪೀಣ್ಯ ಕೈಗಾರಿಕಾ ಸಂಘ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ, ಬೆಳಿಗ್ಗೆ 11

ದತ್ತಿ ಉಪನ್ಯಾಸ: ಡಾ.ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಸ್ಮಾರಕ ದತ್ತಿ ಕಾರ್ಯಕ್ರಮ, ವಿಷಯ: ಡಾ. ರಾಜೇಶ್ವರಿಗೌಡ ಅವರ ಕಥೆಗಳು, ಉಪನ್ಯಾಸ: ಡಾ. ಶೀಲಾದೇವಿ ಮಳೀಮಠ್, ಅಧ್ಯಕ್ಷತೆ: ಆರ್. ಲಕ್ಷ್ಮೀನಾರಾಯಣ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಸಂಜೆ 4.30

ಕಾದಂಬರಿ ಬಿಡುಗಡೆ: ಪ್ರೊ. ಬಸವರಾಜ ಡೋಣೂರ ಅವರ 'ಉರಿವ ಕೆಂಡದ ಮೇಲೆ', ಪುಸ್ತಕ ಬಿಡುಗಡೆ: ಪ್ರೊ. ತೇಜಸ್ವಿ ಕಟ್ಟೀಮನಿ, ಮುಖ್ಯ ಅತಿಥಿಗಳು: ಮನು ಬಳಿಗಾರ್, ವೂಡೇ ಪಿ. ಕೃಷ್ಣ, ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಬಸವರಾಜ ಕಲ್ಗುಡಿ, ಆಯೋಜನೆ: ಕರ್ನಾಟಕ ವಿಕಾಸ ರಂಗ, ಮನೋಹರ ಗ್ರಂಥಮಾಲಾ, ಸ್ಥಳ: ಶೇಷಾದ್ರಿಪುರ ಶಿಕ್ಷಣ ಸಮೂಹ ಸಂಸ್ಥೆ ದತ್ತಿ ಸಭಾಂಗಣ, ಶೇಷಾದ್ರಿಪುರ, ಸಂಜೆ 5

ವಿಧಾನ ಪರಿಷತ್: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಭರವಸೆ

ಶಿಕ್ಷಕರ ವೇತನ ತಾರತಮ್ಯ ನಿವಾರಣೆಗೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲಾ ಶಿಕ್ಷಕರಾಗಿ ಮತ್ತು ಪ್ರೌಢಶಾಲಾ ಶಿಕ್ಷಕರ ಹುದ್ದೆಯಿಂದ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರಾಗಿ ಬಡ್ತಿ ಹೊಂದಿವರಿಗೆ ಕಾಲಮಿತಿ ವೇತನ ಬಡ್ತಿ ನೀಡಲು ಇರುವ ತೊಡಕುಗಳನ್ನು ನಿವಾರಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಸಭೆ ಆಯೋಜಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಭರವಸೆ ನೀಡಿದರು.



ಬಿ.ಸಿ.ನಾಗೇಶ್

ಬಡ್ತಿ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಕಾಲಮಿತಿಯ ಬಡ್ತಿ ಮಂಜೂರು ಮಾಡದಿರುವ ಕುರಿತು ಗುರುವಾರ ವಿಧಾನ ಪರಿಷತ್‌ನಲ್ಲಿ ನಿಯಮ 330ರ ಅಡಿಯಲ್ಲಿ ನಡೆದ ಚರ್ಚೆಗೆ ಉತ್ತರಿಸಿದ ಅವರು, 'ನಿಯಮಗಳ ಪ್ರಕಾರ ಬಡ್ತಿ ಪಡೆದು ಮೇಲಿನ ಹಂತಕ್ಕೆ ಹೋಗಿರುವ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಕಾಲಮಿತಿ ವೇತನ ಬಡ್ತಿ ನೀಡಲು ಅವಕಾಶವಿಲ್ಲ. ಆದರೆ, ವೇತನದಲ್ಲಿ ತಾರತಮ್ಯ ಇರುವುದನ್ನು ಸರಿಪಡಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲಾಗುವುದು. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲೇ ಆರ್ಥಿಕ ಇಲಾಖೆ ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಲಾಗುವುದು' ಎಂದರು.

ವಿಷಯ ಪ್ರಸ್ತಾಪಿಸಿ ಮಾತನಾಡಿದ ಬಿಜೆಪಿಯ ಶಶೀಲ್ ಜಿ. ನಮೋಶಿ, 'ಬಡ್ತಿ ಪಡೆದಿರುವವರು ಬಡ್ತಿ ಪಡೆಯದವರಿಗಿಂತ ಕಡಿಮೆ ವೇತನಕ್ಕೆ ಕೆಲಸ ಮಾಡುತ್ತಿದ್ದಾರೆ. ವೇತನ ಆಯೋಗದ ಶಿಫಾರಸನ್ನು ಆರ್ಥಿಕ ಇಲಾಖೆ ಅಧಿಕಾರಿಗಳು ತಪ್ಪಾಗಿ ಅರ್ಥ ಮಾಡಿಕೊಂಡಿರುವುದರಿಂದ ಶಿಕ್ಷಕ ಸಮುದಾಯ ನಷ್ಟ ಅನುಭವಿಸುತ್ತಿದೆ' ಎಂದು ದೂರಿದರು.

'ಬಡ್ತಿ ಪಡೆದವರಿಗೆ ಸಹಜವಾಗಿಯೇ ವೇತನ ಮತ್ತು ಭತ್ಯೆಗಳು ಹೆಚ್ಚಾಗಬೇಕು. ಶಿಕ್ಷಕರು ಮತ್ತು ಉಪನ್ಯಾಸಕರ ವಿಚಾರದಲ್ಲಿ ಇದು ತದ್ವಿರುದ್ಧ. ಶೈಕ್ಷಣಿಕ ಅರ್ಹತೆ ಆಧಾರದಲ್ಲಿ ಬಡ್ತಿ ಪಡೆದಿರುವವರಿಗೆ ವೇತನ ನಿಗದಿ ಮಾಡಲು ಇರುವ ನಿಯಮಗಳೇ ಅವೈಜ್ಞಾನಿಕ' ಎಂದು ಬಿಜೆಪಿ ಆಯನೂರು ಮಂಜುನಾಥ್ ಟೀಕಿಸಿದರು.

ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಮಾತನಾಡಿ, 'ವೇತನ ತಾರತಮ್ಯವು ಬಡ್ತಿ ಉಪನ್ಯಾಸಕರು ಮತ್ತು ಶಿಕ್ಷಕರಲ್ಲಿ ಕೀಳರಿಮೆ ಸೃಷ್ಟಿಸುತ್ತಿದೆ. ಶೈಕ್ಷಣಿಕ ಅರ್ಹತೆ ಆಧಾರದಲ್ಲಿ ಬಡ್ತಿ ಪಡೆದು ಪ್ರೌಢ ಶಾಲೆ ಶಿಕ್ಷಕರಾದವರಿಗಿಂತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹೆಚ್ಚು ವೇತನವಿದೆ. ಇದೇ ರೀತಿ ಪದವಿಪೂರ್ವ ಕಾಲೇಜು ಉಪನ್ಯಾಸಕರಾದವರಿಗಿಂತ ಪ್ರೌಢಶಾಲೆ ಶಿಕ್ಷಕರಿಗೆ ಹೆಚ್ಚು ವೇತನವಿದೆ. ಹೆಚ್ಚು ಓದಿ ಬಡ್ತಿ ಪಡೆಯುವುದು ಅಪರಾಧವೇ' ಎಂದು ಕೇಳಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ, ಬಿಜೆಪಿಯ ವೈ.ಎ. ನಾರಾಯಣಸ್ವಾಮಿ, ಅ. ದೇವೇಗೌಡ, ಪ್ರೊ.ಎಸ್.ವಿ. ಸಂಕನೂರ ಮಾತನಾಡಿ, ಶಿಕ್ಷಕರ ವೇತನ ತಾರತಮ್ಯ ಸರಿಪಡಿಸುವಂತೆ ಆಗ್ರಹಿಸಿದರು.

'ಅಧಿಕಾರಿಗಳು ಕಡತ ಮುಚ್ಚಿಡುತ್ತಾರೆ'

'ಶಿಕ್ಷಕರ ವೇತನ ತಾರತಮ್ಯ ಸಮಸ್ಯೆ ನಿವಾರಣೆ ಆಗದಿರುವುದಕ್ಕೆ ಸಚಿವರು ಮತ್ತು ರಾಜಕಾರಣಿಗಳು ಕಾರಣವಲ್ಲ. ಐಎಎಸ್ ಅಧಿಕಾರಿಗಳೇ ಇದಕ್ಕೆ ಕಾರಣ. ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಈ ಸಮಸ್ಯೆ ಪರಿಹಾರಕ್ಕೆ ಯತ್ನಿಸಿದ್ದೆ. ಆಗ, ಕಡತ ಮುಚ್ಚಿಟ್ಟು ಅಧಿಕಾರಿಗಳು ನಮ್ಮ ಪ್ರಯತ್ನ ವಿಫಲಗೊಳಿಸಿದ್ದರು' ಎಂದು ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಆರೋಪಿಸಿದರು.

ಶಿಕ್ಷಕರ ವರ್ಗಾವಣೆ ಕಾಯ್ದೆ ತಿದ್ದುಪಡಿ: ಮಸೂದೆ ಮಂಡನೆ

ಬೆಂಗಳೂರು: 2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾದ ಶಿಕ್ಷಕರಿಗೆ ಮೊದಲು ಕೌನ್ಸೆಲಿಂಗ್ ನಡೆಸಿ ವರ್ಗಾವಣೆಯಲ್ಲಿ ಆದ್ಯತೆ ಕಲ್ಪಿಸಲು 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ' ತಿದ್ದುಪಡಿ ಮಸೂದೆಯನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ವಿಧಾನಸಭೆಯಲ್ಲಿ ಗುರುವಾರ ಮಂಡಿಸಿದರು.

ಈ ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದೆ. ಅದರಂತೆ ಜೂನ್ 30ರಂದು ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ಹೊರಡಿಸಿದ್ದ ಶಿಕ್ಷಣ ಇಲಾಖೆ, ಸೆ. 15ರಿಂದ ಈ ಶಿಕ್ಷಕರಿಗೆ ಕೌನ್ಸೆಲಿಂಗ್ ನಡೆಸಲು ಮುಂದಾಗಿತ್ತು.

ಆದರೆ, ಈ ತಿದ್ದುಪಡಿಗೆ 2016–17ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾಗಿರುವ ಕೆಲವು ಶಿಕ್ಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅಲ್ಲದೆ, 'ನಮಗೂ ವಿಶೇಷ ಆದ್ಯತೆ ನೀಡಬೇಕು' ಎಂದು ಕರ್ನಾಟಕ ಆಡಳಿತ ನ್ಯಾಯಮಂಡಳಿಗೆ (ಕೆಎಟಿ) ಮನವಿ ಮಾಡಿದ್ದಾರೆ. ಅವರ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಿರುವ ನ್ಯಾಯಮಂಡಳಿ, ವರ್ಗಾವಣೆ ಪ್ರಕ್ರಿಯೆಗೆ ತಡೆಯಾಜ್ಞೆ ನೀಡಿದೆ. ಹೀಗಾಗಿ, ವರ್ಗಾವಣೆ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.

ಕಾಯ್ದೆ ತಿದ್ದುಪಡಿಯಲ್ಲಿ ಏನಿದೆ?: ಈ ತಿದ್ದುಪಡಿ ಮೂಲಕ, 2019–20ನೇ ಸಾಲಿನಲ್ಲಿ ನಡೆದ ವರ್ಗಾವಣೆ ವೇಳೆ ಪ್ರಾಥಮಿಕ ಶಾಲಾ ಶಿಕ್ಷಕನ ಸಂದರ್ಭದಲ್ಲಿ ತಾಲ್ಲೂಕಿನ ಹೊರಗೆ ಅಥವಾ ಪ್ರೌಢಶಾಲಾ ಶಿಕ್ಷಕನ ಸಂದರ್ಭದಲ್ಲಿ ಜಿಲ್ಲೆಯ ಹೊರಗೆ ವರ್ಗಾವಣೆಗೊಂಡ ಶಿಕ್ಷಕರಿಗೆ ಮುಂದಿನ ವರ್ಗಾವಣೆಯ ವೇಳೆ, ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ತಾಲ್ಲೂಕು ಅಥವಾ ಜಿಲ್ಲೆಯ ಒಳಗೆ ಸ್ಥಳ ನಿಯುಕ್ತಿಗೆ ಅನುಕೂಲ ಕಲ್ಪಿಸಲಾಗಿದೆ. ಅಲ್ಲದೆ, ಇತರ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯ ಮೊದಲೇ ಖಾಲಿ ಹುದ್ದೆಗಳ ಲಭ್ಯತೆಗೆ ಅನುಗುಣವಾಗಿ ಅವರು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಅಥವಾ ಜಿಲ್ಲೆಯಲ್ಲಿ ಸ್ಥಳ ಆಯ್ಕೆಗೆ ಮಾಡಿಕೊಂಡು ಒಂದು ಬಾರಿ ವರ್ಗಾವಣೆಗೆ ಅವಕಾಶ ನೀಡಲಾಗುತ್ತದೆ.

ಸುದ್ದಿ 2 ನಿಮಿಷ

'ಸಿಎಜಿಗೆ ವಿವರ ನೀಡಲು ಸೂಚನೆ'

ಹುಬ್ಬಳ್ಳಿ: '2019–2020ರ ಬಜೆಟ್‌ನಲ್ಲಿ ಖರ್ಚಾಗದ ₹29,826.44 ಕೋಟಿ ಅನುದಾನ ಮರು ಹೊಂದಾಣಿಕೆ ವಿವರವನ್ನು ಸಿಎಜಿಗೆ (ಮಹಾಲೇಖಪಾಲ) ನೀಡಲು ಹಣಕಾಸು ಇಲಾಖೆ ಕಾರ್ಯದರ್ಶಿಗೆ ಸೂಚನೆ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ಸಿಎಜಿ ವರದಿಯಲ್ಲಿನ ಆಕ್ಷೇಪ ಕುರಿತು ಹುಬ್ಬಳ್ಳಿಯಲ್ಲಿ ಗುರುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಹಿಂದೆಯೂ ಸಿಎಜಿಯಿಂದ ಇಂತಹ ವರದಿ ಬಂದಿತ್ತು. ಹಣಕಾಸು ಇಲಾಖೆ ಎಲ್ಲಾ ವಿವರಗಳನ್ನು ಕೊಟ್ಟಿದೆ. ವರದಿ ಕುರಿತು ಮತ್ತೊಮ್ಮೆ ಪರಿಶೀಲಿಸಿ ವಿವರ ನೀಡಲಾಗುವುದು' ಎಂದರು.

'ಕಲಬುರ್ಗಿ ಮಹಾನಗರ ಪಾಲಿಕೆಯ ಮೇಯರ್–ಉಪ ಮೇಯರ್ ಚುನಾವಣೆಗೆ ಮೊದಲು ಅಧಿಸೂಚನೆಯಾಗಲಿ. ಆ ಕುರಿತು ಈಗಲೇ ಏನನ್ನೂ ಹೇಳಲು ಇಚ್ಛಿಸುವುದಿಲ್ಲ. ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಕುರಿತು ಸದನದಲ್ಲಿ ಉತ್ತರ ನೀಡುವೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಅರ್ಚಕರ ಭವನ ನಿರ್ಮಾಣಕ್ಕೆ ಕ್ರಮ: ಸಚಿವೆ ಶಶಿಕಲಾ ಜೊಲ್ಲೆ

ಬೆಂಗಳೂರು: 'ಹಿಂದೂ ದೇವಸ್ಥಾನಗಳ ಅರ್ಚಕರ ಹಿತದೃಷ್ಟಿಯಿಂದ ಬೆಂಗಳೂರಿನಲ್ಲಿ ಅರ್ಚಕರ ಭವನ ನಿರ್ಮಿಸುವ ಕುರಿತು ಶೀಘ್ರ ತೀರ್ಮಾನಿಸಲಾಗುವುದು' ಎಂದು ಮುಜರಾಯಿ, ವಕ್ಫ್ ಹಾಗೂ ಹಜ್ ಸಚಿವರಾದ ಶಶಿಕಲಾ ಜೊಲ್ಲೆ ತಿಳಿಸಿದರು.

ರಾಜ್ಯ ಮುಜರಾಯಿ ದೇವಸ್ಥಾನಗಳ ಅರ್ಚಕರ, ಆಗಮಿಕರ ಮತ್ತು ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶ್ರೀವತ್ಸ ನೇತೃತ್ವದಲ್ಲಿ ತಮ್ಮನ್ನು ಭೇಟಿಯಾದ 100ಕ್ಕೂ ಹೆಚ್ಚು ಅರ್ಚಕರ ನಿಯೋಗದ ಜೊತೆ ಮಾತನಾಡಿದ ಅವರು, 'ರಾಜ್ಯ ಸರ್ಕಾರ ದೇವಸ್ಥಾನಗಳ ರಕ್ಷಣೆ ಹಾಗೂ ಅರ್ಚಕರ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ' ಎಂದರು.

'ಅರ್ಚಕರಿಗೆ ಕ್ಯಾನ್ಸರ್, ಹೃದಯ ಸಂಬಂಧಿ ಆರೋಗ್ಯದ ಸಮಸ್ಯೆ ಎದುರಾದಾಗ ಆರ್ಥಿಕ ನೆರವು ನೀಡಲು ವಿಮೆ ಜಾರಿಗೊಳಿಸುವ ಬಗ್ಗೆ ವಿಧಾನ ಮಂಡಲ ಅಧಿವೇಶನದ ಬಳಿಕ ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುವ ಜೊತೆಗೆ, ತಸ್ತಿಕ್ ಹಣ ಪಡೆಯಲು ಯಾವುದೇ ತೊಂದರೆ ಆಗದಂತೆ ಕ್ರಮ ತೆಗೆದುಕೊಳ್ಳುತ್ತೇನೆ' ಎಂದರು.

ಅರ್ಚಕರು ತಮ್ಮ ಸಮಸ್ಯೆಗಳನ್ನು ಸಚಿವೆಯ ಗಮನಕ್ಕೆ ತಂದರು. ಅರ್ಚಕರಿಗೆ ಆರೋಗ್ಯ ವಿಮೆ ನೀಡಬೇಕು, 'ಸಿ' ದರ್ಜೆಯ ದೇವಾಲಯಗಳಿಗೆ ಅನುದಾನ ಹಣ ಹೆಚ್ಚಿಸಬೇಕು, ಅರ್ಚಕರ ಮಕ್ಕಳಿಗೆ ಪೂಜಾ ತರಬೇತಿ ನೀಡಲು ಪಂಡಿತರಿಗೆ ತರಬೇತಿ ನೀಡಬೇಕು, ಅರ್ಚಕರು ಮನೆ ನಿರ್ಮಿಸಲು ಕನಿಷ್ಠ ₹ 5 ಲಕ್ಷ ಮಂಜೂರು ಮಾಡಬೇಕು' ಎಂದೂ ಮನವಿ ಮಾಡಿದರು.

'ಅಮೃತ ಯೋಜನೆ ಬದಿಗಿಡಿ ಕೋವಿಡ್ ವರ್ಷ ಘೋಷಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತ ಸರ್ಕಾರ ಕೆಲವು ಯೋಜನೆಗಳನ್ನು ಘೋಷಣೆ ಮಾಡಿದೆ. ಆದರೆ, ಬೆಲೆ ಏರಿಕೆಯಿಂದ ಬಸವಳಿದಿರುವ ಜನರ ನೆರವಿಗೆ ಧಾವಿಸಲು ಆ ಹಣ ಮೀಸಲಿಟ್ಟು ಆ ಎಲ್ಲ ಯೋಜನೆಗಳನ್ನು ಒಂದು ವರ್ಷ ಮುಂದಕ್ಕೆ ಹಾಕಬೇಕು. ಈ ವರ್ಷವನ್ನು 'ಕೋವಿಡ್ ವರ್ಷ'ವೆಂದು ಘೋಷಣೆ ಮಾಡಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಕುರಿತು ವಿಧಾನಸಭೆಯಲ್ಲಿ ನಿಯಮ 69ರ ಅಡಿ ಚರ್ಚೆಯಲ್ಲಿ ಪಾಲ್ಗೊಂಡು ಗುರುವಾರ ಮಾತನಾಡಿದ ಅವರು, 'ರಾಜ್ಯದ 55 ಲಕ್ಷ ಬಡ ಕುಟುಂಬಗಳಿಗೆ ತಲಾ ₹25 ಸಾವಿರ ನೆರವು ನೀಡಿ ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿರುವವರ ಕಣ್ಣೀರು ಒರೆಸುವ ಕೆಲಸ ಮಾಡಬೇಕು' ಎಂದರು.

'ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಬೆಲೆಯನ್ನು ನಿರಂತರವಾಗಿ ಏರಿಸುವ ಮೂಲಕ ಉರಿವ ಮನೆಯಲ್ಲಿ ಗಳ ಹಿರಿಯುವ ಕೆಲಸ ಆಗುತ್ತಿದೆ. ನಿರಂತರ ಬೆಲೆ ಏರಿಕೆಯಿಂದ ರೈತರು, ಬಡವರು ಮತ್ತು ಶ್ರಮಿಕರ ಮನೆಗಳಲ್ಲಿ ಬೆಂಕಿ ಬಿದ್ದಿದೆ. ಆ ಬೆಂಕಿ ಬಿದ್ದಿರುವ ಮನೆಗಳಲ್ಲಿ ಎಷ್ಟು ಗಳ ಹಿರಿಯಬಹುದು ಎಂಬ ಉದ್ದೇಶದಿಂದ ಇಷ್ಟು ತೆರಿಗೆ ಹಾಕಿದಂತಿದೆ' ಎಂದರು.

'ಅತಿಯಾದ ಭಾರ ಹೊರಲಾಗದ ಎತ್ತಿನ ಗಾಡಿಯ ಅಸಹಾಯಕ ಎತ್ತಿನಂತಿದೆ ಜನಸಾಮಾನ್ಯನ ಬದುಕು. ಭಾರ ಹೊರಲಾಗದಿದ್ದರೆ ಎತ್ತಿಗೆ ಛಡಿಯೇಟು ತಪ್ಪಿಲ್ಲ. ಹಾಗೆಯೇ, ಭಾರದಿಂದ ಗಾಡಿ ಚಕ್ರ ನೆಲದಲ್ಲಿ ಹೂತರೆ ಅದನ್ನು ಎಳೆಯಲಾಗದಿದ್ದರೆ ಪುನಾ ಆ ಎತ್ತಿಗೇ ಛಡಿಯೇಟು ತಪ್ಪಲ್ಲ. ಜನ ಸಾಮಾನ್ಯನ ಪರಿಸ್ಥಿತಿಯೂ ಇದೇ ಆಗಿದೆ' ಎಂದರು.

'ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ₹1 ಲಕ್ಷ ಪರಿಹಾರ ನೀಡುವುದಾಗಿ ರಾಜ್ಯ ಸರ್ಕಾರ ಕೆಲವು ತಿಂಗಳ ಹಿಂದೆ ಪ್ರಕಟಿಸಿತು. ಆದರೆ, ಒಂದು ಕುಟುಂಬಕ್ಕೂ ಈವರೆಗೆ ಪರಿಹಾರ ಸಿಕ್ಕಿಲ್ಲ' ಎಂದು ವಾಗ್ದಾಳಿ ನಡೆಸಿದರು.

'ದೊಡ್ಡ ಯೋಜನೆಗಳಿಗೆ ₹200 ಕೋಟಿ, ₹400 ಕೋಟಿ, ₹1 ಸಾವಿರ ಕೋಟಿ ಒಂದು ವರ್ಷ ಬಿಡುಗಡೆ ಮಾಡದಿದ್ದರೂ ಪರವಾಗಿಲ್ಲ. ಈ ಹಣವನ್ನು ಜನರ ಬದುಕು ಮರುರೂಪಿಸಲು ಬಳಸಿ' ಎಂದು ಅವರು ಕಿವಿಮಾತು ಹೇಳಿದರು.

'ಕೋವಿಡ್‌ನಿಂದಾಗಿ 40 ಸಾವಿರ ಜನರು ಸತ್ತಿದ್ದಾರೆ. ಸಾವಿರಾರು ಜನರು ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗಿದ್ದರು. ಅವರಿಗೆ ₹6 ಲಕ್ಷ, 8 ಲಕ್ಷ, 10 ಲಕ್ಷ ಬಿಲ್ ಬಂದಿದೆ. ಈ ಕುಟುಂಬಗಳು ಸಾಲ ಮಾಡಿ ಬೀದಿಗೆ ಬಂದಿವೆ. ಈ ಕುಟುಂಬಗಳ ಕಷ್ಟಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಅನ್ನಭಾಗ್ಯಕ್ಕೆ ದುಡ್ಡು ಇಡದ ಸಿದ್ದರಾಮಯ್ಯ'

'ಮೈತ್ರಿ ಸರ್ಕಾರ ಬಂದಾಗ ಜನರಿಗೆ ಐದು ಕೆ.ಜಿ ಅಕ್ಕಿ ನೀಡಲಾಯಿತು. ಇದ್ದಕ್ಕಿದ್ದಂತೆ ಕಾಂಗ್ರೆಸ್ ನಾಯಕರು ದೊಡ್ಡ ಹುಯಿಲೆಬ್ಬಿಸಿದರು. ಐದು ಕೆ.ಜಿ ಬದಲು ಏಳು ಕೆ.ಜಿಯನ್ನೇ ಕೊಡಬೇಕು ಎಂದು ಹಟಕ್ಕೆ ಬಿದ್ದರು. ಆದರೆ, ಹಣಕಾಸು ಲಭ್ಯತೆ ನೋಡಿದರೆ ಐದು ಕೆ.ಜಿ ಅಕ್ಕಿಗೆ ಮಾತ್ರ ಹಣ ತೆಗೆದಿರಿಸಲಾಗಿತ್ತು' ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ಉಳಿದ ಎರಡು ಕೆ.ಜಿ ಅಕ್ಕಿಗೆ ಹಣ ತರುವುದು ಎಲ್ಲಿಂದ? ಚುನಾವಣೆಗೆ ಹೋಗುವ ಮುನ್ನ ಸಿದ್ದರಾಮಯ್ಯ ಅವರು ಫೆಬ್ರುವರಿಯಲ್ಲಿ ಬಜೆಟ್ ಮಂಡಿಸಿ ಐದು ಕೆ.ಜಿ ಅಕ್ಕಿಗಷ್ಟೇ ಹಣ ಇಟ್ಟಿದ್ದರು. ಸಮ್ಮಿಶ್ರ ಸರ್ಕಾರ ಬಂದಾಗ ಇದೇ ಜನ ಏಳು ಕೆ.ಜಿ ಅಕ್ಕಿ ಕೊಡಬೇಕು ಎಂದು ಬೊಬ್ಬೆ ಹೊಡೆದರು. ಚುನಾವಣೆಯಲ್ಲಿ ಮತ ಪಡೆಯಲು ಅವರು ಮಾಡಿದ ಕೆಲಸಕ್ಕೆ ಜನರು ನಮ್ಮನ್ನು ಟೀಕಿಸುವಂತಾಯಿತು' ಎಂದರು.

'ಈ ಸತ್ಯ ನಮಗೆ ಗೊತ್ತಿರಲಿಲ್ಲ' ಎಂದು ಸಚಿವ ಆರ್.ಅಶೋಕ ಹೇಳಿದರು.

'ಸಿದ್ದರಾಮಯ್ಯ ಅವರು 17 ಲಕ್ಷ ಮನೆಗಳ ನಿರ್ಮಾಣಕ್ಕೆ ₹29 ಸಾವಿರ ಕೋಟಿಯ ಯೋಜನೆ ರೂಪಿಸಿದರು. ಆದರೆ, ಬಜೆಟ್‌ನಲ್ಲಿ ಇಟ್ಟಿದ್ದು ₹2,900 ಕೋಟಿ ಮಾತ್ರ. ಹೀಗಾಗಿ, ಮೂರು ವರ್ಷಗಳಿಂದ ಜನರಿಗೆ ಒಂದೇ ಒಂದು ಮನೆ ವಿತರಿಸಲು ಸಾಧ್ಯವಾಗಿಲ್ಲ' ಎಂದು ಕುಮಾರಸ್ವಾಮಿ ಹೇಳಿದರು.

'ಸಿದ್ದರಾಮಯ್ಯ ಅವರು ಅನಿಲಭಾಗ್ಯ ಯೋಜನೆ ಪ್ರಕಟಿಸಿದರು. 1 ಲಕ್ಷ ಕುಟುಂಬಗಳಿಗೆ ವಿತರಿಸಲು ಎಂಎಸ್‌ಐಎಲ್ ಮೂಲಕ ಗ್ಯಾಸ್ ಸ್ಟವ್‌ಗಳನ್ನು ಖರೀದಿಸಿದರು. ಸ್ಟವ್‌ಗಳು ಗೋಡೌನ್‌ನಲ್ಲೇ ಉಳಿದವು. ನಾನು ಸಿ.ಎಂ ಆಗಿದ್ದಾಗ ಯೋಜನೆಯ ಪ್ರಗತಿ ಪರಿಶೀಲಿಸಿದೆ. ಈ ಕುಟುಂಬಗಳಿಗೆ ಅನಿಲ ಸಿಲಿಂಡರ್ ಒದಗಿಸಲು 10 ವರ್ಷ ಬೇಕು ಎಂದು ಅನಿಲ ಕಂಪನಿಗಳ ಮುಖ್ಯಸ್ಥರು ಅಸಹಾಯಕತೆ ವ್ಯಕ್ತಪಡಿಸಿದರು. ವಿವೇಚನೆ ಇಲ್ಲದೆ ಮಾಡುವ ಯೋಜನೆಗಳ ಪರಿಣಾಮ ಇದು' ಎಂದು ಹೇಳಿದರು.

ರಾಜ್ಯದ 6 ನಿರಾಶ್ರಿತರ ಶಿಬಿರಗಳಲ್ಲಿ 191 ಮಂದಿ ರೋಹಿಂಗ್ಯಾ ಮುಸ್ಲಿಮರು

'ಗಡೀಪಾರಿಗೆ ಮಾರ್ಗಸೂಚಿ ಬಂದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆರು ನಿರಾಶ್ರಿತರ ಶಿಬಿರಗಳಲ್ಲಿ 191 ಮಂದಿ ರೋಹಿಂಗ್ಯಾ ಮುಸ್ಲಿಮರು ಆಶ್ರಯ ಪಡೆದಿದ್ದು, ಅವರ ಗಡೀಪಾರಿಗೆ ಸಂಬಂಧಿಸಿ ಕೇಂದ್ರ ನಿರ್ದಿಷ್ಟ ಮಾರ್ಗಸೂಚಿ ನೀಡಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಗುರುವಾರ ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಮುನಿರಾಜು ಗೌಡ ಪಿ.ಎಂ. ಅವರ ಪ್ರಶ್ನೆಗೆ ಅವರು, 'ಶಿಬಿರಗಳಲ್ಲಿ ಇರುವ ರೋಹಿಂಗ್ಯಾ ಮುಸ್ಲಿಮರನ್ನು ಹೊರಕ್ಕೆ ಕಳುಹಿಸಲು ಕೇಂದ್ರದ ಮಾರ್ಗಸೂಚಿಗೆ ಕಾಯುತ್ತಿದ್ದೇವೆ' ಎಂದರು.

ವಿದೇಶಗಳ ಜನರು ಅಕ್ರಮವಾಗಿ ರಾಜ್ಯದಲ್ಲಿ ನೆಲೆಸದಂತೆ ಕ್ರಮಕೈಗೊಳ್ಳಲಾಗುತ್ತಿದೆ. ವಿದೇಶಿ ಪ್ರಜೆಗಳ ಮೇಲೆ ನಿಗಾ ಇರಿಸಲಾಗಿದೆ. ವೀಸಾ ಅವಧಿ ಮುಗಿದಿದ್ದರೂ ಇಲ್ಲಿಯೇ ನೆಲೆಸಿರುವವರ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ. ಕೆಲವು ವಿದೇಶಿ ಪ್ರಜೆಗಳ ವಿರುದ್ಧ ಕ್ರಿಮಿನಲ್ ಅಪರಾಧ ಪ್ರಕರಣಗಳು ಬಾಕಿ ಇವೆ. ಇತ್ಯರ್ಥವಾಗದೇ ಗಡೀಪಾರು ಸಾಧ್ಯವಿಲ್ಲ ಎಂದರು.

ಅಕ್ರಮ ವಲಸಿಗರ ಪತ್ತೆಗೆ ವಿಶೇಷ ಕಾರ್ಯಪಡೆ ರಚಿಸಲಾಗಿದೆ. ಅಕ್ರಮ ವಲಸಿಗರಿಗೆ ಆಧಾರ್ ಕಾರ್ಡ್ ಕೊಡಿಸುತ್ತಿದ್ದ ಆರೋಪದಡಿ ಬೆಂಗಳೂರಿನ ಒಬ್ಬ ವೈದ್ಯಾಧಿಕಾರಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಅಕ್ರಮ ವಲಸಿಗರಿಗೆ ಆಶ್ರಯ ನೀಡಿದ ಆರೋಪದಡಿ ಮೇಲೆ ಬೆಂಗಳೂರು ನಗರ ಮತ್ತು ಕೆಜಿಎಫ್‌ನಲ್ಲಿ ತಲಾ ಒಬ್ಬರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದರು.



ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಗುರುವಾರ ವಿಧಾನ ಪರಿಷತ್ತಿನಲ್ಲಿ ಮಾತನಾಡಿದರು. ಸಚಿವರಾದ ಗೋವಿಂದ ಕಾರಜೋಳ, ಜೆ.ಸಿ.ಮಾಧುಸ್ವಾಮಿ, ಕೋಟ ಶ್ರೀನಿವಾಸ ಪೂಜಾರಿ ಹಾಗೂ ಸದಸ್ಯರು ಇದ್ದಾರೆ

ನಾಲ್ಕು ವರ್ಷಗಳಲ್ಲಿ 27 ಲಾಕಪ್ ಸಾವು

ನಾಲ್ಕು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ 27 ಮಂದಿ ಪೊಲೀಸ್ ವಶದಲ್ಲಿರುವಾಗ (ಲಾಕಪ್) ಮೃತಪಟ್ಟಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಗುರುವಾರ ವಿಧಾನ ಪರಿಷತ್‌ಗೆ ತಿಳಿಸಿದರು.

ಕಾಂಗ್ರೆಸ್‌ನ ಕೆ. ಗೋವಿಂದರಾಜು ಪ್ರಶ್ನೆಗೆ ಉತ್ತರಿಸಿದ ಅವರು, '2018ರಲ್ಲಿ ಎಂಟು, 2019ರಲ್ಲಿ ಮೂರು, 2020ರಲ್ಲಿ ಆರು ಮತ್ತು 2021ರಲ್ಲಿ 10 ಮಂದಿ ಲಾಕಪ್‌ನಲ್ಲಿ ಸಾವಿಗೀಡಾಗಿದ್ದಾರೆ. ಆದರೆ, ಈ ಎಲ್ಲರೂ ಪೊಲೀಸ್ ದೌರ್ಜನ್ಯದಿಂದ ಸತ್ತಿದ್ದಾರೆ ಎಂದು ಹೇಳಲಾಗದು. ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದರೆ, ಪೊಲೀಸ್ ವಶದಿಂದ ತಪ್ಪಿಸಿಕೊಳ್ಳಲು ಯತ್ನಿಸಿ ಮೃತರಾದವರೂ ಇದ್ದಾರೆ' ಎಂದರು.

'ಸಿಂದಗಿಯಲ್ಲಿ ಅತ್ಯಾಚಾರ ಪ್ರಕರಣದ ಆರೋಪಿ ಪೊಲೀಸ್ ದೌರ್ಜನ್ಯಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅದನ್ನು ಕೇವಲ ಆತ್ಮಹತ್ಯೆ ಎನ್ನಲಾಗದು' ಎಂದು ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಹೇಳಿದರು.

ಗೋವಿಂದರಾಜು ಮಾತನಾಡಿ, 'ಬೆಂಗಳೂರಿನ ಸಂಜಯನಗರ ಠಾಣೆ ಪೊಲೀಸರು ವೈದ್ಯರೊಬ್ಬರನ್ನು ಕರೆದೊಯ್ದು ಮೂರು ದಿನ ಕೂಡಿಹಾಕಿ ಹಿಂಸಿಸಿದ್ದಾರೆ. ಲಕ್ಷಾಂತರ ರೂಪಾಯಿಯನ್ನೂ ಸುಲಿಗೆ ಮಾಡಿದ್ದಾರೆ. ಅದೇ ವ್ಯಾಪ್ತಿಯ ಎಸಿಪಿಗೆ ತನಿಖೆ ಜವಾಬ್ದಾರಿ ನೀಡಲಾಗಿದೆ. ಇದರಿಂದ ಸತ್ಯ ಹೊರ ಬರುವುದೆ' ಎಂದು ಪ್ರಶ್ನಿಸಿದರು.

ಎರಡೂ ಪ್ರಕರಣಗಳ ಕುರಿತು ಮಾಹಿತಿ ಪಡೆದು ಪರಿಶೀಲನೆ ನಡೆಸಲಾಗುವುದು. ಲಾಕಪ್ ಸಾವಿನ ಎಲ್ಲ ಪ್ರಕರಣಗಳನ್ನೂ ರಾಷ್ಟ್ರೀಯ ಮಾನವ ಹಕ್ಕು ಆಯೋಗದ ನಿರ್ದೇಶನದಂತೆ ಸಿಐಡಿ ತನಿಖೆಗೆ ಒಪ್ಪಿಸಲಾಗುತ್ತಿದೆ ಎಂದು ಗೃಹ ಸಚಿವರು ಉತ್ತರಿಸಿದರು.

'ವಿದ್ಯುತ್ ಕ್ಷೇತ್ರದ ಖಾಸಗೀಕರಣ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಕ್ಷೇತ್ರದ ಖಾಸಗೀಕರಣ ಮಾಡುವ ಪ್ರಸ್ತಾವ ರಾಜ್ಯ ಸರ್ಕಾರದ ಮುಂದೆ ಇಲ್ಲ ಎಂದು ಇಂಧನ ಸಚಿವ ವಿ.ಸುನೀಲ್ ಕುಮಾರ್ ಸ್ಪಷ್ಟಪಡಿಸಿದರು.

ವಿಧಾನಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಯಶವಂತರಾಯ ಗೌಡ ಪಾಟೀಲ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ವಿದ್ಯುತ್ ಪಂಪ್‌ಸೆಟ್‌ಗಳಿಗೆ ಹಾಗೂ ಗ್ರಾಮೀಣ ಪ್ರದೇಶದ ವಿದ್ಯುತ್ ಸಂಪರ್ಕಕ್ಕೆ ಸ್ಮಾರ್ಟ್ ಹಾಗೂ ಪ್ರಿಪೇಯ್ಡ್ ಮೀಟರ್ ಅಳವಡಿಸುವ ಪ್ರಸ್ತಾವವೂ ಇಲ್ಲ' ಎಂದರು.



ಸುನಿಲ್ ಕುಮಾರ್

'ರಾಜ್ಯದ ಸರ್ಕಾರಿ ಕಚೇರಿಗಳಿಂದ ₹5,792 ಕೋಟಿ ವಿದ್ಯುತ್ ಬಿಲ್ ಬಾಕಿ ಇದೆ. ಇಷ್ಟೊಂದು ಮೊತ್ತ ಬಾಕಿ ಇದ್ದರೆ ಇಲಾಖೆಯ ಸುಧಾರಣೆ ಮಾಡಲು ಸಾಧ್ಯ ಇಲ್ಲ. ಹೀಗಾಗಿ, ಸರ್ಕಾರಿ ಕಚೇರಿಗಳಲ್ಲಿ ಪ್ರಿಪೇಯ್ಡ್ ಮೀಟರ್ ಅಳವಡಿಕೆ ಮಾಡಲು ಚಿಂತನೆ ನಡೆಸಲಾಗಿದೆ. 27 ಅಮೃತ ನಗರ/ಪಟ್ಟಣಗಳಲ್ಲಿ ಈ ಯೋಜನೆ ಜಾರಿಗೊಳಿಸಲು ಯೋಜಿಸಲಾಗಿದೆ. ತಾತ್ಕಾಲಿಕ ವಿದ್ಯುತ್ ಸಂಪರ್ಕಗಳಿಗೆ ಸಹ ಪ್ರಿಪೇಯ್ಡ್ ಮೀಟರ್ ಅಳವಡಿಸಲಾಗುವುದು' ಎಂದು ಅವರು ಹೇಳಿದರು.

ಯಶವಂತರಾಯ ಗೌಡ ಪಾಟೀಲ, 'ವಿದ್ಯುತ್ ಕ್ಷೇತ್ರದ ಖಾಸಗೀಕರಣ ನಡೆಯುತ್ತಿದೆ ಎಂದು ಜನರು ಆತಂಕಕ್ಕೆ ಒಳಗಾಗಿದ್ದಾರೆ. ಉಚಿತ ವಿದ್ಯುತ್ ಇಲ್ಲ ಎಂದು ರೈತರೂ ಭಯಗೊಂಡಿದ್ದಾರೆ. ಸರ್ಕಾರವು ಗೊಂದಲ ನಿವಾರಿಸಬೇಕು' ಎಂದರು.

ಬಿಜೆಪಿಯ ಅಪ್ಪಚ್ಚು ರಂಜನ್, ಜೆಡಿಎಸ್‌ನ ಕೆ.ಎಸ್.ಲಿಂಗೇಶ್, 'ಕಾಫಿ ಬೆಳೆಗಾರರ 10 ಎಚ್.ಡಿ. ವರೆಗಿನ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಬೇಕು' ಎಂದು ಆಗ್ರಹಿಸಿದರು. ಈ ಬಗ್ಗೆ ಹಣಕಾಸು ಇಲಾಖೆಗೆ ಜತೆಗೆ ಸಮಾಲೋಚನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸುನೀಲ್ ಕುಮಾರ್ ಹೇಳಿದರು.

ಬಿಜೆಪಿಯ ಜಿ.ಕರುಣಾಕರ ರೆಡ್ಡಿ ಪ್ರಶ್ನೆಗೆ ಉತ್ತರಿಸಿದ ಅವರು, 'ವಿದ್ಯುತ್ ಪರಿವರ್ತಕಗಳು ಹಾಳಾದರೆ 24 ಗಂಟೆಗಳ ಒಳಗೆ ದುರಸ್ತಿ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಭಾಸ್ಕರ ರಾವ್ ರಾಜೀನಾಮೆ: ರಾಜಕೀಯ ಪ್ರವೇಶ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಪೊಲೀಸ್ ಎಡಿಜಿಪಿ ಆಗಿರುವ ಬಿ.ಭಾಸ್ಕರ ರಾವ್ ತಮ್ಮ ಹುದ್ದೆಗೆ ದಿಢೀರ್ ರಾಜೀನಾಮೆ ನೀಡಿದ್ದಾರೆ.

ರಾವ್ ಅವರು ರಾಜಕೀಯ ಪ್ರವೇಶಿಸುವ ಸಾಧ್ಯತೆ ಇರುವುದಾಗಿ ಆಪ್ತರು ಹೇಳಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರನ್ನು ಗುರುವಾರ ಭೇಟಿಯಾದ ಭಾಸ್ಕರ ರಾವ್, ರಾಜೀನಾಮೆ ಪತ್ರ ಸಲ್ಲಿಸಿದರು.

'ವೈಯಕ್ತಿಕ ಕಾರಣದಿಂದ ಹುದ್ದೆಗೆ ರಾಜೀನಾಮೆ ನೀಡುತ್ತಿದ್ದೇನೆ. ನನ್ನ ಮನವಿಯನ್ನು ಅಂಗೀಕರಿಸಲು ಕ್ರಮ ಕೈಗೊಳ್ಳಿ' ಎಂದು ಪತ್ರದಲ್ಲಿ ಉಲ್ಲೇಖಿಸಿರುವುದಾಗಿ ಗೊತ್ತಾಗಿದೆ.

ಆಪ್ತರ ಬಳಿ ಅಳಲು ತೋಡಿಕೊಂಡಿರುವ ಭಾಸ್ಕರ್ ರಾವ್, 'ರಾಜ್ಯದಲ್ಲೇ ಓದಿ ಬೆಳೆದ ನನಗೆ ಸೂಕ್ತ ಹುದ್ದೆ ನೀಡುವಲ್ಲಿ ಕಡೆಗಣಿಸಲಾಯಿತು. ದೂರವಾಣಿ ಕರೆ ಕದ್ದಾಲಿಕೆ ಪ್ರಕರಣದಲ್ಲಿ ದೂರು ನೀಡಿದರೂ ಆರೋಪಿಗಳನ್ನು ರಕ್ಷಿಸಲು ಸಿಬಿಐ ಬಿ ರಿಪೋರ್ಟ್ ಸಲ್ಲಿಸಿತು. ಇದೆಲ್ಲವೂ ನನಗೆ ನೋವು ಉಂಟು ಮಾಡಿದೆ. ಹೀಗಾಗಿ, ರಾಜೀನಾಮೆ ನೀಡುತ್ತಿದ್ದೇನೆ' ಎಂದಿರುವುದಾಗಿ ಗೊತ್ತಾಗಿದೆ.



ಭಾಸ್ಕರ್ ರಾವ್

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಆಗಿದ್ದ ವೇಳೆ ಲಾಕ್‌ಡೌನ್ ಪಾಸ್ ದುರ್ಬಳಕೆ ಆಗಿರುವುದಾಗಿ ಭಾಸ್ಕರ ರಾವ್ ವಿರುದ್ಧ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಆರೋಪಿಸಿದ್ದರು. ಇದಾದ ಕೆಲವೇ ದಿನಗಳಲ್ಲಿ ಭಾಸ್ಕರ ರಾವ್ ವರ್ಗಾವಣೆಯಾಗಿತ್ತು. ಆ ಸ್ಥಾನಕ್ಕೆ ಕಮಲ್ ಪಂತ್ ಬಂದರು.

ಕೆಲ ತಿಂಗಳ ಹಿಂದಷ್ಟೇ ಎಡಿಜಿಪಿ ಸಂಜಯ್ ಸಹಾಯ್ ಸಹ ರಾಜೀನಾಮೆ ನೀಡಿ, ಸ್ವಯಂನಿವೃತ್ತಿ ಪಡೆದಿದ್ದರು. ರಾವ್ ಈಗ ಅದೇ ಹಾದಿ ಹಿಡಿದಿದ್ದಾರೆ.

ರಾಜಕೀಯ ಪ್ರವೇಶಕ್ಕೆ ಸಿದ್ಧತೆ: ರಾಜೀನಾಮೆ ಅಂಗೀಕಾರವಾಗುತ್ತಿದ್ದಂತೆ ರಾಜಕೀಯ ಪ್ರವೇಶಿಸಲು ಭಾಸ್ಕರ ರಾವ್ ಯೋಚಿಸಿದ್ದಾರೆಂದು ಗೊತ್ತಾಗಿದೆ.

'ಕಾಂಗ್ರೆಸ್ ಅಥವಾ ಆಮ್ ಆದ್ಮಿ ಪಾರ್ಟಿಗೆ (ಎಎಪಿ) ಭಾಸ್ಕರ ರಾವ್ ಸೇರಬಹುದು. ಬಸವನಗುಡಿ ಅಥವಾ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಸಾಧ್ಯತೆ ಇದೆ' ಎಂಬುದಾಗಿ ಆಪ್ತರೊಬ್ಬರು ಹೇಳಿದ್ದಾರೆ.

ಆಪ್ತ ಸ್ನೇಹಿತನ ಸಾವಿಗೆ ಸಿ.ಎಂ ಬಸವರಾಜ ಬೊಮ್ಮಾಯಿ ಕಂಬನಿ

ಹುಬ್ಬಳ್ಳಿ: ಸೋದರ ಸಂಬಂಧಿ ಹಾಗೂ ಆಪ್ತ ಸ್ನೇಹಿತ ರಾಜು ಪಾಟೀಲ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಗೆಳೆಯನ ಸಾವಿಗೆ ಕಣ್ಣೀರು ಹಾಕಿದರು.

ಬೆಂಗಳೂರಿನಿಂದ ವಿಮಾನದಲ್ಲಿ ಬಂದಿಳಿದ ಸಿಎಂ, ಮಂಜುನಾಥ ನಗರದಲ್ಲಿರುವ ಪಾಟೀಲರ ನಿವಾಸಕ್ಕೆ ತೆರಳಿದರು. ಪಾರ್ಥೀವ ಶರೀರಕ್ಕೆ ಹೂಮಾಲೆ ಹಾಕಿ ಅಂತಿಮ ದರ್ಶನ ಪಡೆದ ಅವರು, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಆಯೋಗದ ವರದಿ ಸುತ್ತಲ ವಿದ್ಯಮಾನಗಳ ಕುರಿತು ಚಿಂತನ–ಮಂಥನ

'ನ್ಯಾ.ಸದಾಶಿವ ವರದಿ ಬಗ್ಗೆ ಚರ್ಚೆ ನಡೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ವಿರೋಧ ವ್ಯಕ್ತಪಡಿಸಿದೆ. ವರದಿ ಬಗ್ಗೆ ಸಾರ್ವಜನಿಕ ಚರ್ಚೆ ನಡೆಯಬೇಕು ಎಂದು ಆಗ್ರಹಿಸಿದೆ.

ಆಯೋಗದ ವರದಿ ಸುತ್ತ ನಡೆಯುತ್ತಿರುವ ವಿದ್ಯಾಮಾನಗಳ ಬಗ್ಗೆ ಚರ್ಚಿಸಲು ಚಿತ್ರದುರ್ಗದ ಭೋವಿ ಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ನಗರದಲ್ಲಿ ಗುರುವಾರ ನಡೆದ ಭೋವಿ, ಲಂಬಾಣಿ, ಕೊರಮ, ಕೊರಚ, ಅಲೆಮಾರಿ ಸಮುದಾಯಗಳ ಮುಖಂಡರ ಚಿಂತನಾ ಸಮಾವೇಶದಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು.



ಸಮಾವೇಶದಲ್ಲಿ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಮಾತನಾಡಿದರು. ಒಕ್ಕೂಟದ ಕಾರ್ಯಾಧ್ಯಕ್ಷ ಎನ್‌ಅನಂತನಾಯ್ಕ್, ಕಾರ್ಯದರ್ಶಿ ರಾಘವೇಂದ್ರ ನಾಯ್ಕ್, ವಕೀಲ ಶಂಕರಪ್ಪ, ಚಿತ್ರದುರ್ಗದ ಬಂಜಾರ ಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಮಾಜಿ ಸಚಿವ ರುದ್ರಪ್ಪ ಲಮಾಣಿ ಇದ್ದರು ಪ್ರಜಾವಾಣಿ ಚಿತ್ರ

ಸಿದ್ದರಾಮೇಶ್ವರ ಸ್ವಾಮೀಜಿ ಮಾತನಾಡಿ, 'ಭೋವಿ ಮತ್ತು ಲಂಬಾಣಿ ಸಮುದಾಯದ ಶಾಸಕರು ಮತ್ತು ಸ್ವಾಮೀಜಿಗಳು ವರದಿ ಜಾರಿಗೆ ಸಮ್ಮತಿಸಿದ್ದಾರೆ ಎಂಬುದು ಸುಳ್ಳು. ಈ ವಿಷಯದಲ್ಲಿ ತಾರ್ಕಿಕ ಅಂತ್ಯ ಕಾಣುವ ರೀತಿಯ ಯಾವುದೇ ಚರ್ಚೆಗಳೂ ನಡೆದಿಲ್ಲ. ಏಕಪಕ್ಷೀಯವಾಗಿ ವರದಿ ಜಾರಿಗೊಳಿಸಲು ಮುಂದಾದರೆ ದೊಡ್ಡಮಟ್ಟದಲ್ಲಿ ಹೋರಾಟ ನಡೆಯಲಿದೆ. ವರದಿ ಬಗ್ಗೆ ಸಾರ್ವಜನಿಕ ಚರ್ಚೆಯಾಗಲಿ' ಎಂದು ಹೇಳಿದರು.

'ಸಚಿವ ಸಂಪುಟದ ಮುಂದೆ ಅಥವಾ ಅಧಿವೇಶನದ ಮುಂದೆ ಈ ವರದಿ ಯಾವುದೇ ಕ್ಷಣದಲ್ಲಾದರೂ ಬರಬಹುದು. ಆದರೆ, ಅಂಗೀಕಾರ ಆಗದಂತೆ ನೋಡಿಕೊಳ್ಳಬೇಕಿದೆ. ಸಚಿವ ಪ್ರಭು ಚೌವ್ಹಾಣ್ ಅವರ ಏಕಾಂಗಿಯಾಗಿ ವಿರೋಧಿಸುತ್ತಿದ್ದಾರೆ. ಅವರ ಕೈ ಬಲಪಡಿಸುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

'ವರದಿ ಜಾರಿ ವಿರೋಧಿಸಿ ಸೆ.24ರಂದು ಎಲ್ಲಾ ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ಸಮುದಾಯದ ಮುಖಂಡರು ಸಜ್ಜಾಗಬೇಕು. ಸೆ.25ರಂದು ಎಲ್ಲಾ ಶಾಸಕರಿಗೆ ಮನವಿ ಪತ್ರ ಸಲ್ಲಿಸಬೇಕು. ಮುಖ್ಯಮಂತ್ರಿ ಆದಿಯಾಗಿ ಎಲ್ಲಾ ಸಚಿವರಿಗೂ ಮನವಿ ಪತ್ರ ತಲುಪಿಸಿ ವರದಿ ಜಾರಿಯಾದರೆ ಆಗಲಿರುವ ಅನ್ಯಾಯದ ಬಗ್ಗೆ ಮನವರಿಕೆ ಮಾಡಿಸಬೇಕು' ಎಂದು ಮುಖಂಡರಿಗೆ ತಿಳಿಸಿದರು.

'ಸಂತ ಸೇವಾಲಾಲ್ ಅವರು ತಮ್ಮ ಕಾಲಘಟ್ಟದಲ್ಲಿ ಸಮಾಜದ ಏಳಿಗೆಗೆ ಕೊಡುಗೆ ನೀಡಿದ್ದಾರೆ. ಯಾವುದೇ ಸಮುದಾಯದ ಗುರುಗಳು ಅಥವಾ ದಾರ್ಶನಿಕರನ್ನು ಅವಮಾನಿಸಬಾರದು. ಈ ರೀತಿಯ ನಡೆವಳಿಕೆಗಳ ವಿರುದ್ಧ ಸರ್ಕಾರ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಾಹಿತಿ ಬಿ.ಟಿ. ಲಲಿತಾ ನಾಯಕ್ ಮಾತನಾಡಿ, 'ಬಿ.ಆರ್. ಅಂಬೇಡ್ಕರ್ ಅವರು ಈ ಸಮುದಾಯಗಳಿಗೆ ನೀಡಿರುವ ಮೀಸಲಾತಿಯನ್ನು ಕಸಿದುಕೊಳ್ಳಲು ಯಾರಿಂದಲೂ ಆಗುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿ ಇರುವ ಎಲ್ಲಾ ಜಾತಿಗಳನ್ನು ಸಮಾನವಾಗಿ ಕಾಣಬೇಕು. ಈ ವಿಷಯದಲ್ಲಿ ಸಂಘರ್ಷಕ್ಕೆ ಇಳಿಯುವುದು ಸರಿಯಲ್ಲ. ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ಅವರಿಗೂ ಮನವರಿಕೆ ಮಾಡಿಕೊಡುವ ಅಗತ್ಯವಿದೆ' ಎಂದರು.

ಸೇಂಟ್ ಪ್ಯಾಟ್ರಿಕ್ ಚರ್ಚ್‌ನಲ್ಲಿ ನಡೆದ ಧಾರ್ಮಿಕ ವಿಧಿ ವಿಧಾನ

ಆಸ್ಕರ್‌ಗೆ ಅಂತಿಮ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಹಿರಿಯ ನಾಯಕ ಆಸ್ಕರ್ ಫರ್ನಾಂಡಿಸ್ ಅವರ ಪಾರ್ಥಿವ ಶರೀರದ ಅಂತಿಮ ಧಾರ್ಮಿಕ ವಿಧಿ ವಿಧಾನಗಳು ಹೊಸೂರು ರಸ್ತೆಯ ಸೇಂಟ್ ಪ್ಯಾಟ್ರಿಕ್ ಚರ್ಚ್‌ನಲ್ಲಿ ಗುರುವಾರ ನಡೆಯಿತು.

ಆಸ್ಕರ್ ಅವರ ಪತ್ನಿ ಬ್ಲಾಸಂ ಫರ್ನಾಂಡಿಸ್, ಪುತ್ರ ಓಶನ್, ಪುತ್ರಿ ಓಶನಿ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್, ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜಿ. ಪರಮೇಶ್ವರ ಈ ಸಂದರ್ಭದಲ್ಲಿ ಇದ್ದರು.

ಅಂತಿಮ ಪ್ರಾರ್ಥನೆಯ ಸಂದರ್ಭದಲ್ಲಿ ಇದೇ ವೇಳೆ ಪುತ್ರಿ ಓಶನಿ, ಅಪ್ಪನ ರಾಜಕೀಯ ಬದುಕು, ಸಾಮಾಜಿಕ ಚಟುವಟಿಕೆ, ಅಪ್ಪನಿಗೆ ನೆರಳಾಗಿ ನಿಂತು ಕುಟುಂಬ ಪೊರೆದ ಅಮ್ಮನ ಪರಿ, ಅಪ್ಪ ಆಸ್ಪತ್ರೆಯಲ್ಲಿದ್ದ ಕೊನೆಯ 55 ದಿನಗಳ ಕಾಲ ಸಲ್ಲಿಸಿದ ಸೇವೆಯನ್ನು ಮೆಲುಕಿ ಹಾಕಿದರು. ಮಾರ್ಗರೆಟ್ ಆಳ್ವಾ ಕೂಡಾ ಆಸ್ಕರ್ ಅವರ ಗುಣಗಾನ ಮಾಡಿ, ನೆನಪಿಸಿಕೊಂಡರು. ಈ ಸಂದರ್ಭದಲ್ಲಿ ಬ್ಲಾಸಂ ಫರ್ನಾಂಡಿಸ್ ಭಾವುಕರಾಗಿ ಕಣ್ಣೀರಿಟ್ಟರು.



ಆಸ್ಕರ್ ಫರ್ನಾಂಡಿಸ್ ಅವರ ಪಾರ್ಥಿವ ಶರೀರಕ್ಕೆ ರಾಹುಲ್ ಗಾಂಧಿ ನಮನ ಸಲ್ಲಿಸಿದರು. ಆಸ್ಕರ್ ಅವರ ಪತ್ನಿ ಬ್ಲಾಸಂ ಫರ್ನಾಂಡಿಸ್, ಪುತ್ರಿ ಓಶನಿ ಇದ್ದರು

ಅದಕ್ಕೂ ಮೊದಲು ಬ್ರಿಗೇಡ್ ರಸ್ತೆಯಲ್ಲಿರುವ ಆಸ್ಕರ್ ಅವರ ನಿವಾಸ ರೆಸ್ಟ್ ಹೌಸ್ ಅಪಾರ್ಟ್‌ಮೆಂಟ್‌ಗೆ ತೆರಳಿದ ರಾಹುಲ್ ಗಾಂಧಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ಆಸ್ಕರ್ ಅವರ ಪಾರ್ಥಿವ ಶರೀರಕ್ಕೆ ಮಂಗಳೂರಿನ ಮಿಲಾಗ್ರಿಸ್ ಚರ್ಚ್‌ನಲ್ಲಿ ಬುಧವಾರ ಧಾರ್ಮಿಕ ವಿಧಿ ನಡೆಸಿ, ಅಂತಿಮ ಪಾರ್ಥನೆ ಸಲ್ಲಿಸಿದ ಬಳಿಕ ಬೆಂಗಳೂರಿಗೆ ತರಲಾಗಿತ್ತು. ಗುರುವಾರ ಬೆಳಿಗ್ಗೆ 10ರಿಂದ 12 ಗಂಟೆವರೆಗೆ ಕೆಪಿಸಿಸಿ ಕಚೇರಿಯ ಮುಂಭಾಗದಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಡಿ.ಕೆ. ಶಿವಕುಮಾರ್ ಅವರು ಪಕ್ಷದ ಧ್ವಜವನ್ನು ಹೊದಿಸಿ ಗೌರವ ಸಲ್ಲಿಸಿದರು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಸೇರಿದಂತೆ ವಿವಿಧ ಪಕ್ಷಗಳ ಪ್ರಮುಖರು, ನೂರಾರು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಬಿಬಿಎಂಪಿ: ವಿಶೇಷ ಲಸಿಕಾ ಅಭಿಯಾನ ಇಂದು • 5 ಲಕ್ಷ ಮಂದಿಗೆ ಲಸಿಕೆ ಹಾಕುವ ಗುರಿ

ವಾರ್ಡ್‌ನಲ್ಲಿ 10 ಕಡೆ ಸಿಗಲಿದೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು ಶುಕ್ರವಾರ ಹಮ್ಮಿಕೊಂಡಿರುವ ವಿಶೇಷ ಅಭಿಯಾನದಲ್ಲಿ 5 ಲಕ್ಷ ಮಂದಿಗೆ ಕೋವಿಡ್ ಲಸಿಕೆ ಹಾಕಲು ಗುರಿ ನಿಗದಿಪಡಿಸಲಾಗಿದೆ. ಈ ಗುರಿ ಸಾಧನೆಗಾಗಿ ಪ್ರತಿ ವಾರ್ಡ್‌ನಲ್ಲಿ ಕನಿಷ್ಠ 10 ಲಸಿಕಾ ಕೇಂದ್ರಗಳನ್ನು ಆರಂಭಿಸಲು ಸಿದ್ಧತೆ ಮಾಡಿಕೊಂಡಿದೆ.

ಲಸಿಕಾ ಅಭಿಯಾನದ ಬಗ್ಗೆ ಮಾಹಿತಿ ನೀಡಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಇದುವರೆಗೆ ವಾರ್ಡ್‌ನಲ್ಲಿ ಪಿಎಚ್‌ಸಿಯಲ್ಲಿ ಮಾತ್ರ ಲಸಿಕಾ ಕೇಂದ್ರವನ್ನು ಹೊಂದಿದ್ದೆವು. ವಾರ್ಡ್‌ನಲ್ಲಿ ಎರಡು ಅಥವಾ ಮೂರು ಕಡೆ ವಿಸ್ತರಣಾ ಶಿಬಿರಗಳನ್ನು ಆಯೋಜಿಸುತ್ತಿದ್ದೆವು. ವಿಶೇಷ ಲಸಿಕಾ ಅಭಿಯಾನದ ಅಂಗವಾಗಿ ಶುಕ್ರವಾರ ಒಂದೊಂದು ವಾರ್ಡ್‌ನಲ್ಲೂ ಸರಾಸರಿ 10 ಕೇಂದ್ರಗಳಲ್ಲಿ ಲಸಿಕೆ ಹಾಕಲಾಗುತ್ತದೆ. ಅಭಿಯಾನವನ್ನು ಯಶಸ್ವಿಗೊಳಿಸಲು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ಪ್ರತಿಷ್ಠಿತ ಸರ್ಕಾರೇತರ ಸಂಸ್ಥೆಗಳ ಜೊತೆ ಸೇರಿ ಕಾರ್ಯಕ್ರಮ ರೂಪಿಸಿದ್ದೇವೆ. ಖಾಸಗಿ ಆಸ್ಪತ್ರೆಗಳೂ ಈ ಅಭಿಯಾನದಲ್ಲಿ ಕೈಜೋಡಿಸಲಿವೆ' ಎಂದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಅಭಿಯಾನದ ಸಲುವಾಗಿ ಒಟ್ಟು 2,178 ಲಸಿಕಾ ಕೇಂದ್ರಗಳನ್ನು ತೆರೆಯಲಾಗುತ್ತದೆ. ಈ ಕೇಂದ್ರಗಳಲ್ಲಿ ಬೆಳಿಗ್ಗೆ 8ರಿಂದ ರಾತ್ರಿವರೆಗೆ ಲಸಿಕೆ ಸಿಗಲಿದೆ. ವಿಸ್ತರಣಾ ಶಿಬಿರಗಳಲ್ಲಿ ಸಂಜೆ 5 ಗಂಟೆವರೆಗೆ ಲಸಿಕೆ ಲಭ್ಯ. ಕೋವಿಶೀಲ್ಡ್ ಅಥವಾ ಕೊವ್ಯಾಕ್ಸಿನ್ ಲಸಿಕೆ ಪಡೆಯಲು ಅವಕಾಶ ಕಲ್ಪಿಸಿದ್ದೇವೆ. ಅಭಿಯಾನಕ್ಕಾಗಿಯೇ 4 ಲಕ್ಷ ಕೋವಿಶೀಲ್ಡ್, 1 ಲಕ್ಷ ಕೊವ್ಯಾಕ್ಸಿನ್ ಲಸಿಕೆ ದಾಸ್ತಾನಿದೆ' ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ಅಭಿಯಾನ ಆಯೋಜಿಸಲಾಗುತ್ತಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ವಿಶೇಷ ಅಭಿಯಾನ ಹಮ್ಮಿಕೊಳ್ಳುವುದು ರಾಜ್ಯ ಸರ್ಕಾರದ ನಿರ್ಣಯ. ಅದನ್ನು ನಾವು ಅನುಷ್ಠಾನಗೊಳಿಸುತ್ತಿದ್ದೇವೆ. ಇದಕ್ಕೂ ಮುಂಚೆಯೇ ಯಲಹಂಕದಲ್ಲಿ ಬೃಹತ್ ಲಸಿಕಾ ಕೇಂದ್ರ ಆರಂಭಿಸಿದ್ದೇವೆ. ಅಲ್ಲಿಗೆ ಲಸಿಕೆ ಬಯಸಿ ಬರುವ ಎಲ್ಲರಿಗೂ ಲಸಿಕೆ ನೀಡಲಾಗುತ್ತಿದೆ. ಅದೇ ರೀತಿ ಮಲ್ಲೇಶ್ವರದಲ್ಲಿ ಸ್ಥಾಪಿಸಿರುವ ಬೃಹತ್ ಲಸಿಕೆ ಕೇಂದ್ರದಲ್ಲಿ ಶುಕ್ರವಾರದಿಂದ ಲಸಿಕೆ ನೀಡುವ ಕಾರ್ಯ ಆರಂಭವಾಗಲಿದೆ. ಇದೇ ರೀತಿ ಇನ್ನೂ ಅನೇಕ ಬೃಹತ್ ಲಸಿಕಾ ಕೇಂದ್ರ ಸ್ಥಾಪಿಸಲಿದ್ದೇವೆ' ಎಂದರು.

'ಬೆಂಗಳೂರಿನಲ್ಲಿ ಲಸಿಕೆ ಪಡೆಯುವ ಅರ್ಹತೆ ಹೊಂದಿರುವ ಶೇ 80ರಷ್ಟು ಮಂದಿ ಈಗಾಗಲೇ ಮೊದಲ ಡೋಸ್ ಪಡೆದಿದ್ದಾರೆ. ಮೊದಲ ಡೋಸ್ ಪಡೆಯಲು ಬಾಕಿ ಇರುವವರ ಸಂಖ್ಯೆ 19 ಲಕ್ಷ ಮಂದಿ ಮಾತ್ರ. ತಿಂಗಳ ಒಳಗೆ ನಾವು ಶೇ 100ರಷ್ಟು ಗುರಿ ಸಾಧನೆ ಮಾಡಲಿದ್ದೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಲಸಿಕೆ ಪಡೆಯಲು ಕೆಲವರಿಗೆ ಹಿಂಜರಿಕೆ ಇತ್ತು. ಮೊದಲ ಡೋಸ್ ಪಡೆಯದವರ ಸಂಖ್ಯೆ ಹೆಚ್ಚು ಇರುವ ಪ್ರದೇಶಗಳಿಗೆ ಬಿಬಿಎಂಪಿ ಸಿಬ್ಬಂದಿ ಎನ್‌ಜಿಒ ಪ್ರತಿನಿಧಿಗಳ ಜೊತೆ ತೆರಳಿ ಸ್ಥಳೀಯ ಮುಖಂಡರು ಹಾಗೂ ಸಮುದಾಯದ ನಾಯಕರ ಮನವೊಲಿಸುವ ಕೆಲಸ ಮಾಡಿದ್ದಾರೆ. ಲಸಿಕೆಯ ಪ್ರಯೋಜನಗಳ ಬಗ್ಗೆ ಮನವರಿಕೆ ಮಾಡುತ್ತಿದ್ದಾರೆ' ಎಂದರು.

'ನಗರದಲ್ಲಿ ಪ್ರಸ್ತುತ 385 ಕೋವಿಡ್ ರೋಗಿಗಳು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತೀವ್ರ ನಿಗಾ ಘಟಕಗಳಲ್ಲಿ (ಐಸಿಯು) 32 ಮಂದಿ ಇದ್ದಾರೆ. ಇವರಲ್ಲಿ 25 ಮಂದಿ ಲಸಿಕೆಯನ್ನೇ ಪಡೆದಿಲ್ಲ. 7 ಮಂದಿ ಮೊದಲ ಡೋಸ್ ಮಾತ್ರ ಪಡೆದಿದ್ದರು. ಎರಡೂ ಡೋಸ್ ಪಡೆದ ಒಬ್ಬರೂ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿಲ್ಲ. ಲಸಿಕೆ ಪಡೆದವರು ಐಸಿಯುವಿನಲ್ಲಿ ಚಿಕಿತ್ಸೆ ಪಡೆಯುವ ಪ್ರಮೇಯ ಕಡಿಮೆ' ಎಂದು ವಿವರಿಸಿದರು.


'ಸಹಾಯವಾಣಿಗೆ (1533) ಕರೆ ಮಾಡಿದರೆ ಲಸಿಕಾ ಕೇಂದ್ರಗಳು ಎಲ್ಲಿವೆ ಎಂಬ ಮಾಹಿತಿ ನೀಡಲಾಗುತ್ತದೆ. ಪತ್ರಿಕೆಗಳಲ್ಲಿ ಜಾಹೀರಾತು ನೀಡಲಿದ್ದೇವೆ. ಅದರಲ್ಲಿ ಕ್ಯು.ಆರ್.ಕೋಡ್ ಸ್ಕ್ಯಾನ್ ಮಾಡಿ ಸಮೀಪದ ಲಸಿಕೆ ಕೇಂದ್ರದ ಮಾಹಿತಿ ಸಿಗಲಿದೆ' ಎಂದು ವಿಶೇಷ ಆಯುಕ್ತ (ಆರೋಗ್ಯ) ಡಿ. ರಂದೀಪ್ ತಿಳಿಸಿದರು.


'ಲಸಿಕೆ ಹಾಕಲು 2 ಸಾವಿರ ಸಿಬ್ಬಂದಿ ಹಾಗೂ 2 ಸಾವಿರ ಸಹಾಯಕರನ್ನು ನಿಯೋಜನೆ ಮಾಡಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲೂ ಉಚಿತ ಲಸಿಕೆ ಹಾಕಲು ನಿರ್ದೇಶನ ನೀಡಿದ್ದೇವೆ' ಎಂದರು.

'ಬೆಂಗಳೂರೇ ಮುಂದು'

'ಮಹಾನಗರಗಳ ಪೈಕಿ ನವದೆಹಲಿಯ ಜನಸಂಖ್ಯೆ ನಮಗಿಂತ ದುಪ್ಪಟ್ಟು ಇದೆ. ಹಾಗಾಗಿ ಸಂಖ್ಯೆ ಆಧಾರದಲ್ಲಿ ಲಸಿಕೆ ಅಭಿಯಾನದಲ್ಲಿ ನವದೆಹಲಿ ಮುಂದಿದೆ. ಲಸಿಕೆ ಹಾಕಿದವರ ಶೇಕಡವಾರು ಪ್ರಮಾಣ ನೋಡಿದರೆ ನಾವು ದೇಶದಲ್ಲೇ ಮೊದಲ ಸ್ಥಾನದಲ್ಲಿದ್ದೇವೆ' ಎಂದು ಗೌರವ್ ಗುಪ್ತ ತಿಳಿಸಿದರು.

'ಕೋವಿಡ್ ಲಸಿಕಾ ಅಭಿಯಾನ ಪೂರ್ಣಗೊಳಿಸಿ ಬೆಂಗಳೂರನ್ನು ಸುರಕ್ಷಿತ ನಗರವನ್ನಾಗಿ ರೂಪಿಸಬೇಕಿದೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯ' ಎಂದರು.





ಬೆಸ್ಕಾಂ: ಸಂವಾದ ಸಭೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು (ಬೆಸ್ಕಾಂ) ಜಾಲಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿನ ಗ್ರಾಹಕರಿಗಾಗಿ ಇದೇ 18ರಂದು ಸಂವಾದ ಸಭೆ ಏರ್ಪಡಿಸಿದೆ.

ಜಾಲಹಳ್ಳಿ, ದೊಡ್ಡಬೊಮ್ಮಸಂದ್ರ, ಚಾಮುಂಡೇಶ್ವರಿ ಬಡಾವಣೆ, ರಾಮಣ್ಣ ಗಾರ್ಡನ್, ರಾಮಚಂದ್ರಪುರ, ಅಬ್ಬಿಗೆರೆ, ಎಚ್‌ವಿವಿ ವ್ಯಾಲಿ, ಗಂಗಮ್ಮ ವೃತ್ತ, ಕುವೆಂಪು ನಗರ, ಸಿಂಗಾಪುರ, ಲಕ್ಷ್ಮಿಪುರ, ವಡೇರಹಳ್ಳಿ, ಕಮ್ಮಗೊಂಡನಹಳ್ಳಿ, ಬಾಹುಬಲಿ ನಗರ, ಮುತ್ಯಾಲನಗರ, ಸುಂದರನಗರ, ಬಿಇಎಲ್, ಎಚ್‌ಎಂಟಿ ಹಾಗೂ ಸುತ್ತಮುತ್ತಲಿನ ಪ್ರದೇಶದ ಗ್ರಾಹಕರು ಜಾಲಹಳ್ಳಿ ಉಪವಿಭಾಗ ಕಚೇರಿಯಲ್ಲಿ ಅಂದು ಮಧ್ಯಾಹ್ನ 3ಕ್ಕೆ ಸಭೆಗೆ ಹಾಜರಾಗಬಹುದು.

ಚಂದಾಪುರ ಉಪವಿಭಾಗ: ಚಂದಾಪುರ, ಬೊಮ್ಮಸಂದ್ರ, ಹೆಬ್ಬಗೋಡಿ, ಸೂರ್ಯನಗರ ಶಾಖೆಗಳಿಗೆ ಒಳಪಡುವ ಗ್ರಾಹಕರು ಚಂದಾಪುರದ ಬೆಸ್ಕಾಂ ಕಚೇರಿಯಲ್ಲಿಯೂ 18ರಂದು ಮಧ್ಯಾಹ್ನ 2.30ಕ್ಕೆ ಸಭೆ ನಡೆಯಲಿದೆ ಎಂದು ಬೆಸ್ಕಾಂ ಹೇಳಿದೆ.

ವೈದ್ಯರಿಗೆ ಜೋಡಿ ಶ್ವಾಸಕೋಶ ಕಸಿ


ಬೆಂಗಳೂರು: ಕೊರೊನಾ ಸೋಂಕಿನಿಂದ ಶ್ವಾಸಕೋಶಕ್ಕೆ ಗಂಭೀರ ಹಾನಿಯಾಗಿ, ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗಿದ್ದ ನಗರದ ವೈದ್ಯರೊಬ್ಬರಿಗೆ ಆಸ್ಟರ್ ಸಿಎಂಐ ಆಸ್ಪತ್ರೆಯ ವೈದ್ಯರು ಜೋಡಿ ಶ್ವಾಸಕೋಶ ಕಸಿ ನಡೆಸಿದ್ದಾರೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಆಸ್ಟರ್ ಸಿಎಂಐ ಆಸ್ಪತ್ರೆಯ ಡಾ. ವಿ. ಅರುಣ್ ಮಾತನಾಡಿ, 'ಖಾಸಗಿ ಆಸ್ಪತ್ರೆಯೊಂದಲ್ಲಿ ಕಾರ್ಯನಿರ್ವಹಿಸುತ್ತಿದ್ದ 30 ವರ್ಷದ ಅರಿವಳಿಕೆ ತಜ್ಞ ಡಾ. ಸನತ್ ಕುಮಾರ್ ಎಸ್. ಜಿ ಅವರು ಕೋವಿಡ್ ಪೀಡಿತರಿಗೆ ಸೇವೆ ನೀಡಿದ್ದರು. ಎರಡನೇ ಅಲೆಯಲ್ಲಿ ಕೂಡ ಐಸಿಯುಗೆ ದಾಖಲಾದ ಸೋಂಕಿತರಿಗೆ ಅವರು ಚಿಕಿತ್ಸೆ ನೀಡಿದ್ದಾರೆ. ರೋಗಿಗಳ ಸಂಪರ್ಕದಿಂದ ಕೋವಿಡ್ ಪೀಡಿತರಾದ ಅವರು, ಗಂಭೀರವಾಗಿ ಅಸ್ವಸ್ಥರಾದರು. ರಕ್ತದಲ್ಲಿನ ಆಮ್ಲಜನಕ ಪ್ರಮಾಣವು ಶೇ 60ಕ್ಕೆ ಇಳಿಕೆಯಾದ್ದರಿಂದ ವೆಂಟಿಲೇಟರ್‌ನಲ್ಲಿ ಇರಿಸಲಾಗಿತ್ತು' ಎಂದು ತಿಳಿಸಿದರು.

'ಹೆಚ್ಚಿನ ಪರೀಕ್ಷೆಗಳನ್ನು ನಡೆಸಿದಾಗ ಶ್ವಾಸಕೋಶಕ್ಕೆ ಹಾನಿಯಾಗಿರುವುದು ದೃಢಪಟ್ಟಿತು. ಅವರು ಚೇತರಿಕೆ ಹೊಂದಲು ಶ್ವಾಸಕೋಶ ಕಸಿಯಿಂದ ಮಾತ್ರ ಸಾಧ್ಯ ಎಂದು ನಿರ್ಧರಿಸಿ, ಮೂರೂವರೆ ತಿಂಗಳು ಚಿಕಿತ್ಸೆ ನೀಡಿದ ಬಳಿಕ ಎರಡೂ ಶ್ವಾಸಕೋಶಗಳ ಕಸಿ ನಡೆಸಲಾಯಿತು' ಎಂದು ಹೇಳಿದರು.

ಕಿಮ್ಸ್ ಹಾರ್ಟ್ ಆ್ಯಂಡ್ ಲಂಗ್ ಇನ್‌ಸ್ಟಿಟ್ಯೂಟ್‌ನ ಡಾ. ಸಂದೀಪ್ ಅತ್ತಾವರ್, 'ಕೋವಿಡ್ ಪೀಡಿತರಾದವರಲ್ಲಿ ಶೇ 40ರಷ್ಟು ಮಂದಿಯ ಶ್ವಾಸಕೋಶಕ್ಕೆ ಹಾನಿಯಾಗಿದೆ. ಇದರಿಂದಾಗಿ ತೀವ್ರ ನಿಗಾ ಘಟಕದಲ್ಲಿ ಇರಿಸಿದರೂ ಕೆಲವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಜೋಡಿ ಶ್ವಾಸಕೋಶ ಕಸಿ ಸಂಕೀರ್ಣ ಪ್ರಕ್ರಿಯೆಯಾಗಿದೆ. 4 ವಾರಗಳ ಬಳಿಕ ಹೊಂದಾಣಿಕೆಯಾಗುವ ಶ್ವಾಸಕೋಶ ದೊರೆತಿದ್ದರಿಂದ ಸನತ್ ಕುಮಾರ್ ಅವರಿಗೆ ಕಸಿ ನಡೆಸಿ, ಉಳಿಸಿಕೊಳ್ಳಲು ಸಾಧ್ಯವಾಯಿತು. ಈಗ ಅವರು ಮನೆಗೆ ತೆರಳಿದ್ದು, ಆರೋಗ್ಯದಲ್ಲಿ ಚೇತರಿಕೆ ಕಾಣುತ್ತಿದೆ' ಎಂದು ತಿಳಿಸಿದರು.

ಡಾ. ಸನತ್ ಕುಮಾರ್, 'ಔಷಧದಿಂದಲೇ ಕೋವಿಡ್ ವಾಸಿಯಾಗುತ್ತದೆ ಅಂದುಕೊಂಡಿದ್ದೆ. ಆದರೆ, ಶ್ವಾಸಕೋಶದ ಕಸಿಗೆ ಒಳಪಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಐಸಿಯು ದಾಖಲಾದ ಬಳಿಕ ಏನಾಯಿತು ಎನ್ನುವುದು ತಿಳಿಯಲಿಲ್ಲ' ಎಂದು ವಿವರಿಸಿದರು.


ಜೋಡಿ ಶ್ವಾಸಕೋಶ ಕಸಿಗೆ ಒಳಗಾದ ಡಾ. ಸನತ್ ಕುಮಾರ್ ಜೊತೆಗೆ ಚಿಕಿತ್ಸೆ ನೀಡಿದ (ಎಡದಿಂದ) ಡಾ. ಸುನಿಲ್ ಕುಮಾರ್ ಕೆ., ಡಾ.ವಿ. ಅರುಣ್, ಡಾ. ಶ್ರೀವತ್ಸ ಲೋಕೇಶ್ವರನ್ ಹಾಗೂ ಡಾ. ಪ್ರಕಾಶ್ ದೊರೈಸ್ವಾಮಿ ಇದ್ದಾರೆ.

ಗೊಂದಲ ನಿವಾರಣೆಗೆ ಆದೇಶ ಹೊರಡಿಸುವಂತೆ ಆಗ್ರಹ

'ಲಸಿಕೆ ಪಡೆಯದವರಿಗೆ ಸೌಲಭ್ಯ ವಂಚನೆ ಸರಿಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಲಸಿಕೆ ಪಡೆಯದವರನ್ನು ವಿವಿಧ ಸರ್ಕಾರಿ ಹಾಗೂ ಖಾಸಗಿ ಸೌಲಭ್ಯಗಳಿಂದ ವಂಚಿತರನ್ನಾಗಿ ಮಾಡಲಾಗುತ್ತಿದೆ. ಲಸಿಕೆ ಪಡೆಯುವುದು ಕಡ್ಡಾಯವಲ್ಲ ಎಂದು ಈಗಾಗಲೇ ಹೇಳಿದ್ದರೂ ಈ ಬಗ್ಗೆ ಸ್ಪಷ್ಟವಾದ ಆದೇಶವನ್ನು ಸರ್ಕಾರ ಹೊರಡಿಸಬೇಕು' ಎಂದು ನಾಡಿನ ಚಿಂತಕರು ಹಾಗೂ ವಿವಿಧ ಕ್ಷೇತ್ರಗಳ ಪ್ರಮುಖರು ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

ಚಿಂತಕರಾದ ಡಾ.ಜಿ. ರಾಮಕೃಷ್ಣ, ಬರಗೂರು ರಾಮಚಂದ್ರಪ್ಪ, ಸಿದ್ದನಗೌಡ ಪಾಟೀಲ, ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ಮಾವಳ್ಳಿ ಶಂಕರ್, ಭಾರತೀಯ ವಿಚಾರವಾದಿ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಪ್ರೊ. ನರೇಂದ್ರ ನಾಯಕ್, ಜನವಾದಿ ಮಹಿಳಾ ಸಂಘಟನೆಯ ಕೆ. ನೀಲಾ, ಮಾನಸಿಕ ಆರೋಗ್ಯ ತಜ್ಞರಾದ ಡಾ.ಪಿ.ವಿ. ಭಂಡಾರಿ, ಡಾ. ಶಶಿಧರ ಬೀಳಗಿ, ಸ್ತ್ರೀರೋಗ ತಜ್ಞೆ ಡಾ. ವಾಣಿ ಕೋರಿ, ಜೀವರಸಾಯನ ವಿಜ್ಞಾನದ ಪ್ರಾಧ್ಯಾಪಕ ಡಾ. ಎರಿಕ್ ಲೋಬೊ, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, ಮಕ್ಕಳ ಶಿಕ್ಷಣ ತಜ್ಞ ಶಂಕರ ಹಲಗತ್ತಿ, ಚಲನಚಿತ್ರ ನಿರ್ದೇಶಕ ಕೇಸರಿ ಹರವೂ ಸೇರಿದಂತೆ 25 ಮಂದಿ ಪತ್ರದಲ್ಲಿ ಲಸಿಕೆ ಬಗೆಗಿನ ಗೊಂದಲ ನಿವಾರಣೆಗೆ ಆಗ್ರಹಿಸಿದ್ದಾರೆ.

'ಲಸಿಕೆ ಹಾಕಿಸಿಕೊಳ್ಳಲು ಸಾಧ್ಯವಾಗದವರನ್ನು ಬಹಿಷ್ಕರಿಸುವುದು ಅಥವಾ ಅವರನ್ನು ಅಪರಾಧಿಗಳಂತೆ ಬಿಂಬಿಸುವುದು ತಪ್ಪು. ಲಸಿಕೆ ಪಡೆಯುವುದು ಐಚ್ಛಿಕವೆಂದು ಕೇಂದ್ರ ಸರ್ಕಾರ ಸ್ಪಷ್ಟವಾಗಿ ಹೇಳಿದೆ. ಲಸಿಕೆ ಹಾಕಿಸಿಕೊಳ್ಳಲು ಸಾಧ್ಯವಾಗದವರನ್ನು ವಿವಿಧ ಸೇವೆಗಳಿಂದ ಅಥವಾ ಪ್ರವೇಶಾತಿಗಳಿಂದ ಹೊರಗುಳಿಸುವುದು ಸರಿಯಲ್ಲವೆಂದು ಗುಜರಾತ್, ಕೇರಳ ಸೇರಿದಂತೆ ವಿವಿಧ ರಾಜ್ಯಗಳ ಹೈಕೋರ್ಟ್‌ಗಳು ಈಗಾಗಲೇ ಆದೇಶಗಳನ್ನು ನೀಡಿವೆ. ಈ ವಿಚಾರವಾಗಿ ಸುಪ್ರೀಂ ಕೋರ್ಟ್ ಹಾಗೂ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಹೈಕೋರ್ಟ್‌ಗಳಲ್ಲಿಯೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ವಿಚಾರಣೆಯಲ್ಲಿವೆ' ಎಂದು ತಿಳಿಸಿದ್ದಾರೆ.

'ಲಸಿಕೆ ಪಡೆಯದವರಿಗೆ ಪಡಿತರ ಇಲ್ಲ, ಜಿಲ್ಲಾಧಿಕಾರಿ ಕಚೇರಿಗೆ ಪ್ರವೇಶವಿಲ್ಲ, ಕಾಲೇಜುಗಳಿಗೆ ಬರುವ ಹಾಗಿಲ್ಲ, ಅನ್ಯ ರಾಜ್ಯದವರು ರಾಜ್ಯದೊಳಕ್ಕೆ ಬರುವಂತಿಲ್ಲ ಎಂಬುವಂತಹ ಆದೇಶಗಳು ಸರ್ಕಾರದಿಂದ ಹೊರಬಿದ್ದಿವೆ. ಇದು ಸರಿಯಲ್ಲ' ಎಂದು ಅವರು ಹೇಳಿದ್ದಾರೆ.

ಲಸಿಕೆಗೆ ವಿರೋಧವಿಲ್ಲ: 'ಲಸಿಕೆಯನ್ನು ವಿರೋಧಿಸುವ ಅಥವಾ ಪ್ರಶ್ನಿಸುವ ಯಾವುದೇ ಉದ್ದೇಶವನ್ನೂ ನಾವು ಹೊಂದಿಲ್ಲ. ವೈದ್ಯಕೀಯ ಸೇರಿದಂತೆ ವಿವಿಧ ಕಾರಣಗಳಿಂದ ಕೆಲವರು ಲಸಿಕೆ ಪಡೆದಿಲ್ಲ. ಅವರನ್ನು ಜೀವನದ ಎಲ್ಲ ಚಟುವಟಿಕೆಗಳಿಂದ ಬಹಿಷ್ಕರಿಸುವುದು ಅಥವಾ ಅಸ್ಪೃಶ್ಯರನ್ನಾಗಿ ನೋಡುವುದನ್ನು ಯಾವ ರೀತಿಯಿಂದಲೂ ಒಪ್ಪಲು ಸಾಧ್ಯವಿಲ್ಲ. ಲಸಿಕೆ ಹಾಕಿಸಿಕೊಳ್ಳದವರನ್ನು ಕೆಟ್ಟದಾಗಿ ಬಿಂಬಿಸುವುದನ್ನು ಈ ಕೂಡಲೇ ಕೊನೆಗೊಳಿಸಬೇಕು' ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

₹ 40.57 ಕೋಟಿ ಮೌಲ್ಯದ ಬಿಡಿಎ ಆಸ್ತಿ ವಶ

ಬೆಂಗಳೂರು: ಭೂ ಕಬಳಿಕೆದಾರರ ವಿರುದ್ಧದ ಕಾರ್ಯಾಚರಣೆಯನ್ನು ಮುಂದುವರಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಎರಡು ಸ್ಥಳಗಳಲ್ಲಿ ಒಟ್ಟು ₹ 40.57 ಕೋಟಿ ಮೌಲ್ಯದ ತನ್ನ ಆಸ್ತಿಯನ್ನು ಗುರುವಾರ ಮತ್ತೆ ವಶಕ್ಕೆ ಪಡೆದುಕೊಂಡಿದೆ.

ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಉಲ್ಲಾಳು ಗ್ರಾಮದ ಸರ್ವೆ ಸಂಖ್ಯೆ 156/2 ರಲ್ಲಿನ 1.12 ಎಕರೆ ಮತ್ತು 156/3ರಲ್ಲಿನ 1.28 ಎಕರೆ ಪ್ರದೇಶವನ್ನು ಬಿಡಿಎ ಬಡಾವಣೆ ನಿರ್ಮಾಣಕ್ಕೆಂದು ಸ್ವಾಧೀನ ಮಾಡಿಕೊಂಡಿತ್ತು. ಆದರೆ, ಈ ಬಗ್ಗೆ ಭೂಮಾಲೀಕರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯವು ಬಿಡಿಎ ಪರ ತೀರ್ಪು ನೀಡಿತ್ತು.

ಪೊಲೀಸ್ ವರಿಷ್ಠಾಧಿಕಾರಿ ಭಾಸ್ಕರ್ ಮತ್ತು ಕಾರ್ಯಕಾರಿ ಎಂಜಿನಿಯರ್ ಸುಷ್ಮಾ ನೇತೃತ್ವದಲ್ಲಿ ಬಿಡಿಎ ಅಧಿಕಾರಿಗಳು ಈ ಜಾಗದಲ್ಲಿ ನಿರ್ಮಿಸಿದ್ದ ತಾತ್ಕಾಲಿಕ ಶೆಡ್‌ಗಳನ್ನು ತೆರವುಗೊಳಿಸಿದರು. ಈ ಭೂಮಿಯ ಸದ್ಯದ ಮಾರುಕಟ್ಟೆ ದರ ₹ 34.52 ಕೋಟಿ.

ಮತ್ತೊಂದು ಕಾರ್ಯಾಚರಣೆಯಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 6ನೇ ಬ್ಲಾಕ್‌ನಲ್ಲಿ ನಿವೇಶನ ರಚನೆಗಾಗಿ ಭೂ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಆದರೆ, ಉಲ್ಲಾಳು ಗ್ರಾಮದ ಸರ್ವೆ ಸಂಖ್ಯೆ 202ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದ್ದ 30x40 ಅಳತೆಯ ಏಳು ನಿವೇಶನಗಳಲ್ಲಿ ಅಕ್ರಮವಾಗಿ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಲಾಗಿತ್ತು. ನ್ಯಾಯಾಲಯದ ಆದೇಶದಂತೆ ಈ ಶೆಡ್‌ಗಳನ್ನೂ ಅಧಿಕಾರಿಗಳು ತೆರವುಗೊಳಿಸಿದರು. ಈ ನಿವೇಶನಗಳ ಪ್ರಸ್ತುತ ಮಾರುಕಟ್ಟೆ ಮೌಲ್ಯ ₹ 6.05 ಕೋಟಿ.

ಬಸ್ಸಿನಲ್ಲಿ ಯುವತಿಗೆ ಮುತ್ತು ಕೊಟ್ಟು ಕಿರುಕುಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಯುವತಿಯೊಬ್ಬರಿಗೆ ಮುತ್ತು ಕೊಟ್ಟು ಅಪರಿಚಿತನೊಬ್ಬ ಲೈಂಗಿಕ ಕಿರುಕುಳ ನೀಡಿದ್ದು, ಈ ಬಗ್ಗೆ ಪೀಣ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಗರದ ಎಂಜಿನಿಯರಿಂಗ್ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿರುವ 21 ವರ್ಷದ ಯುವತಿ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗಣಪತಿ ಹಬ್ಬಕ್ಕಾಗಿ ಯುವತಿ ಇತ್ತೀಚೆಗೆ ಸ್ವಂತ ಊರಾದ ಬಳ್ಳಾರಿಗೆ ಹೋಗಿದ್ದರು. ಅಲ್ಲಿಂದ ವಾಪಸು ಬೆಂಗಳೂರಿಗೆ ಬರಲು ಸೆ. 12ರಂದು ರಾತ್ರಿ ಕೆಎಸ್‌ಆರ್‌ಟಿಸಿ (ಎಫ್ 834) ಬಸ್ ಹತ್ತಿದ್ದರು. ಅದೇ ಸಂದರ್ಭದಲ್ಲಿ ಅಪರಿಚಿತ ಯುವಕ, ಬಸ್ ಹತ್ತಿ ಯುವತಿಯನ್ನು ದುರುಗುಟ್ಟಿ ನೋಡಿದ್ದ. ಅದಕ್ಕೆ ತಲೆಕೆಡಿಸಿಕೊಳ್ಳದ ಯುವತಿ, ತಮ್ಮ ಆಸನಕ್ಕೆ ಹೋಗಿ ಕುಳಿತಿದ್ದರು'

'ಮರುದಿನ ಬೆಳಿಗ್ಗೆ 5 ಗಂಟೆಗೆ ಬಸ್ ಬೆಂಗಳೂರು ಪ್ರವೇಶಿಸಿತ್ತು. ಯುವತಿ ನಿದ್ದೆಯಲ್ಲಿದ್ದರು. ದಾಸರಹಳ್ಳಿಯಿಂದ ಪೀಣ್ಯಕ್ಕೆ ಹೋಗುವ ಮಾರ್ಗಮಧ್ಯೆ ಯುವತಿಯ ಆಸನದ ಬಳಿ ಹೋಗಿದ್ದ ಆರೋಪಿ, ಕೆನ್ನೆಗೆ ಮುತ್ತು ಕೊಟ್ಟು ಲೈಂಗಿಕ ಕಿರುಕುಳ ನೀಡಿದ್ದ. ಎಚ್ಚರಗೊಂಡ ಯುವತಿ, ಆತನನ್ನು ಹಿಡಿಯಬೇಕು ಎನ್ನುವಷ್ಟರಲ್ಲಿ ಪೀಣ್ಯ ನಿಲ್ದಾಣದಲ್ಲಿ ಆರೋಪಿ ಇಳಿದು ಹೋಗಿದ್ದಾನೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಕೆಎಸ್‌ಆರ್‌ಟಿಸಿ ನೌಕರರ ವಿಚಾರಣೆ

'ಘಟನೆ ಬಗ್ಗೆ ಕೆಎಸ್‌ಆರ್‌ಟಿಸಿ ಚಾಲಕ ಹಾಗೂ ನಿರ್ವಾಹಕರನ್ನು ವಿಚಾರಣೆ ನಡೆಸಬೇಕಿದೆ. ಮಹಿಳೆಯರ ಸುರಕ್ಷತೆಗಾಗಿ ಬಸ್ಸಿನಲ್ಲಿ ಯಾವುದೇ ಮುಂಜಾಗ್ರತಾ ಕ್ರಮಗಳು ಇರಲಿಲ್ಲವೆಂಬುದು ಗೊತ್ತಾಗಿದೆ. ಈ ಬಗ್ಗೆಯೂ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಂದ ಮಾಹಿತಿ ಪಡೆಯಲಿದ್ದೇವೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಹೀರೊ ವಾಹನ ಬೆಲೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೀರೊ ಮೋಟೊಕಾರ್ಪ್ ಕಂಪನಿಯು ತನ್ನ ದ್ವಿಚಕ್ರ ವಾಹನಗಳ ಎಕ್ಸ್–ಷೋರೂಂ ಬೆಲೆಯಲ್ಲಿ ಗರಿಷ್ಠ ₹ 3,000ವರೆಗೆ ಹೆಚ್ಚಳ ಮಾಡಲಿದೆ. ಬೆಲೆ ಏರಿಕೆಯು ಸೆಪ್ಟೆಂಬರ್ 20ರಿಂದ ಅನ್ವಯ ಆಗಲಿದೆ.

ವಾಹನ ತಯಾರಿಕೆಯಲ್ಲಿ ಬಳಸುವ ವಸ್ತುಗಳ ಬೆಲೆ ಹೆಚ್ಚಳ ಆಗಿರುವ ಕಾರಣದಿಂದಾಗಿ ದ್ವಿಚಕ್ರ ವಾಹನ ಬೆಲೆ ಹೆಚ್ಚಿಸುವುದು ಅನಿವಾರ್ಯ ಆಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.


ಕಾಮಗಾರಿಗೆ ಚಾಲನೆ ಕೆ.ಆರ್.ಪುರ ಸಮೀಪದ ಬಸವನಪುರದಲ್ಲಿ ಕನಕ ಭವನದ ಕಟ್ಟಡ ನಿರ್ಮಾಣದ ಕಾಮಗಾರಿಗೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಚಾಲನೆ ನೀಡಿದರು. ಪಾಲಿಕೆ ಮಾಜಿ ಸದಸ್ಯ ಜಯಪ್ರಕಾಶ್, ಪೂರ್ವ ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಎಂ.ಕೃಷ್ಣಪ್ಪ, ಕಾರ್ಯದರ್ಶಿ ರಾಮೇಗೌಡ ಇದ್ದರು.

ಹಲ್ಲೆ: ಮಾಜಿ ಶಾಸಕನ ಮಗನ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸಂತನಗರದ ಎಂಬೆಸ್ಸಿ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಪಾರ್ಕಿಂಗ್ ವಿಚಾರವಾಗಿ ಗಲಾಟೆ ಆಗಿದ್ದು, ಹಟ್ಟಿ ಗಣಿ ನಿಗಮದ ಅಧ್ಯಕ್ಷರೂ ಆಗಿರುವ ಮಾಜಿ ಶಾಸಕ ಮಾನಪ್ಪ ವಜ್ಜಲ್ ಅವರ ಮಗ ಆಂಜನೇಯ ಸೇರಿ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ.

'ಆಂಜನೇಯ ವಜ್ಜಲ್ ಹಾಗೂ ಆತನ ಮೂವರು ಸ್ನೇಹಿತರು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿ ಉದ್ಯಮಿ ವಿಕ್ರಮ ರೈ ದೂರು ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಲ್ಲೆಯ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದೂ ತಿಳಿಸಿವೆ.

'ದೂರುದಾರ ವಿಕ್ರಮ್, ಕುಟುಂಬದ ಜೊತೆ ಎಂಬೆಸ್ಸಿ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟೊಂದರಲ್ಲಿ ವಾಸವಿದ್ದಾರೆ. ಮತ್ತೊಂದು ಫ್ಲ್ಯಾಟ್‌ನಲ್ಲಿ ಆಂಜನೇಯ ಸಹ ನೆಲೆಸಿದ್ದಾರೆ. ಭಾನುವಾರ ರಾತ್ರಿ 10 ಗಂಟೆ ಸುಮಾರಿಗೆ ಕಾರು ಪಾರ್ಕಿಂಗ್ ಮಾಡುವ ವಿಚಾರವಾಗಿ ನೆಲ ಮಹಡಿಯಲ್ಲಿ ವಿಕ್ರಮ್ ಹಾಗೂ ಆಂಜನೇಯ ನಡುವೆ ಮಾತಿನ ಚಕಮಕಿ ನಡೆದಿತ್ತು. ಈ ಸಂಗತಿ ದೂರಿನಲ್ಲಿದೆ.'

'ಪರಿಸ್ಥಿತಿ ವಿಕೋಪಕ್ಕೆ ಹೋಗಿ ಆಂಜನೇಯ ಹಾಗೂ ಅವರ ಸ್ನೇಹಿತರು, ವಿಕ್ರಮ್ ಮೇಲೆ ಹಲ್ಲೆ ಮಾಡಿದ್ದಾರೆ ಎನ್ನಲಾಗಿದೆ. ಗಾಯಗೊಂಡ ವಿಕ್ರಮ್ ಚಿಕಿತ್ಸೆ ಪಡೆದು, ಠಾಣೆಗೆ ದೂರು ನೀಡಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಘಟನೆ ಬಗ್ಗೆ ಪ್ರತಿಕ್ರಿಯೆ ಪಡೆಯಲು ಆಂಜನೇಯ ವಜ್ಜಲ್ ಲಭ್ಯರಾಗಲಿಲ್ಲ.

ಬೈಕ್ ಸವಾರ ಸಾವು; ಚಾಲಕ ಬಂಧನ

ಬೆಂಗಳೂರು: ದಾಸರಹಳ್ಳಿ ಚೊಕ್ಕಸಂದ್ರದಲ್ಲಿ ಬುಧವಾರ ಸಂಭವಿಸಿದ್ದ ಅಪಘಾತ ಪ್ರಕರಣ ಸಂಬಂಧ ಟೆಂಪೊ ಟ್ರಾವೆಲರ್ (ಟಿ.ಟಿ) ಚಾಲಕ ಸೂರ್ಯ (24) ಎಂಬಾತನನ್ನು ಪೀಣ್ಯ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಪಾನಮತ್ತನಾಗಿದ್ದ ಎನ್ನಲಾದ ಸೂರ್ಯ, ತನ್ನ ಟಿ.ಟಿ ವಾಹನವನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿ ಎರಡು ಬೈಕ್‌ಗಳಿಗೆ ಡಿಕ್ಕಿ ಹೊಡೆಸಿದ್ದ. ಬೈಕ್ ಸವಾರ ಬಸವರಾಜ್ (36) ಮೃತಪಟ್ಟಿದ್ದರು. ಇನ್ನೊಂದು ಬೈಕ್‌ನಲ್ಲಿದ್ದ ಅಲಿ (36) ಹಾಗೂ ಅವರ ಪತ್ನಿ ಫಾತಿಮಾ ತೀವ್ರ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೀಣ್ಯ ಸಂಚಾರ ಪೊಲೀಸರು ಹೇಳಿದರು.

'ಅಪಘಾತದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅಪಘಾತಕ್ಕೆ ಟಿ.ಟಿ ಚಾಲಕ ಸೂರ್ಯನ ನಿರ್ಲಕ್ಷ್ಯವೇ ಕಾರಣ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿದೆ. ಆತ ಪಾನಮತ್ತನಾಗಿದ್ದನ್ನು ಖಚಿತಪಡಿಸಿಕೊಳ್ಳಲು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರ ವರದಿಗಾಗಿ ಕಾಯುತ್ತಿದ್ದೇವೆ' ಎಂದೂ ತಿಳಿಸಿದರು.

'ಮೃತ ಬಸವರಾಜ್, ಸ್ಥಳೀಯ ನಿವಾಸಿ. ಮೇಸ್ತ್ರಿ ಆಗಿ ಕೆಲಸ ಮಾಡುತ್ತಿದ್ದರು' ಎಂದೂ ಪೊಲೀಸರು ಹೇಳಿದರು.

ಅ. 1ರಿಂದ ಇಲಾಖಾ ಮುಖ್ಯಸ್ಥರಿಗೆ 'ಇ– ಆಫೀಸ್' ಕಡ್ಡಾಯ

ಬೆಂಗಳೂರು: 'ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಇಲಾಖೆಗಳ ಮುಖ್ಯಸ್ಥರು ತಮ್ಮ ಪ್ರಸ್ತಾವನೆ, ಪತ್ರಗಳು, ವರದಿಗಳನ್ನು ಅ. 1ರಿಂದ ಸಂಬಂಧಪಟ್ಟ ಕಾರ್ಯದರ್ಶಿಗಳಿಗೆ 'ಇ–ಆಫೀಸ್' ತಂತ್ರಾಂಶದ ಮೂಲಕವೇ ಕಳುಹಿಸಬೇಕು' ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಆದೇಶ ಹೊರಡಿಸಿದ್ದಾರೆ.

'ಕಾರ್ಯದರ್ಶಿಗಳು ಸಾಧ್ಯವಾದಷ್ಟು ತಮ್ಮ ಹಂತದಲ್ಲೇ ಕಡತಗಳನ್ನು ವಿಲೇವಾರಿ ಮಾಡಬೇಕು ಅಥವಾ ಸಂಬಂಧಿಸಿದ ಸಚಿವರಿಗೆ ಆದೇಶಕ್ಕಾಗಿ ಕಳುಹಿಸಬೇಕು. ಹೆಚ್ಚುವರಿ ಮಾಹಿತಿ ವಿಶೇಷ ಪ್ರಕರಣಗಳಲ್ಲಿ ಅಥವಾ ಸಚಿವ ಸಂಪುಟದ ಟಿಪ್ಪಣಿಯ ಇ– ಆಫೀಸ್ ಕಡತಗಳನ್ನು ಮಾತ್ರ ಉಪ ಕಾರ್ಯದರ್ಶಿಗೆ ಕಳುಹಿಸಬಹುದು. ಸಚಿವಾಲಯಗಳಿಗೆ ಕಳುಹಿಸುವ ಕಡತಗಳನ್ನೂ ಇ– ಆಫೀಸ್‌ನಲ್ಲೇ ಸಲ್ಲಿಸಬೇಕು' ಎಂದು ಅವರು ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

'ಈ ಆದೇಶವನ್ನು ಉಲ್ಲಂಘಿಸಿದರೆ, ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ.

ವಿಧಾನಸೌಧ ಬಳಿ ಪ್ರತಿಭಟನೆ: ಠೇವಣಿದಾರರು ವಶಕ್ಕೆ

ಬೆಂಗಳೂರು: ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಾಗೂ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್ ಅವ್ಯವಹಾರದಿಂದ ಹಣ ಕಳೆದುಕೊಂಡಿರುವ ಠೇವಣಿದಾರರು ನಗರದ ವಿಧಾನಸೌಧ ಬಳಿ ಗುರುವಾರ ಪ್ರತಿಭಟನೆ ನಡೆಸಿದರು.

ಕಾರ್ಲ್‌ಟನ್ ಕಟ್ಟಡದಲ್ಲಿರುವ ಸಿಐಡಿ ಕಚೇರಿ ಎದುರು ಸೇರಿದ್ದ ಠೇವಣಿದಾರರು, ಅಲ್ಲಿಂದ ವಿಧಾನಸೌಧದ ಕೆಂಗಲ್ ಗೇಟ್‌ವರೆಗೆ ಮೆರವಣಿಗೆ ಹೊರಟಿದ್ದರು. ಘೋಷಣಾ ಫಲಕಗಳನ್ನು ಪ್ರದರ್ಶಿಸಿದ್ದರು.

ಸುದ್ದಿಗಾರರ ಜೊತೆ ಮಾತನಾಡಿದ ಠೇವಣಿದಾರರು, 'ಹಣ ದುರ್ಬಳಕೆ ಹಾಗೂ ಅವ್ಯವಹಾರ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ನಮ್ಮ ಠೇವಣಿ ಹಣವನ್ನು ಕೂಡಲೇ ವಾಪಸು ಕೊಡಿಸಿ. ಈ ಬಗ್ಗೆ ಅಧಿವೇಶನದಲ್ಲಿ ಚರ್ಚೆ ಮಾಡಿ' ಎಂದು ಒತ್ತಾಯಿಸಿದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 17ರಿಂದ 19ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

17ರಂದು ಬೆಳಿಗ್ಗೆ 10ರಿಂದ ಸಂಜೆ 5: ಪೈಪ್‌ಲೈನ್ ರಸ್ತೆ, ಗಾಳಿ ಆಂಜನೇಯ ದೇವಸ್ಥಾನ, ಟಿ.ಜಿ. ಪಾಳ್ಯ ಮುಖ್ಯ ರಸ್ತೆ, ಇಂಡಸ್ಟ್ರಿಯಲ್ ಟವರ್, ನೈಸ್ ರಸ್ತೆ ಹತ್ತಿರ, ಜಲಮಂಡಳಿ, ರಾಜೀವ್ ಗಾಂಧಿ ನಗರ, ಭೈರವೇಶ್ವರ ನಗರ, ವೈಲ್ಡ್ ಕ್ರಾಫ್ಟ್ ಹತ್ತಿರ, ಕೆಬ್ಬೆಹಳ್ಳ, ಹನುಮಂತರಾಯನ ಪಾಳ್ಯ, ಆರ್‌ಎಚ್‌ಸಿಎಸ್ ಬಡಾವಣೆ, ಅನ್ನಪೂರ್ಣೇಶ್ವರಿ ನಗರ, ಹೆಲ್ತ್ ಬಡಾವಣೆ, ಗೌರಮ್ಮ ಬಡಾವಣೆ, ಲಕ್ಷ್ಮಣನಗರ, ಸಂಜೀವಿನಿ ನಗರ, ವಿಘ್ನೇಶ್ವರ ನಗರ, ಹೆಗ್ಗನಹಳ್ಳಿ, ಸುಂಕದಕಟ್ಟೆ, ಎಂಪಿಎಂ ಬಡಾವಣೆ, ವಿನಾಯಕ ಬಡಾವಣೆ, ನಾಗರಬಾವಿ 9ನೇ ಹಂತ ಮತ್ತು ಸುತ್ತಮುತ್ತಲಿನ ಪ್ರದೇಶ.

18: ಹೊರಮಾವು, ಪಿ ಅಂಡ್ ಟಿ ಬಡಾವಣೆ, ನಿಸರ್ಗ ಕಾಲೊನಿ, ನಂದನಂ ಕಾಲೊನಿ, ಆಶೀರ್ವಾದ್ ಕಾಲೊನಿ, ಜ್ಯೋತಿನಗರ, ಆಗರ, ಬಾಲಾಜಿ ಬಡಾವಣೆ, ಚಿನ್ನಸ್ವಾಮಪ್ಪ ಬಡಾವಣೆ, ದೇವಮತ ಶಾಲೆ, ಅಮರ್ ರೀಜೆನ್ಸಿ, ವಿಜಯ ಬ್ಯಾಂಕ್ ಕಾಲೊನಿ, ಎಚ್.ಆರ್.ಬಿ.ಆರ್. ಬಡಾವಣೆ, ಕಮ್ಮನಹಳ್ಳಿ ಮುಖ್ಯರಸ್ತೆ, ಕಲ್ಯಾಣನಗರ.

ಹೆಣ್ಣೂರು ಗ್ರಾಮ, ಚೆಳ್ಳಿಕೆರೆ, ಮೇಘನ ಪಾಳ್ಯ, ಗೆದ್ದಲಹಳ್ಳಿ, ಕೊತನೂರು, ವಡಾರ ಪಾಳ್ಯ, ಜಾನಕಿರಾಮ್ ಬಡಾವಣೆ, ಕೊತನೂರು, ಬಿ.ಡಿ.ಎಸ್. ಗಾರ್ಡನ್, ಪ್ರಕೃತಿ ಬಡಾವಣೆ ಮತ್ತು ಸುತ್ತಲಿನ ಪ್ರದೇಶ, ಹೊಯ್ಸಳನಗರ, ಬೃಂದಾವನ ಬಡಾವಣೆ, ಜಯಂತಿನಗರ, ವಿನಾಯಕ ಬಡಾವಣೆ, ವಿವೇಕಾನಂದ ಬಡಾವಣೆ, ಮಂಜುನಾಥ ನಗರ, ರಸ್ತೆ, ಎನ್.ಆರ್.ಐ ಬಡಾವಣೆ.

ಕರಾವಳ್ಳಿ ರಸ್ತೆ, ರಾಮಯ್ಯ ಬಡಾವಣೆ, ಅಜಮಲಪ್ಪ ಬಡಾವಣೆ, ದೊಡ್ಡ ಬಾಣಸವಾಡಿ, ವಿಜಯ ಬ್ಯಾಂಕ್ ಕಾಲೊನಿ, ರಾಮಮೂರ್ತಿನಗರ ಮುಖ್ಯರಸ್ತೆ, ಕೃಷ್ಣರೆಡ್ಡಿ ಬಡಾವಣೆ, ಗೋಪಾಲರೆಡ್ಡಿ ಬಡಾವಣೆ, ಚಿಕ್ಕ ಬಾಣಸವಾಡಿ, ಸುಬ್ಬಯ್ಯನಪಾಳ್ಯ, ಓ.ಎಂ.ಬಿ.ಆರ್. ಎರಡನೇ ಕ್ರಾಸ್, ದೊಡ್ಡ ಬಾಣಸವಾಡಿ.

100 ಅಡಿರಸ್ತೆ ಬಾಣಸವಾಡಿ, ಓ.ಎಂ.ಬಿ.ಆರ್. ಗ್ರೀನ್ ಪಾರ್ಕ್ ಬಡಾವಣೆ, ಫ್ಲವರ್ ಗಾರ್ಡನ್, ಎಂ.ಎಂ. ಗಾರ್ಡನ್, ದಿವ್ಯ ಉನ್ನತಿ ಬಡಾವಣೆ, ಪ್ರಕೃತಿ ಟೌನ್‌ಶಿಪ್, ಮಲ್ಲಪ್ಪ ಬಡಾವಣೆ ಮತ್ತು ಸುತ್ತಲಿನ ಪ್ರದೇಶ, ಬೈರತಿ, ಹೆಣ್ಣೂರು, ಚಳ್ಳಕೆರೆ, ವಡ್ಡರಪಾಳ್ಯ, ಗೆದ್ದಲಹಳ್ಳಿ, ಕೊತನೂರು ಮತ್ತು ಸುತ್ತಲಿನ ಪ್ರದೇಶ, ಕ್ಯಾಲಸನಹಳ್ಳಿ ಗ್ರಾಮ, ನಕ್ಷತ್ರ ಲೇಔಟ್, ಬೈರತಿ ಬಂಡೆ, ಸಂಗಂ ಎನ್‌ಕ್ಲೇವ್, ಅಥಂ ವಿದ್ಯಾನಗರ, ಬೈರತಿಹಳ್ಳಿ, ಕನಕಶ್ರೀ ಬಡಾವಣೆ, ಗುಬ್ಬಿ ಕ್ರಾಸ್, ಬಾಬೂಸಾ ಪಾಳ್ಯ, ಬ್ಯಾಂಕ್ ಅವೆನ್ಯೂ ಬಡಾವಣೆ, ನಂಜಪ್ಪ ಗಾರ್ಡನ್.

ಸುಬ್ಬಯ್ಯನ ಪಾಳ್ಯ, ಬೃಂದಾವನ ಬಡಾವಣೆ, ಬಂಜಾರ ಬಡಾವಣೆ, ಕಾಣೆ ರಸ್ತೆ, ಎನ್.ಪಿ.ಎಸ್, ಬೆಥೆಲ್‌ಲೇಔಟ್, ಸಮೃದ್ಧಿ ಬಡಾವಣೆ, ವಾಟರ್‌ಟ್ಯಾಂಕ್, ಕಲ್ಕೆರೆ, ಜಯಂತಿನಗರ, ಸುತ್ತಲಿನ ಪ್ರದೇಶ.

18ರಿಂದ ಸಂಜೆ 4ರಿಂದ 19ರ ರಾತ್ರಿ 8ರವರೆಗೆ: ತಿಗಳರ ಪಾಳ್ಯ, ವಿನಾಯಕ ನಗರ, ರಾಘವೇಂದ್ರ ನಗರ, ರಾಘವೇಂದ್ರ ಕೈಗಾರಿಕಾ ಪ್ರದೇಶ, ಬಾಲಾಜಿನಗರ, ಕರಿವೋಬನಹಳ್ಳಿ, ಇಂದಿರಾನಗರ, ಬ್ಲೂಜಾಯ್ ಬಡಾವಣೆ, ಗಂಗೊಂಡನಹಳ್ಳಿ ಮುಖ್ಯರಸ್ತೆ, ತಿಪ್ಪೇನಹಳ್ಳಿ ಸರ್ಕಾರಿ ಆಸ್ಪತ್ರೆ, ಅನ್ನಪೂರ್ಣೇಶ್ವರಿ ಬಡಾವಣೆ, ಎಸ್‌ಎಲ್‌ವಿ ಕೈಗಾರಿಕಾ ಪ್ರದೇಶ, ನಂದಗೋಕುಲ ಕೈಗಾರಿಕಾ ಪ್ರದೇಶ, ಚೇತನ್ ಸರ್ಕಲ್, ಸಪ್ತಗಿರಿ ಬಡಾವಣೆ, ವೇಣುಗೋಪಾಲ ನಗರ, ದೊಡ್ಡ ಬಿದರಕಲ್ಲು, ಸುವರ್ಣ ನಗರ, ಮಾರಣ್ಣ ಬಡಾವಣೆ, ತಿಪ್ಪೇನಹಳ್ಳಿ, ಅಂದಾನಪ್ಪ ಬಡಾವಣೆ, ಮುನೇಶ್ವರ ಬಡಾವಣೆ ಮತ್ತು ಸುತ್ತ–ಮುತ್ತಲಿನ ಪ್ರದೇಶ.

2017ರಲ್ಲಿ ಸಿಡಿಪಿ ಕರಡು ಸಿದ್ಧವಾದರೂ ಅಂತಿಮಗೊಂಡಿಲ್ಲ: ಮಹಾಲೇಖಪಾಲರ ವರದಿಯಲ್ಲಿ ಉಲ್ಲೇಖ

ಬಿಡಿಎ ಸಮಗ್ರ ನಗರ ಯೋಜನೆಯೇ ದೋಷಪೂರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ರೂಪಿಸಿದ್ದ, 1995ರ ಜನವರಿಯಲ್ಲಿ ಅನುಮೋದನೆಗೊಂಡು 2007ರವರೆಗೆ ಜಾರಿಯಲ್ಲಿದ್ದ ಪರಿಷ್ಕೃತ ಸಮಗ್ರ ನಗರ ಅಭಿವೃದ್ಧಿ ಯೋಜನೆಯೇ (ಸಿಡಿಪಿ) ದೋಷಪೂರಿತವಾಗಿತ್ತು ಎಂದು ನಗರದ ಮಳೆನೀರು ನಿರ್ವಹಣೆ ಕುರಿತ ಮಹಾಲೇಖಪಾಲರ ವರದಿ ಬೊಟ್ಟುಮಾಡಿದೆ.

1995ರ ಸಿಡಿಪಿಯಲ್ಲಿ ಜಲಮೂಲಗಳನ್ನು ತಪ್ಪಾಗಿ ಉಲ್ಲೇಖಿಸಲಾಗಿತ್ತು. ರಾಜಕಾಲುವೆಗಳನ್ನೂ ಸ್ಪಷ್ಟವಾಗಿ ತೋರಿಸಿರಲಿಲ್ಲ. ಯಾವುದೇ ಹಂತದ ರಾಜಕಾಲುವೆ ಪ್ರಕಾರಗಳ ಬಗ್ಗೆ ಅಥವಾ ಅಗಲದ ಬಗ್ಗೆಯಾಗಲೀ ಸ್ಪಷ್ಟವಾದ ಮಾಹಿತಿ ಅದರಲ್ಲಿ ಇರಲಿಲ್ಲ. ಒತ್ತುವರಿಗಳ ಬಗ್ಗೆಯಾಗಲೀ, ರಾಜಕಾಲುವೆಯಲ್ಲಿ ನೀರಿನ ಹರಿವಿಗೆ ಇದ್ದ ಅಡೆತಡೆಗಳ ಬಗ್ಗೆಯಾಗಲೀ ಅದರಲ್ಲಿ ವಿಶ್ಲೇಷಣೆ ನಡೆಸಿರಲ್ಲ. ಆ ಸಿಡಿಪಿಯೇ ಅಪೂರ್ಣವಾಗಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

2007ರಲ್ಲಿ ಅನುಮೋದನೆಗೊಂಡಿರುವ 2031ರ ಪರಿಷ್ಕೃತ ಸಮಗ್ರ ಯೋಜನೆ (ಆರ್‌ಎಂಪಿ) ಹಾಗೂ ಇದು ಅನುಮೋದನೆಯಾಗುವವರೆಗೆ ಮಾನ್ಯತೆ ಹೊಂದಿರುವ ಆರ್‌ಎಂಪಿ 2015 ಕೂಡ ದೋಷಪೂರಿತವಾಗಿವೆ. ರಾಜಕಾಲುವೆಗಳಿಗೆ ಮೀಸಲು ಪ್ರದೇಶಗಳನ್ನು ಹೊಂದುವ ಪ್ರಾಮುಖ್ಯತೆಯನ್ನು ಆರ್‌ಎಂಪಿ 2015ರಲ್ಲಿ ಗುರುತಿಸಲಾಗಿತ್ತು. ಆದರೂ, ಅದರಲ್ಲಿ ರಾಜಕಾಲುವೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ವರ್ಗೀಕರಿಸಲಿಲ್ಲ. ರಾಜಕಾಲುವೆಗಳ ಉದ್ದಕ್ಕೂ ಪಕ್ಕದ ಜಾಗವನ್ನು 'ಅಭಿವೃದ್ಧಿ ಹೊರತಾದ ಪ್ರದೇಶ' ಎಂದು ಅಧಿಸೂಚನೆ ಹೊರಡಿಸಲಿಲ್ಲ. ಕೆರೆಗಳು ಹಾಗೂ ರಾಜಕಾಲುವೆಗಳ ಉದ್ದಕ್ಕೂ ಮೀಸಲು ಪ್ರದೇಶಗಳನ್ನು ಗುರುತಿಸಿಯೂ ಇಲ್ಲ. ಅವುಗಳ ನಿರ್ವಹಣೆಗೂ ಕ್ರಮ ಕೈಗೊಳ್ಳಲಿಲ್ಲ ಎಂಬ ಟೀಕೆ ವರದಿಯಲ್ಲಿ ವ್ಯಕ್ತವಾಗಿದೆ.

ಆರ್‌ಎಂಪಿಯಲ್ಲಿ ರಾಜಕಾಲುವೆಗಳ ನಕ್ಷೆಗಳನ್ನು ತೋರಿಸಲಾಗಿತ್ತು. ಆದರೆ, ಅಸ್ತಿತ್ವದಲ್ಲಿದ್ದ ಅನೇಕ ರಾಜಕಾಲುವೆಗಳು ಹಾಗೂ ಕೆರೆಗಳನ್ನು (ಬಿಬಿಎಂಪಿ ತಯಾರಿಸಿದ ರಾಜಕಾಲುವೆಗಳ ಮಾಸ್ಟರ್ ಪ್ಲ್ಯಾನ್ ಪ್ರಕಾರ), ಬಿಡಿಎ ಪ್ರಕಟಿಸಿದ ನಕ್ಷೆಗಳಲ್ಲಿ ತೋರಿಸಿಯೇ ಇರಲಿಲ್ಲ. ಈ ನ್ಯೂನತೆಯಿಂದಾಗಿ ರಾಜಕಾಲುವೆ ಪಕ್ಕದ ಮೀಸಲು ಪ್ರದೇಶಗಳಲ್ಲಿ ನಿರ್ಮಾಣ ಚಟುವಟಿಕೆ ನಡೆಸಲು ಅವಕಾಶ ಸಿಕ್ಕಿತು ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಆರ್‌ಎಂಪಿ 2015ರ ನ್ಯೂನತೆಯನ್ನು ಒಪ್ಪಿಕೊಂಡಿರುವ ಸರ್ಕಾರ, 2031ರ ಆರ್‌ಎಂಪಿಯಲ್ಲಿ ಅದನ್ನು ಸರಿಪಡಿಸಲು ಕ್ರಮಕೈಗೊಳ್ಳುವುದಾಗಿ ಭರವಸೆಯನ್ನು ನೀಡಿದೆ. ಆದರೂ, ಸಿಡಿಪಿ ತಯಾರಿ ಸಂದರ್ಭದಲ್ಲಿ ಸರ್ಕಾರ ಹಾಗೂ ಅಧಿಕಾರಿಗಳು ಕೆರೆಗಳು ಮತ್ತು ರಾಜಕಾಲುವೆಗಳ ಮಹತ್ವನ್ನು ಕಡೆಗಣಿಸಿರುವುದು ಸ್ಪಷ್ಟ ಎಂದೂ ವರದಿಯಲ್ಲಿ ಮಹಾಲೇಖಪಾಲರು ಅಭಿಪ್ರಾಯಪಟ್ಟಿದ್ದಾರೆ.

'ಆರ್‌ಎಂಪಿ 2031' ವಿಳಂಬಕ್ಕೆ ಆಕ್ಷೇಪ

2017ರ ಒಳಗೆ ಪರಿಷ್ಕರಣೆ ಆಗಬೇಕಿದ್ದ ಐದನೇ ಸಮಗ್ರ ಅಭಿವೃದ್ಧಿ ಯೋಜನೆಯು ಇದುವರೆಗೂ ಪರಿಷ್ಕರಣೆ ಆಗಿಲ್ಲ. ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲು 2031ರ ಸಿಡಿಪಿ ಕರಡನ್ನು 2017ರಲ್ಲಿ ನವೆಂಬರ್‌ನಲ್ಲಿ ಪ್ರಕಟಿಸಲಾಯಿತಾದರೂ ಈ ಕುರಿತು ಇನ್ನೂ ಅಂತಿಮ ಅಧಿಸೂಚನೆ ಪ್ರಕಟವಾಗಿಲ್ಲ. ಈ ಬಗ್ಗೆಯೂ ಸಿಎಜಿ ವರದಿಯಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಬೆಂಗಳೂರು ಸಮಗ್ರ ಅಭಿವೃದ್ಧಿಯ ಎರಡನೇ ಮತ್ತು ನಾಲ್ಕನೇ ಯೋಜನೆಗಳ ಪರಿಷ್ಕರಣೆ ಎರಡು ವರ್ಷ ವಿಳಂಬವಾಗಿದ್ದ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಿರುವ ಮಹಾಲೇಖಪಾಲರು, '1961ರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆಯ ಪ್ರಕಾರ, ಸಮಗ್ರ ಅಭಿವೃದ್ಧಿ ಯೋಜನೆಯನ್ನು ಹತ್ತು ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕು. ಆರ್‌ಎಂಪಿಯ ಸಮಯೋಚಿತ ಹಾಗೂ ನಿಯತಕಾಲಿಕ ಪರಿಷ್ಕರಣೆಯಿಂದ ಯೋಜನಾ ಪ್ರಾಧಿಕಾರಗಳು ನಗರದ ಬೆಳವಣಿಗೆ ಆಧರಿಸಿ ವಲಯ ನಿಯಮಗಳ ಅನುಸಾರ ಭವಿಷ್ಯದ ವಿಸ್ತರಣೆಯನ್ನು ಯೋಜಿಸಲು ಸಾಧ್ಯವಾಗುತ್ತದೆ. ಹಿಂದಿನ ಯೋಜನೆಗಳ ದೋಷಗಳನ್ನು ಸರಿಪಡಿಸಲು ಅವಕಾಶ ಸಿಗುತ್ತದೆ. ಸಿಡಿಪಿ ಪರಿಷ್ಕರಣೆಯಲ್ಲಿ ಆಗುವ ವಿಳಂಬವು ಅನಿಯಂತ್ರಿತ ವಿಸ್ತರಣೆಗೆ ಕಾರಣವಾಗುತ್ತದೆ. ಇದರಿಂದ ಸರ್ಕಾರಿ ಜಮೀನುಗಳ ಒತ್ತುವರಿ ಹಾಗೂ ವಲಯ ನಿಯಮಗಳ ಉಲ್ಲಂಘನೆ ಹೆಚ್ಚುತ್ತದೆ' ಎಂದೂ ಎಚ್ಚರಿಸಿದ್ದಾರೆ.

ಭೂಮಿ, ಕೆರೆಗಳಂತರ ಸರ್ಕಾರಿ ಆಸ್ತಿಗಳ ಒತ್ತುವರಿ ತಡೆಯಲು ಪರಿಷ್ಕೃತ ಸಿಡಿಪಿಯನ್ನು ಅಂತಿಮಗೊಳಿಸಲು ಸರ್ಕಾರ ಹಾಗೂ ಬಿಡಿಎ ತಕ್ಷಣ ಕ್ರಮ ಕೈಗೊಳ್ಳಬೇಕು. ರಾಜಕಾಲುವೆಗಳ ಸಂರಕ್ಷಣೆಗೆ ಸಂಬಂಧಿಸಿದ ಲೋಪಗಳನ್ನೂ ಸರಿಪಡಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಿದ್ದಾರೆ.

ಸಿಗದ ನೇಮಕಾತಿ ಪತ್ರ: ಪರಿಶೀಲಿಸಿ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಆರ್‌ಬಿ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗೆ ಆಯ್ಕೆಯಾಗಿರುವ 28 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರ ನೀಡುವುದರ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಸದಸ್ಯರು ಪಕ್ಷ ಭೇದ ಮರೆತು ಈ ವಿಷಯ ಪ್ರಸ್ತಾಪಿಸಿದರು.

ಬಿಜೆಪಿಯ ಎನ್. ರವಿಕುಮಾರ್, '2012ರಲ್ಲಿ ಹೊರಡಿಸಿದ ಅಧಿಸೂಚನೆಯನ್ವಯ, ಐಆರ್‌ಬಿಯಲ್ಲಿ 750 ಪೊಲೀಸ್ ಕಾನ್‌ಸ್ಟೆಬಲ್‌ಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ನಡೆಯಿತು. ಈ ಪೈಕಿ 722 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಲಾಗಿದೆ. ಉಳಿದ 28 ಅಭ್ಯರ್ಥಿಗಳಿಗೆ ಮಾತ್ರ ಈವರೆಗೆ ನೇಮಕಾತಿ ಆದೇಶ ನೀಡಿಲ್ಲ. ಆದರೆ ಈ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ, ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಜಾತಿ ಸಿಂಧುತ್ವ ಹಾಗೂ ಅಂಕಪಟ್ಟಿಗಳ ಸಿಂಧುತ್ವ ದಾಖಲೆಗಳೂ ಕ್ರಮಬದ್ಧವಾಗಿವೆ ಎಂದು ಇಲಾಖೆಯೇ ದೃಢೀಕರಿಸಿದೆ. ಆದರೂ ನೇಮಕಾತಿ ಪತ್ರ ನೀಡಿಲ್ಲ' ಎಂದರು.

ಬಿಜೆಪಿಯ ಆಯನೂರು ಮಂಜುನಾಥ್, 'ಆಯ್ಕೆಯಾದವರಿಗೆ ಮಾತ್ರ ಸಿಂಧುತ್ವ ಪತ್ರ ನೀಡುವಂತೆ ಹೇಳಲಾಗುತ್ತದೆ. ಈ ಅಭ್ಯರ್ಥಿಗಳಿಂದಲೂ ಸಿಂಧುತ್ವ ಪತ್ರ ಪಡೆಯಲಾಗಿದೆ. ಆದರೆ, ಯಾವ ಕಾರಣವನ್ನೂ ನೀಡದೆ ಅವಕಾಶ ನಿರಾಕರಿಸಲಾಗುತ್ತಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಆರಗ ಜ್ಞಾನೇಂದ್ರ, 'ಈ 28 ಅಭ್ಯರ್ಥಿಗಳು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಮತ್ತು ಹೈಕೋರ್ಟ್ ಮೊರೆ ಹೋಗಿದ್ದರು. ಅಲ್ಲಿ ಇವರ ಅರ್ಜಿ ತಿರಸ್ಕೃತಗೊಂಡಿದೆ' ಎಂದರು.

ಹೂಡಿಕೆದಾರರಿಗೆ 50 ವರ್ಷ ಟೋಲ್ ಸಂಗ್ರಹಕ್ಕೆ ಅವಕಾಶ ನೀಡುವ ಪ್ರಸ್ತಾವ

ಪಿಆರ್‌ಆರ್ ಯೋಜನೆ ಖಾಸಗಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಂಚಾರ ದಟ್ಟಣೆ ತಪ್ಪಿಸುವ ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಾಣ ಯೋಜನೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೈಬಿಟ್ಟು ಸಂಪೂರ್ಣವಾಗಿ ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಕ್ಕೆ ತರುವ ಪ್ರಸ್ತಾವ ಸರ್ಕಾರದ ಮುಂದಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಮುಖ್ಯಮಂತ್ರಿಯವರ ಪರವಾಗಿ ಉತ್ತರಿಸಿದ ಸಚಿವರು, 'ಪಿಆರ್‌ಆರ್ ಯೋಜನೆಯಡಿ ರಸ್ತೆ ನಿರ್ಮಾಣಕ್ಕೆ ₹ 6,000 ಕೋಟಿ ಅಗತ್ಯ. ರಸ್ತೆಗೆ ಅಗತ್ಯವಿರುವ ಜಮೀನು ಸ್ವಾಧೀನಪಡಿಸಿಕೊಳ್ಳಲು ₹ 15,000 ಕೋಟಿ ಬೇಕಿದೆ. ಒಂದೇ ಯೋಜನೆಗೆ ₹ 21,000 ಕೋಟಿ ವೆಚ್ಚ ಮಾಡುವ ಸ್ಥಿತಿಯಲ್ಲಿ ಸರ್ಕಾರ ಇಲ್ಲ' ಎಂದರು.

ಬದಲಾದ ಪ್ರಸ್ತಾವದ ಪ್ರಕಾರ, ಭೂಸ್ವಾಧೀನ ಮತ್ತು ರಸ್ತೆ ನಿರ್ಮಾಣ ಎರಡಕ್ಕೂ ಖಾಸಗಿ ಕಂಪನಿಯೇ ಹೂಡಿಕೆ ಮಾಡಲಿದೆ. ವಿನ್ಯಾಸ, ನಿರ್ಮಾಣ, ಹೂಡಿಕೆ, ನಿರ್ವಹಣೆ ಮತ್ತು ಹಸ್ತಾಂತರ (ಡಿಬಿಎಫ್‌ಒಟಿ) ಮಾದರಿಯಲ್ಲಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಯೋಚಿಸಲಾಗಿದೆ. ರಸ್ತೆ ನಿರ್ಮಾಣಕ್ಕೆ ಹೂಡಿಕೆ ಮಾಡಿದ ಸಂಸ್ಥೆಗೆ 50 ವರ್ಷಗಳ ಅವಧಿಗೆ ಟೋಲ್ ಸಂಗ್ರಹಕ್ಕೆ ಅವಕಾಶ ನೀಡುವ ಪ್ರಸ್ತಾವ ಇದೆ ಎಂದು ತಿಳಿಸಿದರು.

ಪಿಆರ್‌ಆರ್ ಯೋಜನೆಗೆ ಜಾಗತಿಕ ಟೆಂಡರ್ ಆಹ್ವಾನಿಸಲಾಗಿತ್ತು. ಎರಡು ಸಂಸ್ಥೆಗಳು ಬಿಡ್ ಸಲ್ಲಿಸಿವೆ. ಪರಿಶೀಲನೆ ಮುಗಿದಿದ್ದು, ಕೊನೆಯ ಹಂತದ ಮಾತುಕತೆ ನಡೆದಿದೆ. ಎರಡರಿಂದ ನಾಲ್ಕು ತಿಂಗಳೊಳಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು. ಖಾಸಗಿ ಕಂಪನಿಯು ಜಮೀನು ಮಾಲೀಕರಿಗೆ ನೀಡಬೇಕಾದ ಪರಿಹಾರದ ಮೊತ್ತವನ್ನು ಪಾವತಿಸಲಿದ್ದು, ಕಾನೂನಿನ ವ್ಯಾಪ್ತಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮಾತ್ರ ಸರ್ಕಾರ ಮಾಡಲಿದೆ ಎಂದು ವಿವರಿಸಿದರು.

ಪಿಆರ್‌ಆರ್ ಭಾಗ-1ರ ನಿರ್ಮಾಣಕ್ಕೆ ಅಗತ್ಯವಿರುವ 1,810 ಎಕರೆ 18.5 ಗುಂಟೆ ವಿಸ್ತೀರ್ಣದ ಜಮೀನು ಸ್ವಾಧೀನಕ್ಕೆ 2007ರಲ್ಲೇ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ತುಮಕೂರು ರಸ್ತೆ ಮತ್ತು ಹೊಸೂರು ರಸ್ತೆ ಬಳಿ ನೈಸ್ ರಸ್ತೆಗೆ ಪೆರಿಫೆರಲ್ ವರ್ತುಲ ರಸ್ತೆಯನ್ನು ಜೋಡಿಸುವುದು, ಟೋಲ್ ಪ್ಲಾಜಾ ನಿರ್ಮಾಣ, ಕ್ಲೋವರ್ ಲೀಫ್, ಪೆಟ್ರೋನೆಟ್, ಸೀಗೆಹಳ್ಳಿ ಮಿಸ್ಸಿಂಗ್ ಲಿಂಕ್ ಸೇರಿದಂತೆ ಏಳು ಉದ್ದೇಶಗಳಿಗೆ 589 ಎಕರೆ 13.7 ಗುಂಟೆ ಜಮೀನು ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲು ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ಡೀಮ್ಡ್ ಅರಣ್ಯ ಬಳಕೆ

ಡೀಮ್ಡ್ ಅರಣ್ಯದ ವ್ಯಾಪ್ತಿಯಲ್ಲಿರುವ 9 ಲಕ್ಷ ಎಕರೆ ಕಂದಾಯ ಜಮೀನಿನಲ್ಲಿ 6 ಲಕ್ಷ ಎಕರೆಯನ್ನು ಅರಣ್ಯದ ವ್ಯಾಪ್ತಿಯಿಂದ ಹೊರಗಿಡಲಾಗುತ್ತಿದೆ. ಅದರಲ್ಲಿ ಒಂದು ಲಕ್ಷ ಎಕರೆಯನ್ನು ಸರ್ಕಾರದ ಬಳಿಕ ಮೀಸಲು ಇರಿಸಿಕೊಳ್ಳಲಾಗುವುದು. ಸರ್ಕಾರಿ ಯೋಜನೆಗಳಿಗೆ ಅರಣ್ಯ ಜಮೀನು ಬಳಸಿಕೊಳ್ಳುವಾಗ ಡೀಮ್ಡ್ ಅರಣ್ಯದ ಜಮೀನನ್ನು ಪರ್ಯಾಯವಾಗಿ ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಲಾಗುವುದು ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

'ಕಳಪೆ ಮಾಸ್ಕ್ ಪೂರೈಕೆ'

ಬೆಂಗಳೂರು: ವಿಧಾನ ಪರಿಷತ್ ಸದಸ್ಯರಿಗೆ ಅಧಿವೇಶನದ ಸಮಯದಲ್ಲಿ ಕಳಪೆ ಹಾಗೂ ಅವಧಿ ಮುಗಿದ ಮಾಸ್ಕ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಕಾಂಗ್ರೆಸ್ ಸದಸ್ಯ ಪಿ.ಆರ್. ರಮೇಶ್ ಗುರುವಾರ ಸದನದಲ್ಲೇ ಆರೋಪಿಸಿದರು.

ಕಲಾಪ ಆರಂಭವಾಗುತ್ತಿದ್ದಂತೆ ಮಾಸ್ಕ್‌ಗಳನ್ನು ಪ್ರದರ್ಶಿಸಿದ ಅವರು, 'ಒಂದು ವರ್ಷ ಹಿಂದೆಯೇ ಅವಧಿ ಮುಗಿದಿರುವ ಮಾಸ್ಕ್‌ಗಳಿಗೆ ಎರಡು ವರ್ಷ ಅವಧಿ ಎಂದು ಹೊಸ ಸ್ಟಿಕ್ಕರ್ ಅಂಟಿಸಿ ಕೊಡುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಮೇಕ್ ಇನ್ ಇಂಡಿಯಾ ಎನ್ನುತ್ತಿದ್ದಾರೆ. ವಿಧಾನ ಪರಿಷತ್‌ನಲ್ಲೇ ಚೀನಾದಲ್ಲಿ ಉತ್ಪಾದಿಸಿರುವ ಕಳಪೆ ಮಾಸ್ಕ್‌ಗಳನ್ನು ನೀಡಲಾಗುತ್ತಿದೆ' ಎಂದು ಮಾಸ್ಕ್‌ಗಳನ್ನು ಪ್ರದರ್ಶಿಸಿದರು.

ಆರೋಪದ ಕುರಿತು ಪರಿಶೀಲನೆ ನಡೆಸುವಂತೆ ಸಭಾಪತಿ ಬಸವರಾಜ ಹೊರಟ್ಟಿ ಅಧಿಕಾರಿಗಳಿಗೆ ಸೂಚಿಸಿದರು. ಅಸಮಾಧಾನಗೊಂಡಿದ್ದ ರಮೇಶ್ ಸದನದಿಂದ ಹೊರ ನಡೆದರು.



ಗುರುವಾರ ವಿಧಾನಸಭೆಯಲ್ಲಿ ಶಾಸಕರಾದ ಸಿ.ಟಿ.ರವಿ, ಶಿವಲಿಂಗೇಗೌಡ, ಅರವಿಂದ ಲಿಂಬಾವಳಿ ಮಾತುಕತೆಯಲ್ಲಿ ತೊಡಗಿದ್ದರು. ಶಾಸಕರಾದ ಸತೀಶ್ ರೆಡ್ಡಿ, ಬಸನಗೌಡ ಪಾಟೀಲ ಯತ್ನಾಳ ಇದ್ದಾರೆ

ಸದನದಲ್ಲಿ ಶಾಸಕ ಸಾ.ರಾ.ಮಹೇಶ್ ವಾಗ್ದಾಳಿ

₹500 ಕೋಟಿ ಸಂಪಾದಿಸುವ ಐಎಎಸ್ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಕೆಲವು ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳು ₹500 ಕೋಟಿ ಆಸ್ತಿ ಸಂಪಾದಿಸುತ್ತಾರೆ. ಆಂಧ್ರ ಪ್ರದೇಶ ಹಾಗೂ ಉತ್ತರ ಪ್ರದೇಶದಲ್ಲಿ ಜಾಗ ಖರೀದಿಸುತ್ತಾರೆ. ಸೇವೆಯಿಂದ ನಿವೃತ್ತರಾದ ಕೂಡಲೇ ನಮ್ಮ ವಿರುದ್ಧವೇ ಚುನಾವಣೆಗೆ ನಿಲ್ಲುತ್ತಾರೆ' ಎಂದು ಜೆಡಿಎಸ್‌ನ ಸಾ.ರಾ.ಮಹೇಶ್ ವಾಗ್ದಾಳಿ ನಡೆಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಕುರಿತು ವಿಧಾನಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮಾತನಾಡುತ್ತಿದ್ದ ವೇಳೆ ಮಧ್ಯಪ್ರವೇಶಿಸಿದ ಸಾ.ರಾ.ಮಹೇಶ್, 'ನಾವು ₹10 ದುಡ್ಡು ಹೊಡೆದರೂ ಅದನ್ನು ಚುನಾವಣೆ ವೇಳೆ ಜನರಿಗೆ ಕೊಡುತ್ತೇವೆ. ಅವರು ಯಾರಿಗೆ ಕೊಡುತ್ತಾರೆ' ಎಂದು ಪ್ರಶ್ನಿಸಿದರು.

'ಸ್ವಚ್ಛ ಮೈಸೂರು ಹೆಸರಿನಲ್ಲಿ ₹ 4 ಬ್ಯಾಗ್ ಅನ್ನು ₹69ಕ್ಕೆ ಖರೀದಿ ಮಾಡಲಾಯಿತು. ಈ ಯೋಜನೆಯಲ್ಲಿ ಹಿಂದಿನ ಜಿಲ್ಲಾಧಿಕಾರಿ ಕಾಲದಲ್ಲಿ ₹ 6.5 ಕೋಟಿ ಅಕ್ರಮ ನಡೆದಿದೆ. ಈ ಬಗ್ಗೆ ನಾವು ಸತ್ಯ ಹೇಳಿದರೆ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳನ್ನು ಸೃಷ್ಟಿಸಿ ನಮ್ಮ ವಿರುದ್ಧವೇ ಅಭಿಯಾನ ನಡೆಯುತ್ತದೆ. 20ರಿಂದ 40 ವಯಸ್ಸಿನ ಕೆಲವು ಮಹಿಳಾ ಅಧಿಕಾರಿಗಳ ವಿರುದ್ಧ ನಾವು ಧ್ವನಿ ಎತ್ತುವಂತೆಯೇ ಇಲ್ಲ' ಎಂದು ಅವರು ಹೇಳಿದರು.

'ಸಚಿವರ ಮನೆಗಳ ನವೀಕರಣಕ್ಕೆ ₹5 ಲಕ್ಷವನ್ನು ಸರ್ಕಾರ ಕೊಡುತ್ತದೆ. ಜಿಲ್ಲಾಧಿಕಾರಿಯ ಮನೆ ನವೀಕರಣಕ್ಕೆ ₹50 ಲಕ್ಷ ಕೊಡಲಾಗಿದೆ. ಅವರು 5 ಎಕರೆ ಜಾಗದ ಮನೆಯಲ್ಲಿ ವಾಸಿಸುತ್ತಾರೆ. ಅಲ್ಲಿಗೆ ಜನರು ಹೋಗಲು ಸಾಧ್ಯವೇ. ಅಧಿಕಾರಿಗಳಿಗೆ ಅಷ್ಟು ದೊಡ್ಡ ಮನೆ ಏಕೆ' ಎಂದೂ ಪ್ರಶ್ನಿಸಿದರು.

'ಪ್ರಥಮದರ್ಜೆ ಸಹಾಯಕರು, ಕೆಎಎಸ್ ಅಧಿಕಾರಿಗಳ ಮನೆ ಹಾಗೂ ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿ ಆಗಿದೆ. ಈವರೆಗೆ ಒಬ್ಬನೇ ಒಬ್ಬ ಐಎಎಸ್ ಅಧಿಕಾರಿ ಮನೆ ಮೇಲೆ ದಾಳಿ ನಡೆದ ಉದಾಹರಣೆ ಇದೆಯೇ' ಎಂದು ಪ್ರಶ್ನಿಸಿದರು.

ಎಚ್.ಡಿ.ಕುಮಾರಸ್ವಾಮಿ, 'ಮೈಸೂರಿನಲ್ಲಿ ಇಬ್ಬರು ಮಹಿಳಾ ಅಧಿಕಾರಿಗಳು ಜಗಳ ಮಾಡಿಕೊಂಡರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರು ಇಬ್ಬರಿಗೂ ಸಮನ್ಸ್ ನೀಡಿ ಕರೆಸಿಕೊಳ್ಳಬೇಕಿತ್ತು. ಆದರೆ, ಮುಖ್ಯ ಕಾರ್ಯದರ್ಶಿಯವರೇ ಮೈಸೂರಿಗೆ ಹೋದರು. ಇದು ಒಳ್ಳೆಯ ಬೆಳವಣಿಗೆ ಅಲ್ಲ' ಎಂದರು.

'ತಕರಾರು ಇದ್ದರೆ ಅಧಿಕಾರಿಗಳು ಮುಖ್ಯ ಕಾರ್ಯದರ್ಶಿ ಅವರಿಗೆ ದಾಖಲೆಗಳನ್ನು ನೀಡಬೇಕು. ನೇರವಾಗಿ ಮಾಧ್ಯಮದ ಮುಂದೆ ಮಾತನಾಡಲು ಸೇವಾ ನಿಯಮದ ಪ್ರಕಾರ ಅವಕಾಶ ಇಲ್ಲ' ಎಂದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಮುಖ್ಯ ಕಾರ್ಯದರ್ಶಿ ಅವರಿಗೆ ಹಲವು ಸಲ ಕರೆ ಮಾಡಿ ಇಂತದ್ದಕ್ಕೆ ಅವಕಾಶ ನೀಡಬೇಡಿ ಎಂದು ಹೇಳಿದ್ದೆ. ಮಾಧ್ಯಮದ ಮುಂದೆ ಹೋಗುವವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದರು.

ಕಂದಾಯ ಸಚಿವ ಆರ್.ಅಶೋಕ, 'ಕೆಲ ಅಧಿಕಾರಿಗಳು ಓವರ್ ಆ್ಯಕ್ಟಿಂಗ್ ಮಾಡುತ್ತಾರೆ. ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚಿಸಲಾಗುವುದು' ಎಂದು ಭರವಸೆ ನೀಡಿದರು.

ಅಕ್ಕಿ–ಬೇಳೆ ಮಾತ್ರವಲ್ಲ, ಜನರ ಬದುಕೇ ದುಬಾರಿ: ರಮೇಶ್ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಲೆ ಏರಿಕೆಯ ಅಪರಾಧಿಗಳು ನಾವು ಇಲ್ಲೇ ಇದ್ದೇವೆ. ಪೆಟ್ರೋಲ್, ಡೀಸೆಲ್, ಅಕ್ಕಿ, ಬೇಳೆ ಇತ್ಯಾದಿಗಳ ಬೆಲೆ ಏರಿಕೆ ಬಗ್ಗೆ ಮಾತನಾಡುತ್ತೇವೆ. ಆದರೆ, ಜನಸಾಮಾನ್ಯರ ಒಟ್ಟಾರೆ ಬದುಕೇ ದುಬಾರಿಯಾಗಿದೆ. ಇದಕ್ಕೆ ಆಡಳಿತ ನಡೆಸಿದ ಎಲ್ಲ ಪಕ್ಷಗಳೂ ಕಾರಣ' ಎಂದು ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್ ಹೇಳಿದರು.



ರಮೇಶ್ ಕುಮಾರ್

ಬೆಲೆ ಏರಿಕೆ ಕುರಿತು ವಿಧಾನಸಭೆಯಲ್ಲಿ ಗುರುವಾರ ಮಾತನಾಡಿದ ಅವರು, 'ಪ್ರತಿ ನಿತ್ಯ 'ಆಡಿ' ಕಾರಿನಲ್ಲಿ ಬಂದು ಇಳಿಯುವ ನಾವು ಬೆಲೆ ಏರಿಕೆ ಬಗ್ಗೆ ಮಾತನಾಡುತ್ತಿದ್ದೇವೆ' ಎಂದು ವ್ಯಂಗ್ಯವಾಡಿದರು.

'ಉಕ್ಕು, ಸಿಮೆಂಟ್, ಖಾದ್ಯ ತೈಲದ ಬೆಲೆ ಏರಿಕೆ ಬಗ್ಗೆ ಮಾತನಾಡುತ್ತೇವೆ. ಕಲ್ಯಾಣ ಮಂಟಪಗಳಲ್ಲಿ 2 ದಿನ ಮದುವೆ ನಡೆಸಲು ₹3 ಲಕ್ಷದಿಂದ ₹5 ಲಕ್ಷ ಆಗುತ್ತದೆ. ಈ ರೀತಿ ದುಬಾರಿ ಆಗಿದ್ದು, ಅವುಗಳ ಮೇಲೆ ಸರ್ಕಾರಕ್ಕೆ ಕಡಿವಾಣ ಇಲ್ಲವೆ, ಕಣ್ಣು ಮುಚ್ಚಿ ಕುಳಿತಿದೆಯೇ. ಈ ಸ್ಥಿತಿ ತಂದವರು ನಾವೇ (ಕಾಂಗ್ರೆಸ್,ಬಿಜೆಪಿ ಜೆಡಿಎಸ್) ಅಲ್ಲವೇ? ರಾಜಕಾರಣಿಗಳು ತಮ್ಮ ಮಕ್ಕಳನ್ನು ಅರಮನೆ ಬಿಟ್ಟು ಬೇರೆ ಕಡೆ ಮದುವೆ ಮಾಡುವುದು ತಮ್ಮ ಗೌರವಕ್ಕೆ ಧಕ್ಕೆ ಎಂಬ ಭಾವನೆ ಬೆಳೆಸಿಕೊಂಡಿಲ್ಲವೆ' ಎಂದು ರಮೇಶ್‌ಕುಮಾರ್ ಪ್ರಶ್ನಿಸಿದರು.

'1980 ರಲ್ಲಿ ಗುಂಡೂರಾಯರ ಸರ್ಕಾರ ಸರ್ಕಾರಿ ಆಸ್ಪತ್ರೆಯಲ್ಲಿ ಹೊರರೋಗಿ ಚೀಟಿ ಬರೆಸಲು ಶುಲ್ಕವನ್ನು ನಾಲ್ಕಾಣೆಯಿಂದ ಒಂದು ರೂಪಾಯಿಗೆ ಏರಿಕೆ ಮಾಡಿತು. ಇದನ್ನು ವಿರೋಧಿಸಿ ವ್ಯಾಪಕ ಹೋರಾಟ ನಡೆಯಿತು. ಈಗ ನಮ್ಮ ಮಾತಿಗೆ ಮತ್ತು ಬದುಕಿನ ಸ್ಥಿತಿಗೆ ಸಂಬಂಧವೇ ಇಲ್ಲದ ಕಾರಣ ನಮ್ಮ ಮಾತುಗಳಿಗೆ ಹೆಚ್ಚು ಗೌರವ ಬರುತ್ತಿಲ್ಲ' ಎಂದು ಅವರು ಹೇಳಿದರು.

'ಚುನಾವಣಾ ಆಯೋಗಕ್ಕೆ ಚುನಾವಣೆ ಸಂದರ್ಭದಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರ ತೆಗೆದು ನೋಡಿದರೆ ನಮ್ಮ ಆಸ್ತಿ ಪಾಸ್ತಿ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಹೀಗಾಗಿ ಇಲ್ಲಿರುವ ಯಾರಿಗೂ ಬೆಲೆ ಏರಿಕೆ ಬಾಧಿಸಿಲ್ಲ' ಎಂದರು.

'ಇದಕ್ಕೆ ನಾವು ಮಾತ್ರ ಕಾರಣ ಅಲ್ಲ, ನಾವು ವ್ಯವಸ್ಥೆಯ ಪ್ರತಿಬಿಂಬವಾಗಿದ್ದೇವೆ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತಿಗೆ ಪ್ರತಿಕ್ರಿಯಿಸಿದರು.

'ಪ್ರಜಾವಾಣಿ' ವರದಿ ಉಲ್ಲೇಖ

'ಇತ್ತೀಚೆಗೆ 'ಪ್ರಜಾವಾಣಿ'ಯಲ್ಲಿ ಬಂದ ವರದಿ ಪ್ರಕಾರ 'ಗೌರಿ ಗಣೇಶ ಹಬ್ಬದ ಸಂದರ್ಭದಲ್ಲಿ ಖಾಸಗಿ ಬಸ್‌ಗಳ ಟಿಕೆಟ್ ದರ ವಿಮಾನ ಟಿಕೆಟ್ ದರವನ್ನೂ ಮೀರಿಸುವಂತಿತ್ತು. ಟಿಕೆಟ್‌ಗೆ ₹5,000 ದಿಂದ ₹6,000 ಎಂದರೆ ಹುಡುಗಾಟವೇ, ಹಾಗಿದ್ದರೆ ಇದನ್ನು ನಿಯಂತ್ರಿಸಲು ಸಾರಿಗೆ ಇಲಾಖೆಗೆ ಸಾಧ್ಯವಿಲ್ಲವೇ? ಸರ್ಕಾರ ಎಲ್ಲದರ ಮೇಲೆ ಹತೋಟಿ ಹೊಂದಿದೆ ಎಂಬುದು ಕೇವಲ ಭ್ರಮೆ. ನಾವು ಸತ್ತಿದ್ದೇವೆ ಬದುಕಿಲ್ಲ' ಎಂದು ರಮೇಶ್‌ಕುಮಾರ್ ಕಿಡಿಕಾರಿದರು.

1962–63 ರಲ್ಲಿ ಹೈಸ್ಕೂಲ್ ಓದಲೆಂದು ಬೆಂಗಳೂರಿಗೆ ಬಂದಿದ್ದೆ. ಆಗ ಕೆ.ಎಂ.ನಾಗಣ್ಣ ಎಂಬ ಶಾಸಕ ಇದ್ದರು. ಅಂದಿನ ಸರ್ಕಾರ ಪ್ರತಿ ಸೈಕಲ್ ಮೇಲೆ ನಾಲ್ಕು ಆಣೆ ತೆರಿಗೆ ವಿಧಿಸಿತು. ಅದನ್ನು ವಿರೋಧಿಸಿ, ಪ್ರತಿಭಟನೆಗೆ ನಾಗಣ್ಣ ಕರೆ ನೀಡಿದರು. ಪ್ರತಿಭಟನೆಗೆ ಜನ ಸಾಗರವೇ ಸೇರಿತ್ತು ಎಂದರು.

30x40 ಅಳತೆಯ ಮನೆಗಳಲ್ಲಿ ಮಳೆ ನೀರು ಸಂಗ್ರಹ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಇನ್ನು ಮುಂದೆ 30X40 ಅಳತೆಯ ನಿವೇಶನಗಳಲ್ಲಿ ಮನೆ ಕಟ್ಟುವವರು ಮಳೆ ನೀರು ಸಂಗ್ರಹ ವ್ಯವಸ್ಥೆ ಮಾಡುವುದನ್ನು ಕಡ್ಡಾಯಗೊಳಿಸುವ 'ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮ ಸಾರ ಚರಂಡಿ ವ್ಯವಸ್ಥೆ ಮಸೂದೆ' 2021 ಕ್ಕೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು.

ಮುಖ್ಯಮಂತ್ರಿಯವರ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಮಸೂದೆಯನ್ನು ಮಂಡಿಸಿ, ಈವರೆಗೆ 60X40 ಅಡಿ ವಿಸ್ತೀರ್ಣದ ನಿವೇಶನಗಳಿಗೆ ಮಾತ್ರ ಕಡ್ಡಾಯಗೊಳಿಸಲಾಗಿತ್ತು ಎಂದರು.

ಈಗಾಗಲೇ 30X40 ಅಳತೆಯ ನಿವೇಶನಗಳಲ್ಲಿ ಮನೆ ನಿರ್ಮಿಸಿಕೊಂಡವರಿಗೆ ಇದು ಅನ್ವಯವಾಗುವುದಿಲ್ಲ. ಅವರಿಗೆ ವಿನಾಯತಿ ನೀಡಲಾಗುತ್ತದೆ. ಆದರೆ, 60X40 ವಿಸ್ತೀರ್ಣದ ನಿವೇಶನಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಇಲ್ಲದೆ ಮನೆ ಕಟ್ಟಿಕೊಂಡವರು ಆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ವಿವರಿಸಿದರು.

ಇದರಿಂದ ಅಂತರ್ಜಲ ಮರುಪೂರಣಕ್ಕೆ ಅನುಕೂಲವಾಗುತ್ತದೆ. ಕಾವೇರಿ ನೀರು ಅಥವಾ ಅಂತರ್ಜಲದ ಅತಿಯಾದ ಮೇಲಿನ ಅವಲಂಬನೆಯೂ ಕಡಿಮೆ ಆಗುತ್ತದೆ. ಮಳೆ ನೀರು ಒಳಚರಂಡಿಯಲ್ಲಿ ಹರಿದು ಹೋಗಿ ವ್ಯರ್ಥವಾಗುವುದನ್ನು ತಗ್ಗಿಸಬಹುದು ಮತ್ತು ನಗರ ಪ್ರವಾಹ ತಗ್ಗಿಸಲು ಸಹಾಯಕವಾಗುತ್ತದೆ ಎಂದು ಮಾಧುಸ್ವಾಮಿ ಹೇಳಿದರು.

ಬಿಎಂಟಿಸಿ ಕಟ್ಟಡಗಳ ಮೇಲೆ ಸೌರ ವಿದ್ಯುತ್ ಚಾವಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಯಾಣಿಕರ ಕೊರತೆಯಿಂದ ನಷ್ಟದ ಸುಳಿಯಲ್ಲಿರುವ ಬಿಎಂಟಿಸಿ, ತನ್ನ ಘಟಕದ(ಡಿಪೋ) ಕಟ್ಟಡಗಳ ಮೇಲ್ಚಾವಣಿಯಲ್ಲಿ ಸೌರ ವಿದ್ಯುತ್ ಉತ್ಪಾದನೆಗೆ ಮುಂದಾಗಿದೆ. 25 ಘಟಕಗಳ ಮೇಲೆ ಈಗಾಗಲೇ ಸೌರವಿದ್ಯುತ್ ಚಾವಣಿ ಹೊದಿಸಿದೆ. ಬೆಸ್ಕಾಂಗೆ ಪಾವತಿಸುತ್ತಿರುವ ವಿದ್ಯುತ್ ಶುಲ್ಕ ಉಳಿಸುವ ಜೊತೆಗೆ ವಿದ್ಯುತ್ ಮಾರಾಟ ಮಾಡುವ ಉದ್ದೇಶವನ್ನು ಸಂಸ್ಥೆ ಹೊಂದಿದೆ.

44 ಘಟಕಗಳು, 10 ಟಿಟಿಎಂಸಿ ಹಾಗೂ 2 ಪ್ರಮುಖ ನಿಲ್ದಾಣಗಳಲ್ಲೂ ಸೌರ ವಿದ್ಯುತ್ ಚಾವಣಿ ಅಳವಡಿಸಲು ಬಿಎಂಟಿಸಿ ಉದ್ದೇಶಿಸಿದೆ. ಪ್ರತಿ ಘಟಕದಲ್ಲಿ 50 ಕಿಲೋ ವಾಟ್‌ಗೂ ಹೆಚ್ಚು ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಒಟ್ಟಾರೆ ದಿನಕ್ಕೆ 6.5 ಮೆಗಾವಾಟ್ ಉತ್ಪಾದನೆಯ ಮಾಡುವ ಮೂಲಕ ಸ್ವಾವಲಂಬನೆ ಸಾಧಿಸಲಾಗಿದೆ ಎಂದು ಬಿಎಂಟಿಸಿ ಉಪಾಧ್ಯಕ್ಷ ಎಂ.ಆರ್. ವೆಂಕಟೇಶ್ ತಿಳಿಸಿದರು.

ಸಂಸ್ಥೆಯಿಂದ ತಿಂಗಳಿಗೆ ₹12.50 ಲಕ್ಷ ವಿದ್ಯುತ್ ಶುಲ್ಕ ಪಾವತಿಸಲಾಗುತ್ತಿದೆ. ಸ್ವಾವಲಂಬನೆ ಸಾಧಿಸಿದರೆ ಅಷ್ಟೂ ಮೊತ್ತ ಉಳಿತಾಯವಾಗಲಿದೆ. ಅಲ್ಲದೇ ಹೆಚ್ಚುವರಿಯಾಗಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಬೆಸ್ಕಾಂ ಪವರ್ ಗ್ರಿಡ್‌ಗೆ ಕಳುಹಿಸಿ ವರಮಾನ ಹೆಚ್ಚಿಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದರು.



ಬಿಎಂಟಿಸಿ ಘಟಕದ ಮೇಲೆ ಸೌರ ವಿದ್ಯುತ್ ಚಾವಣಿ ಅಳವಡಿಸಿರುವುದು

ಸೌರ ವಿದ್ಯುತ್ ಚಾವಣಿ ನಿರ್ಮಾಣಕ್ಕೆ ಪ್ರತಿ ಘಟಕಕ್ಕೆ ₹30 ಲಕ್ಷ ವೆಚ್ಚ ತಗುಲುತ್ತಿತ್ತು. ಆದರೆ, ಕೇಂದ್ರ ಸರ್ಕಾರ ಶೇ 100ರಷ್ಟು ಸಹಾಯಧನ ನೀಡಿರುವುದರಿಂದ ಸಂಸ್ಥೆಗೆ ಯಾವುದೇ ರೀತಿಯ ಖರ್ಚು ಬಂದಿಲ್ಲ ಎಂದು ಹೇಳಿದರು.

ಸಂಸ್ಥೆಯ ವರಮಾನ ಹೆಚ್ಚಳಕ್ಕೆ ಇರುವ ಈ ಮಾರ್ಗದ ಬಗ್ಗೆ ಈವರೆಗೆ ಯಾರೂ ಯೋಚಿಸಿರಲಿಲ್ಲ. ನಾನು ನೀಡಿದ ಸಲಹೆ ಪರಿಗಣಿಸಿ ಸಂಸ್ಥೆಯ ಹಿಂದಿನ ವ್ಯವಸ್ಥಾಪಕ ನಿರ್ದೇಶಕಿ ಸಿ. ಶಿಖಾ ಅವರು ಕಾಳಜಿ ವಹಿಸಿದ್ದರಿಂದ 25 ಘಟಕಗಳಲ್ಲಿ ಸೌರ ವಿದ್ಯುತ್ ಚಾವಣಿ ಅಳವಡಿಕೆಯಾಗಿದೆ ಎಂದರು.

ಟಿಟಿಎಂಸಿಗಳಲ್ಲಿ ವಾಣಿಜ್ಯ ಮಳಿಗೆಗಳು ಇರುವ ಈ ಚಾವಣಿ ಅಳವಡಿಸಲು ಕೇಂದ್ರದಿಂದ ಪೂರ್ಣ ಪ್ರಮಾಣದ ಸಹಾಯಧನ ದೊರಕುತ್ತಿಲ್ಲ. ಸಹಾಯಧನ ದೊರಕಿಸುವ ಸಂಬಂಧ ಇಂಧನ ಸಚಿವರ ಜತೆ ಮಾತನಾಡಲಾಗಿದೆ ಎಂದು ಹೇಳಿದರು.

ಇದಲ್ಲದೇ ಬಿಎಂಟಿಸಿಯ 8 ಟಿಟಿಎಂಸಿಗಳಲ್ಲಿ 24 ಎಲೆಕ್ಟ್ರಿಕ್ ಚಾರ್ಜಿಂಗ್ ಘಟಕಗಳನ್ನು ತೆರೆಯಲಾಗಿದೆ ಎಂದೂ ಎಂ.ಆರ್. ವೆಂಕಟೇಶ್ ತಿಳಿಸಿದರು.

ಕಾಂಗ್ರೆಸ್ ಸಭಾತ್ಯಾಗದ ಮಧ್ಯೆಯೇ ವಿಧಾನಸಭೆಯಲ್ಲಿ ಮಸೂದೆ ಅಂಗೀಕಾರ

ಪಂಚಾಯತ್ ಕ್ಷೇತ್ರ ಪುನರ್‌ವಿಂಗಡಣೆಗೆ ಆಯೋಗ: ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರೂ ಹಂತದ ಪಂಚಾಯತ್ ವ್ಯವಸ್ಥೆಯಡಿ ಕ್ಷೇತ್ರ ಪುನರ್ ವಿಂಗಡಣೆ ಮಾಡುವ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂದಕ್ಕೆ ಪಡೆದು, 'ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ' ಸ್ಥಾಪಿಸಿ, ಅದಕ್ಕೆ ಅಧಿಕಾರ ನೀಡುವ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ' ಕಾಂಗ್ರೆಸ್ ಸಭಾತ್ಯಾಗ ಮತ್ತು ಜೆಡಿಎಸ್ ವಿರೋಧದ ಮಧ್ಯೆ ವಿಧಾನಸಭೆಯಲ್ಲಿ ಗುರುವಾರ ಅಂಗೀಕಾರ ಪಡೆಯಿತು.

ಮುಂಬರುವ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಚುನಾವಣೆಗಳನ್ನು ಮುಂದೂಡುವ ಉದ್ದೇಶದಿಂದಲೇ ಸಂವಿಧಾನಕ್ಕೆ ವಿರೋಧವಾಗಿ ಈ ಮಸೂದೆಯನ್ನು ಮಂಡಿಸಲಾಗಿದೆ ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರ ಮಸೂದೆಯನ್ನು ಹಿಂದಕ್ಕೆ ಪಡೆಯಲು ಒಪ್ಪದ ಕಾರಣ, ಅದನ್ನು ವಿರೋಧಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಕಾಂಗ್ರೆಸ್ ಸದಸ್ಯರು ಸದನದಿಂದ ಹೊರ ನಡೆದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, 'ಮಸೂದೆಯನ್ನು ಮಂಡಿಸಿರುವ ಉದ್ದೇಶವೇ ಪ್ರಶ್ನಾರ್ಹವಾಗಿದೆ. ಎರಡು ವರ್ಷಗಳಿಂದ ಅಧಿಕಾರದಲ್ಲಿರುವ ನೀವು ಹಿಂದೆಯೇ ಏಕೆ ಈ ಮಸೂದೆ ಮಂಡಿಸಿಸಲಿಲ್ಲ. ಐದು ವರ್ಷದೊಳಗೆ ಚುನಾವಣೆ ನಡೆಸಬೇಕು. ಕೊನೆ ಹಂತದಲ್ಲಿ ಮಸೂದೆ ತಂದಿರುವುದು ಚುನಾವಣೆ ಮುಂದೂಡುವ ಏಕೈಕ ಉದ್ದೇಶ ಬಿಟ್ಟು ಬೇರೆ ಏನೂ ಇಲ್ಲ' ಎಂದು ಹೇಳಿದರು.

'ನಿಮ್ಮ ಈ ತಿದ್ದುಪಡಿಯನ್ನು ಹೈಕೋರ್ಟ್ ಒಪ್ಪುವುದಿಲ್ಲ. ಅದು ಗೊತ್ತಿದ್ದೇ, ನ್ಯಾಯಾಲಯ ಯಾವುದೇ ರೀತಿಯ ತೀರ್ಮಾನ ಕೊಡದ ಹಾಗೆ ಮಾಡಲು ಮಸೂದೆ ತಂದಿದ್ದಿರಿ. ಪ್ರತ್ಯೇಕ ಆಯೋಗ ರಚನೆ ಮಾಡುವ ಮೂಲಕ ಕ್ಷೇತ್ರ ಪುನರ್‌ವಿಂಗಡಣೆ ಮತ್ತು ಮೀಸಲಾತಿಯಲ್ಲಿ ಹಸ್ತಕ್ಷೇಪ ಮಾಡಲು ಸರ್ಕಾರ ಹೊರಟದೆ' ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನ ಎಚ್.ಕೆ.ಪಾಟೀಲ ಮಾತನಾಡಿ, 'ಹಿಂದೆ ನಮ್ಮ ಸರ್ಕಾರ ಇದ್ದಾಗ ಕ್ಷೇತ್ರ ಪುನರ್ ವಿಂಗಡಣೆಯಲ್ಲಿ ಲೋಪ ಆಗುತ್ತಿದೆ ಎಂಬ ಕಾರಣಕ್ಕೆ ಚುನಾವಣಾ ಆಯೋಗಕ್ಕೆ ಅಧಿಕಾರ ನೀಡಿದೆವು. ಈಗ ನೀವು ಸಂವಿಧಾನಕ್ಕೆ ವಿರುದ್ಧವಾದ, ಪ್ರತಿಗಾಮಿ ಮಸೂದೆ ತಂದಿದ್ದೀರಿ. ಜನರನ್ನು ಅಧಿಕಾರಯುಕ್ತರನ್ನಾಗಿ ಮಾಡಬೇಕೆ ಹೊರತು ಭಿಕ್ಷೆ ಬೇಡುವಂತೆ ಮಾಡಬೇಡಿ' ಎಂದು ಸರ್ಕಾರದ ವಿರುದ್ಧ ಹರಿಹಾಯ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ, ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆಗೆ ಸರಿಯಾಗಿಲ್ಲ ಎಂಬ ಕಾರಣಕ್ಕೆ ಎರಡು ಸಾವಿರಕ್ಕೂ ಹೆಚ್ಚು ಪ್ರಕರಣಗಳು ಹೈಕೋರ್ಟ್‌ನಲ್ಲಿ ದಾಖಲಾಗಿವೆ. ಇದೇ 20 ರ ಒಳಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮವನ್ನು ಹೈಕೋರ್ಟ್‌ಗೆ ಸಲ್ಲಿಸಬೇಕಾದ ಗಡುವು ನೀಡಿದೆ ಎಂದು ಸಮಜಾಯಿಷಿ ನೀಡಿದರು.

ಚರ್ಚೆಯಲ್ಲಿ ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, ಕೃಷ್ಣ ಬೈರೇಗೌಡ, ಕೆ.ಆರ್. ರಮೇಶ್ ಕುಮಾರ್, ಯತೀಂದ್ರ ಸಿದ್ದರಾಮಯ್ಯ, ಜೆಡಿಎಸ್‌ನ ಎಚ್.ಡಿ. ರೇವಣ್ಣ, ಶಿವಲಿಂಗೇಗೌಡ, ಮುಂತಾದವರು ಮಾತನಾಡಿದರು.

ನಿವೃತ್ತ ಮುಖ್ಯಕಾರ್ಯದರ್ಶಿ ಅಧ್ಯಕ್ಷತೆ

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗಕ್ಕೆ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಅಥವಾ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷರಾಗಿರುತ್ತಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕ್ಷೇತ್ರದ ಒಬ್ಬ ತಜ್ಞ, ಗ್ರಾಮೀಣಾಭಿವೃದ್ಧಿ, ವಿಕೇಂದ್ರೀಕರಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದ ನಿವೃತ್ತ ಕಾರ್ಯದರ್ಶಿ ಸದಸ್ಯರಾಗಿರುತ್ತಾರೆ. ಅಲ್ಲದೆ ಇಬ್ಬರು ಪದ ನಿಮಿತ್ತ ಸದಸ್ಯರು ಇರುತ್ತಾರೆ. ಈ ಆಯೋಗ ಕ್ಷೇತ್ರ ಪುನರ್ ವಿಂಗಡಣೆ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ನೀಡುತ್ತದೆ.

ಚರ್ಚೆಗೆ ಗ್ರಾಸವಾದ ಮಾಮನಿ ಗೈರು

ಬೆಂಗಳೂರು: ಸಚಿವ ಸ್ಥಾನ ಸಿಗದೇ ಮುನಿಸಿಕೊಂಡಿರುವ ವಿಧಾನಸಭೆಯ ಉಪಾಧ್ಯಕ್ಷ ಆನಂದ ಮಾಮನಿ ಅವರು ಈ ಅಧಿವೇಶನದಲ್ಲಿ ಈವರೆಗೆ ಕಲಾಪಕ್ಕೆ ಹಾಜರಾಗದೇ ಇರುವುದು ಚರ್ಚೆಗೆ ಗ್ರಾಸವಾಗಿದೆ.

ಇದೇ 13 ರಿಂದ ಅಧಿವೇಶನ ಆರಂಭವಾಗಿದ್ದು, ಒಂದೂ ದಿನ ಅವರು ಕಲಾಪಕ್ಕೆ ಹಾಜರಾಗಿಲ್ಲ. ಇದರಿಂದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಮೇಲೆ ಕಲಾಪದ ಕಾರ್ಯಭಾರದ ಒತ್ತಡ ಅಧಿಕವಾಗಿದೆ. ಸಭಾಧ್ಯಕ್ಷ ಕಾರ್ಯನಿರ್ವಹಣೆಯ ಪ್ಯಾನಲ್‌ನ ಇತರ ಸದಸ್ಯರನ್ನು ಬಳಸಿಕೊಂಡು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ. ಆನಂದ ಮಾಮನಿ, ಸದನಕ್ಕೆ ಗೈರಾಗುವ ಮೂಲಕ ತಮ್ಮ ಆಕ್ರೋಶ ಹೊರ ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದರೆ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

'ಮನೆ ಬಾಗಿಲಿಗೆ ಬರಲಿವೆ ರಾಷ್ಟ್ರೀಯ ಪಕ್ಷಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ರಾಜಕೀಯದಲ್ಲಿ ರಾಷ್ಟ್ರೀಯ ಪಕ್ಷಗಳಿಗೆ ಜೆಡಿಎಸ್ ಅನಿವಾರ್ಯವಾಗಲಿದೆ. 2023ರ ವಿಧಾನಸಭಾ ಚುನಾವಣೆ ಬಳಿಕ ಎರಡೂ ಪಕ್ಷಗಳು ತಮ್ಮ ಮನೆ ಬಾಗಿಲಿಗೆ ಬರುವುದು ನಿಶ್ಚಿತ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದರು.

ಪಕ್ಷದ ಪ್ರಧಾನ ಕಚೇರಿಯಲ್ಲಿ ಗುರುವಾರ ನಡೆದ ಗಾಂಧಿನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಘಟಕದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, '2023ರ ಚುನಾವಣೆವರೆಗೂ ಈ ರೀತಿ ಪಕ್ಷ ಸಂಘಟನೆ ಮಾಡುತ್ತೇನೆ. ಜನರ ಬಳಿ ಹೋಗಿ ಎಲ್ಲವನ್ನೂ ಹೇಳುತ್ತೇನೆ' ಎಂದರು.



ಜೆಡಿಎಸ್ ಪ್ರಧಾನ ಕಚೇರಿಯಲ್ಲಿ ಗುರುವಾರ ನಡೆದ ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ಜೆಡಿಎಸ್ ರಾಷ್ಟ್ರೀಯ ಘಟಕದ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರೊಂದಿಗೆ ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಆರ್. ಪ್ರಕಾಶ್ ಚರ್ಚಿಸುತ್ತಿರುವುದು. ಪಕ್ಷದ ಮುಖಂಡ ನಾರಾಯಣಸ್ವಾಮಿ ಇದ್ದರು

'ನಾನು ಬಿಜೆಪಿಯವನಲ್ಲ. ಆದರೆ, ಕಾಂಗ್ರೆಸ್‌ನಿಂದ ಮುಖ್ಯಮಂತ್ರಿ ಆಗಲು ಹೊರಟಿದ್ದವರೇ ನಮ್ಮನ್ನು ಬಿಜೆಪಿಯ 'ಬಿ ಟೀಂ' ಎಂದು ಆರೋಪಿಸಿದರು. ರಾಹುಲ್ ಗಾಂಧಿ ಕೂಡ ಹಾಸನದಲ್ಲಿ ಅದೇ ಮಾತನಾಡಿದರು. ಯಾರೋ ಹೇಳಿಕೊಟ್ಟಿದ್ದನ್ನೇ ಅವರು ಮಾಧ್ಯಮಗಳ ಎದುರು ಹೇಳಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಮೀರ್ ಅಹಮ್ಮದ್ ಜೆಡಿಎಸ್ ಶಾಸಕರನ್ನು ಬಿಜೆಪಿ ಜತೆ ಕರೆದುಕೊಂಡು ಹೋದವರು. ಅವರು ಸಿದ್ದರಾಮಯ್ಯ ಅವರಿಗೆ ಸ್ವಚ್ಛವಾಗಿ ಕಾಣುತ್ತಾರೆ. 150 ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲವು ಸಾಧಿಸುತ್ತದೆ ಎಂದು ಹೇಳುತ್ತಾರೆ. ಆದರೆ, ತಮಿಳುನಾಡು, ದೆಹಲಿ, ಒಡಿಶಾದಲ್ಲಿ ಕಾಂಗ್ರೆಸ್ ಪಕ್ಷದ ಕತೆ ಏನಾಗಿದೆ ನೋಡಲಿ ಎಂದರು.

ಕಲಬುರ್ಗಿ ಮಹಾನಗರ ಪಾಲಿಕೆ ಮೇಯರ್ ಚುನಾವಣೆಯಲ್ಲಿ ಬೆಂಬಲ ನೀಡುವ ಕುರಿತು ಕೇಳಿದಾಗ, 'ಆ ಬಗ್ಗೆ ಈಗ ಏನನ್ನೂ ಹೇಳುವುದಿಲ್ಲ' ಎಂದರು.

ಕೋವಿಡ್: 16 ಸಾವಿರ ದಾಟಿದ ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದು, ಸದ್ಯ 16,174 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಗುರುವಾರ 1,108 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಪ್ರಕರಣಗಳ ಒಟ್ಟು ಸಂಖ್ಯೆ 29.65 ಲಕ್ಷ ದಾಟಿದೆ. ಒಂದು ದಿನದಲ್ಲಿ 1.66 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ದೃಢ ಪ್ರಮಾಣವು ಶೇ 0.66ರಷ್ಟಿದೆ.

9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಹಾವೇರಿ, ರಾಯಚೂರು ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಘ.ಬ.ದಂ.ಕಾ.ಇ. ವಿಭಾಗ-4, ಚಿಕ್ಕೋಡಿ. ದೂ.: 08338-272485, ಫ್ಯಾಕ್ಸ್: 08338-275186

ಸಂ.: KNNL/GRBCC-4/Tender/2021-22/09 ದಿನಾಂಕ: 15.09.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(https://eproc.karnataka.gov.in) 4701 ಅಡಿಯಲ್ಲಿನ 13 ರಸ್ತೆ ಕಾಮಗಾರಿಗಳಿಗೆ** ಮೇಲ್ಕಾಣಿಸಿದ ಪ್ರಕಟಣೆಗಳಲ್ಲಿ ಅರ್ಹ ಗುತ್ತಿಗೆದಾರರಿಗೆ ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ. ವಿವರ : (1) ಟೆಂಡರ್ ಪ್ರಕಟಣೆ ಸಂಖ್ಯೆ: **09 ದಿ: 15.09.2021.** (2) ಇ-ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ಸಂಖ್ಯೆ: **Two Cover System** : Indent No: 31613, 31614, 31615, 31616, 31617, 31649, 31650, 31651, 31611, 31643, 31656, 31673 & 31677. (3) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ : **ರೂ. 53.43 ಲಕ್ಷದಿಂದ 57.98 ಲಕ್ಷಗಳು.** (4) ಟೆಂಡರಿಗೆ ಇಡಲಾದ ಇಎಂಡಿ ಮೊತ್ತ : ----. (5) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ: **22.09.2021ರ 17:00 ಘಂಟೆಯವರೆಗೆ.** (6) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **23.09.2021ರ ಸಂಜೆ 16:00 ಘಂಟೆವರೆಗೆ.** (7) ತಾಂತ್ರಿಕ ಬಿಡ್‌ನ್ನು (ಲಕೋಟೆ-1) ತೆರೆಯುವ ದಿನಾಂಕ: **24.09.2021ರ ಸಂಜೆ 16:30 ಘಂಟೆಗೆ.** (8) ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ-1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ-2) ತೆರೆಯುವ ದಿನಾಂಕ: **ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.**

ಕಾಮಗಾರಿಗಳ ಹೆಸರು / ಗುತ್ತಿಗೆದಾರರ ಅರ್ಹತೆ / ಟೆಂಡರಿನ ನಿಯಮ / ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ **https://eproc.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/-,
ಕಾರ್ಯನಿರ್ವಾಹಕ ಇಂಜಿನೀಯರು
ಕನೀನಿನಿ, ಘಬದಂಕಾನಿ ವಿಭಾಗ-4, ಚಿಕ್ಕೋಡಿ

DIPR/BGM/762/Manipal/2020-21

ಪ್ರಧಾನ ಇಂಜಿನಿಯರ್‌ರವರ ಕಛೇರಿ ಪಿ.ಆರ್.ಎ.ಎಂ.ಸಿ.

4ನೇ ಮಹಡಿ, ಪಿ.ಡಬ್ಲ್ಯೂ.ಡಿ. ಆನೆಕ್ಸ್ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು - 560 001.

ಸಂಖ್ಯೆ: ಪ್ರ.ಇಂ/05/ಪಿಆರ್‌ಎಎಂಸಿ/ರಸು/2021-22/538 ದಿನಾಂಕ: 16/09/2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಬೀದರ್ ಜಿಲ್ಲೆಯ 02 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ. ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(www.eproc.karnataka.gov.in)** ನಿಂದ **ದಿನಾಂಕ : 17.09.2021** ರಿಂದ ಪಡೆಯಬಹುದಾಗಿರುತ್ತದೆ. ಟೆಂಡರ್ ಅನ್ನು ದಿನಾಂಕ **24.09.2021ರ ಸಂಜೆ 5.30ರೊಳಗಾಗಿ** ಇ-ಪ್ರೊಕ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಪ್ರಧಾನ ಇಂಜಿನಿಯರ್‌ರವರ ಕಛೇರಿ, ಪಿ.ಆರ್.ಎ.ಎಂ.ಸಿ. ಬೆಂಗಳೂರು ಇಲ್ಲಿ ಪಡೆಯಬಹುದಾಗಿರುತ್ತದೆ. ಇ-ಮೇಲ್ : cepramc@kpwd.gov.in

ಸಹಿ/-
ಕಾರ್ಯಪಾಲಕ ಇಂಜಿನಿಯರ್

ವಾಸಾಸಂಇ/ಬೆಂನ/ಜಿಎ/1538/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತುಮಕೂರು ಲೋಕಸಭಾಕ್ಷೇತ್ರಕ್ಕೆ ಸಂಬಂಧಿಸಿದ ಎಸ್.ಸಿ.ಪಿ ಕಾಮಗಾರಿಗೆ "ಶೇಕಡಾವಾರು ದರಗಳಲ್ಲಿ" ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರರಿಂದ, ಟೆಂಡರ್‌ಗಿಟ್ಟ ಮೊತ್ತ ರೂ.92.00 ಲಕ್ಷಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನ https://eproc.karnataka.gov.in ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ದಾಖಲೆಗಳನ್ನು ದಿನಾಂಕ: **17.09.2021** ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **24.09.2021** ರಂದು ಘಂಟೆ 17:00ರವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್‌ನ ಅಂದಾಜು ಮೊತ್ತ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ/ ಪ್ರೀ ಬಿಡ್ ಸಭೆ/ ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ ಟೆಂಡರ್ ಪ್ರಕಟಣೆ ಇತ್ಯಾದಿ ವಿವರಗಳಿಗೆ https://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: **24.09.2021** ರಂದು ಘಂಟೆ 15:00ರವರೆಗೆ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ-ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816-2201844, ಇಮೇಲ್ ವಿಳಾಸ- eeypd2tmk@gmail.com

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ

ಆಕಾಶವಾಣಿ ರಸ್ತೆ, ಸಿ.ಕೆ.ಪುರ, ಚಿತ್ರದುರ್ಗ - 577 501
ದೂರವಾಣಿ ಸಂ: 08194-222984 | e-mail: cuda.cta@rediffmail.com

ಸಂ. ಚಿನಪ್ರಾ/ಸಕಾಅ/ಟೆಂಡರ್/2021-22 ದಿನಾಂಕ:15.09.2021

ವಾಣಿಜ್ಯ ನಿವೇಶನ ಇ-ಹರಾಜು ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿದ ಕೆಂಚನಕಟ್ಟೆ ಧವಳಗಿರಿ ಬಡಾವಣೆಯಲ್ಲಿ ವಾಣಿಜ್ಯ ನಿವೇಶನವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನಗರಾಭಿವೃದ್ಧಿ ಪ್ರಾಧಿಕಾರದಿಂದ ಇ-ಹರಾಜು ಮೂಲಕ ವಿಲೇ ಮಾಡಲು ಉದ್ದೇಶಿಸಲಾಗಿರುತ್ತದೆ. ಇ-ಹರಾಜಿನ ಪ್ರಕ್ರಿಯೆಯು ಪ್ರಾರಂಭವಾಗುವ ದಿನಾಂಕ ಹಾಗೂ ಸಮಯ **ದಿನಾಂಕ:15.09.2021 ಮುಂಜಾನೆ 11:00 ಗಂಟೆಯಿಂದ.** ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಪ್ರೊಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ ಪಾವತಿಸುವ ಕೊನೆಯ ದಿನಾಂಕ ಹಾಗೂ ಸಮಯ **ದಿನಾಂಕ: 29.09.2021 ಸಾಯಂಕಾಲ 6:00 ಗಂಟೆಯವರೆಗೆ,** ಇ-ಹರಾಜಿನಲ್ಲಿ ಬಿಡ್ ಮಾಡುವ ಸಮಯ **ದಿನಾಂಕ: 30.09.2021 ರ ಬೆಳಗ್ಗೆ 10:00 ಗಂಟೆಯಿಂದ ಸಾಯಂಕಾಲ 6:00 ಗಂಟೆಗೆ** ಮುಕ್ತಾಯಗೊಳ್ಳುತ್ತದೆ, (ಡೆಲ್ಟಾ ಟೈಮ್ 5:00 ನಿಮಿಷ), ಇ-ಹರಾಜಿಗಾಗಿ ನಿವೇಶನಗಳ ಕನಿಷ್ಠ ದರವನ್ನು ಪ್ರತಿ ಚದರ ಮೀಟರ್ ಒಂದಕ್ಕೆ **ರೂ. 30,128/-ಪ್ರತಿ ಚದರ ಅಡಿ ಒಂದಕ್ಕೆ ರೂ.2800/-** ರಂತೆ ನಿಗಧಿಪಡಿಸಲಾಗಿದೆ. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಧವಳಗಿರಿ ಬಡಾವಣೆಯಲ್ಲಿರುವ ಖಾಲಿ ಇರುವ 03 ವಾಣಿಜ್ಯ ನಿವೇಶನಗಳು. ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜಿನ ಸಂಬಂಧ ಷರತ್ತು, ನಿಯಮ, ನಿಬಂಧನೆಗಳ ವಿವರಗಳನ್ನು ವೈಬ್‌ಸೆಟ್ **https://eproc.karnataka.gov.in** ನಲ್ಲಿ ಪಡೆಯಬಹುದಾಗಿದ್ದು ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯ ವೇಳೆಯಲ್ಲಿ ಕಚೇರಿಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ ಹಾಗೂ ಇ-ಹರಾಜಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ವಿವರ ಈ ಕೆಳಕಂಡಂತೆ ಇರುತ್ತದೆ

ಕ್ರಸಂ	ಇಂಡೆಂಟ್ ಸಂಖ್ಯೆ	ನಿವೇಶನ ಅಳತೆ
1	CUDA/2021-22/AUCTION11	35+32.06/2 x 33.10+24.79/2=970.69 ಚದರ ಮೀಟರ್
2	CUDA/2021-22/AUCTION12	16.03+15.75/2 x 19.70+19.70/2=313.03 ಚದರ ಮೀಟರ್
3	CUDA/2021-22/AUCTION13	16.03+15.75/2 x 19.70+19.70/2=313.03 ಚದರ ಮೀಟರ್

ಸಹಿ/- ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ
ಸಹಿ/- ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ

ವಾಸಾಸಂಇ/ಚಿತ್ರದುರ್ಗ/ಜಿಎ/460/2021-22

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2020-21 ದಿನಾಂಕ: 16-09-2021

ಅಲ್ಪಾವಧಿ ಇ-ಟೆಂಡರ ಅಧಿಸೂಚನೆ

ಉಲ್ಲೇಖ : ಜಾಹೀರಾತು ನಂ:- 222 ದಿನಾಂಕ:-26-06-2021

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸನ್ 2020-21 ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿಯ ಅನುದಾನ, ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD/HDMC/ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೊಕ್ಯೂರಮೆಂಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿಯ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳು
1) ಇಂಡೆಂಟ್ ನಂ-118203 ರೂ. **15.00** ಲಕ್ಷ

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು.
2) ಇಂಡೆಂಟ್ ನಂ-118204 ರೂ. **44.00** ಲಕ್ಷ

ಮರು ಕರೆ ಕಾಮಗಾರಿಗಳು

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳು
3) ಇಂಡೆಂಟ್ ನಂ-116355 ರೂ. **5.30** ಲಕ್ಷ (2ನೇ ಕರೆ)

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು.
(4) ಇಂಡೆಂಟ್ ನಂ-114376 ರೂ. **27.00** ಲಕ್ಷ (2ನೇ ಕರೆ) (5) ಇಂಡೆಂಟ್ ನಂ-116377 ರೂ. **3.70** ಲಕ್ಷ (2ನೇ ಕರೆ) (6) ಇಂಡೆಂಟ್ ನಂ-116448 ರೂ. **24.00** ಲಕ್ಷ (2ನೇ ಕರೆ) (7) ಇಂಡೆಂಟ್ ನಂ-116806 ರೂ. **9.50** ಲಕ್ಷ (2ನೇ ಕರೆ) (8) ಇಂಡೆಂಟ್ ನಂ-116351 ರೂ. **2.20** ಲಕ್ಷ (2ನೇ ಕರೆ) (9) ಇಂಡೆಂಟ್ ನಂ-116449 ರೂ. 13.50ಲಕ್ಷ (2ನೇ ಕರೆ) (10) ಇಂಡೆಂಟ್ ನಂ-116533 ರೂ. **15.00** ಲಕ್ಷ (2ನೇ ಕರೆ) (11) ಇಂಡೆಂಟ್ ನಂ-116376 ರೂ. **4.10** ಲಕ್ಷ (2ನೇ ಕರೆ) (12) ಇಂಡೆಂಟ್ ನಂ-116380 ರೂ. **2.60** ಲಕ್ಷ (2ನೇ ಕರೆ) (13) ಇಂಡೆಂಟ್ ನಂ-116373 ರೂ. **6.10** ಲಕ್ಷ (2ನೇ ಕರೆ) (14) ಇಂಡೆಂಟ್ ನಂ-116334 ರೂ. **5.70** ಲಕ್ಷ (2ನೇ ಕರೆ) (15) ಇಂಡೆಂಟ್ ನಂ-116440 ರೂ. **22.00** ಲಕ್ಷ (3ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ : 0836-2213834 ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ **http:/ www.eproc.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರಮೆಂಟ್‌ನಲ್ಲಿ ದಿ : **17-09-2021** ರಿಂದ ಪಡೆಯಬಹುದಾಗಿದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **24-09-2021** ರಂದು ಸಾಯಂಕಾಲ 4.00 ಘಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ : **27-09-2021** ಸಾಯಂಕಾಲ 4.30 ಘಂಟೆಯ ನಂತರ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾಸಾಸಂಇ/ಧಾ/ಎಂಸಿಎ/502/2021-22

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯಿತಿ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ದೂರವಾಣಿ ಸಂಖ್ಯೆ:08262-220936 E-Mail: zpedckm@rediffmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:ಸ/ಅ.ಟೆಂ.03/2020-21(21-22) 3ನೇ ಕರೆ ದಿ :16.09.2021

-:ಅಲ್ಪಾವಧಿ ಟೆಂಡರ್ ಪ್ರಕಟಣೆ:- (3ನೇ ಕರೆ)

ಕಾರ್ಯ ಪಾಲಕ ಇಂಜಿನಿಯರ್, ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕು ಬಿ.ಟಿ, ರಸ್ತೆಯಿಂದ ಹಳೆಬಾಳೇಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಅಂದಾಜು ಮೊತ್ತ ರೂ.40.00 ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KW-2 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು, ಸದರಿ ಕಾಮಗಾರಿಗೆ ಇ-ಪ್ರೊಕ್ಯೂರ್ ಮೆಂಟ್ ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿನಾಂಕ:16.09.2021 ರಿಂದ ದಿನಾಂಕ:27.09.2021 ರವರೆಗೆ ಸಂಜೆ 5.00 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ: 29.09.2021 ರಂದು ಸಂಜೆ 5.05 ಗಂಟೆಗೆ ತೆರೆಯಲಾಗುವುದು. ಈ ದಿನಾಂಕ ದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು, ಪ್ರಕಟಣೆಯನ್ನು www.eproc.karnataka.gov.in ನಲ್ಲಿ ಓದಿಕೊಳ್ಳುವುದು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಟ್, ಶೇಷಾದ್ರಿ ರೋಡ್, Opp. S.J.P College, ಕೆ.ಆರ್.ಸರ್ಕಲ್, ಬೆಂಗಳೂರು-560001. ಮಿಂಚ್ ಅಂಚೆ: ad.kdlws@gmail.com, md.ksmscl@gmail.com

No: HFW/KSMSCL/EQPT/Covid-19/RTPCRCons/73/2021-22 Date:16/09/2021

ಟೆಂಡರ್ ಪ್ರಕಟಣೆ

ಉಲ್ಲೇಖ: 1) ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/EQPT/Covid-19/RTPCRCons/73/2021-22 Date:15/09/2021. ಕೆ.ಎಸ್.ಎಂ.ಎಸ್.ಸಿ.ಎಲ್. ವೆಬ್‌ಸೈಟ್ **ವ್ಯವಸ್ಥೆಯಡಿಯಲ್ಲಿ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ ನಿಯಮಾನುಸಾರ ಈ ಕೆಳಕಂಡ ಟೆಂಡರನ್ನು ರಾಷ್ಟ್ರವ್ಯಾಪ್ತಿಯಲ್ಲಿ ದರಪಟ್ಟಿ ಮುಖಾಂತರ ಕರೆಯಲಾಗಿದೆ. **1) ಕೋವಿಡ್-19 ಗೆ ಅವಶ್ಯವಿರುವ RTPCR Consumables ಗಳಿಗೆ IFQ ಮುಖಾಂತರ ಕರೆಯುವ ಬಗ್ಗೆ.** ಕೆ.ಎಸ್.ಎಂ.ಎಸ್.ಸಿ.ಎಲ್. ವೆಬ್‌ಸೈಟ್ ಇಲಾಖೆಯಲ್ಲಿ ನೋಂದಾಯಿಸಿರುವ ಟೆಂಡರ್‌ದಾರರು ವೆಬ್‌ಸೈಟ್ ವ್ಯವಸ್ಥೆ ಮೂಲಕ ಭಾಗವಹಿಸಬಹುದು. ತಾಂತ್ರಿಕ ವಿವರಣೆ, ಷರತ್ತು, ನಿಬಂಧನೆಗಳು, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಟೆಂಡರ್ ವ್ಯವಸ್ಥೆಯಡಿಯಲ್ಲಿ ಇ-ಮೇಲ್ ಐಡಿ **ksdlwscovid19. procurement@gmail.com** ದಿನಾಂಕ: **15/09/2021 ರಿಂದ** ಟೆಂಡರ್‌ನ ದಸ್ತಾವೇಜುಗಳನ್ನು **KSMSCL www.ksmscl.kar.nic.in** ವೆಬ್‌ಸೈಟ್ ಮುಖಾಂತರ ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.

ವಾಸಾಸಂಇ/ಬೆಂ.ನ./ಜಿಎ/1540/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ.

ಸಂಖ್ಯೆ: ಮನಪಾಬ/ತಾಂ/ಎಂ.ಜಿ.ಎನ್.ವಿ.ವೈ./ಪ್ಯಾ-3/2020-21(2021-22)
ದಿನಾಂಕ:13.09.2021

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬಳ್ಳಾರಿ ಮಹಾನಗರಪಾಲಿಕೆವತಿಯಿಂದ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ ಪ್ಯಾಕೇಜ್ 3 ರ 03 ಕಾಮಗಾರಿಗಳಿಗೆ ಟೆಂಡರ್ ಅಹ್ವಾನಸಲಾಗಿದೆ. ಇಂಡೆಂಟ್ ಸಂಖ್ಯೆ: 1) DMA/ 2020-21/ RD/ WORK_INDENT 115243/Call-2. ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: 16.09.2021 ರಿಂದ 01.10.2021 ರ ಸಂಜೆ 4.00 ಗಂಟೆ ಒಳಗಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ದಿನಾಂಕ: 01.10.2021 ರಂದು ಸಂಜೆ 5.30 ರ ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. ಮತ್ತು ದಿನಾಂಕ:04.10.2021 ರ ಬೆಳಿಗ್ಗೆ 11.30 ಗಂಟೆಗೆ ಸದರಿ ಟೆಂಡರ್ ತೆರೆಯುಲಾಗುವುದು ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್:http://eproc.karnataka.gov.in ಅನ್ನು ಮತ್ತು www.ballaricity.mrc.gov.in ಅನ್ನು ಗಮನಿಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/- ಆಯುಕ್ತರು, ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/343/ಎಂಸಿಎ/2021-22

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಜಲಭವನ, ನಂ. 5/6, 5ನೇ ಮಹಡಿ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು - 560 029. ದೂ: 080-26539004/41106504
ಇ-ಮೇಲ್: cekwbbng@gmail.com ವೆಬ್‌ಸೈಟ್: https://eproc.karnataka.gov.in

ಟೆಂಡರ್ ಪ್ರಕಟಣೆ ಕರೆ-2
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಸಂಖ್ಯೆ: KUWSDB/TEC/CE/TPI-Mat Call2/1093/2021-22 date: 15-09-2021

ಕಾಮಗಾರಿ ವಿವರ: 1) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿವತಿಯಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳಿಗೆ ಅವಶ್ಯಕವಿರುವ ಸಾಮಗ್ರಿಗಳನ್ನು ಉತ್ಪಾದನಾ ಕೇಂದ್ರದಲ್ಲಿ ಮೂರನೇ ವ್ಯಕ್ತಿಯಿಂದ ತಪಾಸಣೆಗೊಳಿಸುವ ಸೇವೆ. Work Indent No: KUWSDB/2020-21/TPI Mat/2644 Call-2

ಭದ್ರತಾ ಠೇವಣಿ ಹಣ: ರೂ.2,00,000/-. ಟೆಂಡರ್ ಪ್ರಕ್ರಿಯೆ ಶುಲ್ಕ : ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ

ಟೆಂಡರ್ ಕಾರ್ಯ ಸೂಚಿ:-

1) ದಾಖಲೆಗಳ ಲಭ್ಯತೆ ದಿನಾಂಕ 17.09.2021 ರ 11.30 ಗಂಟೆಯ ನಂತರ. 2) ವಿಚಾರಣೆ/ಸ್ಪಷ್ಟತೆಗಳಿಗೆ ಕೊನೆಯ ದಿನಾಂಕ ಹಾಗೂ ಸಮಯ 24.09.2021 ರ 11.00 ಗಂಟೆಯವರೆಗೆ. 3) ಪೂರ್ವ ಬಿಡ್ ಸಭೆಯ ದಿನಾಂಕ ಹಾಗೂ ಸಮಯ 24.09.2021 ರ 11.00 ಗಂಟೆ ನಂತರ. 4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯ 01.10.2021 ರ 17.30 ಗಂಟೆಯವರೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ 04.10.2021 ರ 11.00 ಗಂಟೆಯ ನಂತರ. 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ ಅರ್ಹತೆ ಪಡೆದ ಟೆಂಡರ್‌ದಾರರಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು.

ಹೆಚ್ಚಿನ ವಿವರಗಳನ್ನು ಮುಖ್ಯ ಅಭಿಯಂತರರು, ಕ.ನ.ನೀ.ಸ ಮತ್ತು ಒ.ಚ. ಮಂಡಳಿ, ಬೆಂಗಳೂರು ರವರ ಕಚೇರಿ ಅಥವಾ ವೆಬ್‌ಸೈಟ್: (https://eproc.karnataka.gov.in) ನಲ್ಲಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080- 91 80 22371090 / 22373788, ಇ-ಮೇಲ್ ಸಹಾಯ: hphelpdesk.blr@intarvo.com ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರರು
ಕನನಿಸ ಮತ್ತು ಒಚ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ಬೆಂ.ನಗರ/1534/ಆಕಾರ್/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ


ಲಸಿಕಾ ಮೇಳ: 34 ಲಕ್ಷ ಡೋಸ್ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕಾ ಮೇಳವನ್ನು ಶುಕ್ರವಾರ ಹಮ್ಮಿಕೊಳ್ಳಲಾಗಿದ್ದು, ಒಂದೇ ದಿನ 34 ಲಕ್ಷ ಡೋಸ್ ಲಸಿಕೆ ವಿತರಿಸುವ ಗುರಿಯನ್ನು ರಾಜ್ಯ ಸರ್ಕಾರ ಹಾಕಿಕೊಂಡಿದೆ.

ಸರ್ಕಾರಿ ಆಸ್ಪತ್ರೆಗಳ ಜೊತೆಗೆ ಆಯ್ದ ಖಾಸಗಿ ಆಸ್ಪತ್ರೆಗಳಲ್ಲಿಯೂ ಉಚಿತವಾಗಿ ಲಸಿಕೆ ಒದಗಿಸಲಾಗುತ್ತದೆ. ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳ ಸಹಯೋಗದಲ್ಲಿ ಲಸಿಕೆ ವಿತರಿಸಲು ಯೋಜನೆ ರೂಪಿಸಲಾಗಿದೆ. 12,700 ಸರ್ಕಾರಿ ಕೇಂದ್ರಗಳು ಹಾಗೂ 300 ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ನೀಡಲಾಗುತ್ತದೆ.

'ದೇಶದಲ್ಲಿ ಉತ್ತರ ಪ್ರದೇಶದ ಬಳಿಕ ಅತೀ ಹೆಚ್ಚು ಡೋಸ್ ನೀಡಿದ ರಾಜ್ಯ ಕರ್ನಾಟಕ. ಆಗಸ್ಟ್ ತಿಂಗಳಲ್ಲಿ 1.10 ಕೋಟಿ ಡೋಸ್‌ಗಳು ಲಸಿಕೆಯನ್ನು ನೀಡಲಾಗಿದೆ. ನವೆಂಬರ್ ಅಂತ್ಯಕ್ಕೆ ರಾಜ್ಯದ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಎರಡು ಡೋಸ್ ಲಸಿಕೆ ನೀಡುವ ಗುರಿಯನ್ನು ಹಾಕಿಕೊಳ್ಳಲಾಗಿದೆ. ವಾರದಲ್ಲಿ ಬುಧವಾರ 15 ಲಕ್ಷ ಡೋಸ್‌ಗಳು ಹಾಗೂ ಉಳಿದ ದಿನ 5 ಲಕ್ಷ ಡೋಸ್‌ಗಳನ್ನು ನೀಡುವ ಗುರಿಯಿದ್ದು, ಅಗತ್ಯತೆಗೆ ಅನುಗುಣವಾಗಿ ಲಸಿಕೆ ಪೂರೈಸಲು ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.



ರಾಜ್ಯದಲ್ಲಿ ಈವರೆಗೆ ಲಸಿಕೆಯ 4.84 ಕೋಟಿಗೂ ಅಧಿಕ ಡೋಸ್‌ಗಳನ್ನು ವಿತರಿಸಲಾಗಿದೆ. 3.56 ಕೋಟಿ ಮಂದಿ ಈವರೆಗೆ ಮೊದಲ ಡೋಸ್ ಹಾಗೂ 1.28 ಕೋಟಿ ಮಂದಿ ಎರಡನೇ ಡೋಸ್ ಪಡೆದುಕೊಂಡಿದ್ದಾರೆ.

ನಗರ ಭೂ ಸಾರಿಗೆ ನಿರ್ದೇಶನಾಲಯ ನಗರಾಭಿವೃದ್ಧಿ ಇಲಾಖೆ

ಆಯುಕ್ತರ ಕಾರ್ಯಾಲಯ, ನಗರ ಭೂ ಸಾರಿಗೆ, ಬಿಎಂಟಿಸಿ, ಟಿಟಿಎಂಸಿ 'ಬಿ' ಬ್ಲಾಕ್, (ಬಸ್ ಸ್ಟ್ಯಾಂಡ್ ಮೇಲ್ಭಾಗ) 4ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560027. ದೂ: 080-22226627 / 6628, ಫ್ಯಾಕ್ಸ್: 080-22226630
ಇ-ಮೇಲ್: dultbangalore@gmail.com

No.: DULT-TECH/22/2021 Date: 16.09.2021

ಟೆಂಡರ್ ಅಧಿಸೂಚನೆ
(ಇ-ಸಂಗ್ರಹಣಾ ಪೋರ್ಟಲ್ ಮುಖಾಂತರ ಮಾತ್ರ)

ನಗರ ಭೂ ಸಾರಿಗೆ ನಿರ್ದೇಶನಾಲಯ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರುರವರ ಸಹಯೋಗದಲ್ಲಿ ಕರ್ನಾಟಕದಲ್ಲಿ ಸಾರಿಗೆ ಸಮೀಕ್ಷೆಗಳನ್ನು ನಡೆಸುವ ಸಲುವಾಗಿ ಅರ್ಹ ಸಂಸ್ಥೆಗಳನ್ನು ಪಟ್ಟಿಯಲ್ಲಿ ಸೇರಿಸಲು **"ಕರ್ನಾಟಕದಲ್ಲಿ ಸಾರಿಗೆ ಸಮೀಕ್ಷೆಗಳು"** ಎಂಬ ಪೂರ್ವ ಅರ್ಹತಾ ಟೆಂಡರುಗಳನ್ನು ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದ ದಾಖಲಾತಿಗಳು, ದಿನಾಂಕ: **17.09.2021**ರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲಭ್ಯವಾಗುವವು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **20.10.2021.** ಉಳಿದ ಷರತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/-
ವಿಶೇಷಾಧಿಕಾರಿ, ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ

DIPR/DDU/1543/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ವಿಷ್ಣುವರ್ಧನ್ ಮರಳು ಶಿಲ್ಪ

ಮರಳಿನಲ್ಲಿ ಅರಳಿದ ವಿಷ್ಣುವರ್ಧನ್!

ಬೆಂಗಳೂರು: ಮರಳು ಶಿಲ್ಪ ಕಲೆಯ ತವರೂರು ಎಂದೇ ಖ್ಯಾತಿ ಪಡೆದಿರುವ ಒಡಿಶಾದ ಪುರಿಯ ಮೆರೀನ್ ಡ್ರೈವ್ ಬೀಚ್‌ನಲ್ಲಿ ಇದೇ ಮೊದಲ ಬಾರಿಗೆ ಕನ್ನಡ ಕಲಾವಿದರೊಬ್ಬರ ಮರಳು ಶಿಲ್ಪ ಅರಳಿದೆ.

ಇದೇ 18ರಂದು ಕನ್ನಡದ ಮೇರುನಟ ದಿವಂಗತ ವಿಷ್ಣುವರ್ಧನ್ ಅವರ 71ನೇ ಜನ್ಮದಿನ. ಇದೇ ಸಂದರ್ಭದಲ್ಲಿ ಹೆಸರಾಂತ ಮರಳು ಶಿಲ್ಪಿ ಮನೀಶ್ ಕುಮಾರ್ ಅವರು ವಿಷ್ಣುವರ್ಧನ್ ಅವರ ಮರಳು ಶಿಲ್ಪವನ್ನು ರಚಿಸಿದ್ದಾರೆ. 'ಜೈ ಕನ್ನಡ. ಭಾರತೀಯ ಸಿನಿಮಾದ ಹೆಮ್ಮೆ ಡಾ.ವಿಷ್ಣುವರ್ಧನ್' ಎನ್ನುವ ಅಡಿಬರಹದೊಂದಿಗೆ ವಿಷ್ಣುವರ್ಧನ್ ಅವರ 6 ಅಡಿ ಎತ್ತರ ಮತ್ತು 15 ಅಡಿ ಅಗಲದ ಮರಳು ಶಿಲ್ಪ ಅರಳಿದೆ. ಇದಕ್ಕೆ ಅಗತ್ಯ ಹಣಕಾಸು ನೆರವನ್ನು ವೀರಕಪುತ್ರ ಶ್ರೀನಿವಾಸ ಅವರು ಒದಗಿಸಿದ್ದಾರೆ.

ಗಣಿ ಮತ್ತು ಭೂವಿಜ್ಞಾನ ಇಲಾಖೆ

#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01
ಇ-ಮೇಲ್: dir-mines@karnataka.gov.in

ಸಂ.: ಡಿಎಂಜಿ-17012/7/2021/2021-22 ಸಿ.ಸಂ. 566820 ದಿನಾಂಕ: 15.09.2021

ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ

"ಕಬ್ಬಿಣ ಅದಿರಿನ ಗಣಿಗಾರಿಕೆಗೆ ಗಣಿ ಗುತ್ತಿಗೆ ನೀಡಲು ಬಿಡ್‌ಗಳ ಆಹ್ವಾನ"

Mines and Minerals (Development and Regulation) Act, 1957 ರ ಸೆಕ್ಷನ್ 10(ಬಿ)ಯ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 and Mineral (Auction) Amendment Rules, 2015 ಮತ್ತು ಅದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರ್ಕಾರವು ಕಬ್ಬಿಣದ ಅದಿರಿನ ಗಣಿ ಗುತ್ತಿಗೆಗಳನ್ನು ನೀಡಲು ಎಲೆಕ್ಟ್ರಾನಿಕ್ ಹರಾಜಿಗೆ ಒಳಪಡಿಸಲು ಪ್ರದೇಶಗಳನ್ನು ಗುರುತಿಸಿದೆ.

ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವವರು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಹರಾಜಿಗೆ ಒಳಪಡಿಸಿದ ಪ್ರದೇಶಗಳ ವಿವರ ಈ ಕೆಳಕಂಡಂತಿದೆ:

Sl. No.	Name of the mine	Mineral	Concession Area (in Ha.)	Estimated resources (in MMT)
1.	M/s. Auto Minerals (ML. No. 2584)	Iron ore	32.05	6.72
2.	M/s. Gogga Gurushanthaiah and Brothers (ML. No. 2586)	Iron ore	15.25	0.562
3.	M/s. Tiffin's Barytes, Asbestos and Paints Limited (ML. No. 2293)	Iron ore	191.30	18.381

ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ.

ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ-ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತ **(https://www.mstcecommerce.com/ auctionhome/mlcl/index.jsp)** ದಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು.

ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ **(https://www.mstcecommerce.com/auctionhome/mlcl/index.jsp)** ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ **ರೂ. 5,00,000/-** (ಐದು ಲಕ್ಷ ರೂಪಾಯಿಗಳು ಮಾತ್ರ) + ಜಿಎಸ್‌ಟಿ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.

ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: **15.09.2021** ರಿಂದ ಆಸಕ್ತ ಬಿಡ್‌ದಾರರಿಗೆ ಮೇಲ್ಕಂಡ ಎಂ.ಎಸ್.ಟಿ.ಸಿ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು ದಿನಾಂಕ: **28.10.2021** ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್‌ಸೈಟ್‌ನಲ್ಲಿ ದಿನಾಂಕ: **08.11.2021ರ 17.00 ಗಂಟೆಗೆ** ಅಥವಾ ಅದರೊಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ದಿನಾಂಕ: **08.11.2021 ರ 17.00 ಗಂಟೆಗೆ** ಅಥವಾ ಅದರೊಳಗೆ ಸಲ್ಲಿಸಬೇಕಾಗುತ್ತದೆ.

ಸಹಿ/- ನಿರ್ದೇಶಕರು

ಗಣಿ ಮತ್ತು ಭೂವಿಜ್ಞಾನ ಇಲಾಖೆ

49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
ಇ-ಮೇಲ್: dir-mines@karnataka.gov.in

ಸಂ: ಡಿಎಂಜಿ-17012/7/2021/2021-22/ಸಿ.ನಂ:566820 ದಿನಾಂಕ:15.09.2021

ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ

"ಸುಣ್ಣದ ಕಲ್ಲಿನ ಗಣಿಗಾರಿಕೆಗೆ ಗಣಿ ಗುತ್ತಿಗೆ ನೀಡಲು ಬಿಡ್‌ಗಳ ಆಹ್ವಾನ"

Mines and Minerals (Development and Regulation) Act, 1957 ರ ಸೆಕ್ಷನ್ 10(ಬಿ)ಯ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 and Mineral (Auction) Amendment Rules, 2015 ಮತ್ತು ಅದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರ್ಕಾರವು ಸುಣ್ಣದ ಕಲ್ಲಿನ ಗಣಿ ಗುತ್ತಿಗೆಗಳನ್ನು ನೀಡಲು ಎಲೆಕ್ಟ್ರಾನಿಕ್ ಹರಾಜಿಗೆ ಒಳಪಡಿಸಲು ಹೊಸ ಪ್ರದೇಶವನ್ನು ಗುರುತಿಸಿದೆ.

ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವವರು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಹರಾಜಿಗೆ ಒಳಪಡಿಸಿದ ಪ್ರದೇಶಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಬ್ಲಾಕ್ ಹೆಸರು	ವಿಸ್ತೀರ್ಣ (ಹೆ.ಗಳಲ್ಲಿ)	ಅಂದಾಜಿಸಲಾದ ಖನಿಜ ಸಂಪನ್ಮೂಲ (ಎಂಎಂಟಿ)
1	ಹನಮನೇರಿ ಸುಣ್ಣದ ಕಲ್ಲಿನ ಬ್ಲಾಕ್	430	147.9
2	ರಾವೂರ ಸುಣ್ಣದ ಕಲ್ಲಿನ ಬ್ಲಾಕ್	713	708.2

ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ.

ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ-ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತ **(https://www.mstcecommerce.com/auctionhome/mlcl/index.jsp)** ದಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು.

ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ **(https://www.mstcecommerce.com/auctionhome/mlcl/index.jsp)** ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ **ರೂ.5,00,000/-** (ಐದು ಲಕ್ಷ ರೂಪಾಯಿಗಳು ಮಾತ್ರ) + ಜಿಎಸ್‌ಟಿ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ನ ಟೆಂಡರ್ ದಸ್ತಾವೇಜುಗಳನ್ನು ಎಂ.ಎಸ್.ಟಿ.ಸಿ. ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.

ಟೆಂಡರ್ ದಸ್ತಾವೇಜುಗಳು **ದಿನಾಂಕ: 15.09.2021 ರಿಂದ** ಆಸಕ್ತ ಬಿಡ್‌ದಾರರಿಗೆ ಮೇಲ್ಕಂಡ ಎಂ.ಎಸ್.ಟಿ.ಸಿ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು **ದಿನಾಂಕ: 28.10.2021** ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್‌ಸೈಟ್‌ನಲ್ಲಿ **ದಿನಾಂಕ:08.11.2021ರ 17.00 ಗಂಟೆಗೆ** ಅಥವಾ ಅದರೊಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಇವರಿಗೆ **ದಿನಾಂಕ: 08.11.2021 ರ 17.00 ಗಂಟೆಗೆ** ಅಥವಾ ಅದರೊಳಗೆ ಸಲ್ಲಿಸಬೇಕಾಗುತ್ತದೆ.

ಸಹಿ/-
ನಿರ್ದೇಶಕರು

ಸ್ಫೋಟಕ್ಕೆ ಸಂಚು; ಬೆಂಗಳೂರು, ಮೈಸೂರಿನಲ್ಲಿ ಕಟ್ಟೆಚ್ಚರ

ಬೆಂಗಳೂರು: ಪಾಕಿಸ್ತಾನದ ಐಎಸ್‌ಐ ಬೆಂಬಲದೊಂದಿಗೆ ಭಾರತದಲ್ಲಿ ಭಯೋತ್ಪಾದಕ ದಾಳಿ ನಡೆಸಲು ಸಂಚು ರೂಪಿಸಿದ್ದ ಆರು ಶಂಕಿತ ಉಗ್ರರನ್ನು ದೆಹಲಿ ಪೊಲೀಸರು ಬಂಧಿಸಿದ್ದು, ಕರ್ನಾಟಕದಲ್ಲೂ ಸ್ಫೋಟಕ್ಕೆ ಸಂಚು ರೂಪಿಸಿದ್ದ ಮಾಹಿತಿ ತನಿಖೆಯಿಂದ ಹೊರಬಿದ್ದಿದೆ.

'ಬೆಂಗಳೂರು ಹಾಗೂ ಮೈಸೂರಿನಲ್ಲಿ ಸ್ಫೋಟ ನಡೆಸಲು ಸಂಚು ರೂಪಿಸಿರುವ ಮಾಹಿತಿ ಇದೆ. ಎರಡೂ ನಗರಗಳಲ್ಲಿ ಕಟ್ಟೆಚ್ಚರ ವಹಿಸಿ' ಎಂದು ಕೇಂದ್ರ ಗುಪ್ತದಳದ ಅಧಿಕಾರಿಗಳು, ರಾಜ್ಯದ ಪೊಲೀಸರಿಗೆ ಮಾಹಿತಿ ರವಾನಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್, 'ಭಯೋತ್ಪಾದಕ ಕೃತ್ಯಗಳ ಬಗ್ಗೆ ಎಚ್ಚರಿಕೆ ವಹಿಸಲಾಗಿದೆ. ಬೆಂಗಳೂರಿಗೆ ಬರುವ ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ನಿಗಾ ಇರಿಸಲಾಗಿದೆ. ಚುರುಕಿನಿಂದ ಗಸ್ತು ತಿರುಗುವಂತೆಯೂ ಠಾಣೆಗಳಿಗೆ ಸೂಚನೆ ನೀಡಲಾಗಿದೆ' ಎಂದರು.

'ಉಗ್ರರ ಕೃತ್ಯಗಳನ್ನು ಸಮರ್ಥವಾಗಿ ಎದುರಿಸಲು ಗರುಡ ಪಡೆ ಕಮಾಂಡರ್‌ಗಳು ನಮ್ಮಲ್ಲಿದ್ದಾರೆ. ಅವರೆಲ್ಲರೂ ಶಸ್ತ್ರಸಜ್ಜಿತವಾಗಿ ನಗರದಲ್ಲಿ ಗಸ್ತು ತಿರುಗುತ್ತಿದ್ದಾರೆ' ಎಂದೂ ಹೇಳಿದರು.

'ಜಾತಿ ಗಣತಿ ವರದಿ ಬಹಿರಂಗಪಡಿಸಿ'

ಮೈಸೂರು: 'ಕಾಂತರಾಜ್ ನೇತೃತ್ವದಲ್ಲಿ ಶಾಶ್ವತ ಹಿಂದುಳಿದ ಆಯೋಗ ಸಿದ್ಧಪಡಿಸಿರುವ ಜಾತಿ ಗಣತಿ ವರದಿಯನ್ನು ರಾಜ್ಯ ಸರ್ಕಾರ ಬಹಿರಂಗ ಪಡಿಸಬೇಕು' ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ರಾಜ್ಯ ಘಟಕದ ಅಧ್ಯಕ್ಷ ಡಾ.ಎಂ. ವೆಂಕಟಸ್ವಾಮಿ ಆಗ್ರಹಿಸಿದರು.


ವೆಂಕಟಸ್ವಾಮಿ

'ರಾಜ್ಯದ ಎಲ್ಲ ಜಾತಿ-ಧರ್ಮದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯ ಸಮೀಕ್ಷೆಯುಳ್ಳ ವರದಿಯಿಂದ ಹೊಸ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಸಮುದಾಯಗಳ ಅಭಿವೃದ್ಧಿಗಾಗಿ ವರದಿಯನ್ನು ಅಂಗೀಕರಿಸಬೇಕು' ಎಂದು ಗುರುವಾರ ಇಲ್ಲಿ ನಡೆದ ಪಕ್ಷದ ಸಮಾವೇಶದಲ್ಲಿ ಅವರು ಒತ್ತಾಯಿಸಿದರು.

'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಗೆ (ಪಿಟಿಸಿಎಲ್) ಅಧಿವೇಶನದಲ್ಲಿ ತಿದ್ದುಪಡಿ ತಂದು ದಲಿತರ ಭೂಮಿ ಉಳಿಸಬೇಕು. ಇಲ್ಲದಿದ್ದರೆ ಹೋರಾಟ ಎದುರಿಸಬೇಕಾಗುತ್ತದೆ. ಎನ್‌ಡಿಎ ಅಂಗಪಕ್ಷವಾದರೂ ಆರ್‌ಪಿಐ ಈ ವಿಷಯದಲ್ಲಿ ಮಣಿಯದು' ಎಂದು ಎಚ್ಚರಿಸಿದರು.

'10 ಸಾವಿರ ಗ್ರಾಮ ಸಹಾಯಕರ ಸೇವೆಯನ್ನು ಕಾಯಂಗೊಳಿಸಬೇಕು' ಎಂದು ಒತ್ತಾಯಿಸಿದರು. ಸಾಲಿಗ್ರಾಮದ ವೃತ್ತದಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪನೆಗೆ ಶಾಸಕ ಸಾ.ರಾ.ಮಹೇಶ್ ಅಡ್ಡಿಪಡಿಸಿ ದಲಿತ ವಿರೋಧಿಯಾಗಿದ್ದಾರೆ. ಅವರ ವಿರುದ್ಧದ ಭೂ ಅಕ್ರಮಗಳ ಬಗ್ಗೆ ತನಿಖೆ ನಡೆಸಬೇಕು' ಎಂದೂ ಒತ್ತಾಯಿಸಿದರು.

'ನೆರೆ ಸಂತ್ರಸ್ತರಿಗೆ ಪರಿಹಾರಕ್ಕೆ ಕ್ರಮ'

ಬೆಳಗಾವಿ: 'ಜಿಲ್ಲೆಯಲ್ಲಿ ನೆರೆ ಸಂತ್ರಸ್ತರಲ್ಲಿ ಪರಿಹಾರ ಸಿಗದವರಿಗೆ ಪರಿಹಾರ ಕಲ್ಪಿಸುವ ಬಗ್ಗೆ ವಿಧಾನಮಂಡಲ ಅಧಿವೇಶನ ಮುಗಿದ ಬಳಿಕ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಅವಕಾಶದ ಹಾದಿಯಲ್ಲಿ ಅದ್ವಿತಿ ಹೆಜ್ಜೆ


ಅದ್ವಿತಿ ಶೆಟ್ಟಿ

ಸಮಯ ಮತ್ತು ಅವಕಾಶ ನಮಗಾಗಿ ಕಾಯುವುದಿಲ್ಲ. ಬಂದ ಅವಕಾಶಗಳನ್ನು ಬಳಸುತ್ತಾ ಬೆಳೆಯಬೇಕು. ಪ್ರಯತ್ನದಲ್ಲಿ ಮುಂದುವರಿಯಬೇಕು ಎನ್ನುತ್ತಾ ಕನ್ನಡ – ತುಳು ಚಿತ್ರರಂಗದ ಬಗ್ಗೆ ವಿಶೇಷ ಪ್ರೀತಿ ತೋರಿಸುತ್ತಾ ಮಾತಿಗಿಳಿದವರು 'ಕ್ಯಾಡ್‌ಬರೀಸ್' ನಾಯಕಿ ಅದ್ವಿತಿ ಶೆಟ್ಟಿ. ಲಾಕ್‌ಡೌನ್ ಅವಧಿಯಲ್ಲಿ ಮೂರು ಚಿತ್ರಗಳ ಅವಕಾಶ ಪಡೆದ ಅವರ ಕೈಯಲ್ಲಿ ಈಗ ಮತ್ತೆರಡು ಚಿತ್ರಗಳು ಇವೆ. ಸುಮಾರು 150ಕ್ಕೂ ಹೆಚ್ಚು ಬ್ರಾಂಡ್‌ಗಳ ಜೊತೆ ಕೆಲಸ ಮಾಡುತ್ತಾ ಪೂರ್ಣ ಬ್ಯುಸಿಯಾಗಿದ್ದಾರೆ ಅದ್ವಿತಿ.

ಶರತ್ ಹೆಗ್ಡೆ

- **ಉದ್ಯೋಗಕ್ಕೆಂದು ಬಂದ ಅದ್ವಿತಿ ತಾರೆಯಾಗಿ ಗುರುತಿಸಿಕೊಂಡದ್ದು ಹೇಗೆ?**

– ಹೌದು, ನಾನು ಎಂಬಿಎ ಶಿಕ್ಷಣ ಮುಗಿಸಿ ಬೆಂಗಳೂರಿನ ಕಂಪನಿಯೊಂದರಲ್ಲಿ ಮಾನವ ಸಂಪನ್ಮೂಲ ನಿರ್ವಹಣಾ ಹುದ್ದೆಗೆ ಬಂದಿದ್ದೆ. ಸಿನಿಮಾ ಬಗ್ಗೆ ನನಗೆ ಯಾವ ಆಸಕ್ತಿಯೂ ಇರಲಿಲ್ಲ. ಅದಕ್ಕೂ ಮೊದಲು ಡ್ಯಾನ್ಸ್, ನೂರಕ್ಕೂ ಹೆಚ್ಚು ರಿಯಾಲಿಟಿ ಶೋ, ಕಿರುತೆರೆ ಧಾರಾವಾಹಿ, ಕಿರು ಚಿತ್ರಗಳಲ್ಲಿ ಭಾಗವಹಿಸಿದ ಅನುಭವ ಇತ್ತು ಅಷ್ಟೆ. ಅದ್ಯಾಕೋ 'ಮಿಸ್ಟರ್ ಆ್ಯಂಡ್ ಮಿಸೆಸ್ ರಾಮಾಚಾರಿ...' ಚಿತ್ರ ಈ ಸಿನಿಮಾ ಕ್ಷೇತ್ರದ ಬಾಗಿಲು ತೆರೆಯಿತು. ನಂತರ 'ಸುಳಿ', 'ಫ್ಯಾನ್', 'ಗಿರಿಗಿಟ್ಲೆ', 'ಶುಗರ್ ಫ್ಯಾಕ್ಟರಿ', 'ಐರಾವನ್'ನಿಂದ ಹಿಡಿದು 'ಕ್ಯಾಡ್‌ಬರೀಸ್'ವರೆಗೆ ಅವಕಾಶಗಳನ್ನು ತಂದುಕೊಟ್ಟಿದೆ. ಸಿನಿಪಯಣಕ್ಕೆ ಈಗ 9 ವರ್ಷ ಆಯಿತು ನೋಡಿ.

- **'ಐರಾವನ್', 'ಶುಗರ್ ಫ್ಯಾಕ್ಟರಿ', 'ಕ್ಯಾಡ್‌ಬರೀಸ್' ಪಾತ್ರ ಸ್ವರೂಪ ಹೇಗಿದೆ?**

– ಮೂರೂ ತೀರಾ ಭಿನ್ನವಾದ ಪಾತ್ರಗಳು. 'ಶುಗರ್ ಫ್ಯಾಕ್ಟರಿ'ಯಲ್ಲಿ ನನ್ನದು ಈವೆಂಟ್ ಮ್ಯಾನೇಜರ್ ಪಾತ್ರ. ಹಾಸ್ಯದ ಲೇಪನ ಇದೆ. 'ಐರಾವನ್'ನಲ್ಲಿ ಸಸ್ಪೆನ್ಸ್ ಕಥಾ ಹಂದರ ಸ್ವಲ್ಪ ಗಂಭೀರ ಪಾತ್ರವಿದೆ. 'ಕ್ಯಾಡ್‌ಬರೀಸ್'ನಲ್ಲಿ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಇದೀಗ 'ಧೀರ ಸಾಮ್ರಾಟ್' ನಿರ್ಮಾಣವಾಗುತ್ತಿದೆ. 'ಡಾ.ಅಭಿ 007' ಸೆಟ್ಟೇರಿದೆ.

- **ಚಿತ್ರರಂಗಕ್ಕೆ ಬಂದಾಗ ಎದುರಿಸಿದ ಸವಾಲುಗಳು ಏನು?**

– ಹೌದು, ಮೊದಲೇ ಹೇಳಿದೆನಲ್ಲಾ, ಈ ಕ್ಷೇತ್ರದ ಬಗ್ಗೆ ಅಂಥ ಆಸಕ್ತಿ ಅಥವಾ ಯೋಜನೆಯಾಗಲಿ ನನಗಿರಲಿಲ್ಲ. ಇಲ್ಲಿಗೆ ಬಂದಾಗ ನನಗೆದುರಾದದ್ದು ಭಾಷೆ. ನಮ್ಮದು ಕರಾವಳಿ ಭಾಗದ ಕನ್ನಡ ಆಗಿದ್ದರಿಂದ ಅದನ್ನು ಇಲ್ಲಿನ ಶೈಲಿಗೆ ಒಗ್ಗಿಸಿಕೊಳ್ಳುವುದೇ ಸವಾಲಾಗಿತ್ತು. ಅದನ್ನು ಕಲಿತೆ. ಈಗ ನನ್ನ ಚಿತ್ರಗಳಿಗೆ ನಾನೇ ಧ್ವನಿ ಕೊಡುತ್ತೇನೆ. ಬ್ರಾಂಡ್ ಕುರಿತ ಪ್ರಮೋಷನ್ ಯೋಜನೆಗಳಿಗೆ ನಾನೇ ಪರಿಕಲ್ಪನೆ ಹಾಗೂ ಸ್ಕ್ರಿಪ್ಟ್ ಸಿದ್ಧಪಡಿಸುತ್ತೇನೆ. ಈ ಕಲಿಕೆಯ ಕಾರಣದಿಂದಾಗಿ ಕನ್ನಡ ಚಿತ್ರರಂಗ ನನ್ನನ್ನು ಸ್ವೀಕರಿಸಿದೆ.

- **ಕನ್ನಡದಿಂದಾಚೆಗಿನ ಅವಕಾಶಗಳು ಬಂದಿವೆಯೇ?**

– ನನಗೆ ಗೊತ್ತಿರುವುದು ಸಿನಿಮಾ ಅಂದರೆ ಒಂದೇ ಭಾಷೆ. ಅದಕ್ಕೆ ನಾವು ನಿರ್ದಿಷ್ಟ ಭಾಷೆಯ ಗೋಡೆ ಕಟ್ಟಿ ಸೀಮಿತಗೊಳಿಸುವುದಿಲ್ಲ. ಅವಕಾಶಗಳು ಬರಬೇಕು. ಅದರಂತೆ ಕೆಲಸ ಮಾಡುತ್ತಾ ಹೋಗಬೇಕು. ಯಾವುದೇ ಅವಕಾಶ, ಸಮಯ ಮತ್ತು ನಮ್ಮ ವಯಸ್ಸು ಕಾಯುತ್ತಾ ಕೂರುವುದಿಲ್ಲ. ಆದರೆ, ಕನ್ನಡ ಸಿನಿಮಾವನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಹೇಳಬಲ್ಲೆ.

- **ಕಲಾಬದುಕನ್ನೊಮ್ಮೆ ಹಿಂದಿರುಗಿ ನೋಡಿದಾಗ ಏನನ್ನಿಸುತ್ತದೆ?**

– ಇಷ್ಟೊಂದು ರೆಕಗ್ನಿಷನ್ ಸಿಗುತ್ತದೆ ಎಂದು ಊಹಿಸಿರಲೂ ಇಲ್ಲ. ಮುಖ್ಯವಾಗಿ ನೃತ್ಯ ನನ್ನ ಗುರು. ಅದು ಇಲ್ಲಿವರೆಗೆ ಕರೆದುಕೊಂಡು ಬಂದಿದೆ. ಉದ್ಯೋಗದಲ್ಲಿ ಆರಾಮದಾಯಕ ಕೆಲಸ, ಒಳ್ಳೆಯ ಸಂಬಳ ತೆಗೆದುಕೊಂಡು ಹಾಯಾಗಿರಬಹುದಿತ್ತು ಎಂದು ಈ ಹಿಂದೆ ಆಲೋಚಿಸಿದ್ದಿತ್ತು. ಉದ್ಯೋಗದಿಂದ ಹೊರಗೆ ಬಂದಾಗ ತುಂಬಾ ಕಷ್ಟಪಟ್ಟಿದ್ದೇನೆ. ಆದರೆ, ಈ ಜನಪ್ರೀತಿ, ದುಡಿಮೆಯ ಅವಕಾಶ ಸಿಗುತ್ತಿರಲಿಲ್ಲ. ಸಣ್ಣ ಪಾತ್ರವಾದರೂ ಸರಿ ಮಾಡಿತೋರಿಸುತ್ತೇನೆ ಎಂಬ ಮನೋಭಾವವೇ ಇಲ್ಲಿವರೆಗೆ ಕರೆತಂದಿದೆ.

- **ಕರಾವಳಿ ಚಿತ್ರರಂಗದಿಂದ ಅವಕಾಶಗಳು ಬಂದಿವೆಯೇ?**

– ನನಗೆ ನನ್ನ ಮಾತೃಭಾಷೆ ತುಳುವಿನ ಮೇಲೆ ಅತೀವ ಪ್ರೀತಿ ಇದೆ. ಅವಕಾಶಗಳು ಬರಬೇಕು ಅಷ್ಟೆ. ಅವಕಾಶ ಬಂದಾಗ ಶ್ರದ್ಧೆ ಮತ್ತು ಪರಿಶ್ರಮದಿಂದ ಬಳಸಿಕೊಳ್ಳುತ್ತೇನೆ.

- **ಸಿಗುವ ಅವಕಾಶ, ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಇದೆಯೇ?**

– ಯಾರೇ ಆಗಲಿ ಕಲಾವಿದನ ಪರಿಶ್ರಮಕ್ಕೆ ತಕ್ಕ ಮೌಲ್ಯವನ್ನು ಕೊಡಲೇಬೇಕು. ಹಾಗೆಂದು ಎಲ್ಲ ಯೋಜನೆಗಳಲ್ಲೂ ಒಂದೇ ಮಾನದಂಡ ಇರಿಸಿಕೊಂಡು ನಮ್ಮ ಸಂಭಾವನೆಯನ್ನು ನಿಗದಿಪಡಿಸಿಕೊಳ್ಳಲು ಆಗದು. ಹಾಗಾಗಿ ಎಲ್ಲರಿಗೂ ಸರಿ ಹೊಂದುವಂತೆ ಸಂಭಾವನೆ ನಿಗದಿಪಡಿಸಿಕೊಳ್ಳುತ್ತೇವೆ.

ಸಂಭಾವನೆಯ ಪ್ರಮಾಣದ ಬಗ್ಗೆ ಮಾತನಾಡುವವರಿಗೆ ಒಂದು ಮಾತು, ನಮ್ಮಲ್ಲೇ ಅದ್ಭುತವಾದ ಪ್ರತಿಭೆಗಳು ಇದ್ದಾರೆ. ಅವರಿಗೆ ಅವಕಾಶ ಕೊಡಿ. ಇಲ್ಲವಾದರೆ ನಮ್ಮವರೂ ಬೇರೆಡೆಗೆ ಹೋಗುವ ಅನಿವಾರ್ಯತೆ ತಂದುಕೊಳ್ಳುತ್ತಿದ್ದಾರೆ. ಇದು ಕೆಲಸ ಮಾಡುವವರಿಗೂ, ಕೆಲಸ ಕೊಡುವವರಿಗೂ ಒಳ್ಳೆಯದೇ ಅಲ್ಲವೇ.

- **ಮುಂದಿನ ಕನಸುಗಳು?**

– ಕನಸುಗಳನ್ನು ಕಾಣುವುದಿಲ್ಲ. ಅದು ಅಂದುಕೊಂಡಂತೆ ನಡೆಯದಿದ್ದರೆ ಹತಾಶರಾಗಿಬಿಡುತ್ತೇವೆ. ಈಗ ನೋಡಿ ಕೊರೊನಾ ಎಲ್ಲವನ್ನೂ ಕಟ್ಟಿಹಾಕಿಬಿಟ್ಟಿತು. ಇಲ್ಲವಾದರೆ ಅದೆಷ್ಟೋ ಚಿತ್ರಗಳು ಬಿಡುಗಡೆ ಆಗಬೇಕಿತ್ತು ಅಲ್ವಾ. ಹಾಗಾಗಿ ಸಮಯ ಮತ್ತು ಅವಕಾಶ ಬಂದಹಾಗೆ ಮುಂದುವರಿಯಬೇಕು ಅನ್ನುವುದೇ ನನ್ನ ನಿಲುವು.


ದಿಶಾ ರಮೇಶ್

'ರಂಗಭೂಮಿ ಪಯಣ ನಿರಂತರ'

ಅಭಿಲಾಷ್ ಪಿ.ಎಸ್.

2016ರಲ್ಲಿ ತೆರೆಕಂಡ ಬಿ.ಸುರೇಶ್ ನಿರ್ದೇಶನದ 'ದೇವರ ನಾಡಲ್ಲಿ' ಚಿತ್ರದ ಮುಖಾಂತರ ಬೆಳ್ಳಿತೆರೆಗೆ ಹೆಜ್ಜೆ ಇಟ್ಟಿದ್ದ, ನಟ ಮಂಡ್ಯ ರಮೇಶ್ ಅವರ ಪುತ್ರಿ ದಿಶಾ ರಮೇಶ್ ನಂತರದ ದಿನಗಳಲ್ಲಿ 'ನಟನ'ದ ವೇದಿಕೆ ಮುಖಾಂತರ ರಂಗಭೂಮಿಯಲ್ಲೇ ಹೆಚ್ಚು ಸಕ್ರಿಯರಾಗಿದ್ದರು. ಇದೀಗ ಮತ್ತೆ ಚಂದನವನಕ್ಕೆ ಹೆಜ್ಜೆ ಇಟ್ಟಿರುವ ದಿಶಾ ನಾಯಕಿಯ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ.

'ಪಾಪ ಪಾಂಡು' ಧಾರಾವಾಹಿ ಮುಖಾಂತರ ಕನ್ನಡಿಗರ ಮನೆಮಾತಾಗಿದ್ದ ಸೌರಭ್ ಕುಲಕರ್ಣಿ ನಿರ್ದೇಶನದ ಕಮರ್ಷಿಯಲ್ ಎಂಟರ್‌ಟೈನರ್ ಚಿತ್ರ 'ಎಸ್‌ಎಲ್‌ವಿ ಸಿರಿ ಲಂಬೋದರ ವಿವಾಹ' ಚಿತ್ರದಲ್ಲಿ ದಿಶಾ ನಾಯಕಿಯಾಗಿದ್ದು, ಬೆಂಗಳೂರಿನಲ್ಲಿ ಚಿತ್ರದ ಚಿತ್ರೀಕರಣ ಆರಂಭವಾಗಿದೆ. ಚಿತ್ರದಲ್ಲಿನ ತಮ್ಮ ಪಾತ್ರ ಹಾಗೂ ಮುಂದಿನ ಸಿನಿ ಪಯಣದ ಬಗ್ಗೆ ಪ್ರಜಾವಾಣಿ 'ಸಿನಿಮಾ ಪುರವಣಿ' ಜೊತೆಗೆ ಮಾತಿಗಿಳಿದ ದಿಶಾ ಹೀಗೆಂದರು...

ಉತ್ತಮ ಪಾತ್ರಕ್ಕೆ ಕಾಯುತ್ತಿದ್ದೆ


2014ರಲ್ಲಿ 'ದೇವರ ನಾಡಲ್ಲಿ' ಚಿತ್ರದ ಚಿತ್ರೀಕರಣ ನಡೆದಿತ್ತಾದರೂ, 2016ರಲ್ಲಿ ಈ ಚಿತ್ರ ಬಿಡುಗಡೆಯಾಯಿತು. ರಂಗಭೂಮಿ ನಿರಂತರವಾಗಿ ಇದ್ದೇ ಇರುತ್ತದೆ. ಮೊದಲ ಸಿನಿಮಾ ಮಾಡುವ ಸಂದರ್ಭದಲ್ಲಿ ನಾನು ಡಿಗ್ರಿ ಮಾಡುತ್ತಿದ್ದೆ. ಇದಾದ ನಂತರದಲ್ಲಿ ನನಗಿಷ್ಟವಾದ ಕಥೆಗಳು ಬರಲಿಲ್ಲ, ಪಾತ್ರಗಳು ಸಿಗಲಿಲ್ಲ. ಒಂದಲ್ಲ ಒಂದು ಅಡೆತಡೆಗಳು ಬಂದವು. ಸಿನಿಮಾದಲ್ಲಿ ನಟನೆ ಮಾಡಬೇಕು ಎನ್ನುವ ಧಾವಂತವೂ ನನಗೆ ಇರಲಿಲ್ಲ. ಶಿಕ್ಷಣ ಪೂರ್ಣಗೊಳಿಸಿ ಮತ್ತೆ ಸಿನಿಮಾಗೆ ಧುಮುಕುವ ಯೋಚನೆ ನನ್ನದಾಗಿತ್ತು. ರಂಗಭೂಮಿಯಲ್ಲೇ ಸ್ನಾತಕೋತ್ತರ ಪದವಿಯನ್ನು ನಾನು ಪಡೆದುಕೊಂಡೆ. ಈ ಸಂದರ್ಭದಲ್ಲಿ ಬಂದ ಅವಕಾಶ 'ಎಸ್‌ಎಲ್‌ವಿ ಸಿರಿ ಲಂಬೋದರ ವಿವಾಹ'. ಸೌರಭ್ ಕುಲಕರ್ಣಿ ಅವರ ನಿರ್ದೇಶನದ ಈ ಚಿತ್ರದ ಕಥೆ ಹಾಗೂ ಪಾತ್ರ ನನಗೆ ಇಷ್ಟವಾಯಿತು. ಹೊಸ ತಂಡವಾದರೂ ಎಲ್ಲರಲ್ಲೂ ಉತ್ಸಾಹವಿತ್ತು.

ತುಂಬಾ ಬೋಲ್ಡ್ ಹುಡುಗಿ

'ದೇವರ ನಾಡಲ್ಲಿ' ಸಿನಿಮಾದಲ್ಲಿ ಬಹಳ ವಿಭಿನ್ನವಾದ ಪಾತ್ರ ನನ್ನದಾಗಿತ್ತು. ಮುಗ್ಧ, ಹೆಚ್ಚು ಮಾತನಾಡದ ಹುಡುಗಿಯ ಪಾತ್ರ ಆ ಚಿತ್ರದಲ್ಲಿತ್ತು. 'ಎಸ್‌ಎಲ್‌ವಿ ಸಿರಿ ಲಂಬೋದರ ವಿವಾಹ' ಚಿತ್ರವು ಸಂಪೂರ್ಣ ಕಮರ್ಷಿಯಲ್ ಎಂಟರ್‌ಟೈನರ್. ಶೀರ್ಷಿಕೆ ಕೇಳಿದಾಕ್ಷಣ ಇದೊಂದು ಹಾಸ್ಯ ಕಥಾಹಂದರ ಹೊಂದಿರುವ ಸಿನಿಮಾ ಎಂದೆನಿಸಿದರೂ ಎಲ್ಲ ಜಾನರ್‌ನಿಂದ ಕೂಡಿದ ಸಿನಿಮಾ ಇದು. ಇದರಲ್ಲಿ ಬೋಲ್ಡ್ ಹುಡುಗಿಯ ಪಾತ್ರ ನನ್ನದು. ಚೆನ್ನಾಗಿ ಮಾತನಾಡುವ, ಬದುಕಿನ ಬಗ್ಗೆ ಸಾಕಷ್ಟು ಕನಸು ಹೊಂದಿರುವ ಪಾತ್ರವದು.

ನಾನು ಈ ಕ್ಷೇತ್ರಕ್ಕೆ ಬರುವ ವಿಚಾರದಲ್ಲಿ ಅಪ್ಪ ಹಾಗೂ ಅಮ್ಮನ ಬೆಂಬಲ ಸದಾ ಇತ್ತು. 'ನಟನ' ನನಗೆ ದೊಡ್ಡ ಶಕ್ತಿ. 'ನಟನ' ಇಲ್ಲದೇ ಇದ್ದಿದ್ದರೆ ಇಷ್ಟು ಸಕ್ರಿಯವಾಗಿ ನಾನು ಕಾಣಿಸಿಕೊಳ್ಳುತ್ತಿದ್ದೆನೋ ಇಲ್ಲವೋ. ಸಿನಿಮಾ ಅಥವಾ ಕಿರುತೆರೆಗೆ ಪ್ರವೇಶಿಸುವ ವಿಚಾರದಲ್ಲಿ ಅಪ್ಪ ಯಾವತ್ತೂ ಒತ್ತಡ ಹಾಕಿಲ್ಲ. ಬಂದ ಆಫರ್‌ಗಳ ಕುರಿತು ನನ್ನ ಜೊತೆಗೆ ಚರ್ಚಿಸುತ್ತಿದ್ದರು. ಕಿರುತೆರೆಗೆ ಪ್ರವೇಶಿಸಿದರೆ ರಂಗಭೂಮಿಯನ್ನು ಸಂಪೂರ್ಣ ಮರೆಯಬೇಕಾಗುತ್ತದೆ. ಏಕೆಂದರೆ ಸಾಕಷ್ಟು ಸಮಯ ಚಿತ್ರೀಕರಣಕ್ಕಾಗಿಯೇ ಮೀಸಲಿಡಬೇಕಾಗುತ್ತದೆ. ಇದು ನನಗೆ ಕಷ್ಟ ಎಂದೆನಿಸಿತು. ಹೀಗಾಗಿ ಬಂದಂತಹ ಧಾರಾವಾಹಿ ಅವಕಾಶಗಳನ್ನು ನಾನು ಒಪ್ಪಲಿಲ್ಲ. ಸಿನಿಮಾ ಆದರೆ ರಂಗಭೂಮಿಯಲ್ಲೂ ತೊಡಗಿಸಿಕೊಳ್ಳುವ ಅವಕಾಶ ಸಿಗುತ್ತದೆ.

ರಂಗಭೂಮಿಯನ್ನು ಯಾವುದೇ ಕಾರಣಕ್ಕೂ ಬಿಡುವ ಮಾತಿಲ್ಲ. ಸಿನಿಮಾ ಒಂದು ಕಲಿಕೆ. ಅದು ಉತ್ತಮವಾದ ಅನುಭವನ್ನು ಕೊಡುತ್ತದೆ. ಒಳ್ಳೆಯ ಕಥೆ, ಪಾತ್ರಗಳು ಬಂದರೆ ಖಂಡಿತವಾಗಿಯೂ ಹೊಸ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತೇನೆ. ಆದರೆ ರಂಗಭೂಮಿ ನಿರಂತರ.


ರವಿಚಂದ್ರನ್


ವಸಿಷ್ಠ ಸಿಂಹ


ಧನಂಜಯ್


ರಘು ಮುಖರ್ಜಿ


ಯೋಗೇಶ್


ಪಾಯಲ್ ರಾಜ್‌ಪುತ್

'ಹೆಡ್‌ಬುಷ್'ನಲ್ಲಿ ಕಲಾವಿದರ ದಂಡು

ಸಿನಿ ಸಂಕ್ಷಿಪ್ತ

ಅಗ್ನಿ ಶ್ರೀಧರ್ ಅವರ ಆತ್ಮಕಥೆ 'ದಾದಾಗಿರಿಯ ಆ ದಿನಗಳು' ಕೃತಿಯನ್ನು ಆಧರಿಸಿ ನಿರ್ಮಾಣಗೊಳ್ಳುತ್ತಿರುವ 'ಹೆಡ್‌ಬುಷ್'–ದಿ ರೈಸ್ ಆ್ಯಂಡ್ ರೈಸ್ ಆಫ್ ಬೆಂಗಳೂರು ಅಂಡರ್‌ವರ್ಲ್ಡ್' ಬಿಗ್‌ಬಜೆಟ್ ಚಿತ್ರದಲ್ಲಿ ನಟ ರವಿಚಂದ್ರನ್ ಸೇರಿದಂತೆ ಖ್ಯಾತ ಕಲಾವಿದರ ದಂಡೇ ಒಂದಾಗುತ್ತಿದೆ.

ವಾರಕ್ಕೊಬ್ಬರಂತೆ ಹೊಸ ಕಲಾವಿದರನ್ನು ಚಿತ್ರೀಕರಣದ ಸೆಟ್ಟಿಗೆ ಸ್ವಾಗತಿಸುತ್ತಿದೆ ಚಿತ್ರತಂಡ. ಚಿತ್ರದಲ್ಲಿ ಬೆಂಗಳೂರಿನ ಮೊದಲ ಅಂಡರ್‌ವರ್ಲ್ಡ್ ಡಾನ್ ಎಂ.ಪಿ ಜಯರಾಜ್ ಪಾತ್ರಕ್ಕೆ ನಟ 'ಡಾಲಿ' ಧನಂಜಯ್ ಬಣ್ಣಹಚ್ಚಿದ್ದು, ಚಿತ್ರದ ಚಿತ್ರೀಕರಣ ಈಗಾಗಲೇ ಆರಂಭವಾಗಿದೆ.

ಇತ್ತೀಚೆಗಷ್ಟೇ 'ದುನಿಯಾ' ಚಿತ್ರದ 'ಲೂಸ್ ಮಾದ' ಖ್ಯಾತಿಯ ನಟ ಯೋಗೇಶ್ ಚಿತ್ರತಂಡ ಸೇರಿದ್ದರು. ಇದೀಗ 'ಟಗರು' ಚಿತ್ರದ ಖಳನಾಯಕರ ಜೋಡಿಯೂ ಈ ಚಿತ್ರದಲ್ಲಿ ಮತ್ತೆ ಒಂದಾಗುತ್ತಿದೆ. 'ಟಗರು' ಚಿತ್ರದಲ್ಲಿ ಧನಂಜಯ್ ನಟಿಸಿದ್ದ 'ಡಾಲಿ' ಹಾಗೂ ವಸಿಷ್ಠ ಸಿಂಹ ಅವರ 'ಚಿಟ್ಟೆ' ಪಾತ್ರ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿತ್ತು. ವಸಿಷ್ಠ ಸಿಂಹ ಅವರೂ ಅಧಿಕೃತವಾಗಿ ಸಿನಿಮಾ ತಂಡ ಸೇರ್ಪಡೆಯಾಗಿದ್ದಾರೆ. ಚಂದನವನದಿಂದ ಕೆಲ ವರ್ಷಗಳಿಂದ ದೂರವೇ ಉಳಿದಿದ್ದ ನಟಿ ಶ್ರುತಿ ಹರಿಹರನ್ ಅವರೂ 'ಹೆಡ್‌ಬುಷ್'ನಲ್ಲಿ ಪ್ರಮುಖ ಪಾತ್ರವೊಂದಕ್ಕೆ ಬಣ್ಣಹಚ್ಚುತ್ತಿದ್ದು, ಮತ್ತೆ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದಾರೆ. ನಟ ರಘು ಮುಖರ್ಜಿಯೂ ಇದೀಗ ಚಿತ್ರತಂಡಕ್ಕೆ ಸೇರ್ಪಡೆಯಾಗಿದ್ದಾರೆ.

ನಟ ರವಿಚಂದ್ರನ್ ಅವರು ಚಿತ್ರದಲ್ಲಿ ಪ್ರೊಫೆಸರ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾಗಿದ್ದು, ಚಿತ್ರತಂಡ ಈ ಕುರಿತು ಅಧಿಕೃತವಾಗಿ ಇನ್ನಷ್ಟೇ ಮಾಹಿತಿ ನೀಡಬೇಕಿದೆ. ಧನಂಜಯ್ ಅವರ ಪಾತ್ರವನ್ನು ಬಿಟ್ಟರೆ ಇತರೆ ಕಲಾವಿದರು ಯಾವ ಪಾತ್ರಕ್ಕೆ ಬಣ್ಣಹಚ್ಚಲಿದ್ದಾರೆ ಎನ್ನುವ ಗುಟ್ಟನ್ನು ಚಿತ್ರತಂಡ ಇಲ್ಲಿಯವರೆಗೂ ಬಿಟ್ಟುಕೊಟ್ಟಿಲ್ಲ.

ತೆಲುಗಿನ ಖ್ಯಾತನಟಿ, 'ಆರ್‌ಎಕ್ಸ್ 100', 'ಆರ್‌ಡಿಎಕ್ಸ್ ಲವ್' ಮುಂತಾದ ಹಿಟ್ ಚಿತ್ರಗಳಲ್ಲಿ ನಟಿಸಿದ್ದ ಪಾಯಲ್ ರಾಜ್‌ಪುತ್ ಚಿತ್ರದ ನಾಯಕಿಯಾಗಿದ್ದಾರೆ. ಡಾಲಿ ಪಿಕ್ಚರ್ಸ್ ಮತ್ತು ಸೋಮಣ್ಣ ಟಾಕೀಸ್ ಜಂಟಿಯಾಗಿ ನಿರ್ಮಾಣ ಮಾಡುತ್ತಿರುವ ಈ ಚಿತ್ರಕ್ಕೆ, ಅಗ್ನಿ ಶ್ರೀಧರ್ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಚಿತ್ರವನ್ನು ಶೂನ್ಯ ಅವರು ನಿರ್ದೇಶಿಸುತ್ತಿದ್ದಾರೆ. ಚಿತ್ರಕ್ಕೆ ಶರಣ್ ರಾಜ್ ಸಂಗೀತವಿದ್ದು, ಬಾದಲ್ ನಂಜುಂಡಸ್ವಾಮಿ ಪ್ರೊಡಕ್ಷನ್ ಡಿಸೈನರ್ ಆಗಿದ್ದಾರೆ.


ಶ್ರುತಿ ಹರಿಹರನ್


ಪ್ರಿಯಾಂಕ ಉಪೇಂದ್ರ

'ಮನೆಯಲ್ಲೇ ಅದ್ಭುತ ಆ್ಯಕ್ಟಿಂಗ್'


ಉಪೇಂದ್ರ


ಸುದೀಪ್

ಮದುವೆಯಾದ ಬಳಿಕವೂ ಚಂದನವನದಲ್ಲಿ ಸಕ್ರಿಯಾಗಿರುವವರು ನಟಿ ಪ್ರಿಯಾಂಕ ಉಪೇಂದ್ರ. ಹಲವು ಜಾನರ್‌ನ ಸಿನಿಮಾಗಳಲ್ಲಿ ಕಾಣಿಸಿಕೊಂಡಿರುವ ಪ್ರಿಯಾಂಕ ಈ ಬಾರಿ ಪ್ಯಾರಲಲ್ ಯುನಿವರ್ಸ್‌ಗೆ ಪ್ರವೇಶಿಸಿದ್ದಾರೆ. ರಾಜ್ ಕಿರಣ್ ಜೆ ನಿರ್ದೇಶನದ ಸೈಕಾಲಜಿಕಲ್ ಥ್ರಿಲ್ಲರ್ ಸಿನಿಮಾ '1980'ಯಲ್ಲಿ ರೆಟ್ರೊ ಲುಕ್‌ನಲ್ಲಿ ಪ್ರಿಯಾಂಕ ಕಾಣಿಸಿಕೊಂಡಿದ್ದಾರೆ. ಚಿತ್ರದ ಟ್ರೇಲರ್ ಅನ್ನು ನಟ ಸುದೀಪ್ ಇತ್ತೀಚೆಗೆ ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಉಪೇಂದ್ರ, 'ಹೊಸ ವಿಷಯವನ್ನು ಇಟ್ಟುಕೊಂಡು ನಿರ್ದೇಶಕರು ಸಿನಿಮಾ ಮಾಡಿದ್ದಾರೆ. ಮೇಕಿಂಗ್ ಅದ್ಭುತವಾಗಿದೆ' ಎಂದರು. ಇನ್ನು ಪ್ರಿಯಾಂಕ ಅವರ ನಟನೆ ಹೇಗಿದೆ ಎನ್ನುವ ಪ್ರಶ್ನೆಗೆ ಉತ್ತರಿಸಿದ ಉಪೇಂದ್ರ, 'ನಾನು ಮನೆಯಲ್ಲಿ ನಿತ್ಯವೂ ಇದಕ್ಕಿಂತ ಅದ್ಭುತವಾದ ಆ್ಯಕ್ಟಿಂಗ್ ನೋಡುತ್ತೇನೆ. ಇದೇನು ಆ್ಯಕ್ಟಿಂಗ್. ಸಿಸಿ ಕ್ಯಾಮೆರಾ ತೋರಿಸುತ್ತೇನೆ. ಅದು ಆ್ಯಕ್ಟಿಂಗ್' ಎಂದು ಕಾಲೆಳೆದರು.

ಪ್ರಿಯಾಂಕ ಮಾತನಾಡಿ, 'ಥ್ರಿಲ್ಲರ್ ಸಿನಿಮಾಗಳಲ್ಲಿ ನಟಿಸುವುದು ನನಗೆ ಬಹಳ ಇಷ್ಟ. ವಿಭಿನ್ನವಾದ ಕಥಾಹಂದರ ಹೊಂದಿರುವ ಈ ಸಿನಿಮಾ ಕೆಲ ತಿಂಗಳ ಹಿಂದೆಯೇ ಪೂರ್ಣಗೊಂಡಿತ್ತು. ಸಿನಿಮಾವನ್ನು ಚಿತ್ರಮಂದಿರದಲ್ಲಿ ಬಿಡುಗಡೆ ಮಾಡುವುದೇ ಅಥವಾ ಒಟಿಟಿಗೆ ನೀಡುವುದೇ ಎನ್ನುವ ಗೊಂದಲ ನಮ್ಮಲ್ಲಿ ಇತ್ತು. ಕೊನೆಯಲ್ಲಿ ಒಟಿಟಿಯಿಂದ ಒಳ್ಳೆಯ ಆಫರ್ ಬಂದ ಕಾರಣ 'ನಮ್ಮ ಫ್ಲಿಕ್ಸ್'ಗೆ ನೀಡಿದೆವು. ಅಕ್ಟೋಬರ್15ರಂದು ನಮ್ಮ ಫ್ಲಿಕ್ಸ್‌ನಲ್ಲಿ ಚಿತ್ರ ಬಿಡುಗಡೆಯಾಗಲಿದೆ' ಎಂದರು.

'ಚಿತ್ರಮಂದಿರಗಳು ತೆರೆದರಷ್ಟೇ ಸಿನಿಮಾಗಳಿಗೆ ನ್ಯಾಯ'

'ಸಿನಿಮಾ ದೊಡ್ಡ ಪರದೆ ಮೇಲೆಯೇ ನೋಡುವುದಕ್ಕೆ ಚೆಂದ. ಸಿನಿಮಾದ ಅದ್ಭುತ ಮೇಕಿಂಗ್ ಕಾಣುವುದೇ ಪರದೆ ಮೇಲೆ. ಹೀಗಾಗಿ ಚಿತ್ರಮಂದಿರಗಳು ಸಂಪೂರ್ಣವಾಗಿ ತೆರೆದರಷ್ಟೇ ಪ್ರತೀ ಸಿನಿಮಾಗೂ ನ್ಯಾಯ ಸಿಗಲಿದೆ' ಎಂದು ಸುದೀಪ್ ಹೇಳಿದರು.

'ಎರಡು ವರ್ಷದಿಂದ ಮನೆಯಲ್ಲಿ ಟಿ.ವಿ ನೋಡಿ ನೋಡಿ ದೊಡ್ಡ ಪರದೆಯಲ್ಲಿ ಟ್ರೇಲರ್ ನೋಡಿ ಬಹಳ ಖುಷಿ ಆಯಿತು. ಅದೂ ಮೊದಲ ಸಾಲಿನಲ್ಲಿ ಕೂತು ಸಿನಿಮಾ ನೋಡಿ ಬಹಳ ವರ್ಷಗಳೇ ಆಗಿದೆ. ಸಿನಿಮಾದವರಿಗೆ ಪರದೆ ಎನ್ನುವುದು ಬಹಳ ಮುಖ್ಯ. ಪ್ರಸ್ತುತ ಚಿತ್ರೋದ್ಯಮಕ್ಕೆ ಬಂದಿರುವ ಸಂಕಷ್ಟ ಆದಷ್ಟು ಬೇಗ ಬಗೆಹರಿಯಲಿ. ನಾವೂ ನಮ್ಮ ಕಥೆಗಳನ್ನು ಹೇಳಲು ಪರದೆ ತೆರೆಯಲು ಕಾಯುತ್ತಿದ್ದೇವೆ' ಎಂದರು.

ಸೆಟ್ಟೇರಿತು 'ಲವ್ ಮಿ ಆರ್ ಹೇಟ್ ಮಿ'


ಡಾರ್ಲಿಂಗ್ ಕೃಷ್ಣ

ನಟ ಡಾರ್ಲಿಂಗ್ ಕೃಷ್ಣ ಹಾಗೂ ನಟಿ ರಚಿತಾ ರಾಮ್ ಮೊದಲ ಬಾರಿಗೆ ಜೊತೆಯಾಗಿ ನಟಿಸುತ್ತಿರುವ 'ಲವ್ ಮಿ OR ಹೇಟ್ ಮಿ' ಚಿತ್ರದ ಮುಹೂರ್ತ ಇತ್ತೀಚೆಗೆ ಧರ್ಮಗಿರಿ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದಲ್ಲಿ ನೆರವೇರಿತು. ಚಿತ್ರದ ಮೊದಲ ದೃಶ್ಯಕ್ಕೆ ನಟಿ ಮಿಲನ ನಾಗರಾಜ್ ಕ್ಲ್ಯಾಪ್ ಮಾಡಿದರು.

ತೂಗುದೀಪ ಸಂಸ್ಥೆಯ ಹಲವು ಚಿತ್ರಗಳಿಗೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ, ದೀಪಕ್ ಗಂಗಾಧರ್ ಈ ಚಿತ್ರದ ಮೂಲಕ ನಿರ್ದೇಶಕರಾಗುತ್ತಿದ್ದಾರೆ. ಸೋಮವಾರದಿಂದ(ಸೆ.13) ಮೊದಲ ಹಂತದ ಚಿತ್ರೀಕರಣ ಬೆಂಗಳೂರಿನಲ್ಲಿ ಆರಂಭವಾಗಿದ್ದು, 'ಇದೊಂದು ಪಕ್ಕಾ ಲವ್ ಸ್ಟೋರಿ' ಎನ್ನುತ್ತಾರೆ ದೀಪಕ್ ಗಂಗಾಧರ್.

ಚಿತ್ರದಲ್ಲಿನ ಪಾತ್ರದ ಕುರಿತು ಮಾತನಾಡಿದ ಡಾರ್ಲಿಂಗ್ ಕೃಷ್ಣ, 'ಈ ಚಿತ್ರದಲ್ಲಿ ನನ್ನದು ಎರಡು ರೀತಿಯ ಪಾತ್ರ. ಕಾಲೇಜು ಹುಡುಗನಾಗಿ ಹಾಗೂ ಕಾಲೇಜು ನಂತರದ ದಿನಗಳದ್ದು. ಲವ್ ಸಬ್ಜೆಕ್ಟ್ ನನಗೆ ಇಷ್ಟ. ಹೀಗಾಗಿ ಹೆಚ್ಚಾಗಿ ಅದನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ. ನಾನು ಮತ್ತು ರಚಿತಾ ರಾಮ್ ಮೊದಲ ಬಾರಿಗೆ ಒಟ್ಟಾಗಿ ನಟಿಸುತ್ತಿದ್ದೇವೆ. ನಾವಿಬ್ಬರು ಒಂದೇ ದಿನ ಚಿತ್ರರಂಗ ಪ್ರವೇಶಿಸಿದವರು. ಎಂಟು ವರ್ಷಗಳ ಹಿಂದೆ ನನ್ನ 'ಮದರಂಗಿ' ಚಿತ್ರ ಹಾಗೂ ರಚಿತಾ ಅವರ 'ಬುಲ್ ಬುಲ್' ಒಂದೇ ದಿನ ತೆರೆಕಂಡಿತ್ತು. ಇಷ್ಟು ವರ್ಷಗಳ ನಂತರ ಒಂದೇ ಚಿತ್ರದಲ್ಲಿ ಅಭಿನಯಿಸುವ ಅವಕಾಶ ಕೂಡಿ ಬಂದಿದೆ' ಎಂದು ಹೇಳಿದರು.

'ಚಿತ್ರದಲ್ಲಿ ಐದು ಹಾಡುಗಳಿವೆ. ಅಣ್ಣಾವ್ರ ಜನಪ್ರಿಯ ಹಾಡೇ ಚಿತ್ರದ ಗೀತೆಯಾಗಿದೆ. ತುಂಬಾ ಸುಮಧುರ ಗೀತೆಗಳು ಈ ಪ್ರೇಮಕಥಾನಕದಲ್ಲಿರಲಿದೆ' ಎಂದರು ಚಿತ್ರದ ಸಂಗೀತ ನಿರ್ದೇಶಕ ಶ್ರೀಧರ್ ಸಂಭ್ರಮ್. ದೀಪಕ್ ಗಂಗಾಧರ್ ಮೂವೀಸ್ ಲಾಂಛನದಲ್ಲಿ ಸುನೀಲ್ ಬಿ.ಎನ್ ಹಾಗೂ ಮದನ್ ಗಂಗಾಧರ್ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಶ್ರೀಧರ್ ಸಂಭ್ರಮ್ ಹಾಗೂ ಚಂದನ್ ಈ ಚಿತ್ರದ ಸಹ ನಿರ್ಮಾಪಕರು. ಕೆ.ಎಂ.ಪ್ರಕಾಶ್ ಸಂಕಲನ, ಈಶ್ವರಿ ಕುಮಾರ್ ಕಲಾ ನಿರ್ದೇಶನ, ರವಿವರ್ಮ ಸಾಹಸ ನಿರ್ದೇಶನ, ಅಣ್ಣಯ್ಯ ಸಹ ನಿರ್ದೇಶನ ಹಾಗೂ ಮೋಹನ್ ಅವರ ನೃತ್ಯ ನಿರ್ದೇಶನವಿರುವ ಈ ಚಿತ್ರಕ್ಕೆ ವಿಷ್ಣು ಹೆಬ್ಬಾರ್ ಸಂಭಾಷಣೆ ಬರೆದಿದ್ದಾರೆ.

'ಅಪ್ಪ ಕೂಡಾ ನನ್ನ ಡೇಟ್ಸ್‌ಗೆ ಕಾಯಬೇಕು'


ಶ್ರೇಯಸ್

'ಅಪ್ಪನೇ ನನ್ನ ಡೇಟ್ಸ್‌ಗೆ ಕಾಯಬೇಕು. ಆ ಮಟ್ಟಕ್ಕೆ ಶ್ರಮಿಸುತ್ತೇನೆ' ಎಂದು ಸವಾಲಿನ ಭರವಸೆ ನೀಡಿದವರು ನಿರ್ಮಾಪಕ ಕೆ. ಮಂಜು ಅವರ ಪುತ್ರ ನಟ ಶ್ರೇಯಸ್ ಕೆ. ಮಂಜು.

ಶ್ರೇಯಸ್ ನಟನೆಯ 'ರಾಣ' ಚಿತ್ರದ ಪೋಸ್ಟರ್ ಹಾಗೂ ಟೀಸರ್ ಬಿಡುಗಡೆಯ ಕಾರ್ಯಕ್ರಮದಲ್ಲಿ ಅವರಿಂದ ಮೇಲಿನ ಭರವಸೆ ಕೇಳಿಬಂದಿತು. ಈ ಮಾತಿಗೆ ನಟ ಉಪೇಂದ್ರ, ತಂದೆ ಕೆ. ಮಂಜು ಎಲ್ಲರೂ ಬೆನ್ನುತಟ್ಟಿದರು.

ಫಸ್ಟ್‌ಲುಕ್ ಪೋಸ್ಟರ್ ಮತ್ತು ಟೀಸರ್ ಅನ್ನು ಉಪೇಂದ್ರ ಬಿಡುಗಡೆ ಮಾಡಿದರು. ಶ್ರೇಯಸ್ ಮಾಸ್ ಲುಕ್‌ನಲ್ಲಿ ಕಾಣಿಸಿಕೊಂಡ ಚಿತ್ರವಿದು. ಥ್ರಿಲ್ಲರ್ ಕಥಾಹಂದರವನ್ನು ಈ ಚಿತ್ರ ಹೊಂದಿದೆ ಎಂದು ಚಿತ್ರತಂಡ ಹೇಳಿದೆ. 'ಇತ್ತೀಚೆಗಷ್ಟೇ ಚಿತ್ರದ ಸಾಹಸ ದೃಶ್ಯವೊಂದರ ಚಿತ್ರೀಕರಣ ನಡೆದಿದ್ದು, ಡ್ಯೂಪ್ ಬಳಸದೇ ಸಾಹಸ ದೃಶ್ಯಗಳನ್ನು ಶ್ರೇಯಸ್ ನಿರ್ವಹಿಸಿದ್ದಾರೆ' ಎಂದು ಕೆ. ಮಂಜು ಖುಷಿಯಿಂದ ಹೇಳಿದರು.


ಉದ್ಯಮಿ, ಸಮಾಜ ಸೇವಕ ನವೀನ್ ಶರ್ಮಾ ಅವರು ನಟ ಉಪೇಂದ್ರ ಹಾಗೂ ಶ್ರೇಯಸ್ ಅವರ ಸಾಮಾಜಿಕ ಕಳಕಳಿಗೆ ಜರ್ಮನಿಯ ಟಾರ್ಚ್ ಉಡುಗೊರೆ ನೀಡಿದರು. ರೀಷ್ಮಾ ನಾಣಯ್ಯ ಮತ್ತು ರಂಜನಿ ಈ ಚಿತ್ರದ ನಾಯಕಿಯರು. ಗುಜಲ್ ಪುರುಷೋತ್ತಮ ನಿರ್ಮಾಪಕರು. ಚಿತ್ರಕ್ಕೆ ಚಂದನ್ ಶೆಟ್ಟಿ ಸಂಗೀತವಿದೆ.

ರೀಶ್ಮಾ ನಾಣಯ್ಯ ಕೂಡಾ ಚಿತ್ರ ತಂಡದ ಬಗ್ಗೆ ಕೊಂಡಾಡಿದರು. 'ಒಳ್ಳೆಯ ತಂಡದ ಜೊತೆ ಕೆಲಸ ಮಾಡಿದ್ದೇನೆ. ಚಿತ್ರಮಂದಿರಗಳಲ್ಲಿ ಪೂರ್ಣ ಪ್ರಮಾಣದ ಆಸನ ಭರ್ತಿಗೆ ಅವಕಾಶ ಕೊಟ್ಟಾಗ ಈ ಚಿತ್ರ ಬಿಡುಗಡೆ ಆಗಲಿದೆ' ಎಂದರು.

ರಂಜನಿ ಅವರ ಮೂರನೇ ಚಿತ್ರವಿದು. ಚಿತ್ರದಲ್ಲಿಯೂ ರಂಜನಿ ಹೆಸರಿನ ಪಾತ್ರವಿದೆ. 'ಪ್ರಬಲವಾದ ಪಾತ್ರ ಈ ಚಿತ್ರದಲ್ಲಿದೆ' ಎಂದಿದ್ದಾರೆ ರಂಜನಿ. 'ಕಮರೊಟ್ಟು ಚೆಕ್‌ಪೋಸ್ಟ್ ಭಾಗ – 2' ಮುಂದಿನ ಪ್ರಾಜೆಕ್ಟ್ ಎಂದರು. ರಂಜನಿ.

ಟೀಸರ್ ನೋಡಲು:
https://www.youtube.com/watch?v=HFkvAXlEknk

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಮೌನವಾಗಿರಲು ಕಲಿಯಿರಿ. ನಿಮ್ಮ ಶಾಂತವಾದ ಮನಸ್ಸನ್ನು ಕೇಳಿಸಿಕೊಳ್ಳಲು ಮತ್ತು ಸತ್ವವನ್ನು ಹೀರಿಕೊಳ್ಳಲು ಬಿಡಿ.
-ಪೈಥಾಗರಸ್

ಸುದ್ದಿ ಪೋರ್ಟಲ್ ಮೇಲೆ ದಾಳಿ ವಾಕ್ ಸ್ವಾತಂತ್ರ್ಯ ದಮನದ ಕ್ರಮ

ಕೇಂದ್ರ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ ಮತ್ತು ಆಡಳಿತಾರೂಢ ಬಿಜೆಪಿಯನ್ನು ವಿಮರ್ಶೆಗೆ ಅಥವಾ ಟೀಕೆಗೆ ಒಳಪಡಿಸುವವರ ವಿರುದ್ಧ ಕೇಂದ್ರದ ಕಾನೂನು ಜಾರಿ ಸಂಸ್ಥೆಗಳನ್ನು ಛೂ ಬಿಟ್ಟು, ಅವರನ್ನು ಹದ್ದುಬಸ್ತಿನಲ್ಲಿ ಇರಿಸಲು ಯತ್ನಿಸಲಾಗುತ್ತಿದೆ ಎಂಬ ಆರೋಪ ಕೆಲ ವರ್ಷಗಳಿಂದ ವ್ಯಾಪಕವಾಗಿ ಕೇಳಿಬರುತ್ತಿದೆ. ಅದರ ನಡುವೆಯೇ, ನ್ಯೂಸ್‌ಕ್ಲಿಕ್ ಮತ್ತು ನ್ಯೂಸ್‌ಲಾಂಡ್ರಿ ಎಂಬ ಸುದ್ದಿ ಪೋರ್ಟಲ್‌ಗಳ ಕಚೇರಿಯಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕಳೆದ ಶುಕ್ರವಾರ 'ಸಮೀಕ್ಷೆ' ನಡೆಸಿದ್ದಾರೆ. ಆದಾಯ ತೆರಿಗೆ ಇಲಾಖೆ ಅಥವಾ ಇನ್ನಾವುದೇ ಕಾನೂನು ಜಾರಿ ಸಂಸ್ಥೆಯು ನಡೆಸುವ ದಾಳಿಯನ್ನು ಯಾವುದೇ ಹೆಸರಿನಲ್ಲಿ ಕರೆದರೂ ಅದು ದಾಳಿಯೇ ಹೌದು. ಆದಾಯ ತೆರಿಗೆ ಅಧಿಕಾರಿಗಳು ನಡೆಸಿದ 'ಸಮೀಕ್ಷೆ'ಯು ಸುಮಾರು 12 ತಾಸು ದೀರ್ಘವಾಗಿತ್ತು ಮತ್ತು ದಾಳಿಯೊಂದರ ಎಲ್ಲ ಗುಣಲಕ್ಷಣಗಳನ್ನೂ ಹೊಂದಿತ್ತು. ಸಮೀಕ್ಷೆ ನಡೆಯುತ್ತಿದ್ದಾಗ ತಮ್ಮ ವಕೀಲರು ಅಥವಾ ಅಕೌಂಟೆಂಟ್‌ಗೆ ದೂರವಾಣಿ ಕರೆ ಮಾಡುವುದಕ್ಕೂ ಅಧಿಕಾರಿಗಳು ಅವಕಾಶ ಕೊಡಲಿಲ್ಲ ಎಂದು ನ್ಯೂಸ್‌ಲಾಂಡ್ರಿಯ ಸಹ ಸಂಸ್ಥಾಪಕ ಅಭಿನಂದನ್ ಸೇಖ್ರಿ ಹೇಳಿದ್ದಾರೆ. ಸಂಸ್ಥೆಯ ಸಿಬ್ಬಂದಿಯ ಫೋನ್‌ಗಳನ್ನು ಸಮೀಕ್ಷೆಗೆ ಬಂದವರು ಪಡೆದುಕೊಂಡಿದ್ದರು. ತಮ್ಮ ಕಂಪ್ಯೂಟರ್ ಮತ್ತು ಫೋನ್ ಅನ್ನು ಕೂಡ ಅಧಿಕಾರಿಗಳು ಪಡೆದುಕೊಂಡರು, ಅದರಲ್ಲಿದ್ದ ಮಾಹಿತಿಗಳನ್ನು ತಮ್ಮ ಆಕ್ಷೇಪದ ನಡುವೆಯೇ ನಕಲು (ಕಾಪಿ) ಮಾಡಿಕೊಂಡರು ಎಂದೂ ಅಭಿನಂದನ್ ಹೇಳಿದ್ದಾರೆ. ಇದು ಖಾಸಗಿತನದ ಹಕ್ಕಿನ ಉಲ್ಲಂಘನೆ. ಅಭಿನಂದನ್ ಅವರು ಹೇಳಿದಂತೆ, ಕಂಪ್ಯೂಟರ್ ಮತ್ತು ಫೋನ್‌ಗಳಲ್ಲಿ ವೈಯಕ್ತಿಕ ಮಾಹಿತಿ ಇರುತ್ತದೆ. ಸುದ್ದಿಯ ಮೂಲಗಳು, ವರದಿಗಾರಿಕೆಯ ಯೋಜನೆ ಮತ್ತು ಇತರ ವೃತ್ತಿಪರ ಮಾಹಿತಿಯೂ ಇರುತ್ತವೆ. ಸರ್ಕಾರದಲ್ಲಿ ಇರುವವರು ಅಥವಾ ಇತರರ ಕೈಗೆ ಈ ಮಾಹಿತಿ ಸಿಕ್ಕರೆ ಅದು ಸೋರಿಕೆಯಾಗಿ, ವ್ಯಕ್ತಿ ಅಥವಾ ಸಂಸ್ಥೆಗೆ ತೊಂದರೆ ಆಗಬಹುದು.



ಪತ್ರಕರ್ತರು ಮತ್ತು ಮಾಧ್ಯಮ ಸಂಸ್ಥೆಗಳನ್ನು ಬೆದರಿಸುವ ಮತ್ತು ದಂಡಿಸುವ ಕ್ರಮಗಳು ಹೆಚ್ಚುತ್ತಲೇ ಇರುವುದು ಕಳವಳಕಾರಿ

ಭಾರತೀಯ ಸಂಪಾದಕರ ಕೂಟವು ಹೇಳಿದಂತೆ, ಇಂತಹ ನಡವಳಿಕೆ ಮತ್ತು ಕ್ರಿಯೆಯನ್ನು 'ಸಮೀಕ್ಷೆ' ಎಂದು ಕರೆಯಲಾಗದು; ಸ್ವತಂತ್ರ ಮಾಧ್ಯಮಕ್ಕೆ ಕೊಟ್ಟ ಕಿರುಕುಳ ಮತ್ತು ಹಾಕಿದ ಬೆದರಿಕೆ ಎಂದೇ ಇದನ್ನು ಪರಿಗಣಿಸಬೇಕು. ಸರ್ಕಾರ ಮತ್ತು ಅದರ ನೀತಿಯ ಬಗ್ಗೆ ಎರಡೂ ವೆಬ್‌ಸೈಟ್‌ಗಳು ವಿಮರ್ಶಾತ್ಮಕವಾಗಿದ್ದವು ಮತ್ತು ಈ ಹಿಂದೆಯೂ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದ್ದವು. ನ್ಯೂಸ್‌ಲಾಂಡ್ರಿ ವೆಬ್‌ಸೈಟ್‌ನ ಕಚೇರಿಯ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಜೂನ್‌ನಲ್ಲಿ ಕೂಡ ದಾಳಿ ನಡೆಸಿದ್ದರು. ನ್ಯೂಸ್‌ಕ್ಲಿಕ್ ವೆಬ್‌ಸೈಟ್‌ನ ಕಚೇರಿಯ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಫೆಬ್ರುವರಿಯಲ್ಲಿ ದಾಳಿ ನಡೆಸಿದ್ದರು. ನಂತರದಲ್ಲಿ, ನ್ಯೂಸ್‌ಕ್ಲಿಕ್‌ನ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರ ವಿರುದ್ಧ ದಂಡನಾತ್ಮಕ ಕ್ರಮ ಕೈಗೊಳ್ಳುವುದರಿಂದ ದೆಹಲಿ ಹೈಕೋರ್ಟ್ ರಕ್ಷಣೆ ನೀಡಿತ್ತು. ನ್ಯೂಸ್‌ಲಾಂಡ್ರಿ ಮತ್ತು ನ್ಯೂಸ್‌ಕ್ಲಿಕ್ ವೆಬ್‌ಸೈಟ್ ಕಚೇರಿಗಳ ಮೇಲಿನ ದಾಳಿಯು ಪತ್ರಕರ್ತರ ಹಕ್ಕುಗಳ ಮೇಲೆ ಹಾಗೂ ಮಾಧ್ಯಮ ಸ್ವಾತಂತ್ರ್ಯದ ಮೇಲೆ ನಡೆದ ದಾಳಿ ಎಂದು ಸಂಪಾದಕರ ಕೂಟವು ಹೇಳಿದೆ. ಇಂತಹ ತನಿಖೆಗಳನ್ನು ನಡೆಸುವಾಗ ಜಾಗರೂಕತೆ ವಹಿಸಬೇಕು ಮತ್ತು ಸಂವೇದನಾಶೀಲವಾಗಿರಬೇಕು. ಆ ಮೂಲಕ ಸಂವಿಧಾನವು ಖಾತರಿಪಡಿಸಿದ ಹಕ್ಕುಗಳು ಹಾಗೂ ಸ್ವಾತಂತ್ರ್ಯಕ್ಕೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು.

ಪತ್ರಕರ್ತರು ಮತ್ತು ಮಾಧ್ಯಮ ಸಂಸ್ಥೆಗಳನ್ನು ಬೆದರಿಸುವ ಮತ್ತು ದಂಡಿಸುವ ಕ್ರಮಗಳು ಹೆಚ್ಚುತ್ತಲೇ ಇವೆ. ಹಿಂದಿಯ ಪ್ರಮುಖ ದಿನಪತ್ರಿಕೆ ದೈನಿಕ್ ಭಾಸ್ಕರ್ ಮತ್ತು ಸುದ್ದಿವಾಹಿನಿ ಭಾರತ್ ಸಮಾಚಾರ್ ಕಚೇರಿಗಳ ಮೇಲೆ ಜುಲೈನಲ್ಲಿ ದಾಳಿ ಆಗಿತ್ತು. ಸರ್ಕಾರದ ಟೀಕಾಕಾರರ ಮೇಲೆ ಮಾತ್ರವೇ ಇಂತಹ ದಾಳಿಗಳು ನಡೆಯುತ್ತಿವೆ ಎಂಬುದೇ ಈ ದಾಳಿಗಳ ಹಿಂದಿರುವ ಉದ್ದೇಶ ಏನು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಸರ್ಕಾರದ ನೀತಿಗಳು ಮತ್ತು ಕಾರ್ಯನಿರ್ವಹಣೆಯನ್ನು ವಿಮರ್ಶೆಗೆ ಒಳಪಡಿಸುವುದೇ ಅಪಾಯಕಾರಿ ಕೆಲಸವಾಗುತ್ತಿದೆ. ಸರ್ಕಾರವನ್ನು ಟೀಕಿಸುವುದು ಸಂವಿಧಾನವು ಖಾತರಿ ನೀಡಿರುವ ಮೂಲಭೂತ ಪ್ರಜಾಸತ್ತಾತ್ಮಕ ಹಕ್ಕಾಗಿದೆ. ಹಾಗಿದ್ದರೂ ಪತ್ರಕರ್ತರ ಮೇಲೆ ದಾಳಿಗಳಾಗಿವೆ ಮತ್ತು ಅವರನ್ನು ಬೆದರಿಸಲಾಗಿದೆ. ಹಲವು ಪತ್ರಕರ್ತರ ವಿರುದ್ಧ ದೇಶದ್ರೋಹದ ಪ್ರಕರಣಗಳನ್ನು ದಾಖಲಿಸಲಾಗಿದೆ. ಅವರು ಕೆಲಸ ಮಾಡುವ ಸಂಸ್ಥೆಗಳಿಗೆ ಬೆದರಿಕೆ ಹಾಕಲಾಗಿದೆ, ಅವುಗಳ ಮೇಲೆ ಒತ್ತಡ ಹೇರಲಾಗಿದೆ. ಇವೆಲ್ಲವೂ ವಾಕ್ ಸ್ವಾತಂತ್ರ್ಯದ ಮೇಲಿನ ದಾಳಿಗಳೇ ಆಗಿವೆ. ಜಾಗತಿಕ ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತದ ಸ್ಥಾನವು ಬಹಳ ಕೆಳಮಟ್ಟದಲ್ಲಿ ಇದೆ. ಸರ್ಕಾರ, ಅದರ ಸಂಸ್ಥೆಗಳು ಮತ್ತು ಇತರರು ಮಾಧ್ಯಮದ ಮೇಲೆ ನಡೆಸುತ್ತಿರುವ ದಾಳಿಗಳು ಹೀಗೆಯೇ ಮುಂದುವರಿದರೆ ಭಾರತದ ಸ್ಥಾನವು ಇನ್ನಷ್ಟು ಕೆಳಕ್ಕೆ ಕುಸಿಯುತ್ತದೆ. ಮಾಧ್ಯಮ ಸಂಸ್ಥೆಗಳನ್ನು ದಂಡಿಸುವ ಕ್ರಮಗಳು, ಮಾಧ್ಯಮ ವಲಯದಲ್ಲಿ ಭೀತಿ ಹುಟ್ಟಿಸುವ ಉದ್ದೇಶವನ್ನು ಹೊಂದಿವೆ. ಇಂತಹ ದಂಡನಾ ಕ್ರಮಗಳು ನಿಲ್ಲಲೇಬೇಕು.

ದಿನದ ಟ್ವೀಟ್

ಸವಾರಿ ಮಾಡಿ ನೋಡಿ!



ವ್ಯಾಯಾಮಕ್ಕಾಗಿ ಓಡುವುದು, ನಡಿಗೆ, ಪುಷ್-ಅಪ್‌ಗಳನ್ನೆಲ್ಲ ಮಾಡುತ್ತಾ ಸಮಯ ವ್ಯರ್ಥ ಮಾಡಬೇಡಿ. ಅದರ ಬದಲು, ಬೆಂಗಳೂರಿನಲ್ಲಿ ಒಮ್ಮೆ ವಾಹನ ಸವಾರಿ ಮಾಡಿದರೆ ಸಾಕು... ಬಿಬಿಎಂಪಿ, ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಆರ್‌ಸಿಎಲ್ ಕಾರ್ಯಗಳು ನಿಮ್ಮ ದೇಹಕ್ಕೆ ತಾನೇತಾನಾಗಿ ವ್ಯಾಯಾಮ ಆಗುವಂತೆ ಮಾಡುತ್ತವೆ. ಗುಂಡಿಗಳು, ರಸ್ತೆ ಅವ್ಯವಸ್ಥೆ ಕಳೆದ ಎರಡು ತಿಂಗಳಿನಿಂದ ಬೆಂಗಳೂರಿನಲ್ಲಿ ತೀವ್ರವಾಗಿ ಹೆಚ್ಚಾಗಿವೆ. #NammaBengaluru

ಸುಪ್ರೀತ್ ವಸಿಷ್ಠ , ನಾಗರಿಕ

ಕಿಡಿನುಡಿ



ಕೆಲವು ಖಾಸಗಿ ಮತ್ತು ವಿದೇಶಿ ವಿಶ್ವವಿದ್ಯಾಲಯಗಳು ದುಡ್ಡು ತೆಗೆದುಕೊಂಡು ಗೌರವ ಡಾಕ್ಟರೇಟ್ ಪದವಿ ನೀಡುತ್ತವೆ. ಹೀಗೆ ಡಾಕ್ಟರೇಟ್ ಪದವಿ ಖರೀದಿಸಿದವರಲ್ಲಿ ನಮ್ಮ ಶಾಸಕರೇ ಶೇ 25ರಷ್ಟಿದ್ದಾರೆ. ಇಂತಹ ಅನೇಕರ ವಿರುದ್ಧ ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಅರ್ಜಿಗಳೂ ಇವೆ! ಆರೋಪ ಹೊತ್ತಿರುವವರಿಂದ ಡಾಕ್ಟರೇಟ್ ಪದವಿ ಹಿಂಪಡೆಯುವುದಾದರೆ ಅನೇಕರು 'ಡಾಕ್ಟರ್‌ಗಿರಿ' ಕಳೆದುಕೊಳ್ಳಲಿದ್ದಾರೆ.

ಮರಿತಿಬ್ಬೇಗೌಡ, ವಿಧಾನ ಪರಿಷತ್ ಜೆಡಿಎಸ್ ಸದಸ್ಯ

50 ವರ್ಷಗಳ ಹಿಂದೆ

ಶುಕ್ರವಾರ, 17-9-1971

● ಅಭ್ಯರ್ಥಿಗಳ ಆಯ್ಕೆಗೆ 6 ಆಧಾರ– ಅರ್ಹತೆಗಳು

ಬೆಂಗಳೂರು, ಸೆ. 16– ಇಂದು ಇಲ್ಲಿ ನಡೆದ ಆಡಳಿತ ಕಾಂಗ್ರೆಸ್ಸಿನ ಪ್ರದೇಶ ಅಡ್‌ಹಾಕ್ ಸಮಿತಿಯ ಪ್ರಥಮ ಸಭೆ 'ಸಮಾಜವಾದಿ ಕಾರ್ಯಕ್ರಮ'ವನ್ನು ತ್ವರಿತವಾಗಿ ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಮುಂದಿನ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಆರಿಸಲು ಆರು ಆಧಾರ– ಅರ್ಹತೆಗಳನ್ನು ಪಾಲಿಸಬೇಕೆಂದು ಎಐಸಿಸಿಗೆ ಸರ್ವಾನುಮತದಿಂದ ಪ್ರಾರ್ಥಿಸಿತು.

ನಿರ್ಣಯದಲ್ಲಿದ್ದ ಆಧಾರ– ಅರ್ಹತೆಗಳ ಬಗ್ಗೆ ಯಾವ ಭಿನ್ನಾಭಿಪ್ರಾಯವಿಲ್ಲದಿದ್ದರೂ ಇವನ್ನು ಪಾಲಿಸಬೇಕು ಎಂದು ಎಂಪಿಸಿಸಿ ನಿರ್ಣಯ ಮಾಡಬೇಕೋ ಅಥವಾ ಎಐಸಿಸಿಗೆ ಶಿಫಾರಸು ಮಾಡಬೇಕೋ ಎಂಬ ಬಗ್ಗೆ ಜಿಜ್ಞಾಸೆ ಉಂಟಾಗಿ, ಚರ್ಚೆಯ ಕೊನೆಯಲ್ಲಿ 'ಅಭ್ಯರ್ಥಿಗಳ ಆಯ್ಕೆಯಲ್ಲಿ ಇವನ್ನು ಪಾಲಿಸಬೇಕೆಂದು ಎಐಸಿಸಿಯನ್ನು ಪ್ರಾರ್ಥಿಸುತ್ತದೆ' ಎಂಬ ವಾಕ್ಯವನ್ನು ಸೇರಿಸುವುದರ ಮೂಲಕ ಪರಿಹಾರವಾಯಿತು.

ಆಧಾರ– ಅರ್ಹತೆಗಳು: ಸಮಾಜವಾದಿ ತತ್ವಗಳನ್ನು ಅನುಷ್ಠಾನಕ್ಕೆ ತರುವುದಾಗಿ ಪ್ರತಿಯೊಬ್ಬ ಅರ್ಜಿದಾರನೂ ಹೃತ್ಪೂರ್ವಕವಾಗಿ ಪ್ರಮಾಣ ಮಾಡಿ, ಅದರಂತೆ ನಡೆಯಬೇಕು. ತಾನು ಹಾಗೂ ತನ್ನ ಕುಟುಂಬಕ್ಕೆ ಸಂಬಂಧಿಸಿದಂತೆ ಭೂ ಸುಧಾರಣಾ ಶಾಸನದ ನಿಯಮಗಳನ್ನು ಪಾಲಿಸಿರುವವರಿಗೆ ಆದ್ಯತೆ ನೀಡಬೇಕು ಮುಂತಾದವು ಸೇರಿವೆ.

● ಕೃಷಿಗೆ ಸುಲಭ ಬ್ಯಾಂಕ್ ಸಾಲಕ್ಕಾಗಿ 'ಮಾದರಿ ಮಸೂದೆ'– ರಿಸರ್ವ್ ಬ್ಯಾಂಕ್ ಶಿಫಾರಸು

ಬೆಂಗಳೂರು, ಸೆ. 16– ಕೃಷಿ ಅಭಿವೃದ್ಧಿಗೆ ಹಣಕಾಸು ನೆರವು ಒದಗಿಸುವುದರಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಎದುರಿಸಬೇಕಾಗಿರುವ ತೊಂದರೆಗಳನ್ನು ಶೀಘ್ರವೇ ನಿವಾರಿಸಬೇಕಾಗಿರುವ ಅವಶ್ಯಕತೆಯನ್ನು ರಿಸರ್ವ್ ಬ್ಯಾಂಕ್ ಗವರ್ನರ್ ಎಸ್. ಜಗನ್ನಾಥನ್ ಅವರು ಒತ್ತಾಯಪೂರ್ವಕವಾಗಿ ರಾಜ್ಯ ಸರ್ಕಾರಗಳ ಗಮನಕ್ಕೆ ತಂದಿದ್ದಾರೆ.

ಬ್ಯಾಂಕುಗಳಿಂದ ಕೃಷಿ ಸಾಲ ನೀಡಿಕೆ ಕುರಿತು ವಿವಿಧ ರಾಜ್ಯಗಳಲ್ಲಿರುವ ವಿಧಿ, ನಿಯಮಗಳ ಅಧ್ಯಯನ ಹಾಗೂ ಸುಸೂತ್ರ ಕಾರ್ಯ ನಿರ್ವಹಣೆಗೆ ಅಗತ್ಯವಾಗುವ ಮಾರ್ಪಾಡುಗಳನ್ನು ಸೂಚಿಸುವುದಕ್ಕಾಗಿ ರಿಸರ್ವ್ ಬ್ಯಾಂಕ್ ನೇಮಿಸಿದ್ದ ತಜ್ಞ ಸಮಿತಿಯ ಶಿಫಾರಸುಗಳನ್ನು ರಾಜ್ಯ ಸರ್ಕಾರಗಳಿಗೆ ಕಳುಹಿಸಲಾಗಿದೆ.

● ಚಲಿಸುತ್ತಿದ್ದ ರೈಲಿಗೆ ಪಾಕ್ ಬಾಂಬಿನಿಂದ ಹಾನಿ: ಒಂದು ಸಾವು

ಷಿಲ್ಲಾಂಗ್, ಸೆ. 16– ಅಸ್ಸಾಂನ ಕಾಚಾರ್ ಜಿಲ್ಲೆಯಲ್ಲಿ ಬುಧವಾರ ರಾತ್ರಿ, ಚಲಿಸುತ್ತಿದ್ದ ಪ್ರಯಾಣಿಕರ ರೈಲೊಂದರ ಅಡಿಯಲ್ಲಿ ಭಾರಿ ಸ್ಫೋಟಕ ಶಕ್ತಿಯ ಬಾಂಬೊಂದು ಸಿಡಿದು ಒಬ್ಬ ಸೈನಿಕ ಸತ್ತು, ಕನಿಷ್ಠ ಹದಿನೈದು ಮಂದಿ ಗಾಯಗೊಂಡರು.

ಪಕ್ಷಭೇದ ಮೀರಿ ನಮ್ಮ ನಾಯಕಿಯರು ದನಿಯೆತ್ತಿದರೆ ಮಾತ್ರ ಈ ಗುರಿ ದಕ್ಕೀತು

ಮಹಿಳಾ ಮೀಸಲಾತಿ: ಒಣಚರ್ಚೆಯ ಬೆಳ್ಳಿಹಬ್ಬ!



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಮೊನ್ನೆ ಸೆಪ್ಟೆಂಬರ್ 12ರ ಪ್ರಜಾವಾಣಿಯ 'ಇಪ್ಪತ್ತೈದು ವರ್ಷಗಳ ಹಿಂದೆ' ವಿಭಾಗದಲ್ಲಿ ಅಂದಿನ ಪ್ರಧಾನಿ ಎಚ್.ಡಿ.ದೇವೇಗೌಡರು ಲೋಕಸಭೆಯಲ್ಲಿ ಮಂಡಿಸಿದ ಮಹಿಳಾ ಮೀಸಲಾತಿ ಮಸೂದೆಯ ಸುದ್ದಿ ಪ್ರಕಟವಾಯಿತು. ಅದನ್ನು ಓದಿದ ಪತ್ರಕರ್ತ ಮಿತ್ರರೊಬ್ಬರು, ಒಂದು ಮಹತ್ವದ ಮಸೂದೆಯ ಸುತ್ತ ಇಪ್ಪತ್ತೈದು ವರ್ಷ ಸುಮ್ಮನೆ ತೌಡು ಕುಟ್ಟಿದ ಇಂಡಿಯಾದ ರಾಜಕಾರಣಿಗಳ ಬೂಟಾಟಿಕೆ ಕಂಡು ನಕ್ಕರು.

ಲೋಕಸಭೆಯಲ್ಲಿ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಸ್ಥಾನಗಳನ್ನು ಮೀಸಲಿರಿಸಲು ಹೊರಟಿದ್ದ ಈ ಕ್ರಾಂತಿಕಾರಕ ಮಸೂದೆಯು ದೇಶದ ಬಹುತೇಕ ರಾಜಕೀಯ ಪಕ್ಷಗಳಲ್ಲಿ ತುಂಬಿರುವ ಪುರುಷ ರಾಜಕಾರಣಿಗಳ ಸ್ವಾರ್ಥ ಹಾಗೂ ಹುನ್ನಾರದ ಫಲವಾಗಿ ಇಷ್ಟು ವರ್ಷ ಮೂಲೆ ಸೇರಿದೆ ಎಂಬ ಬಗ್ಗೆ ಯಾರಿಗೂ ಅನುಮಾನವಿರಲಾರದು.

1993ರಲ್ಲಿ ನರಸಿಂಹ ರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ಸಂವಿಧಾನದ 73ನೇ ತಿದ್ದುಪಡಿ ಕಾಯ್ದೆ ಮೂಲಕ ದೇಶದ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ತಂದು ಮಹಿಳೆಯರ ರಾಜಕೀಯ ಸಬಲೀಕರಣದತ್ತ ಮಹತ್ವದ ಹೆಜ್ಜೆಯಿಟ್ಟಿತು. 74ನೇ ಸಂವಿಧಾನ ತಿದ್ದುಪಡಿ ಕಾಯ್ದೆ ಮೂಲಕ ಮುನಿಸಿಪಾಲಿಟಿಗಳಲ್ಲೂ ಶೇಕಡ 33 ಮಹಿಳಾ ಮೀಸಲಾತಿ ತಂದು ಸಬಲೀಕರಣವನ್ನು ಗಟ್ಟಿಯಾಗಿಸಿತು. ನಂತರ ಕಾಂಗ್ರೆಸ್ ಬೆಂಬಲಿತ ಎಚ್.ಡಿ.ದೇವೇಗೌಡ ನೇತೃತ್ವದ ಯುನೈಟೆಡ್ ಫ್ರಂಟ್ ಸರ್ಕಾರವು ಮಹಿಳಾ ರಾಜಕೀಯ ಮೀಸಲಾತಿಯ ಬಹುಮುಖ್ಯ ಘಟ್ಟವಾಗಿ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿ ಒದಗಿಸುವ ಮಸೂದೆಯನ್ನು ಮಂಡಿಸಿತು. ಮಸೂದೆ ಕುರಿತು ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿ ವರದಿ ಸಲ್ಲಿಸಿದಾಗ, ಆಡಳಿತ ಮತ್ತು ವಿರೋಧ ಪಕ್ಷಗಳಿಗೆ ಸೇರಿದ 80 ಲೋಕಸಭಾ ಸದಸ್ಯರು 'ಈ ಮಸೂದೆ ಕಾಯ್ದೆಯಾಗಕೂಡದೆಂದು' ಸರ್ಕಾರಕ್ಕೆ ಮನವಿ ಸಲ್ಲಿಸಿದ್ದನ್ನು ಉಲ್ಲೇಖಿಸುತ್ತಾ ನಂಬೂದರಿಪಾಡ್, 'ಕಮ್ಯುನಿಸ್ಟ್ ಪಾರ್ಟಿಗಳ ಸದಸ್ಯರು ಮಸೂದೆಗೆ ಸಂಪೂರ್ಣ ಪರವಾಗಿದ್ದರು' ಎಂಬುದನ್ನು ಒತ್ತಿ ಹೇಳುತ್ತಾರೆ.

ಪುರುಷ ರಾಜಕಾರಣಿಗಳ ಹುನ್ನಾರದ ಜೊತೆಗೇ ಸಮಾಜವಾದಿ ಪಕ್ಷ ಹಾಗೂ ರಾಷ್ಟ್ರೀಯ ಜನತಾದಳದಂಥ ಪಕ್ಷಗಳು ಈ ಮಸೂದೆಗೆ ಸೂಚಿಸಿದ ತಿದ್ದುಪಡಿ ಕೂಡ ಈ ಮಸೂದೆ ಜಾರಿಯಾಗದಿರಲು ಕಾರಣ ಎನ್ನುವುದು ನಿಜ. ಆದರೆ ಈ ತಿದ್ದುಪಡಿಗಳು ನ್ಯಾಯಬದ್ಧವಾಗಿವೆ. ಕಾರಣ, ಈ ಮಸೂದೆಯ ಮೂಲ ರೂಪದಲ್ಲಿ ಮಹಿಳಾ ಮೀಸಲಾತಿ ಜಾರಿಯಾದರೆ, ಶತಮಾನಗಳಿಂದ ಸವಲತ್ತುಗಳನ್ನು ಅನುಭವಿಸಿರುವ ಪ್ರಬಲ ಜಾತಿಗಳ ಮಹಿಳೆಯರೇ ಈ ಮೀಸಲಾತಿಯ ಫಲಾನುಭವಿಗಳಾಗುವ ಸಾಧ್ಯತೆ ಹೆಚ್ಚು; ಆದ್ದರಿಂದ ದಲಿತ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಆಧಾರದ ಮೇಲೆ ಮಹಿಳಾ ಮೀಸಲಾತಿಯನ್ನು ವಿಂಗಡಿಸಬೇಕೆಂಬ ಅವರ ಬೇಡಿಕೆ ನ್ಯಾಯಬದ್ಧವಾಗಿತ್ತು. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರೋಸ್ಟರ್ ಪ್ರಕಾರ ಮಹಿಳಾ ಮೀಸಲಾತಿ ತಂದ ಮೇಲೆ ಲೋಕಸಭೆ, ವಿಧಾನಸಭೆಯ ಸ್ಥಾನಗಳಿಗೆ ರೋಸ್ಟರ್ ತರದೇ ಇರಲು ಯಾವ ಸಮರ್ಥನೆಯೂ ಇಲ್ಲ. ಈ ಸತ್ಯವನ್ನು ಮರೆಮಾಚಲು, ಯಾವ ಸರ್ಕಾರ ಈ ಮಸೂದೆ ಮಂಡಿಸಿದರೂ, ಪುರುಷರ ಸ್ಥಾನಗಳನ್ನು ಉಳಿಸಿಕೊಳ್ಳುವ ನಿರ್ಲಜ್ಜ ಸ್ವಾರ್ಥದ ಉದ್ದೇಶದಿಂದ ಮಸೂದೆಯ ವಿರುದ್ಧ ಕೂಗುವ ತಂಡಗಳು ತಯಾರಾಗುತ್ತವೆ ಅಥವಾ ತಯಾರು ಮಾಡಲಾಗುತ್ತದೆ! ಬಹುತೇಕ ಎಲ್ಲ ಸರ್ಕಾರಗಳಲ್ಲೂ ಮಹಿಳಾ ಮೀಸಲಾತಿಯ ನಿರಂತರ ಮುಂದೂಡಿಕೆಯ ಕಪಟ ನಾಟಕದ ಸೂತ್ರಧಾರಿ– ಪಾತ್ರಧಾರಿಗಳಿದ್ದಾರೆ. ತಮ್ಮ ಹಿತಾಸಕ್ತಿಗಳಿಗೆ, ಅಜೆಂಡಾಗಳಿಗೆ ಬೇಕಾದ ಮಸೂದೆಗಳನ್ನು ರಾತ್ರೋರಾತ್ರಿ ಕಾಯ್ದೆಯಾಗಿಸಬಲ್ಲ ಈ ಸೂತ್ರಧಾರಿ- ಪಾತ್ರಧಾರಿಗಳು ಮಹಿಳಾ ಮೀಸಲಾತಿಗೆ ಮಾತ್ರ ಪಿಳ್ಳೆ ನೆವ ಒಡ್ಡುತ್ತಲೇ ಬಂದಿದ್ದಾರೆ.

ಇದೆಲ್ಲಕ್ಕಿಂತ ಮುಖ್ಯವಾಗಿ, ಭಾರತೀಯ ಮನಸ್ಸಿನಲ್ಲಿ ಆಳವಾಗಿ ಬೇರೂರಿರುವ ಪುರುಷ ದುರಹಂಕಾರ, ಅಧಿಕಾರದ ಅತಿ ಸ್ವಾರ್ಥ ಹಾಗೂ ಸಾಂಪ್ರದಾಯಿಕ ಸ್ತ್ರೀ ವಿರೋಧಿ ಧೋರಣೆಗಳು ಈ ಮಸೂದೆಯು ಕಡತಗಳಲ್ಲಿ ಕೊಳೆಯಲು ಮುಖ್ಯ ಕಾರಣ. ಈ ಕಟು ಸತ್ಯ ದೇಶದ ಮಹಿಳೆಯರಿಗೆ, ಅದರಲ್ಲೂ ಮಹಿಳಾ ರಾಜಕಾರಣಿಗಳಿಗೆ ಹಾಗೂ ಬಗೆಬಗೆಯ ಅಧಿಕಾರ ಕೇಂದ್ರಗಳಲ್ಲಿರುವ ಮಹಿಳೆಯರಿಗೆ ಸ್ಪಷ್ಟವಾಗಿ ಗೊತ್ತಿರಲಿ. ಹಾಗೂ ಹೀಗೂ ಇಷ್ಟಾದರೂ ಅಧಿಕಾರ ಪಡೆದಿರುವ ಇಂಥ ಮಹಿಳೆಯರು ಗಟ್ಟಿಯಾಗಿ ನಿಲ್ಲದಿದ್ದರೆ ಮಹಿಳಾ ರಾಜಕೀಯ ಮೀಸಲಾತಿ ಎಂದೆಂದಿಗೂ ದಕ್ಕಲಾರದು.

ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರದ ಕಾಲದಲ್ಲಿ ಈ ಮಸೂದೆಯನ್ನು ಜಾರಿಗೆ ತರಲು ಪಣ ತೊಟ್ಟ ಮಹಿಳಾ ಮಂತ್ರಿಗಳ ಬದ್ಧತೆಯ ಚಿತ್ರಗಳು ಕೆಲವರಿಗಾದರೂ ನೆನಪಿರಬಹುದು. ಕಾನೂನು ಮಂತ್ರಿ ಭಾರದ್ವಾಜರ ಕೈಯಲ್ಲಿದ್ದ ಮಸೂದೆಯ ಪ್ರತಿಯನ್ನು ವಿರೋಧ ಪಕ್ಷದ ಸದಸ್ಯರೊಬ್ಬರು ಕಿತ್ತುಕೊಳ್ಳಲೆತ್ನಿಸಿದಾಗ ಕಾಂಗ್ರೆಸ್ಸಿನ ಆಗಿನ ಗಟ್ಟಿ ನಾಯಕಿ ರೇಣುಕಾ ಚೌಧರಿ ಆ ಸದಸ್ಯರನ್ನು ನೇರವಾಗಿ ಎದುರಿಸಿ ಅದನ್ನು ಭಗ್ನಗೊಳಿಸಿದ್ದರು; ಅಂಬಿಕಾ ಸೋನಿ ಹಾಗೂ ಕುಮಾರಿ ಸೆಲ್ಜಾ ಅವರು ಭಾರದ್ವಾಜರ ಅಕ್ಕಪಕ್ಕ ಕೂತು ವಿರೋಧಿಗಳಿಗೆ ಸವಾಲು ಹಾಕಿದ್ದರು! ಈ ಘಟನೆ ಎಲ್ಲ ಪಕ್ಷಗಳ ನಾಯಕಿಯರಿಗೂ ಸ್ಫೂರ್ತಿಯಾಗಬೇಕು. ಅಷ್ಟು ಹೊತ್ತಿಗೆ ಚುನಾವಣೆ ಬಂತು. ಮಸೂದೆ ಮೂಲೆ ಸೇರಿತು. ನಂತರ ಬಿಜೆಪಿ ನೇತೃತ್ವದ ಸರ್ಕಾರ ಈ ಮಸೂದೆಯನ್ನು ಮಂಡಿಸಲು ಹೊರಟಾಗ ಮಸೂದೆಯ ಪರವಾಗಿ ನಿಲ್ಲಬೇಕಾಗಿದ್ದ ಉಮಾಭಾರತಿಯಂಥವರೇ ಇದಕ್ಕೆ ತಡೆಯೊಡ್ಡಿದ್ದರು.




ಲೋಕಸಭೆಯ ಕಾಲಹರಣಗಳ ನಡುವೆಯೂ ಈ ಮಸೂದೆಗೆ ಕಾಲಕಾಲಕ್ಕೆ ಸಮರ್ಥ ಬೆಂಬಲಗಳೂ ಹುಟ್ಟಿವೆ. ಕಳೆದ ಮಹಿಳಾ ದಿನಾಚರಣೆಯ ದಿನ ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ 'ಮಹಿಳೆಯರಿಗೆ ರಾಜಕೀಯ ಮೀಸಲಾತಿ ನಮ್ಮ ತಾಯಂದಿರಿಗೆ, ಸೋದರಿಯರಿಗೆ ನಾವು ಸಲ್ಲಿಸಲೇಬೇಕಾದ ಬಹುಮುಖ್ಯ ಸೇವೆ' ಎಂದರು; 'ಜನರ ವಿರೋಧವಿದ್ದಾಗಲೂ 370ನೇ ಕಲಮನ್ನು ರದ್ದು ಮಾಡಿದ ಬಿಜೆಪಿ ನೇತೃತ್ವದ ಸರ್ಕಾರ ಇಷ್ಟೊಂದು ಬಹುಮತ ಇದ್ದಾಗಲೂ ಮಹಿಳಾ ರಾಜಕೀಯ ಮೀಸಲಾತಿಯನ್ನು ಯಾಕೆ ಜಾರಿ ಮಾಡಿಲ್ಲ?' ಎಂದು ಕೇಳಿದರು. ಈ ಪ್ರಶ್ನೆಯನ್ನು ದೇಶದ ಅನೇಕ ವಲಯಗಳು ಕೇಳುತ್ತಲೇ ಇವೆ.

ಆದರೆ ಈ ಪ್ರಶ್ನೆಯನ್ನು ಇಂಡಿಯಾದ ರಾಜಕೀಯ ಪಕ್ಷಗಳು ಮಾತ್ರ ತಮ್ಮೊಳಗೆ ಬಿಟ್ಟುಕೊಂಡಿಲ್ಲ. ಈ ದಿಸೆಯಲ್ಲಿ ರಾಜಕೀಯ ಪಕ್ಷಗಳು ಪ್ರಾಮಾಣಿಕವಾಗಿದ್ದರೆ, ಮೊದಲು ತಂತಮ್ಮ ಪಕ್ಷಗಳ ಸಂಘಟನೆಗಳ ಒಳಗೆ ಈ ಮೀಸಲಾತಿಯನ್ನು ಜಾರಿ ಮಾಡಬೇಕು. ಕರ್ನಾಟಕದ ಈಚಿನ ಸಚಿವ ಸಂಪುಟಗಳಲ್ಲಿನ ಮಹಿಳಾ ಮಂತ್ರಿಗಳ ಸಂಖ್ಯೆ ನೋಡಿ: ಶೋಭಾ ಕರಂದ್ಲಾಜೆಯವರ ರಾಜೀನಾಮೆಯ ನಂತರ ಯಡಿಯೂರಪ್ಪನವರು ಒಬ್ಬ ಮಹಿಳಾ ಮಂತ್ರಿಯೂ ಇಲ್ಲದೆ ಸರ್ಕಾರ ನಡೆಸಿದ್ದರು. ನಂತರದ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಇಬ್ಬರು ಸಚಿವೆಯರಿದ್ದರು. ಮತ್ತೆ ಯಡಿಯೂರಪ್ಪ, ಬೊಮ್ಮಾಯಿ ನೇತೃತ್ವದ ಸಂಪುಟಗಳಲ್ಲೂ ಒಬ್ಬರೇ ಸಚಿವೆ. ಎಲ್ಲ ರಾಜಕೀಯ ಪಕ್ಷಗಳ ಈ ಸ್ತ್ರೀ ವಿರೋಧಿ ಸಂಚನ್ನು ಮಹಿಳಾ ಲೀಡರುಗಳು, ಮತದಾರ್ತಿಯರು, ಚಿಂತಕಿಯರು, ವಿದ್ಯಾರ್ಥಿನಿಯರು ತಾತ್ವಿಕವಾಗಿಯಾದರೂ ವಿರೋಧಿಸಲಾರಂಭಿಸಿದರೆ ಮಹಿಳಾ ರಾಜಕೀಯ ಮೀಸಲಾತಿಯ ಪ್ರಶ್ನೆಗೆ ಮತ್ತೆ ಬಲ ಬಂದೀತು.

ಈ ಪುರುಷ ರಾಜಕೀಯದ ವರಸೆ- ಹುನ್ನಾರಗಳು ಗೊತ್ತಿರುವಾಗಲೂ ಮಹಿಳಾ ರಾಜಕಾರಣಿಗಳು ಪಕ್ಷಭೇದ ಮೀರಿ ಒಟ್ಟಾಗಿ ಒಂದು 'ವರ್ಗ'ವಾಗಿ ರೂಪುಗೊಂಡು ಈ ಚರ್ಚೆಯೆತ್ತಿದ್ದು ಕಡಿಮೆ. ಈ ಶತಮಾನದಲ್ಲಾದರೂ ದೇಶದ ಮುಂಚೂಣಿ ಮಹಿಳಾ ರಾಜಕಾರಣಿಗಳಾದ ಸೋನಿಯಾ ಗಾಂಧಿ, ಮಾಯಾವತಿ, ಮಮತಾ ಬ್ಯಾನರ್ಜಿ, ವಸುಂಧರಾ ರಾಜೆ, ಪ್ರಿಯಾಂಕಾ ಗಾಂಧಿ, ಮೆಹಬೂಬಾ ಮುಫ್ತಿ, ಸ್ಮೃತಿ ಇರಾನಿ, ಕೇರಳದ ಶೈಲಜಾ ಟೀಚರ್ ಥರದ ಕೆಲವು ನಾಯಕಿಯರಾದರೂ ಪಕ್ಷದ ಗಡಿ ಮೀರಿ ಮಹಿಳಾ ಮೀಸಲಾತಿ ಕುರಿತು ಚರ್ಚಿಸಲಿ; ನಮ್ಮ ಮಾಧ್ಯಮಗಳಲ್ಲಿರುವ, ಸೋಷಿಯಲ್ ಮೀಡಿಯಾದಲ್ಲಿರುವ ಮಹಿಳೆಯರೆಲ್ಲ ಒಟ್ಟಾಗಿ ಈ ಪ್ರಶ್ನೆಯನ್ನು ಮುಂಚೂಣಿಗೆ ತರಲಿ. ಜಾತಿ, ವರ್ಗಾಧಾರಿತ ಮಹಿಳಾ ಮೀಸಲಾತಿಯ ಸರಳ ಪ್ರಶ್ನೆಯನ್ನು ಕೂಡಲೇ ಬಗೆಹರಿಸಿಕೊಂಡು ಒಂದೇ ದನಿಯಲ್ಲಿ ಮಾತಾಡಲಿ.

ಮಹಿಳಾ ಮೀಸಲಾತಿ ಚಿಂತನೆಯ ಬೆಳ್ಳಿಹಬ್ಬದ ಸ್ತ್ರೀ ಬೈಗುಳಗಳಿಂದಾದರೂ ಪುರುಷಕೇಂದ್ರಿತ ಅಧಿಕಾರದ ರಾಜಕೀಯದ ಬೇರುಗಳು ಅಲುಗಾಡಲಿ; ದೇಶದಲ್ಲಿ ಮಹಿಳಾ ರಾಜಕಾರಣ ಹಾಗೂ ಮಹಿಳಾ ಸ್ವಾತಂತ್ರ್ಯದ ಹೊಸ ಘಟ್ಟ ಶುರುವಾಗಲಿ!

ಚುರುಮುರಿ



ಜೋಡೆತ್ತು ಸವಾರಿ

● ಬಿ.ಎನ್.ಮಲ್ಲೇಶ್

ವಿಧಾನಸೌಧಕ್ಕೆ ಜೋಡೆತ್ತುಗಳು ಮೆರವಣಿಗೆ ಹೋಗಿ ಬಂದ ಮೇಲೆ ಸಂಜೆ ಎತ್ತುಗಳೆಲ್ಲ ಸಭೆ ಸೇರಿದ್ದವು. ಮಾಜಿ ಮುಖ್ಯಮಂತ್ರಿ, ಭಾವಿ ಮುಖ್ಯಮಂತ್ರಿ, ಹಾಲಿ ಶಾಸಕರುಗಳನ್ನೆಲ್ಲ ಹೊತ್ತ ಜೋಡೆತ್ತುಗಳಿಗೆ ಅಭಿನಂದನೆಯ ಸುರಿಮಳೆಯೇ ಆಯಿತು. 'ಅಂತೂ ನೀವೂ ವಿಧಾನಸೌಧದ ಮೆಟ್ಟಲು ಹತ್ತಿ ಬಂದ್ರಿ...' ಮುದಿ ಎತ್ತೊಂದು ವ್ಯಂಗ್ಯವಾಡಿತು.

'ಯಾಕೆ? ಎಂತೆಂಥೋರೋ ಹತ್ತಿದಾರಂತೆ, ನಾವು ಹತ್ತಬಾರದಾ?' ಜೋಡೆತ್ತುಗಳಿಗೆ ಸಿಟ್ಟು ಬಂತು. 'ಅದೇ, ಅದೇ ನಾನು ಹೇಳಿದ್ದು... ಎಂತೆಂಥೋರೋ ಹತ್ತಿರುವ ಅಲ್ಲಿಗೆ ನಮ್ಮಂಥ ಕಾಯಕ ಜೀವಿಗಳು, ಪ್ರಾಮಾಣಿಕರು ಹೋಗಬಾರದಿತ್ತು ಅಂತ...' ಮುದಿ ಎತ್ತು ಮಾತು ತಿರುಗಿಸಿತು.

'ಹೋಗ್ಲಿ ಬಿಡ್ರಪ್ಪ, ವಿಧಾನಸೌಧ ಹೆಂಗಿತ್ತು ಅದನ್ನ ಹೇಳ್ರಿ' ಗಿಡ್ಡ ಎತ್ತಿಗೆ ಕುತೂಹಲ.

'ಅದಾ? ಅಬಾ ಅಬಾ... ಎಷ್ಟು ದೊಡ್ಡದೈತಿ ಗೊತ್ತಾ? ನಮ್ಮ ಕೊಟ್ಟಿಗೆಯ ನೂರರಷ್ಟು...'

'ಅಂದ್ರೆ ಒಂದು ಸಾವಿರ ದನ ಕಟ್ಟಬೋದಾ?'

'ಇನ್ನೂ ಜಾಸ್ತಿ ಕಟ್ಟಬಹುದು. ಮೇವು ತರೋ ಕಷ್ಟನೇ ಇಲ್ಲ, ಎಲ್ಲ ಅಲ್ಲೇ ಸಿಗುತ್ತಂತೆ'.

'ವಿಧಾನಸೌಧದಲ್ಲಿ ಹೆಗ್ಗಣಗಳ ಕಾಟ ಅಂತಿದ್ರು, ನಿಮಗೇನರೆ ಕಂಡ್ವಾ?' ಕರಿ ಎತ್ತು ಕೇಳಿತು. 'ಹೇ... ಹೆಗ್ಗಣಗಳು ಹಗಲು ಹೊತ್ತು ಕಾಣ್ತಾವಾ? ನೀನೊಳ್ಳೆ' ಜೋಡೆತ್ತುಗಳು ನಕ್ಕವು.

'ಅಲ್ಲ ಕಣ್ರೊ, ಬೆಂಗ್ಳೂರಲ್ಲಿ ರಸ್ತೆ ಬೆಣ್ಣೆಯಂಗಿದ್ರೂ ಯಾಕೆ ಜೋಲಿ ಹೊಡೀತಿತ್ತು ಬಂಡಿ?' ಮುದಿ ಎತ್ತು ಪ್ರಶ್ನಿಸಿತು.

'ಮತ್ತೇನ್ಮಾಡೋದು? ನಮ್ಮದು ಎತ್ತಿನ ಬಂಡಿನೋ ಪಂಚಲಿಂಗೇಶ್ವರ ಬಸ್ಸೋ? ತೀರಾ ಅಷ್ಟಾಕಂದು ಜನ ಹತ್ತಿದ್ರೆ ಹೆಂಗೆ?'

'ಅದ್ಸರಿ, ಆದ್ರೆ ಬಂಡಿ ಬೀಳಬಾರದಿತ್ತು ಅಲ್ವ?' ಬಿಳಿ ಎತ್ತು ಕೇಳಿತು.

'ನಮ್ಮದೇನೂ ತಪ್ಪಿಲ್ಲ, ಮಾಜಿ ಸಾಹೇಬ್ರು ಆ ಕಡೆಗೆ, ಭಾವಿ ಸಾಹೇಬ್ರು ಈ ಕಡೆಗೆ ಹಗ್ಗ ಎಳೆದ್ರೆ ಬಂಡಿ ಬೀಳದೆ ಏನಾಗುತ್ತೆ? ಬಂಡಿ ನಡೆಸೋದು ಅಂದ್ರ ಏನು ಸರ್ಕಾರ ನಡೆಸಿದಂಗಾ?'

ಜೋಡೆತ್ತುಗಳ ಮಾತಿಗೆ ಎಲ್ಲ ಎತ್ತುಗಳೂ ಗೊಳ್ಳೆಂದು ನಕ್ಕವು.

ಸಂಗತ

ಹೆಸರಿಗೆ ಮಾತ್ರ 'ಕಲ್ಯಾಣ'

ಏನೆಲ್ಲಾ ಇದ್ದೂ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ, ಶಿಕ್ಷಣ, ಆರೋಗ್ಯ, ಕೈಗಾರಿಕೆ, ಸಾಮಾಜಿಕ ಸ್ಥಾನಮಾನ ಎಲ್ಲದರಲ್ಲಿ ಕಲ್ಯಾಣ ಕರ್ನಾಟಕಕ್ಕೆ ಕಟ್ಟಕಡೆಯ ಸ್ಥಾನ. ಯಾಕಿರಬಹುದು?

● ಮಲ್ಲಿಕಾರ್ಜುನ ಕಡಕೋಳ

ಐವರು ಸಂಸದರು, ಎಂಎಲ್‌ಸಿಗಳು ಸೇರಿದಂತೆ ಎಪ್ಪತ್ತು ಮಂದಿ ಶಾಸಕರು, ಲೆಕ್ಕವಿಲ್ಲದಷ್ಟು ಮಂದಿ ಗ್ರಾಮ ಪಂಚಾಯಿತಿ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರು, ಅಭಿವೃದ್ಧಿ ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರು, ಸದಸ್ಯರು... ಹೀಗೆ ಜನಪ್ರತಿನಿಧಿಗಳು ಮತ್ತು ನೇಮಕಾತಿ ಪ್ರತಿನಿಧಿಗಳಿಂದ ಕಲ್ಯಾಣ ಕರ್ನಾಟಕ ತುಂಬಿ ತುಳುಕುತ್ತಿದೆ. ಹೆಸರಿಗೆ ಕಲ್ಯಾಣ ಕರ್ನಾಟಕ ಆಗಿ ಎರಡು ವರ್ಷಗಳು ಕಳೆದುಹೋದವು. ಜನರ ಉಸಿರಲ್ಲಿ ಮಾತ್ರ ಮತ್ತದೇ ಹಳೆಯ ಹೈದರಾಬಾದ್ ಕರ್ನಾಟಕದ ನಿಟ್ಟುಸಿರುಗಳು.

ಮೂರು ಬಾರಿ ಮುಖ್ಯಮಂತ್ರಿ ಅವಕಾಶ, ಹತ್ತಾರು ಬಾರಿ ಕೇಂದ್ರದ ಸಚಿವ ಸ್ಥಾನ ದೊರಕಿದೆ. ಲೆಕ್ಕವಿಲ್ಲದಷ್ಟು ಬಾರಿ ರಾಜ್ಯದ ಮಂತ್ರಿ, ನಿಗಮ, ಮಂಡಳಿಗಳ ಅಧಿಕಾರ ಸಿಕ್ಕಿದೆ. ಸಾಲದ್ದಕ್ಕೆ 371(ಜೆ) ಸೌಲಭ್ಯ. ನೋಡುವವರ ಕಣ್ಣಿಗೆ ಇನ್ನೇನು ಬೇಕು ಎನ್ನುವಷ್ಟು ಅವಕಾಶಗಳ ತೋರಿಕೆಗಳು. ತುಂಬಿ ಹರಿವ ಕೃಷ್ಣೆ, ಭೀಮೆ, ತುಂಗಭದ್ರೆ, ಇತರೆ ಸಣ್ಣಪುಟ್ಟ ಉಪನದಿಗಳು. ಎರಡು ಬೃಹತ್ ಪ್ರಮಾಣದ ಅಣೆಕಟ್ಟುಗಳು. ಒಂದೆರಡು ವಿಮಾನ ನಿಲ್ದಾಣಗಳು. ಐದಾರು ವಿಶ್ವವಿದ್ಯಾಲಯಗಳು. ಕುಳುಬಾನ ಒಟ್ಟಿದಂತೆ ಪುಸ್ತಕಗಳನ್ನು ಪ್ರಕಟಿಸಿದ, ತಿಂಗಳಿಗೆ ಲಕ್ಷಗಟ್ಟಲೆ ಪಗಾರ ಪಡೆಯುವ ನೂರಾರು ಮಂದಿ ಪ್ರಾಧ್ಯಾಪಕರು... ಹೀಗೆ ಕಣ್ಣಿಗೆ ನೆದರಾಗುವಷ್ಟು ಅವಕಾಶಗಳ ಪಟ್ಟಿಗಳು.

ಇಷ್ಟೆಲ್ಲಾ ಇದ್ದೂ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕಲ್ಯಾಣ ಕರ್ನಾಟಕಕ್ಕೆ ಕಟ್ಟಕಡೆಯ ಸ್ಥಾನ. ಶಿಕ್ಷಣ, ಆರೋಗ್ಯ, ಕೈಗಾರಿಕೆ, ಸಾಮಾಜಿಕ ಸ್ಥಾನಮಾನ ಎಲ್ಲದರಲ್ಲೂ ಕೊನೆಯ ಸ್ಥಾನಮಾನ. ಯಾಕಿರಬಹುದು? ನಾವು ಹಿಂದುಳಿದಿದ್ದೇವೆಯೇ? ಅಥವಾ ಹಿಂದುಳಿಸಲ್ಪಟ್ಟಿದ್ದೇವೆಯೇ?

ಈ ಭಾಗದ ರಾಜಕಾರಣಿಗಳು ತಮಗೆ ರಾಜಕೀಯವಾಗಿ ಸಿಗಬಹುದಾದ ಅಗತ್ಯ ಅವಕಾಶಗಳನ್ನು ಸಾದ್ಯಂತವಾಗಿ ಪಡೆದುಕೊಂಡಿದ್ದಾರೆ. ಒಮ್ಮೊಮ್ಮೆ ಭರ್ಜರಿಯಾಗಿ ಹೈ.ಕ. ಎಂಬ ಹಿಂದುಳಿದ ಹೆಸರಲ್ಲಿ ಎಲ್ಲ ಹೊಡೆದುಕೊಂಡಿದ್ದಾರೆ. ಹೀಗೆ ಪಡಕೊಂಡು ಮತ್ತು ಹೊಡಕೊಂಡು ಎಪ್ಪತ್ತೈದು ವರ್ಷಗಳು ಕಳೆದು ಹೋಗುತ್ತಿರುವಾಗ ಎಲ್ಲ ಪಕ್ಷಗಳ ರಾಜಕಾರಣಿಗಳು ಯಾವತ್ತಾದರೂ ತಮ್ಮ 'ಆತ್ಮವಂಚನೆ' ಕುರಿತು ಆತ್ಮಾವಲೋಕನ ಮಾಡಿಕೊಂಡಿದ್ದಾರೆಯೇ? ಖಂಡಿತಾ 'ಇಲ್ಲ' ಎನಿಸುತ್ತದೆ. ಅವರ ಮೋಜು ಮಸ್ತಿ ಮೇಜವಾನಿಗೆ ಸರ್ಕಾರದ ಎಲ್ಲ ಸೌಲಭ್ಯಗಳನ್ನೂ ಯಾವುದೇ ದರಕಾರ ಇಲ್ಲದೇ ದಕ್ಕಿಸಿಕೊಂಡಿದ್ದಾರೆ. ಜನರ ಕುರಿತು ಧೇನಿಸುವ ಹರಕತ್ತು ಅವರಿಗಿರುವುದಿಲ್ಲ. ಆದರೆ ಜನರು ಮಾತ್ರ ತಮ್ಮ ಬವಣೆಗಳ ಕುರಿತು ತಾವೇ ಯೋಚಿಸಬೇಕಾದ ದುಃಸ್ಥಿತಿ ಮುಂದುವರಿದಿದೆ.

ಅಷ್ಟಕ್ಕೂ ರಾಜಕೀಯ ಅಧಿಕಾರದಿಂದಲೇ ಒಂದು ಪ್ರದೇಶದ ಅಭಿವೃದ್ಧಿ ಸಾಧ್ಯವೇ? ವರ್ಷದಲ್ಲಿ ನಮಗೆ ಎರಡೆರಡು ಸ್ವಾತಂತ್ರ್ಯ ಉತ್ಸವ ಆಚರಿಸುವ ಅವಕಾಶಗಳು. ಒಂದು ಮಾತು ಮಾತ್ರ ಖರೇ. ಅದೇನೆಂದರೆ ಕಲ್ಯಾಣ ಕರ್ನಾಟಕಕ್ಕೆ ದೊರಕಿರುವ ಸರ್ಕಾರಿ ಅವಕಾಶಗಳಿಂದ ರಾಜಕಾರಣಿಗಳು ಮತ್ತು ಬಹುಪಾಲು ಅಧಿಕಾರಿಗಳು ಮಾತ್ರ ಸೊಂಪಾಗಿದ್ದಾರೆ. ನಮ್ಮ ಭಾಗದ ಶಾಸಕ ಮಹಾಶಯರು ತಮಗೆ ಸರ್ಕಾರ ನೀಡುವ ಅನುದಾನವನ್ನು ನೆಟ್ಟಗೆ ಉಪಯೋಗಿಸುವ ಗೋಜಿಗೂ ಹೋಗದವರು. ಎಲ್ಲದಕ್ಕೂ 'ಜಾಂದೇ ಚೋಡೋ' ಎನ್ನುವ ವಾಡಿಕೆ. ಈ ಬಾರಿ ಕಲಬುರ್ಗಿ ಜಿಲ್ಲೆಯ ಶಾಸಕ ಮಹಾನುಭಾವರು ತಮ್ಮ ಅನುದಾನದಲ್ಲಿ ಶೇಕಡ 7.5ರಷ್ಟು ಮಾತ್ರ ಬಳಕೆ ಮಾಡಿಕೊಂಡಿದ್ದಾರೆ. ಇದು ಬರೀ ಕಲಬುರ್ಗಿಯ ಕತೆಯಲ್ಲ, ಇತರ ಜಿಲ್ಲೆಗಳೂ ಇದಕ್ಕೆ ಹೊರತಾಗಿಲ್ಲ. ತಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ತಮ್ಮ ಕೈಯಲ್ಲಿರುವ ಎರಡು ಕೋಟಿ ರೂಪಾಯಿ ಖರ್ಚು ಮಾಡುವ ಅವಕಾಶವನ್ನೇ ಸದುಪಯೋಗ ಮಾಡಿಕೊಳ್ಳದವರಿಂದ ಹೊಸ ಯೋಜನೆಗಳು, ಯೋಚನೆಗಳನ್ನು ನಿರೀಕ್ಷಿಸಲು ಸಾಧ್ಯವೇ?



ಹೆಚ್ಚೆಂದರೆ ಚುನಾವಣೆಯಲ್ಲಿ ಇವರನ್ನು ಸೋಲಿಸಬಹುದು. ಆದರೆ ನಂತರ ಆರಿಸಿ ಬರುವವರೂ ಇಂತಹವರೇ ಆಗಿರುತ್ತಾರೆ. ಹಾಗೆಂದು ಪರ್ಯಾಯ ಪರಿಹಾರವೇ ಇಲ್ಲವೆಂದೇನಿಲ್ಲ. ಇದೆ, ಅದನ್ನು ಪ್ರಯೋಗ ಮಾಡಿ ನೋಡಬೇಕಾಗಿದೆ.

ಕೇವಲ ಚುನಾವಣೆಗಳ ಸೋಲು ಗೆಲುವುಗಳೇ ಜನಪ್ರತಿನಿಧಿಯನ್ನು ಹದ್ದುಬಸ್ತಿನಲ್ಲಿಡುವ ಮತ್ತು ಪ್ರದೇಶ ಅಭಿವೃದ್ಧಿಯ ಮಾನದಂಡಗಳಲ್ಲ. ಜನಪ್ರತಿನಿಧಿಗಳು ಗೆದ್ದ ಮೇಲೆ ಹೆಚ್ಚು ಹತ್ತಿರವಾಗುವುದು ಬೆಂಗಳೂರಿಗೆ. ಅದರ ಜತೆಗೆ ಪ್ರಭುತ್ವದ ಕುರ್ಚಿಗೆ. ಅಬ್ಬಬ್ಬಾ ಅಂದರೆ ತಾವೇ ಸಾಕಿಕೊಂಡ ತಮ್ಮ ಭಟ್ಟಂಗಿಗಳಿಗೆ ತುಸು ಹತ್ತಿರವಾಗಿರಬಲ್ಲರು.

ಅವರು ಇನ್ನೂ ಇಂತಹ ಹತ್ತು ಹಲವು ಅಪಸವ್ಯಗಳ ಆಗರವೇ ಆಗಿರುತ್ತಾರೆ. ಜನಪ್ರತಿನಿಧಿಗಳು ಗ್ರಾಮ ಪಂಚಾಯಿತಿಯಿಂದ ಹಿಡಿದು ಲೋಕಸಭೆ ಸದಸ್ಯನವರೆಗೂ ಯಾರೇ ಆಗಿರಲಿ, ಅವರು ಜನರಿಗೆ ಹೆಚ್ಚು ಹತ್ತಿರವಾಗಿರುವಂತೆ, ಸ್ಥಳೀಯ ಸಮಸ್ಯೆಗಳಿಗೆ ಕರಾರುವಾಕ್ಕಾಗಿ ಸ್ಪಂದಿಸುವಂತೆ ನೋಡಿಕೊಳ್ಳುವ ಜವಾಬ್ದಾರಿ ಮತದಾರರ ಸಾರ್ವತ್ರಿಕ ಹೊಣೆ.

ಇದು ಪಕ್ಷಾತೀತ ರಾಜಕೀಯ ಪ್ರಜ್ಞೆಯಾಗಿ ಅಭಿವೃದ್ಧಿಗೊಳ್ಳಬೇಕು. ತಾವಿರುವ ಪಕ್ಷಗಳ ಕಾರ್ಯಕರ್ತರಂತೆ ಮಾತನಾಡುವುದನ್ನೇ ರಾಜಕೀಯ ಪ್ರಜ್ಞೆ ಎಂದು ನಾವೆಲ್ಲ ತಪ್ಪಾಗಿ ತಿಳಿದುಕೊಂಡಿದ್ದೇವೆ. ದುರಂತವೆಂದರೆ, ಇದನ್ನು ತಿಳಿಸಿ ಹೇಳುವವರ ಕೊರತೆ. ಹೇಳಿದರೂ ಸಮಾಧಾನದಿಂದ ಕೇಳುವವರ ಕೊರತೆ. ಕಡೆಯಪಕ್ಷ ನಾವು ಇರುವ ವಾಸ್ತವ ಒಪ್ಪಿಕೊಳ್ಳುವುದನ್ನು ಕಲಿಯಬೇಕಿದೆ. ಅದಕ್ಕೆ ಬದಲು ಕೊಂಬು ಕಿತ್ತ ಕಳಗಿಯಂತೆ ವರಾ... ವರಾ... ಒದರುವುದನ್ನು ಕಲಿತಿದ್ದೇವೆ. ಅದನ್ನಾದರೂ ಬಿಡಬೇಕಿದೆ.

ವಾಚಕರ ವಾಣಿ

ಪೆಟ್ರೋಲ್ ಬಂಕ್ ಗ್ರಾಹಕಸ್ನೇಹಿ ಆಗಲಿ

ದೇಶದಾದ್ಯಂತ ಎಲ್ಲ ಪೆಟ್ರೋಲ್ ಬಂಕ್‌ಗಳಲ್ಲಿ ವಾಹನಗಳ ಗಾಲಿಯ ಗಾಳಿ ಪರೀಕ್ಷೆ, ಕುಡಿಯುವ ನೀರು, ಶೌಚಾಲಯದಂಥ ಕನಿಷ್ಠ ಸೌಲಭ್ಯಗಳನ್ನು ಒದಗಿಸುವುದು ಕಡ್ಡಾಯವೆಂದು ತೈಲ ಕಂಪನಿಗಳು ಹೇಳುತ್ತವೆ. ಆದರೆ ಕೆಲವೇ ಕೆಲವು ದೊಡ್ಡ ದೊಡ್ಡ ಪೆಟ್ರೋಲ್ ಬಂಕ್‌ಗಳನ್ನು ಹೊರತುಪಡಿಸಿದರೆ ಬಹುತೇಕ ಪೆಟ್ರೋಲ್ ಬಂಕ್‌ಗಳಲ್ಲಿ ಈ ಯಾವ ವ್ಯವಸ್ಥೆಯೂ ಇರುವುದಿಲ್ಲ. ವಿಶೇಷವಾಗಿ ಗ್ರಾಮೀಣ ಪ್ರದೇಶದ ಬಂಕ್‌ಗಳಲ್ಲಿ ಇಂತಹ ವ್ಯವಸ್ಥೆಗಳನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ನೆಪಕ್ಕೆಂಬಂತೆ ಒಂದು ಗಾಳಿ ಪರೀಕ್ಷಕ ಯಂತ್ರವನ್ನು ಒಂದು ಮೂಲೆಯಲ್ಲಿ ಸ್ಥಾಪಿಸಿದ, ನಿರ್ವಹಣೆ ಇಲ್ಲದೆ ತುಕ್ಕು ಹಿಡಿದಿರುವ ಯಂತ್ರೋಪಕರಣಗಳು ಎಲ್ಲ ಬಂಕ್‌ಗಳಲ್ಲಿ ಸಾಮಾನ್ಯ ದೃಶ್ಯ.

ಬಂಕ್‌ಗಳ ವ್ಯವಸ್ಥೆ- ನಿರ್ವಹಣೆಯನ್ನು ಗಮನಿಸಲೆಂದೇ ತೈಲ ಕಂಪನಿಗಳು ಕೈತುಂಬ ವೇತನ ಪಾವತಿಸಿ, ಉಸ್ತುವಾರಿ ಅಧಿಕಾರಿಗಳನ್ನು ನೇಮಕ ಮಾಡಿರುತ್ತವೆ. ಆದರೂ ಅವ್ಯವಸ್ಥೆಗಳನ್ನು ಸರಿಪಡಿಸಲಾಗಿಲ್ಲ. ಮುಂದಿನ ದಿನಗಳಲ್ಲಾದರೂ ಸಂಬಂಧಿತ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಗ್ರಾಹಕರಿಗೆ ಸೂಕ್ತ ಅನುಕೂಲಗಳನ್ನು ಒದಗಿಸುವ ಪ್ರಯತ್ನ ಮಾಡಲಿ.

ಡಾ. ಚೆನ್ನು ಅ. ಹಿರೇಮಠ, ರಾಣೆಬೆನ್ನೂರು

ಉಸಿರುಗಟ್ಟಿಸುವ ಕಾನೂನು ಅಗತ್ಯವೇ?

ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗೆ ಹದಗೆಟ್ಟ ರಸ್ತೆಯನ್ನು ದುರಸ್ತಿ ಮಾಡಿದವರನ್ನು ಬಂಧಿಸಿರುವುದು ವರದಿಯಾಗಿದೆ (ಪ್ರ.ವಾ., ಸೆ. 15). ಅಭಿವೃದ್ಧಿ ಹೆಸರಲ್ಲಿ ಅಸಂಖ್ಯಾತ ಮರಗಳ ಮಾರಣಹೋಮ, ಎಲ್ಲೆ ಮೀರಿದ ಗಣಿಗಾರಿಕೆ ಹೀಗೆಲ್ಲಾ ಒಂದೆಡೆ ರಾಜಾರೋಷವಾಗಿ ಅಕ್ರಮ ನಡೆಯುತ್ತಿರುವ ರಾಜ್ಯದಲ್ಲಿ ರಾಷ್ಟ್ರೀಯ ಉದ್ಯಾನದ ನಿವಾಸಿಗಳು ಸ್ವಚ್ಛ ಪರಿಸರದಲ್ಲಿ ಉಸಿರು ಬಿಗಿಹಿಡಿದು ಬದುಕುವ ಕಾನೂನುಗಳೇಕೆ? ದೈನಂದಿನ ಜೀವನೋಪಾಯಕ್ಕಾಗಿ ಬಳಸುವ ರಸ್ತೆಯು ಹಾಳಾದ ಬಗ್ಗೆ ಮಾಹಿತಿ ಇದ್ದರೂ ಅದನ್ನು ಸರ್ವಋತು ರಸ್ತೆಯನ್ನಾಗಿ ದುರಸ್ತಿ ಮಾಡುವ ಕೆಲಸಕ್ಕೆ ಸ್ವತಃ ಅರಣ್ಯ ಇಲಾಖೆ ಯಾಕೆ ಮುಂದಾಗಲಿಲ್ಲ? ನಾಳೆಯ ದಿನ ಸ್ಥಳೀಯ ಅಂಗನವಾಡಿ ಕೇಂದ್ರಕ್ಕೂ ಬೀಗ ಜಡಿದು, ಆದಿವಾಸಿಗಳ ಮಕ್ಕಳ ಶಿಕ್ಷಣದ ಹಕ್ಕಿಗೂ ಚ್ಯುತಿಯುಂಟಾಗುವಂತಹ ಅರಣ್ಯ ಇಲಾಖೆಯ ಇಂಥ ಕಾನೂನನ್ನು ತಿದ್ದುಪಡಿಗೊಳಪಡಿಸುವ ಜರೂರಿದೆ.

ಗೋಪು ಗೋಖಲೆ, ಶಿಶಿಲ ಉಮಂತಿಮಾರು

ಕಾಯಕ ನಿಷ್ಠೆಗೆ ಇದ್ದೇಇದೆ ಜನಬೆಂಬಲ

ಆರೋಗ್ಯ ಸಚಿವರೇ ಕರೆ ಮಾಡಿದರೂ ತಾವು ನಿಮ್ಹಾನ್ಸಿಗೆ ಕಳಿಸಿದ ರೋಗಿಗೆ ಕೂಡಲೇ ವೆಂಟಿಲೇಟರ್ ಸಿಗಲಿಲ್ಲವೆಂದು ಜನಪ್ರತಿನಿಧಿಯೊಬ್ಬರು ಆಕ್ರೋಶಗೊಂಡದ್ದು, ವಿಧಾನಸಭೆಯಲ್ಲಿ ಈ ಕುರಿತು ಚರ್ಚೆಯಾದದ್ದು (ಪ್ರ.ವಾ., ಸೆ. 16) ಸುದ್ದಿಯಾಗಿದೆ. ಏಳೂವರೆ ಕೋಟಿ ಜನರ ಕರ್ನಾಟಕಕ್ಕೆ, ಒಂದು ಕೋಟಿ ಜನರ ಬೆಂಗಳೂರಿಗೆ ಎಷ್ಟು ವೆಂಟಿಲೇಟರ್‌ಗಳನ್ನು ತಾವು ಒದಗಿಸಿದ್ದೇವೆಂದು ಪ್ರಶ್ನಿಸಿಕೊಳ್ಳದ ಜನಪ್ರತಿನಿಧಿಗಳು, ನಿಮ್ಹಾನ್ಸಿನ ನಿರ್ದೇಶಕರು ತಮ್ಮ ಫೋನು ಎತ್ತುವುದಿಲ್ಲವೆಂದು ಕಿಡಿಕಾರಿದ್ದಾರೆ. ಇದರರ್ಥ ಯಾರೋ ಮಂತ್ರಿ– ಜನಪ್ರತಿನಿಧಿ ಫೋನಾಯಿಸಿದರೆ ವೆಂಟಿಲೇಟರ್‌ಗಳು ಸೃಷ್ಟಿಯಾಗುವವೇ? ಇರುವ ರೋಗಿಯನ್ನು ಕಳಿಸಿ 'ಅವರು' ಕಳಿಸಿದ ರೋಗಿಗೆ ವೆಂಟಿಲೇಟರ್ ಕೊಡಬೇಕೆ? ಇರುವ ಮೂರೂಮತ್ತೊಂದು ಸವಲತ್ತನ್ನು ಯಾರಿಗೆ ಕೊಡಬೇಕೆಂದು ಹಿರಿ, ಕಿರಿ, ಮರಿ ನಾಯಕರೆಲ್ಲ ಫೋನಾಯಿಸತೊಡಗಿದರೆ ಆಸ್ಪತ್ರೆಗಳ ನಿರ್ದೇಶಕರ ತಲೆ ಏನಾಗಬೇಕು? ಇದು ನಿಮ್ಹಾನ್ಸ್ ಅಷ್ಟೇ ಅಲ್ಲ, ಎಲ್ಲ ಆಸ್ಪತ್ರೆಗಳನ್ನೂ, ಸರ್ಕಾರಿ ಸಂಸ್ಥೆಗಳನ್ನೂ ಕಾಡುತ್ತಿರುವ ಕಂಟಕ. ಜನಸೇವಕರೆಂದು ಕರೆದುಕೊಳ್ಳುವವರು ನಿಯಮದ ಅನುಸಾರ ಸರ್ಕಾರಿ ಕೆಲಸ ಮಾಡಲು ಬಿಡದೇ ಮೂಗು ತೂರಿಸುವುದರಿಂದಲೇ ಭ್ರಷ್ಟಾಚಾರ ಹೆಚ್ಚಾಗಿದೆ.

ನಿಮ್ಹಾನ್ಸ್ ನಿರ್ದೇಶಕರೇ, ನೀವು ಯಾರ ಶಿಫಾರಸಿಗೂ ಮಣಿಯದೆ ಸರತಿಯಲ್ಲಿ ಕಾಯುವ ರೋಗಿಗಳಿಗೆ ಪಾಳಿಯಂತೆ ಅವಕಾಶ ಒದಗಿಸಿ ಕಾಯಕನಿಷ್ಠೆ ಮೆರೆಯಿರಿ. ನಿಮಗೆ ಜನಬೆಂಬಲ ಇದ್ದೇ ಇರುತ್ತದೆ.

ಡಾ. ಎಚ್.ಎಸ್.ಅನುಪಮಾ, ಕವಲಕ್ಕಿ

ರಾಷ್ಟ್ರೀಯ ಶಿಕ್ಷಣ ನೀತಿ: ಅವಸರ ಸಲ್ಲ!

ಕರ್ನಾಟಕ ಸರ್ಕಾರವು 2021-22ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಜಾರಿಗೊಳಿಸುತ್ತಿದೆ. ನಮ್ಮ ರಾಜ್ಯ ಇಂದು ಶೈಕ್ಷಣಿಕ ದೌರ್ಬಲ್ಯವನ್ನು ಎದುರಿಸುತ್ತಿದೆ. ಕರ್ನಾಟಕ ಮಾನವ ಅಭಿವೃದ್ಧಿ ವರದಿ– 2015ರ ಪ್ರಕಾರ, ರಾಜ್ಯದಲ್ಲಿನ ಮಾನವ ಅಭಿವೃದ್ಧಿ ಸೂಚ್ಯಂಕ 0.611. ಇದರಲ್ಲಿ ವರಮಾನದ ಕೊಡುಗೆ ಶೇ 33.10ರಷ್ಟಿದ್ದರೆ (0.615) ಆರೋಗ್ಯ ಸೂಚಿಯ ಪಾಲು ಶೇ 40.15ರಷ್ಟಿದೆ (0.746). ಆದರೆ ಶಿಕ್ಷಣದ ಪಾಲು ಕೇವಲ ಶೇ 26.75ರಷ್ಟಿದೆ (0.497). ಇದು 1991ರಲ್ಲಿ ಶೇ 37.12ರಷ್ಟಿತ್ತು ಮತ್ತು 2001ರಲ್ಲಿ ಶೇ 36.49ರಷ್ಟಿತ್ತು. ಕಳೆದ 20 ವರ್ಷಗಳಲ್ಲಿ ಮಾನವ ಅಭಿವೃದ್ಧಿಯಲ್ಲಿ ಶಿಕ್ಷಣದ ಕೊಡುಗೆಯು ಕುಸಿಯುತ್ತಾ ನಡೆದಿದೆ (ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ– 2015).


ನಮ್ಮ ರಾಜ್ಯದಲ್ಲಿನ ಶಿಕ್ಷಣ ವಲಯವು ಎನ್‌ಇಪಿ ಎಂಬ ಹೊಸ ಪ್ರಯೋಗಕ್ಕೆ ಸಿದ್ಧವಾಗಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮೇಲಾಗಿ ಕೋವಿಡ್‌ನಿಂದಾಗಿ ನಮ್ಮ ಮಕ್ಕಳು, ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ಮಕ್ಕಳು, ಅದರಲ್ಲೂ ಗ್ರಾಮೀಣ ಪ್ರದೇಶದ ಮಕ್ಕಳು, ಆನ್‌ಲೈನ್ ಪಾಠ ಪಡೆದುಕೊಳ್ಳುವುದು ಸಾಧ್ಯವಾಗದೆ, ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇದನ್ನು ಸರಿಪಡಿಸುವುದು ನಮ್ಮ ಆದ್ಯತೆಯಾಗಬೇಕು. ಇದರ ಬಗ್ಗೆ ಸರ್ಕಾರ ಮಾತನಾಡುತ್ತಿಲ್ಲ. ನಾಡಿನ ಎಲ್ಲ ಹಕ್ಕುದಾರರ ಜೊತೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಸರ್ಕಾರ ವಿಸ್ತೃತ ಸಮಾಲೋಚನೆ ನಡೆಸಿಲ್ಲ. ಆದ್ದರಿಂದ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವುದನ್ನು ನಿಲ್ಲಿಸಬೇಕು ಮತ್ತು ಇದರ ಇತಿಮಿತಿಗಳ ಬಗ್ಗೆ, ಇದರಲ್ಲಿನ ತಾರತಮ್ಯವಾದಿ ಸಂಗತಿಗಳ ಬಗ್ಗೆ ವ್ಯಾಪಕ ಚರ್ಚೆಗಳನ್ನು ನಡೆಸಬೇಕು.

ಟಿ.ಆರ್.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕನಸುಗಳ ಬೆಳಗಿದ ನೇತಾರ

• ಡಾ.ಸಿ.ಎನ್. ಅಶ್ವತ್ಥನಾರಾಯಣ



ನರೇಂದ್ರ ದಾಮೋದರ ದಾಸ್ ಮೋದಿ- ನಮ್ಮ ಪ್ರಧಾನಿ ಹಾಗೂ ಅಗ್ರ ನೇತಾರರು. ಅಷ್ಟೇ ಅಲ್ಲ, ಕಳೆದ ಇಪ್ಪತ್ತು ವರ್ಷಗಳಲ್ಲಿ ದೇಶಕ್ಕೆ ಪ್ರಬಲ ನಾಯಕತ್ವ ಕೊಟ್ಟವರು ಹಾಗೂ ಜಡ್ಡುಗಟ್ಟಿದ ರಾಜಕೀಯದಲ್ಲಿ ಜನರ ಆತ್ಮಪ್ರಜ್ಞೆಯನ್ನು ಅರಳಿಸಿ ಅವರ ಅಮೂಲ್ಯ ಮತಕ್ಕೆ ಸಾರ್ಥಕತೆ, ಅನನ್ಯತೆ ತಂದುಕೊಟ್ಟವರು.

ಹಾಗಾದರೆ, ಮೋದಿ ಅವರಿಗೆ ಮುನ್ನ ಅಂಥ ನಾಯಕರೇ ಇರಲಿಲ್ಲವೇ? ಇದ್ದರು. ಆದರೆ, ಮೋದಿ ಅವರಷ್ಟು ವೇಗವಾಗಿ ನುಗ್ಗುವ, ಧೈರ್ಯದ ನಿರ್ಧಾರಗಳನ್ನು ಕೈಗೊಳ್ಳುವ ಮತ್ತು ಸೂಜಿಗಲ್ಲಿನಂತೆ ಜನರನ್ನು ಆಕರ್ಷಿಸಬಲ್ಲ ಚೈತನ್ಯಯುತ ನಾಯಕತ್ವ ಇರಲಿಲ್ಲ.

ಅವರು ಸಂಘದ ಸೇವೆಯಲ್ಲಿದ್ದರು. ನಂತರ ಪಕ್ಷದ ಹಿರಿಯರ ಆಣತಿಯಂತೆ ಗುಜರಾತಿಗೆ ಹೋದರು. ಅಲ್ಲಿಂದ ದಿಲ್ಲಿಗೆ ಬಂದು ಪ್ರಧಾನಿಯೂ ಆದರು.

ಮೋದಿ ಅವರು ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾಗಿ, ಆ ನಂತರ ಪ್ರಧಾನಿಯಾಗಿ ಸಾರ್ಥಕ ಇಪ್ಪತ್ತು ವರ್ಷಗಳ ಪಯಣ ಪೂರ್ಣಗೊಳಿಸಿ ತಮಗಿಂತ ಮೊದಲು ಮತ್ತು ತಮ್ಮ ನಂತರದ ಭಾರತ ಎಂಬ ಹೆಜ್ಜೆಗುರುತುಗಳನ್ನು ಸ್ಪಷ್ಟವಾಗಿ ಮೂಡಿಸಿದ್ದಾರೆ.

2014ರಿಂದ ಈವರೆಗೆ ಸವಾಲು- ಸಂಕಷ್ಟಗಳ ನಡುವೆ ಬೃಹತ್ ಶಕ್ತಿಯಾಗಿ ಅವತರಿಸಿದ ಭಾರತದ ಕಥೆಯನ್ನು ಕೂಲಂಕಶವಾಗಿ ಅರಿಯಬೇಕಾದರೆ ನರೇಂದ್ರ ಮೋದಿ ಅವರು ಶಿಕ್ಷಣ, ಕೌಶಲ, ಯುವಜನರಿಗಾಗಿ ಅವಕಾಶಗಳು, ಕೈಗಾರಿಕೆ, ಉದ್ಯೋಗ, ವಿಜ್ಞಾನ- ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ- ಜೈವಿಕ ತಂತ್ರಜ್ಞಾನ, ಉದ್ಯಮಶೀಲತೆ, ಉತ್ಪಾದನೆ, ಆರ್ಥಿಕತೆ, ಆವಿಷ್ಕಾರ ಇತ್ಯಾದಿ ಕ್ಷೇತ್ರಗಳಲ್ಲಿ ತಂದ ಸುಧಾರಣೆಗಳನ್ನು ಗುರುತಿಸಬೇಕಿದೆ.

ರಾಷ್ಟ್ರೀಯ ಶಿಕ್ಷಣ ನೀತಿ-2020: 34 ವರ್ಷಗಳ ನಂತರ ಮೋದಿ ಅವರು ದೇಶದಲ್ಲಿ ಹೊಸ ಶಿಕ್ಷಣ ನೀತಿಯನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಈ ನೀತಿಯನ್ನು ಭವಿಷ್ಯದ ಭಾರತ ಎದುರು ನೋಡುತ್ತಿತ್ತು. ರಾಷ್ಟ್ರ ನಿರ್ಮಾಣಕ್ಕೆ ಒಂದು ಸಮಗ್ರ ಪರಿಹಾರದ ಅವಶ್ಯಕತೆ ಇತ್ತು. ಅದು ಶಿಕ್ಷಣ ನೀತಿಯ ರೂಪದಲ್ಲಿ ನಮಗೆ ಸಿಕ್ಕಿದೆ.

ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಮತ್ತು ಸಬ್ ಕಾ ಪ್ರಯಾಸ್ ಎನ್ನುವ ಮೋದಿ ಅವರ ಪ್ರೇರಕ ಮಂತ್ರ ದೇಶದ ದಶದಿಕ್ಕುಗಳಲ್ಲಿಯೂ ಸ್ಫೂರ್ತಿಯ ಸೆಲೆಯಾಗಿ ತುಂಬಿಹೋಗಿದೆ. ಇದು ಶಿಕ್ಷಣ ನೀತಿಯಲ್ಲೂ ಆಳವಾಗಿ ತುಂಬಿದೆ.

ಈ ತಿಂಗಳು 5ರಂದು ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ತುಮಕೂರಿನ ರಾಮಕೃಷ್ಣ ಆಶ್ರಮದ ವೀರೇಶಾನಂದ ಸರಸ್ವತಿ ಅವರು ಭಾಗವಹಿಸಿ ಆಶಯ ಭಾಷಣ ಮಾಡಿದ್ದರು. ಮುಖ್ಯವಾಗಿ ಶಿಕ್ಷಣದ ಬಗ್ಗೆ ಮಾತನಾಡುತ್ತಲೇ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಹೀಗೆ ಹೇಳಿದ್ದರು: 'ರಾಷ್ಟ್ರೀಯ ಶಿಕ್ಷಣ ನೀತಿ-2020 ದೇಶಕ್ಕೆ ಅಗತ್ಯವಾಗಿದೆ. ಎನ್‌ಇಪಿ ಎಂದರೆ ಭಾರತವನ್ನು ಭಾರತದ ಮೂಲಕವೇ ನೋಡಿಕೊಳ್ಳುವುದು ಹಾಗೂ ಭಾರತದ ಮೂಲಕವೇ ಭಾರತವನ್ನು ಮರು ರೂಪಿಸುವುದು. ಭಾರತವನ್ನು ಭಾರತೀಯ ಮೌಲ್ಯಗಳು, ಚಿಂತನೆಗಳಿಂದಲೇ ಉಳಿಸಿಕೊಳ್ಳಬೇಕು ಹಾಗೂ ಭಾರತೀಯ ಮೌಲ್ಯಗಳ ಮೂಲಕವೇ ಭಾರತವನ್ನು ಮರು ನಿರ್ಮಾಣ ಮಾಡಬೇಕು'.

ಕೌಶಲ ಭಾರತಕ್ಕೆ ಅಡಿಪಾಯ: ಪ್ರಧಾನಿ ಸ್ಥಾನಕ್ಕೆ ಮೋದಿ ಅವರು ಬರುವ ತನಕ ಕೌಶಲ ಎನ್ನುವುದು ಪಠ್ಯಕ್ಕೆ ಅಥವಾ ಮಾತಿಗೆ ಸೀಮಿತವಾಗಿತ್ತು. ಮೋದಿ ಅವರು ಕೌಶಲಕ್ಕೆ ನಿರ್ದಿಷ್ಟ ದಿಕ್ಕು ತೋರಿದರಲ್ಲದೆ, ಹಳ್ಳಿಹಳ್ಳಿಗೂ ಅದನ್ನು ವಿಸ್ತರಿಸಿ 'ಕೌಶಲ ಭಾರತ' ನಿರ್ಮಾಣಕ್ಕೆ ಗಟ್ಟಿ ಅಡಿಪಾಯ ಹಾಕಿದರು.

ಕೋವಿಡ್ ಸಂಕಷ್ಟ ಕಾಲದಲ್ಲಿ ಮೋದಿ ಅವರ ಈ ಒಂದು ಕನಸು ಅದೆಷ್ಟು ಪ್ರಭಾವ ಬೀರಿತು ಎಂದರೆ, ಚೀನಾದಂಥ ಕೆಲವೇ ದೇಶಗಳಲ್ಲಿ ತಯಾರಾಗುತ್ತಿದ್ದ ಮಾಸ್ಕುಗಳು ನಮ್ಮ ಸಂಜೀವಿನಿ ಸ್ವಸಹಾಯ ಗುಂಪುಗಳ ಮನೆಗಳಲ್ಲಿ ತಯಾರಾಗತೊಡಗಿದವು. ನಮ್ಮ ಕಲ್ಪನೆಯಲ್ಲೇ ಇಲ್ಲದ ಸ್ಯಾನಿಟೈಸರ್ ಅನ್ನು ಮೋದಿ ಅವರ ಪ್ರೇರಣೆಯಿಂದ ಇಲ್ಲಿನ ಮಹಿಳೆಯರೇ ತಯಾರಿಸಿದರು.

ಹೀಗೆ ಬದಲಾವಣೆಗಳನ್ನು ಆಮೂಲಾಗ್ರವಾಗಿ ತರಬೇಕು ಎನ್ನುವುದು ಮೋದಿ ಅವರ ದೂರದೃಷ್ಟಿ. ಸರ್ಕಾರವನ್ನು, ಅದನ್ನು ನಂಬಿಕೊಂಡ ಜನರನ್ನು ಜನಪ್ರಿಯ ಯೋಜನೆಗಳ ಮೇಲೆ ತೇಲಿಸಿ ಜನರ ನಿರೀಕ್ಷೆಗಳನ್ನು ಕಾಗದದ ದೋಣಿಗಳನ್ನಾಗಿ ಮಾಡಿ ಹಳ್ಳಕ್ಕೆ ಬಿಡುವುದಲ್ಲ. ಈ ಕಾರಣಕ್ಕೆ ಅವರ ನೇತೃತ್ವದಲ್ಲಿ ದೈತ್ಯ ರಾಜ್ಯವಾಗಿ ಬೆಳೆದ ಗುಜರಾತ್, ಇವತ್ತಿಗೂ 'ಗುಜರಾತ್ ಮಾದರಿ' ಎಂದೇ ಪ್ರಖ್ಯಾತಿಯಾಗಿದೆ. ಅದೇ ರೀತಿ ಪ್ರಧಾನಿಯಾದ ಮೇಲೆ ಅವರು ಜಾರಿಗೆ ತಂದ ದೀರ್ಘಕಾಲೀನ ಸಮಗ್ರ ಅಭಿವೃದ್ಧಿ ದೃಷ್ಟಿಕೋನ ಯೋಜನೆಗಳು, 'ಮೋದಿನಾಮಿಕ್ಸ್' ಎಂದೇ ಜಗತ್ತಿನ ಗಮನ ಸೆಳೆದಿವೆ.

ಯುವ ಜನರ ಮೂಲಕ ಭಾರತ ನಿರ್ಮಾಣ: ರಾಷ್ಟ್ರ ಸಬಲೀಕರಣ ಹಾಗೂ ರಾಷ್ಟ್ರದ ಮರು ನಿರ್ಮಾಣದ ಅಗತ್ಯವನ್ನು ಮೋದಿ ಅವರು ಕಂಡುಕೊಂಡ ಬಗೆಯೇ ಬಹಳ ವಿಭಿನ್ನ. ಏಕೆಂದರೆ, ಅವರು ದೇಶವನ್ನು ಜ್ಞಾನ ಮತ್ತು ಯುವತೆಯನ್ನು ಪರಸ್ಪರ ಅನುಸಂಧಾನಗೊಳಿಸಿ ಹೆಜ್ಜೆ ಇಡುತ್ತಿದ್ದಾರೆ.

ಏಕೆಂದರೆ, ಭಾರತಕ್ಕೆ ಜ್ಞಾನ ಎನ್ನುವುದು ಆದಿಯಿಂದಲೂ ಇದೆ. ಆದರೆ ಅದಕ್ಕೊಂದು ನಿರ್ದಿಷ್ಟ ದಿಕ್ಕು-ದೆಸೆ ಇರಲಿಲ್ಲ. ವಿಜ್ಞಾನ ಕ್ಷೇತ್ರದಲ್ಲಿ ಹಳೆ ಬೇರಿನ ಅಡಿಪಾಯ ಇಟ್ಟುಕೊಂಡೇ ಹೊಸ ಪ್ರತಿಭೆಗಳಿಗೆ ಪ್ರೋತ್ಸಾಹ ಕೊಡುವ ಕೆಲಸ ಈಗ ಆಗುತ್ತಿದೆ. ಅಲ್ಲದೆ, ಯುವಜನತೆಯನ್ನು ದೊಡ್ಡ ಪ್ರಮಾಣದಲ್ಲಿ ಆವಿಷ್ಕಾರ ಮತ್ತು ಸಂಶೋಧನೆ ಕಡೆ ಹೊರಳುವ ಹಾಗೆ ಮೋದಿ ಮಾಡುತ್ತಿದ್ದಾರೆ.

ಮುಂದಿನ ಭಾರತ ಕೌಶಲ, ವಿಜ್ಞಾನ-ತಂತ್ರಜ್ಞಾನ, ಆವಿಷ್ಕಾರ ಮತ್ತು ಶಿಕ್ಷಣದ ಮೇಲೆಯೇ ನಿರ್ಮಾಣವಾಗಲಿದೆ. ಅದರ ಸಾರಥ್ಯವನ್ನು ವಹಿಸಿರುವ ಮೋದಿ ಅವರ ಪ್ರತಿಹೆಜ್ಜೆ ಜತೆ ನಾವೂ ನಡೆಯೋಣ. ಅವರ ಕಂಡ ಕನಸುಗಳನ್ನು ಸಾಕಾರಗೊಳಿಸಲು ಹೆಗಲುಕೊಟ್ಟು ಶ್ರಮಿಸೋಣ.

ಲೇಖಕ: ಕರ್ನಾಟಕ ಸರ್ಕಾರದಲ್ಲಿ ಸಚಿವ

ಪ್ರಧಾನಿ ನರೇಂದ್ರ ಮೋದಿ ಅವರ 71ನೇ ಹುಟ್ಟುಹಬ್ಬ ಇಂದು (ಸೆಪ್ಟೆಂಬರ್ 17). 2001ರ ನವೆಂಬರ್‌ನಲ್ಲಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಹಾಗಾಗಿ, ಮುಖ್ಯಮಂತ್ರಿ, ಪ್ರಧಾನಿಯಾಗಿ 20 ವರ್ಷ ಕರ್ತವ್ಯ ನಿರ್ವಹಿಸಿದ ಸಂದರ್ಭವೂ ಹೌದು. ಈ ಪ್ರಯುಕ್ತ ಎರಡು ವಿಶೇಷ ಲೇಖನಗಳು ಇಲ್ಲಿವೆ:



ಸಂಘದ ಮಿತಿ ದಾಟದ ನಾಯಕ

• ಬಿ.ಕೆ. ಹರಿಪ್ರಸಾದ್



ಗುಜರಾತ್ ರಾಜ್ಯದ ರಾಜಕಾರಣದಲ್ಲಿ ಸೃಷ್ಟಿಯಾದ ವಿಚಿತ್ರ ಸನ್ನಿವೇಶವೊಂದರಲ್ಲಿ ಒದಗಿ ಬಂದ ಅವಕಾಶದಿಂದ ರಾಜಕೀಯದಲ್ಲಿ ಮೇಲೆದ್ದು ಬಂದವರು ನರೇಂದ್ರ ಮೋದಿ. ಕೇಶುಭಾಯ್ ಪಟೇಲ್ ಅವರನ್ನು ಪದಚ್ಯುತಿಗೊಳಿಸುವ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಯ್ಕೆಯ ರೂಪದಲ್ಲಿ ಮೋದಿ ಅವರಿಗೆ ಮುಖ್ಯಮಂತ್ರಿಯ ಗಾದಿ ಒಲಿದುಬಂತು. ಒಂದು ಗ್ರಾಮ ಪಂಚಾಯಿತಿ ಚುನಾವಣೆಯನ್ನೂ ಎದುರಿಸದ ಮತ್ತು ಚುನಾವಣೆಯ ನಾಯಕತ್ವವನ್ನು ವಹಿಸಿರದ ಅವರು ಸಂಘ ಪರಿವಾರದ ಕೃಪೆಯಿಂದಾಗಿ ನೇರವಾಗಿ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಆ ಬಳಿಕವೇ ಅವರು ಚುನಾವಣೆಯನ್ನು ಎದುರಿಸಿದವರು. ಮೋದಿ ಚುನಾವಣೆಯನ್ನು ಗೆದ್ದು ನಾಯಕನಾಗಿಲ್ಲ, ಬದಲಿಗೆ ಅಧಿಕಾರಕ್ಕೇರಿ ಚುನಾವಣೆ ಗೆದ್ದರು ಎಂಬುದೇ ಅವರ ಬೆಳವಣಿಗೆಯ ಗತಿಯನ್ನು ನಿರೂಪಿಸುತ್ತದೆ.

13 ವರ್ಷ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಮೋದಿ ನಂತರ ಪ್ರಧಾನಿಯಾಗಿ ಏಳು ವರ್ಷ ಕಳೆದಿದ್ದಾರೆ. ಇಷ್ಟೊಂದು ಸುದೀರ್ಘ ಅವಧಿಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ನಾಯಕನೊಬ್ಬ ಮುತ್ಸದ್ದಿಯಾಗಿ ಬದಲಾಗಬೇಕಿತ್ತು. ಇಡೀ ದೇಶವನ್ನು ಒಗ್ಗಟ್ಟಿನಿಂದ ಮುನ್ನಡೆಸುವಂತಹ ವ್ಯಕ್ತಿತ್ವ ಅವರಲ್ಲಿ ರೂಪುಗೊಳ್ಳಬೇಕಿತ್ತು. ಧರ್ಮ, ಜಾತಿ, ಪಕ್ಷ ಎಲ್ಲವನ್ನೂ ಮೀರಿ ಇಡೀ ದೇಶದ ಪರವಾಗಿ ಯೋಚಿಸುವ ಮತ್ತು ಕೆಲಸ ಮಾಡುವ ಪ್ರವೃತ್ತಿ ಅವರಲ್ಲಿ ಬೆಳೆಯಬೇಕಿತ್ತು. ಆದರೆ, ಮೋದಿ ಅದಕ್ಕೆ ತದ್ವಿರುದ್ಧವಾಗಿಯೇ ಉಳಿದಿದ್ದಾರೆ. ಸುದೀರ್ಘವಾಗಿ ದೇಶದ ಆಡಳಿತ ನಡೆಸಿದ ಬಳಿಕವೂ ನರೇಂದ್ರ ಮೋದಿ ಅವರಲ್ಲಿ ಒಬ್ಬ ಮುತ್ಸದ್ದಿ ಕಾಣುತ್ತಿಲ್ಲ. ಇದಕ್ಕೆ ಕಾರಣ, ಅವರು ಜನರ ನಡುವೆ ಬೆಳೆದುಬಂದ ನಾಯಕನಲ್ಲ ಎಂಬುದು. ಸಂಘ ಪರಿವಾರದ ರಾಜಕೀಯ ದಾಳವಾಗಿ ಮುನ್ನೆಲೆಗೆ ಬಂದ ಅವರು ಅದೇ ಜಾಡಿನಲ್ಲಿ ಸಾಗುತ್ತಿದ್ದಾರೆ. ತಾನು ಒಂದು ವರ್ಗದ ಜನರ ಪ್ರತಿನಿಧಿಯಷ್ಟೇ ಎಂಬುದನ್ನು ಪ್ರಧಾನಿ ತನ್ನ ಕೆಲಸಗಳಲ್ಲಿ ತೋರಿಸುತ್ತಿದ್ದಾರೆ. ಪ್ರಧಾನಿಯೊಬ್ಬರು ಕಣ್ಣುಪಟ್ಟಿ ಕಟ್ಟಿದ ಕುದುರೆಯಂತೆ ಸಾಗುತ್ತಿರುವುದು ಈ ದೇಶದ ದುರಂತ.

ಜನರ ನಡುವೆ ಬೆಳೆಯುವ ನಾಯಕರಿಗೆ ಜನಸಾಮಾನ್ಯರ ನೋವು- ನಲಿವುಗಳನ್ನು ಅರಿಯುವ ಛಾತಿ ಇರುತ್ತದೆ. ಜನರ ಜತೆಗಿನ ಒಡನಾಟವೇ ಅವರನ್ನು ಮುತ್ಸದ್ದಿ ನಾಯಕರನ್ನಾಗಿ ಪರಿವರ್ತಿಸುತ್ತದೆ. ಆದರೆ, ಮೋದಿಯವರು ಜನರಿಂದ ಬೆಳೆದುಬಂದ ನಾಯಕನಲ್ಲ. ಅವರನ್ನು ಬೆಳೆಸಿರುವುದು ಆರ್‌ಎಸ್‌ಎಸ್. ಆ ಪ್ರಭಾವದಿಂದ ಹೊರಬರಲು ಅವರಿಗೆ ಸಾಧ್ಯವಾಗದೇ ಇರುವುದರಿಂದಾಗಿ ಮೋದಿಯವರ ಆಡಳಿತದ ಮೇಲೆ ಸಂಪೂರ್ಣವಾಗಿ ಸಂಘದ ಛಾಯೆ ಗಾಢವಾಗಿ ಆವರಿಸಿದೆ. ಎನ್‌ಡಿಎ ಸರ್ಕಾರದ ನೇತೃತ್ವ ವಹಿಸಿದ್ದ ಅಟಲ್ ಬಿಹಾರಿ ವಾಜಪೇಯಿಯವರು ಇಂತಹ ಮಿತಿಗಳನ್ನು ದಾಟಿ ಮುನ್ನಡೆದಿದ್ದರು. ಪ್ರಧಾನಿ ದೇಶದ ಎಲ್ಲ ಜನರಿಗೆ ಸೇರಿದವರು ಎಂಬ ಭಾವನೆ ಮೂಡಿಸುವಲ್ಲಿ ವಾಜಪೇಯಿ ಯಶಸ್ವಿಯಾಗಿದ್ದರು.


ಮೋದಿಯವರು ಪ್ರಧಾನಿಯಾಗಿ ಏಳು ವರ್ಷಗಳಲ್ಲಿ ಒಮ್ಮೆಯೂ ನೇರಾನೇರ ಪತ್ರಿಕಾಗೋಷ್ಠಿ ನಡೆಸಿ ಮಾಧ್ಯಮಗಳನ್ನು ಎದುರಿಸಿಲ್ಲ. ಇದು ಮೋದಿ ಅವರಲ್ಲಿ ಇರುವ ಪುಕ್ಕಲುತನವನ್ನು ತೋರಿಸುತ್ತದೆ. ಧೈರ್ಯದ ಕೊರತೆಯೇ ಅವರನ್ನು ಸರ್ವಾಧಿಕಾರಿ ಧೋರಣೆಯತ್ತ ತಳ್ಳಿಬಿಟ್ಟಿದೆ. ಜನಪರ ರಾಜಕಾರಣದಲ್ಲಿ ಬೆಳೆದುಬಂದ ನಾಯಕರಿಗೆ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲೆ ಗೌರವವಿರುತ್ತದೆ. ಆದರೆ, ಇವರು ಜನರ ನಡುವೆ ಬೆಳೆದ ರಾಜಕಾರಣಿಯಲ್ಲದೆ ಇರುವುದರಿಂದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಬಗ್ಗೆಯೇ ಗೌರವವಿಲ್ಲದವರಂತೆ ನಡೆದುಕೊಳ್ಳುತ್ತಾರೆ.

ಆಡಳಿತ ಮತ್ತು ಜನಸ್ಪಂದನೆಯ ವಿಚಾರದಲ್ಲಿ ಪ್ರಧಾನಿ ಧನಾತ್ಮಕವಾದ ಮಾದರಿಗಳನ್ನು ಸೃಷ್ಟಿಸಬೇಕಿತ್ತು. ಆದರೆ, ಗುಜರಾತ್ ಮುಖ್ಯಮಂತ್ರಿಯಾದ ದಿನದಿಂದ ಈವರೆಗೆ ನರೇಂದ್ರ ಮೋದಿಯವರು ನಮ್ಮ ನಡುವೆ ಪ್ರಚುರಪಡಿಸಿರುವ ಮಾದರಿಗಳನ್ನು ನೋಡಿದರೆ ಎಲ್ಲವೂ ನಕಾರಾತ್ಮಕ. ಗುಜರಾತ್ ಮಾದರಿ ಎಂದು 20 ವರ್ಷಗಳಿಂದ ಹೇಳುತ್ತಲೇ ಇದ್ದಾರೆ. ಆದರೆ, ಈಗಲೂ ಅಂತಹ ಮಾದರಿಯೊಂದನ್ನು ನಿರೂಪಿಸಲು ಅವರಿಗೆ ಸಾಧ್ಯವಾಗಿಲ್ಲ. ಇವರಿಗಿಂತ ಮೊದಲು ಪ್ರಧಾನಿ ಹುದ್ದೆಯಲ್ಲಿದ್ದ ಡಾ.ಮನಮೋಹನ್ ಸಿಂಗ್ ಅವರು ನೂರು ಮಾತುಗಳನ್ನಾಡಿದರೆ ಒಂದಾದರೂ ಸುಳ್ಳು, ತಪ್ಪು ಸಿಗಬಹುದಾ ಎಂದು ಹುಡುಕುವುದೇ ಕಷ್ಟವಾಗುತ್ತಿತ್ತು. ಮೋದಿ ನೂರು ಮಾತುಗಳನ್ನಾಡಿದರೆ ಒಂದಾದರೂ ಸತ್ಯ ಇದೆಯೇ ಎಂದು ಹುಡುಕಬೇಕಾದ ಪರಿಸ್ಥಿತಿ ಇದೆ. ಸುಳ್ಳುಗಳನ್ನೇ ಬಂಡವಾಳ ಮಾಡಿಕೊಂಡು ಅಧಿಕಾರ ಅನುಭವಿಸುತ್ತಿರುವ ವ್ಯಕ್ತಿ ಇವರು. 70 ವರ್ಷಗಳ ಕಾಲ ದೇಶದ ಆಡಳಿತ ನಡೆಸಿದ ಮಹನೀಯರು ಕಟ್ಟಿದ ಎಲ್ಲ ಸಂಸ್ಥೆಗಳನ್ನೂ ನಿರ್ನಾಮ ಮಾಡುವ ಕೆಲಸ ಮಾಡುತ್ತಿದ್ದಾರೆ. ದೇಶದ ಸಾರ್ವಜನಿಕ ಆಸ್ತಿಗಳೆಲ್ಲವನ್ನೂ ಬಂಡವಾಳಶಾಹಿಗಳ ಕೈಗೆ ಒಪ್ಪಿಸಲು ಪ್ರಧಾನಿಯ ವೇಷತೊಟ್ಟ ವ್ಯಾಪಾರಿಯಂತೆ ಕೆಲಸ ಮಾಡುತ್ತಿದ್ದಾರೆ. ಇವು ಭಾರತದ ಪಾಲಿಗೆ ಯಾವತ್ತೂ ಧನಾತ್ಮಕ ಆಡಳಿತದ ಮಾದರಿ ಎನಿಸಿಕೊಳ್ಳಲಾರವು.

ಇಡೀ ದೇಶ ನನ್ನದು ಮತ್ತು ದೇಶದ ಎಲ್ಲರೂ ನನ್ನವರು ಎಂಬ ಭಾವನೆ ಪ್ರಧಾನಿ ಹುದ್ದೆಯಲ್ಲಿ ಇರುವವರಲ್ಲಿ ಹಾಸುಹೊಕ್ಕಾಗಿ ಇರಬೇಕು. ಜನರ ಕಷ್ಟಗಳಿಗೆ ಸ್ಪಂದಿಸುವ ವಿಚಾರದಲ್ಲಿ ನಾಟಕೀಯತೆ ಇರಬಾರದು. ಆದರೆ, ಪ್ರಧಾನಿಯೇ ಜನರ ನಡುವೆ ದ್ವೇಷದ ಕಿಡಿ ಹೊತ್ತಿಸುವಂತಹ ಮಾತುಗಳನ್ನಾಡಿರುವುದನ್ನೂ ಈ ದೇಶ ಕಂಡಿದೆ. ಪ್ರಧಾನಿಯಾದವರಿಗೆ ದೇಶದೊಳಗೆ ಶತ್ರುಗಳಿರುವುದಿಲ್ಲ. ಆದರೆ, ರಾಜಕೀಯ ವಿರೋಧಿಗಳು ಇರುತ್ತಾರೆ. ವಿರೋಧ ಪಕ್ಷದವರೆಲ್ಲ ಶತ್ರುಗಳು ಎಂದು ಭಾವಿಸಿರುವ ನರೇಂದ್ರ ಮೋದಿ, ತಮ್ಮ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಮಾತನಾಡುವವರನ್ನೂ ಅದೇ ಭಾವನೆಯಲ್ಲಿ ನೋಡುತ್ತಾರೆ. ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ, ಸಿಬಿಐ, ಎನ್‌ಐಎಯಂತಹ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಜನರ ಧ್ವನಿ ಅಡಗಿಸಲು ಯತ್ನಿಸುತ್ತಿದ್ದಾರೆ. ಇಂತಹ ನಡೆಗಳು ಹೇಗೆ ದೇಶಕ್ಕೆ ಮುತ್ಸದ್ದಿ ನಾಯಕನನ್ನು ನೀಡಲು ಸಾಧ್ಯ?

ಲೇಖಕ: ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ
(ನಿರೂಪಣೆ–ವಿ.ಎಸ್.ಸುಬ್ರಹ್ಮಣ್ಯ)

ಆರ್‌ಎಸ್‌ಎಸ್‌ನಿಂದ ಪ್ರಧಾನಿ ಹುದ್ದೆಗೆ



1972-75: ರಾಷ್ಟ್ರೀಯ ಸ್ವಯಂಸೇವಕ ಸಂಘ ಸೇರಿದ ನರೇಂದ್ರ ಮೋದಿ. ಅಹಮದಾಬಾದ್‌ನಲ್ಲಿ ಆರ್‌ಎಸ್‌ಎಸ್‌ನ ವಿದ್ಯಾರ್ಥಿ ಘಟಕ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಘಟಕ ಆರಂಭ. ತುರ್ತುಪರಿಸ್ಥಿತಿ ವಿರುದ್ಧ ಹೋರಾಟ

1987: ಬಿಜೆಪಿ ಸೇರ್ಪಡೆ. ನಂತರದ ಒಂದೇ ವರ್ಷದಲ್ಲಿ ಗುಜರಾತ್ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ. ಬಿಜೆಪಿ ಸಮ್ಮಿಶ್ರ ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರ. 1988ರಲ್ಲಿ ಎಲ್.ಕೆ.ಅಡ್ವಾಣಿ ಅವರ ಸೋಮನಾಥ-ಅಯೋಧ್ಯಾ ರಥಯಾತ್ರೆಯಲ್ಲಿ ಭಾಗಿ

1995: ಗುಜರಾತ್‌ನಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ. ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ನಂತರ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಬಡ್ತಿ

2001: ಭುಜ್ ಭೂಕಂಪ ನಿರ್ವಹಣೆಯಲ್ಲಿನ ವೈಫಲ್ಯದ ಸಂಬಂಧ ಮುಖ್ಯಮಂತ್ರಿ ಕೇಶುಭಾಯ್ ಪಟೇಲ್ ವಿರುದ್ಧ ಆಕ್ರೋಶ. ಕೇಶುಭಾಯ್ ರಾಜೀನಾಮೆ. 2001ರ ಅಕ್ಟೋಬರ್‌ನಲ್ಲಿ ಮುಖ್ಯಮಂತ್ರಿಯಾಗಿ ನರೇಂದ್ರ ಮೋದಿ ಆಯ್ಕೆ. 2002ರ ಫೆಬ್ರುವರಿಯಲ್ಲಿ ಮೊದಲ ಬಾರಿ ಚುನಾವಣೆಗೆ ಸ್ಪರ್ಧೆ, ವಿಧಾನಸಭೆಗೆ ಆಯ್ಕೆ

2002ರ ಡಿಸೆಂಬರ್: ಗುಜರಾತ್ ವಿಧಾನಸಭೆ ಚುನಾವಣೆ: ಮೋದಿ ನೇತೃತ್ವದಲ್ಲಿ ಬಿಜೆಪಿ ಜಯಭೇರಿ. 182ರಲ್ಲಿ 127 ಸ್ಥಾನಗಳನ್ನು ಗೆದ್ದು ಸರ್ಕಾರ ರಚಿಸಿದ ಬಿಜೆಪಿ. ಮೋದಿ ಮತ್ತೆ ಮುಖ್ಯಮಂತ್ರಿ

2002: ಗೋಧ್ರಾ ಗಲಭೆ ಮತ್ತು ಗೋಧ್ರೋತ್ತರ ಹತ್ಯಾಕಾಂಡ. ಹತ್ಯಾಕಾಂಡಕ್ಕೆ ಕುಮ್ಮಕ್ಕು ನೀಡಿದ ಆರೋಪ. ದೇಶದಾದ್ಯಂತ ಮೋದಿ ಅವರ ಕ್ರಮಗಳ ಬಗ್ಗೆ ತೀವ್ರ ಆಕ್ಷೇಪ. ಮೋದಿ ವಿರುದ್ಧ ದೂರು ದಾಖಲು. ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಎಸ್‌ಐಟಿ ತನಿಖೆ. ಸಾಕ್ಷ್ಯ ಲಭ್ಯವಿಲ್ಲದ ಕಾರಣ ಮೋದಿ ಖುಲಾಸೆ. ಮೋದಿ ಅವರ ನಡವಳಿಕೆಯನ್ನು ಖಂಡಿಸಿದ ಬ್ರಿಟನ್

2005: ಗೋಧ್ರೋತ್ತರ ಹತ್ಯಾಕಾಂಡದಲ್ಲಿನ ಆರೋಪದ ಆಧಾರದಲ್ಲಿ ಮೋದಿಗೆ ವೀಸಾ ನೀಡಲು ನಿರಾಕರಿಸಿದ ಅಮೆರಿಕ

2007: ಮೋದಿ ನೇತೃತ್ವದಲ್ಲಿ ಮತ್ತೆ ಚುನಾವಣೆ ಗೆದ್ದು ಸರ್ಕಾರ ರಚಿಸಿದ ಬಿಜೆಪಿ. ಮೋದಿ ಮತ್ತೆ ಮುಖ್ಯಮಂತ್ರಿ

2012: ಮೋದಿ ನೇತೃತ್ವದಲ್ಲಿ ಮತ್ತೆ ಚುನಾವಣೆ ಗೆದ್ದು ಸರ್ಕಾರ ರಚಿಸಿದ ಬಿಜೆಪಿ. ಮೋದಿ ಮತ್ತೆ ಮುಖ್ಯಮಂತ್ರಿ. ಮೋದಿ ಮಾದರಿ, ಗುಜರಾತ್ ಮಾದರಿ ಅಭಿವೃದ್ಧಿ ಎಂಬ ಪರಿಕಲ್ಪನೆ ಪ್ರಚಾರಕ್ಕೆ. ಹೆಚ್ಚಿದ ಮೋದಿ ಜನಪ್ರಿಯತೆ

2013: ಮೋದಿ ನೇತೃತ್ವದಲ್ಲಿ ಲೋಕಸಭಾ ಚುನಾವಣೆ ನಡೆಸುವುದಾಗಿ ಘೋಷಿಸಿದ ಬಿಜೆಪಿ

2014: ಭಾರಿ ಬಹುಮತದೊಂದಿಗೆ ಲೋಕಸಭಾ ಚುನಾವಣೆ ಗೆದ್ದ ಬಿಜೆಪಿ. ಪ್ರಧಾನಿಯಾಗಿ ಮೋದಿ ಆಯ್ಕೆ

2016ರ ನವೆಂಬರ್: ₹500 ಮತ್ತು ₹1,000 ಮುಖಬೆಲೆಯ ನೋಟುಗಳ ರದ್ದತಿ. ಮೋದಿಯ ಈ ಕ್ರಮಕ್ಕೆ ಒಂದೆಡೆ ಶ್ಲಾಘನೆ, ಮತ್ತೊಂದೆಡೆ ಭಾರಿ ಟೀಕೆ. ಭ್ರಷ್ಟಾಚಾರ, ಭಯೋತ್ಪಾದನೆ ನಿಯಂತ್ರಣಕ್ಕಾಗಿ ಈ ಕ್ರಮ ಎಂದು ಮೋದಿ ಹೇಳಿಕೆ. ಅಮಾನ್ಯೀಕರಣದಿಂದ ನೋಟು ವಿನಿಮಯಕ್ಕೆ ಬ್ಯಾಂಕ್‌ಗಳ ಎದುರು ಮುಗಿಬಿದ್ದ ಜನ. ಸರತಿಯಲ್ಲಿ ನಿಂತೇ ನೂರಾರು ಮಂದಿ ಸಾವು. ಚಲಾವಣೆಯಲ್ಲಿದ್ದ ಶೇ 99.83ರಷ್ಟು ನಗದು ಆರ್‌ಬಿಐಗೆ ವಾಪಸ್

2017ರ ಜುಲೈ 1: ಒಂದು ದೇಶ, ಒಂದು ತೆರಿಗೆ ಪರಿಕಲ್ಪನೆಯ ಸರಕು ಮತ್ತು ಸೇವಾ ತೆರಿಗೆ ಜಾರಿ. ಹಲವು ಉದ್ಯಮಗಳಿಗೆ ನೆರವು. ಕೆಲವು ಉದ್ಯಮಗಳಿಗೆ ತೊಡಕು. ಕೇಂದ್ರ ಸರ್ಕಾರದ ತೆರಿಗೆ ಮೂಲದ ಆದಾಯ ಏರಿಕೆ. ಉದ್ಯಮಗಳಿಗೆ ಹೊಡೆತ

2019ರ ಮೇ: 'ಮತ್ತೊಮ್ಮೆ ಮೋದಿ ಸರ್ಕಾರ' ಘೋಷಣೆ ಅಡಿ ಲೋಕಸಭಾ ಚುನಾವಣೆ ಎದುರಿಸಿದ ಬಿಜೆಪಿ. ಭಾರಿ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೆ. ಮೋದಿ ಮತ್ತೆ ಪ್ರಧಾನಿ

2019ರ ಆಗಸ್ಟ್ 5: ಜಮ್ಮು-ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದು. ಜಮ್ಮು-ಕಾಶ್ಮೀರವನ್ನು ವಿಭಜಿಸಿ, ಜಮ್ಮು-ಕಾಶ್ಮೀರ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಗಳ ಸ್ಥಾಪನೆ. ಅಲ್ಲಿನ ಜನರಿಂದ ತೀವ್ರ ಪ್ರತಿರೋಧ. ರಾಜಕೀಯ ನಾಯಕರ ಗೃಹ ಬಂಧನ. ಎರಡು ವರ್ಷ ಇಂಟರ್ನೆಟ್ ಸ್ಥಗಿತ. ಸೇನಾ ಕಾರ್ಯಾಚರಣೆ

2019ರ ಅಕ್ಟೋಬರ್: ನೆರೆಯ ದೇಶಗಳ ಮುಸ್ಲಿಮೇತರ ಧಾರ್ಮಿಕ ಅಲ್ಪಸಂಖ್ಯಾತರಿಗೆ ಪೌರತ್ವ ನೀಡುವ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿ. ದೇಶದಾದ್ಯಂತ ಪ್ರತಿಭಟನೆ. ದೆಹಲಿಯಲ್ಲಿ ಗಲಭೆ. ಹಲವರ ಸಾವು

2020ರ ಮಾರ್ಚ್: ಕೋವಿಡ್ ಲಾಕ್‌ಡೌನ್ ಘೋಷಣೆ. ಕಾರ್ಮಿಕರ ಮರುವಲಸೆ. ಹಸಿವು, ಅಪಘಾತಗಳಿಂದ ಸಾವಿರಾರು ಕಾರ್ಮಿಕರ ಸಾವು. ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರ ವಿಫಲ ಎಂದು ವಿಪಕ್ಷಗಳ ಟೀಕೆ



ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಟಲಿಗಳಲ್ಲಿರುವ ಮದ್ಯವನ್ನು ಡ್ರಮ್‌ವೊಂದಕ್ಕೆ ಸುರಿಯುತ್ತಿರುವ ಕೆಲವರು... ಆ ಮದ್ಯವನ್ನು ಪಡೆಯಲು ಹರಸಾಹಸ ಪಡೆಯುತ್ತಿರುವ ಜನಸಾಗರ... ಈ ಎರಡು ವಿಡಿಯೊಗಳು ವೈರಲ್ ಆಗಿವೆ. ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವ ರೈತರು ಮದ್ಯ ಪಡೆಯಲು ಪೈಪೋಟಿಗೆ ಬಿದ್ದಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಮಯಾಂಕ್ ಎಂಬುವರು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿರುವ ವಿಡಿಯೊವನ್ನು ಸಾವಿರಾರು ಜನರು ವೀಕ್ಷಿಸಿದ್ದಾರೆ.



ವಿಡಿಯೊಗಳನ್ನು ಪರಿಶೀಲಿಸಿದಾಗ, ರೈತರಿಗೆ ಸಂಬಂಧಿಸಿದ ಯಾವುದೇ ಧ್ವಜಗಳು ಕಾಣಿಸಿಲ್ಲ ಎಂದು ಆಲ್ಟ್‌ನ್ಯೂಸ್ ವರದಿ ಮಾಡಿದೆ. ಇದು ಲೂಧಿಯಾನದ ಬಾಬಾ ರೋಢು ಶಾಹ್‌ಜಿ ಮೇಳಕ್ಕೆ ಸಂಬಂಧಿಸಿದ್ದು ಎಂದು ತಿಳಿದುಬಂದಿದೆ. ಕೌಂಕೆ ಕಾಲನ್ ಎಂಬ ಗ್ರಾಮದಲ್ಲಿ ಬಾಬಾ ರೋಢು ಶಾಹ್‌ಜಿ ಅವರಿಗೆ ಮದ್ಯ ಸಮಾರಾಧನೆ ನಡೆಸುವ ಸಂಪ್ರದಾಯ ವರ್ಷಗಳಿಂದ ಇದೆ. ಮೊದಲಿಗೆ ನೈವೇದ್ಯ ಸಲ್ಲಿಸಿ, ಬಳಿಕ ಭಕ್ತರಿಗೆ ಅದನ್ನು ವಿತರಿಸಲಾಗುತ್ತದೆ. ರೈತರ ಪ್ರತಿಭಟನೆಗೂ, ಈ ಮದ್ಯಾರಾಧನೆಗೂ ಯಾವುದೇ ಸಂಬಂಧವಿಲ್ಲ ಎಂಬುದು ದೃಢಪಟ್ಟಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ತಂದೆ-ಮಕ್ಕಳ ಸಂವಾದ

ತಂದೆ ರಾಜ ಸಂಜಯ ಮಗನನ್ನು ಬಿಗಿಯಾಗಿ ತಬ್ಬಿಕೊಂಡು ಅಳತೊಡಗಿದ. ವೆಸ್ಸಂತರನಿಗೂ ದುಃಖ ತಡೆಯಲಾಗಲಿಲ್ಲ. ನೋಡುತ್ತಿದ್ದ ಮಾದ್ರಿದೇವಿ ಕಣ್ಣೀರಿನಲ್ಲಿ ನೆನೆದು ಹೋದಳು. ಸ್ವಲ್ಪ ದು:ಖ ಶಮನವಾದ ಮೇಲೆ ರಾಜ ಮಗ-ಸೊಸೆಯನ್ನು ಕೂಡ್ರಿಸಿಕೊಂಡು ಅವರ ಕುಶಲವನ್ನು ವಿಚಾರಿಸಿದ. 'ಮಗನೇ ನೀನು ಮತ್ತು ಮಾದ್ರಿ ಕ್ಷೇಮವಾಗಿದ್ದೀರಾ? ನೀವು ನಿರೋಗಿಗಳು ತಾನೆ? ಬರೀ ಫಲಮೂಲಗಳನ್ನು ತಿಂದು ಜೀವಿಸುತ್ತೀರಾ? ಅವು ಸಾಕಷ್ಟು ದೊರಕುತ್ತವೆಯೇ? ಕಾಡುಮೃಗಗಳಿಂದ, ಸೊಳ್ಳೆ, ಹಾವುಗಳ ಕಾಟ ಇಲ್ಲವೆ?'

'ದೇವ ನಾವು ನಡೆಸುತ್ತಿರುವ ಕಾಡಿನ ಜೀವನ ಹೀಗೆಯೇ ಇದೆ. ನಾವು ದೊರಕುವ ಫಲಮೂಲಗಳನ್ನೇ ತಿನ್ನುತ್ತೇವೆ. ಈ ಜೀವನ ಕಷ್ಟಕರವಾದದ್ದೆ. ಮಹಾರಾಜ, ಸಾರಥಿ ಕುದುರೆಯನ್ನು ನಿಗ್ರಹ ಮಾಡುವಂತೆ, ದರಿದ್ರತೆ ನಮ್ಮನ್ನು ನಿಗ್ರಹ ಮಾಡುತ್ತದೆ. ನಾವು ದಮನಗೊಂಡಿದ್ದೇವೆ. ತಂದೆ-ತಾಯಿಯರ ದರ್ಶನವಿಲ್ಲದೆ ಮತ್ತಷ್ಟು ಕೃಶರಾಗಿದ್ದೇವೆ. ನಮ್ಮ ದೇಶದಿಂದ ಹೊರಹಾಕಲ್ಪಟ್ಟವರಿಗೆ ಕಾಡಿನಲ್ಲಿ ಏನು ಸುಖ ಇದ್ದೀತು?' ಎಂದ ವೆಸ್ಸಂತರ. ತಕ್ಷಣ ರಾಜನ ಕಣ್ಣಲ್ಲಿ ನೀರು ಚಿಮ್ಮಿತು. 'ಮಗು ವೆಸ್ಸಂತರ, ಈ ಅಪರಾಧವನ್ನು ಮಾಡಿದವನು ನಾನೇ. ನನಗೆ ಈ ಕಾರ್ಯಕ್ಕೆ ಕ್ಷಮೆಯಿಲ್ಲ' ಎಂದ. ವೆಸ್ಸಂತರ, 'ನಮ್ಮ ಕಷ್ಟಗಳಿಗೆ ಹೆಚ್ಚಿನ ದುಃಖವಿಲ್ಲ. ಆದರೆ ಕ್ರೂರ ಬ್ರಾಹ್ಮಣನೊಬ್ಬ ನಮ್ಮ ಪ್ರಿಯ ಮಕ್ಕಳಾದ ಜಾಲಿಕುಮಾರ ಮತ್ತು ಕೃಷ್ಣಾಜಿನರನ್ನು ದಾನ ಪಡೆದು, ಹಸುಗಳನ್ನು ಹೊಡೆಯುವಂತೆ, ಅವರನ್ನು ಹೊಡೆಯುತ್ತ ಕರೆದುಕೊಂಡು ಹೋದ. ಅದು ನಮ್ಮ ಮನಸ್ಸಿಗೆ ಬಹಳ ನೋವು ಮಾಡಿದೆ' ಎಂದ. 'ಮಗೂ, ಆ ವಿಷಯದಲ್ಲಿ ನಿನಗೆ ದುಃಖಬೇಡ. ಈಗಾಗಲೇ ಬ್ರಾಹ್ಮಣನಿಗೆ ಹಣಕೊಟ್ಟು ಮಕ್ಕಳನ್ನು ಬಿಡಿಸಿಕೊಂಡಿದ್ದೇನೆ. ಆಸೆಬುರುಕ ಬ್ರಾಹ್ಮಣ ದುರಾಸೆಯಿಂದ ಹಣ ಪಡೆದು, ಮಿತಿಮೀರಿ ತಿಂದು ಸತ್ತುಹೋದ. ಅವನಿಗೆ ಸರಿಯಾದ ಶಿಕ್ಷೆಯಾಗಿದೆ' ಎಂದು ನುಡಿದ ಸಂಜಯ ರಾಜ. 'ಮಹಾರಾಜಾ, ಹಾಗಾದರೆ ರಾಜಪುತ್ರ, ರಾಜಪುತ್ರಿಯರು ಈಗ ಎಲ್ಲಿದ್ದಾರೆ? ಹಾವು ಕಚ್ಚಿದವನಿಗೆ ತೀವ್ರವಾಗಿ ಔಷಧ ಕೊಡುವಂತೆ, ಆ ವಿಷಯವನ್ನು ನನಗೆ ಬೇಗನೆ ತಿಳಿಸಿ' ಎಂದು ವೆಸ್ಸಂತರ ಅವಸರಿಸಿದ. 'ಮಕ್ಕಳು ನನ್ನೊಂದಿಗೇ ಇದ್ದಾರೆ. ಅವರ ಬಗ್ಗೆ ಯಾವ ಕಾಳಜಿ ಬೇಡ' ಎಂದು ಸಮಾಧಾನ ಮಾಡಿದ ರಾಜ.

ವೆಸ್ಸಂತರ ತಂದೆಯ ಕುಶಲವನ್ನು ಕೇಳಿದ, 'ಅಪ್ಪ, ತಾವು ಕುಶಲ ತಾನೆ? ತಮ್ಮ ಆರೋಗ್ಯ ಹೇಗಿದೆ? ಅಮ್ಮನ ಆರೋಗ್ಯ ಹೇಗಿದೆ? ಆಕೆಯ ಕಣ್ಣುಗಳು ದುರ್ಬಲವಾಗಿಲ್ಲವಲ್ಲ?'. 'ಇಲ್ಲ ಪುತ್ರ, ನಾವಿಬ್ಬರೂ ನಿರೋಗಿಗಳಾಗಿದ್ದೇವೆ. ನಿನ್ನ ತಾಯಿಯ ದೃಷ್ಟಿ ದುರ್ಬಲವಾಗಿಲ್ಲ' ಎಂದ ರಾಜ. 'ಅಪ್ಪಾ, ನಿಮ್ಮ ರಥಗಳು ಚೆನ್ನಾಗಿವೆಯೆ? ಜನಪದರೆಲ್ಲ ಸಮೃದ್ಧರಾಗಿದ್ದಾರೆಯೆ? ಅತಿವೃಷ್ಟಿ, ಅನಾವೃಷ್ಟಿಗಳು ದೇಶವನ್ನು ಕಾಡಿಲ್ಲವಲ್ಲ?' ಎಂದು ಮರುಪ್ರಶ್ನೆ ಮಾಡಿದ ವೆಸ್ಸಂತರ. 'ಎಲ್ಲವೂ ಕ್ಷೇಮವಾಗಿದೆ. ರಥ, ಕುದುರೆ, ಆನೆಗಳು, ಸೈನ್ಯ ಎಲ್ಲವೂ ಕ್ಷೇಮವಾಗಿವೆ. ಜನಪದರು ಸಂತೃಪ್ತಿಯಿಂದ ಇದ್ದಾರೆ. ಅತಿವೃಷ್ಟಿ, ಅನಾವೃಷ್ಟಿಗಳು ದೇಶವನ್ನು ಕಂಗೆಡಿಸಿಲ್ಲ', ಎಂದು ಸಂಜಯ ಮಹಾರಾಜ ಹೇಳುತ್ತಿರುವಂತೆ ಮಹಾರಾಣಿ ಪುಸತಿದೇವಿ ದೊಡ್ಡ ಜನಸಮೂಹದೊಡನೆ ಅಲ್ಲಿಗೆ ಬಂದಳು. ❖

ದಿನ ಭವಿಷ್ಯ

ಶುಕ್ರವಾರ ಸೆಪ್ಟೆಂಬರ್ 17, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ಏಕಾದಶಿ ಗಂ. 5-7 (ಬೆ. 8-17) ಶುಕ್ರವಾರ ನಿತ್ಯ ನಕ್ಷತ್ರ ಶ್ರವಣ ಗಂ. 55-55 (ರಾ. 4-37) ಅತಿಗಂಡ ನಾಮ ಯೋಗ ಗಂ. 40-22 ಭದ್ರೆ ಕರಣ ಗಂ. 5-7 ವಿಷ ಗಂ. 6-53 ಅಮೃತ ಗಂ 30-6: ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-12 ಸೂರ್ಯಾಸ್ತ: 6-16 ಅದೃಷ್ಟ ಸಂಖ್ಯೆ 3, 6

ಮೇಷ: ಲೇವಾದೇವಿ ವ್ಯವಹಾರಸ್ಥರಿಗೆ ಹೆಚ್ಚಿನ ಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಪ್ರಾಪ್ತಿಯಾಗುವ ಸಂಭವ. ಮಹಿಳೆಯರಿಗೆ ಸಂತಸ ತರುವ ದಿನ. ಹಿತಕರ ಸುದ್ದಿಯೊಂದನ್ನು ಆಲಿಸಲಿದ್ದೀರಿ.

ವೃಷಭ: ಕೌಟುಂಬಿಕ ಸಾಮರಸ್ಯದೊಂದಿಗೆ ಶಾಂತಿಯುತ ಬದುಕು. ಸಾಮಾಜಿಕ ಹಾಗೂ ಬಂಧುಗಳ ಗೌರವಾದರಕ್ಕೆ ಪಾತ್ರರಾಗಲಿದ್ದೀರಿ. ಕೆಲಸ ಕಾರ್ಯಗಳಿಂದಾಗಿ ದೇಹಾಲಸ್ಯ. ವಿಶ್ರಾಂತಿಯಿಂದಾಗಿ ನೆಮ್ಮದಿ.

ಮಿಥುನ: ಕೆಲಸ–ಕಾರ್ಯಗಳು ನಿರ್ವಿಘ್ನದಾಯಕವಾಗಿ ನಡೆಯಲಿವೆ. ವ್ಯಾಪಾರದಲ್ಲಿ ಲಾಭ. ಬಂಧು ಬಾಂಧವರ ಹೊಗಳಿಕೆಗೆ ಪಾತ್ರರಾಗುವ ಅವಕಾಶ. ಭೂ ವ್ಯವಹಾರದಲ್ಲಿ ಸಮಾಧಾನಕರ ಫಲಿತಾಂಶ.

ಕರ್ಕಾಟಕ: ಉದ್ಯೋಗ ಕ್ಷೇತ್ರದಲ್ಲಿ ಒತ್ತಡ ಉಂಟಾಗುವ ಸಾಧ್ಯತೆ. ಲೇವಾದೇವಿ ವ್ಯವಹಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಧೈರ್ಯದಿಂದ ನಿರ್ಧಾರಗಳನ್ನು ತೆಗೆದುಕೊಳ್ಳಿ.

ಸಿಂಹ: ವಾಹನ ಯಂತ್ರೋಪಕರಣಗಳಿಂದ ಅನುಕೂಲ. ವಿದ್ಯಾರ್ಥಿಗಳಿಗೆ ಆಟಪಾಠಗಳಲ್ಲಿ ಹೆಚ್ಚಿನ ಪ್ರಗತಿ. ಕುಟುಂಬದಲ್ಲಿ ಒಮ್ಮತದ ನಿರ್ಣಯದಿಂದಾಗಿ ನೆಮ್ಮದಿ. ಸಂತಸ ತರುವ ಸುದ್ದಿಯೊಂದನ್ನು ಆಲಿಸಲಿದ್ದೀರಿ.

ಕನ್ಯಾ: ಉದ್ಯೋಗ ಅಥವಾ ವೃತ್ತಿಯಲ್ಲಿ ಒತ್ತಡದ ಕೆಲಸ. ಹಣಕಾಸು ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಹಿರಿಯರೊಂದಿಗೆ ವ್ಯವಹಾರದ ಕುರಿತಾದ ಸಮಾಲೋಚನೆ ನಡೆಸಲಿದ್ದೀರಿ. ಆರೋಗ್ಯದಲ್ಲಿ ಸುಧಾರಣೆ.

ತುಲಾ: ಮಾನಸಿಕ ಬೇಸರ. ವಾಹನಗಳ ವಿಷಯದಲ್ಲಿ ಜಾಗರೂಕರಾಗಿರಿ. ಉದ್ಯೋಗ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ವ್ಯಾಪಾರಸ್ಥರಿಗೆ ಧನ ಹಾನಿಯುಂಟಾಗುವ ಸಾಧ್ಯತೆ.

ವೃಶ್ಚಿಕ: ಬಿಡುವಿಲ್ಲದ ಕೆಲಸ–ಕಾರ್ಯಗಳ ನಡುವೆಯೂ ಪ್ರಯಾಣದಲ್ಲಿ ಸುಖಾನುಭವ. ಆರೋಗ್ಯದ ಬಗ್ಗೆ ಗಮನ ಅಗತ್ಯ. ಸ್ವಂತ ಉದ್ಯಮದಲ್ಲಿ ತೊಡಗಿರುವವರಿಗೆ ಕೆಲಸ–ಕಾರ್ಯಗಳಲ್ಲಿ ಹಿನ್ನಡೆ ಸಾಧ್ಯತೆ.

ಧನು: ಕೆಲಸ ಕಾರ್ಯಗಳಲ್ಲಿ ಪ್ರಗತಿ. ಮನೆಯಲ್ಲಿ ಸಮಾಧಾನಕರ ವಾತಾವರಣ. ವಂಚನೆಯಿಂದ ಪಾರಾಗಲು ಅಪರಿಚಿತರೊಂದಿಗೆ ವ್ಯವಹರಿಸುವಾಗ ಜಾಗರೂಕರಾಗಿರುವುದು ಅವಶ್ಯ.

ಮಕರ: ನಿರೀಕ್ಷಿಸಿದಂತೆ ಕೆಲಸ ಕಾರ್ಯಗಳು ನಡೆಯಲಿವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಒತ್ತಡ ಉಂಟಾಗಲಿದೆ. ಕ್ರೀಡಾಪಟುಗಳಿಗೆ ಗೌರವಾದರಗಳು ಲಭ್ಯವಾಗಲಿದೆ. ಮಕ್ಕಳೊಂದಿಗೆ ಸಂತಸದ ದಿನವಾಗಲಿದೆ.

ಕುಂಭ: ಆರೋಗ್ಯದಲ್ಲಿ ವೃದ್ಧಿ. ಬರಬೇಕಾದ ಬಾಕಿ ಹಣ ಸಕಾಲದಲ್ಲಿ ಹಿಂದಿರುಗಿ ಅನುಕೂಲ. ಕೆಲಸ ಕಾರ್ಯಗಳಲ್ಲಿ ಸಾಮಾನ್ಯ ಪ್ರಗತಿ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ಪ್ರಿಯ ವ್ಯಕ್ತಿಗಳ ಆಗಮನ ಸಾಧ್ಯತೆ.


ಮೀನ: ಕಾರ್ಯಕಲಾಪಗಳು ಸುಗಮವಾಗಿಲಿವೆ. ವಿವಾದಗಳಲ್ಲಿ ನಿಮ್ಮ ಪರವಾಗಿ ನ್ಯಾಯ ದೊರಕಲಿದೆ. ನಿವೇಶನ ಖರೀದಿ ಸಾಧ್ಯತೆ. ಸಮಾಧಾನ ಚಿತ್ತದಿಂದ ಕುಟುಂಬದಲ್ಲಿ ಮನಸ್ತಾಪ ದೂರವಾಗಲಿದೆ.

ನಿಮ್ಮ ಜನ್ಮದಿನ 17-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ವಾಹನ ಚಾಲನೆಯಲ್ಲಿ ಆಸಕ್ತಿ ಹೊಂದಿದವರಾಗಿರುವುದರ ಜೊತೆಗೆ ಸದಾ ಕ್ರಿಯಾಶೀಲರಾಗಿರುವಿರಿ. ಪ್ರಕೃತಿ ಪ್ರೇಮದಿಂದಾಗಿ ಸಾಮಾಜಿಕ ಗೌರವ. ಆರೋಗ್ಯದ ವಿಷಯದಲ್ಲಿ ಸ್ವಲ್ಪಮಟ್ಟಿನ ಕಿರಿ ಕಿರಿ ಸಾಧ್ಯತೆ. ಅತಿಯಾದ ಜಿಪುಣತನದಿಂದಾಗಿ ಮನೆಯಲ್ಲಿ ವೈಮನಸ್ಸು.

ಪದಬಂಧ 4721
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸುತ್ತಾಡುವ ಸ್ವಭಾವದವನು (4)
3.ಹೀಗೆ ವಾಸನೆ ನೋಡು (4)
5.ಶ್ರೇಷ್ಠವಾದುದು ಇಲ್ಲಿದೆ (2)
7.ಮನಸ್ಸಿಗೆ ಬಂದಂತೆ ನಡೆಯುವವ (3)
8.ಹಂತಕನೇರಿದ ಮೆಟ್ಟಿಲು (2)
9.ಸಾರ ಅಥವಾ ತಿರುಳು (2)
10.ಸುರನ ಹತ್ತಿರವಿರುವ ರಾಕ್ಷಸ (3)
12.ಕರ್ತಾರನ ಕೈ (2)
14.ಮೃತ್ಯುದೇವತೆಯ ಮಗ (4)
15.ಒಬ್ಬೊಬ್ಬರಿಗೆ ಸಂಬಂಧಪಟ್ಟದ್ದು (4)

ಮೇಲಿಂದ ಕೆಳಕ್ಕೆ
1.ಎಂಟು ಸಾಲಿನ ಪದ್ಯ (4)
2.ಕನ್ನಡಿಗನಿಗೆ ಸಿಕ್ಕಿರುವ ರಿಬೇಟ್! (4)
3.ಆಟದ ಬಯಲು (4)
4.ಚೆನ್ನಾಗಿ ಕಾಪಾಡಿದುದು (4)
6.ತನ್ನದೇ ಆದ ವಿಶಿಷ್ಟ ಗುಣ (3)
8.ಕೊಲೆಗಾರ ಇಲ್ಲಿದ್ದಾನೆ (3)
9.ವಿದಾಯ ಹೇಳಲು ನೆರೆದ ಗುಂಪು! (4)
10.ಉಚಿತವಲ್ಲದ್ದು ಇದು (4)
11.ರಾತ್ರಿಯ ಒಡೆಯನಿವನು (4)
13.ಬೆಲೆಯುಳ್ಳ ಮಣಿಗಳನ್ನೊಳಗೊಡಿರುವ ಸಮುದ್ರ (4)



4720ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಕಾಗೆಬಂಗಾರ 4.ಅಧಮ 5.ವಿಲೋಮ 9.ಯತ್ನ 10.ದಬ್ಬಣ 11.ಅಳು 12.ನನಸು 14.ಬರಡು 15.ಮರಣಕಾಲ

ಮೇಲಿಂದ ಕೆಳಕ್ಕೆ: 1.ಧುಬಂ 2.ಕಾಮ 3.ರವಿ 4.ಅಭಯದಾನ 6.ಮರಳುಗಾಡು 7.ಭೇದನ 8.ಕೊಣಸು 13.ಸುಮ 14.ಬಲ 16.ಣತ್ಯ

ಸುಡೊಕು 5107

		6			8	5		1
	5		2	1				
1		2			5			8
6		9				8		
			5		6		1	
3						2		7
		4				1		2
	2		1	5				9
9		1			2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5106 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ವಹಿವಾಟು ಶೇಕಡ 75ರಷ್ಟು ಇಳಿಕೆ • ದಿನದ ಖರ್ಚಿಗೆ ಹಣ ಸಿಕ್ಕರೆ ಸಾಕು ಎಂದು ಕೆಲಸ ಮಾಡುತ್ತಿರುವ ಕಾರ್ಮಿಕರು

ಕುಸಿದುಬಿದ್ದ ನಿರ್ಮಾಣ ಕಾರ್ಮಿಕರ ಬದುಕು

• ವಿಜಯ್ ಜೋಷಿ



ಸಾಂದರ್ಭಿಕ ಚಿತ್ರ

ಬೆಂಗಳೂರು: ಕಟ್ಟಡಗಳ ಸೆಂಟ್ರಿಂಗ್ ಕೆಲಸದಲ್ಲಿ ತೊಡಗಿರುವ ಉಡುಪಿ ಜಿಲ್ಲೆಯ ರವಿ (ಹೆಸರು ಬದಲಾಯಿಸಲಾಗಿದೆ) ಅವರಿಗೆ ಲಾಕ್‌ಡೌನ್ ಶುರುವಾಗುವವರೆಗೆ ವೃತ್ತಿಯಲ್ಲಿ ದೊಡ್ಡ ಸಮಸ್ಯೆಗಳೇನೂ ಇರಲಿಲ್ಲ. ಆದರೆ ಕೋವಿಡ್ ಹರಡುವುದನ್ನು ತಡೆಯಲು ಜಾರಿಗೆ ತಂದ ಲಾಕ್‌ಡೌನ್ ಕ್ರಮದ ಪರಿಣಾಮವಾಗಿ ಇವರ ಆದಾಯದಲ್ಲಿ ಶೇಕಡ 60ರಷ್ಟು ಇಳಿಕೆ ಆಗಿದೆ.

'2020ರಲ್ಲಿ ಜಾರಿಯಾದ ಮೊದಲ ಲಾಕ್‌ಡೌನ್ ಪೂರ್ವದಲ್ಲಿ ನನ್ನ ಜೊತೆ 12 ಜನ ಕೆಲಸ ಮಾಡುತ್ತಿದ್ದರು. ನಂತರ ಅವರ ಸಂಖ್ಯೆ ಒಂಬತ್ತಕ್ಕೆ ಇಳಿಯಿತು. ಎರಡನೇ ಲಾಕ್‌ಡೌನ್ ನಂತರ ನಾಲ್ಕು ಜನ ಮಾತ್ರ ಇದ್ದಾರೆ. ಮೊದಲು ನಾವು ವರ್ಷಕ್ಕೆ 10–12 ಮನೆಗಳ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದೆವು. ಈಗ ನಾಲ್ಕು ಸಿಕ್ಕಿದರೆ ಹೆಚ್ಚು' ಎಂದು ರವಿ ಹೇಳುತ್ತಾರೆ.

ಅವರ ಮಾತುಗಳು, ಕಟ್ಟಡ ನಿರ್ಮಾಣ ಕೆಲಸಗಾರರ ಬದುಕು ಲಾಕ್‌ಡೌನ್ ಪರಿಣಾಮವಾಗಿ ಕಂಡಿರುವ ಬದಲಾವಣೆಗಳನ್ನು ಹೇಳುತ್ತಿವೆ. ಜನರಲ್ಲಿ ಹಣದ ಹರಿವು ಕಡಿಮೆಯಾಗಿದೆ. ಹಾಗಾಗಿ ಅವರು ಕಟ್ಟಡ ನಿರ್ಮಾಣ ಕೆಲಸಕ್ಕೆ ಮೊದಲಿನ ರೀತಿಯಲ್ಲಿ ಮುಂದಾಗುತ್ತಿಲ್ಲ. ಇದರಿಂದಾಗಿ ನಿರ್ಮಾಣ ಕೆಲಸಗಳನ್ನು ನೆಚ್ಚಿಕೊಂಡಿದ್ದವರ ಕಿಸೆಗೆ ಹಣ ಬರುತ್ತಿಲ್ಲ ಎಂದು ಈ ಕೆಲಸದಲ್ಲಿ ವರ್ಷಗಳಿಂದ ತೊಡಗಿಸಿಕೊಂಡವರು ವಿವರಿಸುತ್ತಾರೆ.

'ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ನಮ್ಮ ಕಡೆ ಹೊಸದೊಂದು ಪ್ರವೃತ್ತಿ ಶುರುವಾಗಿದೆ. ಅವತ್ತಿನ ಖರ್ಚಿಗೆ ಹಣ ಸಿಕ್ಕರೆ ಸಾಕು ಎಂಬ ಪರಿಸ್ಥಿತಿ ಕೆಲವರಿಗೆ ಇದೆ. ಹಾಗಾಗಿ ಅವರು ಕಡಿಮೆ ಹಣಕ್ಕೆ ಕೆಲಸ ಮಾಡಿಕೊಡಲು ಶುರು ಮಾಡಿದ್ದಾರೆ. ನಾವು ಅವರಷ್ಟು ಕಡಿಮೆ ಶುಲ್ಕಕ್ಕೆ ಕೆಲಸ ಮಾಡಲು ಆಗದು, ನಮ್ಮ ಖರ್ಚುಗಳು ಹಲವು ಇವೆ. ಈಗ ಎದುರಾಗಿರುವ ಪರಿಸ್ಥಿತಿ ಸರಿಹೋಗಲು ಹತ್ತು ವರ್ಷವಾದರೂ ಬೇಕಾದೀತು.

ಅಂಕಿ–ಅಂಶ

1 ಲಕ್ಷಕ್ಕೂ ಹೆಚ್ಚು
ರಾಜ್ಯದಲ್ಲಿನ ನಿರ್ಮಾಣ ಗುತ್ತಿಗೆದಾರರು

5 ಲಕ್ಷಕ್ಕೂ ಹೆಚ್ಚು
ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರು

(ಮಾಹಿತಿ: ರಾಜ್ಯ ಗುತ್ತಿಗೆದಾರರ ಸಂಘ)

ಬದುಕು ಬೀದಿಗೆ ತಂದ ಕೋವಿಡ್

ಈಗ ಈ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಕೆಲವರ ದುಡಿಮೆಯ ಆಯಸ್ಸೇ ಅಷ್ಟೊತ್ತಿಗೆ ಮುಗಿದುಹೋಗಬಹುದು' ಎಂದು ಅವರು ಹೇಳುತ್ತಾರೆ.

ಮೊದಲ ಲಾಕ್‌ಡೌನ್ ಸಂದರ್ಭದಲ್ಲಿ ತುಮಕೂರಿನ ಬಳಿ ಮನೆಯೊಂದರ ನಿರ್ಮಾಣ ಕೆಲಸದಲ್ಲಿ ತೊಡಗಿದ್ದ ಇಬ್ರಾಹಿಂ ಅವರು ಯುಗಾದಿಗೆ ತುಸು ಮೊದಲು ತಮ್ಮ ಊರಿಗೆ ಮರಳಿದ್ದರು. ಯುಗಾದಿ ಹಬ್ಬದ ವೇಳೆಗೆ ಲಾಕ್‌ಡೌನ್ ಜಾರಿಗೆ ಬಂತು. ಇಬ್ರಾಹಿಂ ಅವರಿಗೆ ತಿಂಗಳುಗಳ ಕಾಲ ತುಮಕೂರಿಗೆ ಮರಳಲು, ಹಿಡಿದಿದ್ದ ಮನೆ ಕೆಲಸವನ್ನು ಪೂರ್ಣಗೊಳಿಸಲು ಆಗಲೇ ಇಲ್ಲ.


ಜಿ.ಎಂ. ರವೀಂದ್ರ


ನಾಗರಾಜ ಕೋಳ್ಕೆರೆ

'ಲಾಕ್‌ಡೌನ್‌ಗೂ ಮೊದಲು ನನ್ನೊಂದಿಗೆ 22 ಜನ ಕೆಲಸ ಮಾಡುತ್ತಿದ್ದರು. ಈಗ ಅವರ ಸಂಖ್ಯೆ 12 ಮಾತ್ರ. ಲಾಕ್‌ಡೌನ್ ನಂತರದಲ್ಲಿ ನನ್ನ ಜೊತೆ ಕೆಲಸ ಮಾಡುವವರ ಸಂಬಳ ಕಡಿಮೆ ಮಾಡಬೇಕಾಯಿತು. ಕೆಲವರಿಗೆ ನಾನು ಇನ್ನೂ ಪೂರ್ತಿ ಹಣ ಪಾವತಿಸಿಲ್ಲ. ಈಗ ಕೆಲಸ ಸುಲಭಕ್ಕೆ ಸಿಗುತ್ತಿಲ್ಲ. ನಮ್ಮ ತಂಡವು ಬೆಂಗಳೂರಿನ ಸುತ್ತಮುತ್ತ ಮಾಡುತ್ತಿದ್ದ ಮೂರು–ನಾಲ್ಕು ಮನೆಗಳ ಕೆಲಸ ನಿಂತುಹೋಗಿದೆ. ಮನೆ ಕಟ್ಟಿಸುತ್ತಿದ್ದವರ ಉದ್ಯಮಗಳು ಸಂಕಷ್ಟಕ್ಕೆ ಸಿಲುಕಿವೆ.ಹಾಗಾಗಿ,ಮನೆಕೆಲಸಗಳೂಸ್ಥಗಿತವಾಗಿವೆ' ಎಂದು ಇಬ್ರಾಹಿಂ ಅವರು 'ಪ್ರಜಾವಾಣಿ' ಜೊತೆ ಪರಿಸ್ಥಿತಿ ಹಂಚಿಕೊಂಡರು.

ಲಾಕ್‌ಡೌನ್ ನಂತರದಲ್ಲಿ ಇವರು ಎರಡು ತಿಂಗಳು ಕೆಲಸವಿಲ್ಲದೆ ಮನೆಯಲ್ಲೇ ಕುಳಿತಿದ್ದರು. 'ಲಾಕ್‌ಡೌನ್ ನಂತರದಲ್ಲಿ ಈ ಕೆಲಸವೇ ಬೇಡ ಎಂದು ಅನಿಸಿದ್ದು ಇದೆ. ಆದರೆ ಬೇರೆ ಕೆಲಸ ಮಾಡಲು ನನಗೆ ಗೊತ್ತಿಲ್ಲ' ಎಂದರು.

ಬೆಂಗಳೂರಿನಲ್ಲಿ ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ನಾಗರಾಜ ಕೋಳ್ಕೆರೆ, 'ಮೊದಲು ನನ್ನ ಜೊತೆ ಕೆಲಸ ಮಾಡುತ್ತಿದ್ದ ಎಲ್ಲರೂ ಈಗ ಕಟ್ಟಡ ನಿರ್ಮಾಣ ಕೆಲಸಕ್ಕೆ ಮರಳಿದರೆ ಅವರಿಗೆ ಕೆಲಸ ಕೊಡುವ ಸ್ಥಿತಿಯಲ್ಲಿ ನಾನಿಲ್ಲ' ಎನ್ನುತ್ತಾರೆ.

'ಮೊದಲು ನನ್ನ ಬಳಿ ಹಲವು ತಂಡಗಳಲ್ಲಿ ಒಟ್ಟು 50 ಜನ ಕೆಲಸ ಮಾಡುತ್ತಿದ್ದರು. ಈಗ ಹತ್ತು ಜನಕ್ಕೆ ಮಾತ್ರ ಕೆಲಸ ನೀಡಿದ್ದೇನೆ. ನನ್ನ ವಹಿವಾಟು ಕೋವಿಡ್‌ಗೂ ಮೊದಲಿನ ಸ್ಥಿತಿಗೆ ಹೋಲಿಸಿದರೆ ಶೇಕಡ 75ರಷ್ಟು ತಗ್ಗಿದೆ' ಎಂದರು ನಾಗರಾಜ.

ಮೊದಲು ಏಕಕಾಲಕ್ಕೆ ನಾಲ್ಕು ಕಟ್ಟಡಗಳ ಕೆಲಸ ಒಪ್ಪಿಕೊಳ್ಳುತ್ತಿದ್ದ ನಾಗರಾಜ ಅವರಿಗೆ ಈಗ ಒಂದು ಕಟ್ಟಡದ ಕೆಲಸ ಮಾತ್ರ ಸಿಗುತ್ತಿದೆ. 'ಜನರಿಗೆ ತಾವು ಎಷ್ಟು ಸಂಪಾದನೆ ಮಾಡುತ್ತಿದ್ದೆವು ಎಂಬುದು ಗೊತ್ತಿರುತ್ತಿತ್ತು. ಆ ಸಂಪಾದನೆಯ ಆಧಾರದಲ್ಲಿ ಅವರು ಕಟ್ಟಡ ನಿರ್ಮಾಣ ಕೆಲಸಕ್ಕೆ ಸಂಬಂಧಿಸಿದ ಯೋಜನೆ ಹಾಕಿಕೊಳ್ಳುತ್ತಿದ್ದರು. ಈಗ ಅವರಿಗೆ ತಮ್ಮ ಆದಾಯದ ಬಗ್ಗೆಯೇ ಖಚಿತತೆ ಇಲ್ಲ. ಹಾಗಾಗಿ ಅವರು ಕೆಲಸಕ್ಕೆ ಮುಂದಾಗುತ್ತಿಲ್ಲ' ಎಂದರು ನಾಗರಾಜ.

'ಅರ್ಥ ಮಾಡಿಕೊಳ್ಳಲೂ ಆಗುತ್ತಿಲ್ಲ'

ಕಟ್ಟಡ ನಿರ್ಮಾಣ ಉದ್ದಿಮೆಗಳು ಮತ್ತು ಬಿಲ್ಡರ್‌ಗಳು ಎಷ್ಟು ಕಷ್ಟದಲ್ಲಿದ್ದಾರೆ ಎಂಬುದನ್ನು ಇತರರಿಗೆ ಅರ್ಥ ಮಾಡಿಕೊಳ್ಳಲೂ ಆಗುತ್ತಿಲ್ಲ ಎಂದು ನೋವು ಹಂಚಿಕೊಂಡರು ಭಾರತೀಯ ಬಿಲ್ಡರ್‌ಗಳ ಒಕ್ಕೂಟದ ಬೆಂಗಳೂರು ಕೇಂದ್ರದ ಅಧ್ಯಕ್ಷ ಜಿ.ಎಂ.ರವೀಂದ್ರ.

'ಮಾರುಕಟ್ಟೆಯಲ್ಲಿ ಹಣದ ಹರಿವು ಚೆನ್ನಾಗಿದ್ದಾಗ ಒಳ್ಳೆಯದಾಗುತ್ತದೆ. ಫ್ಲ್ಯಾಟ್ ಮಾರಿ, ದುಡ್ಡು ಬಂದರೆ ಇನ್ನೊಂದು ಫ್ಲ್ಯಾಟ್ ನಿರ್ಮಾಣ ಸಾಧ್ಯ. ಆದರೆ, ಈಗ ಜನ ಮೊದಲಿನ ರೀತಿಯಲ್ಲಿ ಖರೀದಿ ಮಾಡುತ್ತಿಲ್ಲ. ಇಡೀ ಉದ್ಯಮ ಕಷ್ಟದಲ್ಲಿದೆ. ಕಾರ್ಮಿಕರಿಗೂ ತೊಂದರೆ ಆಗಿದೆ' ಎಂದು ತಿಳಿಸಿದರು.

ನಿರ್ಮಾಣ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದವರಲ್ಲಿ ಶೇಕಡ 20ರಷ್ಟು ಜನ ಖಂಡಿತ ಕೆಲಸ ಕಳೆದುಕೊಂಡಿದ್ದಾರೆ. ಈಗ ನುರಿತ ಕೆಲಸಗಾರರ ಕೊರತೆ ಇದೆ. ಕೋವಿಡ್ ಅಲೆಗಳ ಸಂದರ್ಭದಲ್ಲಿ ತವರಿಗೆ ಹೋಗಿದ್ದ ಹೊರರಾಜ್ಯಗಳ ಕಾರ್ಮಿಕರ ಪೈಕಿ ಶೇ 10ರಷ್ಟು ಜನ ಮಾತ್ರ ಮರಳಿದ್ದಾರೆ. ಮೂರನೆಯ ಅಲೆ ಇಲ್ಲ ಎಂದಾದರೆ ಇನ್ನು ಆರು ತಿಂಗಳಲ್ಲಿ ಅವರೆಲ್ಲ ವಾಪಸ್ ಬರುತ್ತಾರೆ. ಮೂರನೆಯ ಅಲೆ ಎದುರಾಯಿತು ಎಂದಾದರೆ ಪರಿಸ್ಥಿತಿಯನ್ನು ಊಹಿಸಿಕೊಳ್ಳಲೂ ಆಗುವುದಿಲ್ಲ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	117.00	12,536	11,029
ಹಾರಂಗಿ	2,859	2,858.50	3,304	3,904
ಕಬಿನಿ	2284.00	2,283.37	6,100	2,000
ಹೇಮಾವತಿ	2,922	2,916.80	9,970	5,290
ಲಿಂಗನಮಕ್ಕಿ	1,819	1,816.40	10,966	-
ಸೂಪಾ (ಮೀ)	564	557	12,741	3,835
ಮಾಣಿ	594	587.90	1724	-
ತುಂಗಭದ್ರಾ	1,633	1,632.87	46,374	44,176
ಮಲಪ್ರಭಾ	2079.5	2,079.50	5,194	5,194
ಘಟಪ್ರಭಾ	2175	2,175.00	6,812	6,812
ಭದ್ರಾ	186	185.50	6,402	6,402
ಆಲಮಟ್ಟಿ (ಮೀ)	519.6	519.08	1,01,824	1,61,522
ನಾರಾಯಣಪುರ (ಮೀ)	492.25	491.64	98,000	67,850

* ನೆಲಮಟ್ಟದಿಂದ

ರಾಜ್ಯದಲ್ಲೂ ಅಪರಾಧ ತಗ್ಗಿಸಿದ ಕೋವಿಡ್

ಬೆಂಗಳೂರು: ರಾಜ್ಯದಲ್ಲಿ ಹಿಂದಿನ ವರ್ಷಗಳಿಗೆ ಹೋಲಿಸಿದರೆ 2020ರಲ್ಲಿ ಅಪರಾಧಗಳ ಸಂಖ್ಯೆ ಕೊಂಚ ಕಡಿಮೆಯಾಗಿದೆ. ಕೊರೊನಾ ಸೋಂಕು ಹಾಗೂ ಅದರ ನಿಯಂತ್ರಣಕ್ಕೆ ಜಾರಿಗೊಳಿಸಿದ್ದ ಲಾಕಡೌನ್ ಅವಧಿಯಲ್ಲಿ ಅಪರಾಧಗಳು ತಗ್ಗಿವೆ.

ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯುರೊ (ಎನ್‌ಸಿಆರ್‌ಬಿ) 2020ರ ದಾಖಲೆ ಬಿಡುಗಡೆ ಮಾಡಿದೆ. ರಾಜ್ಯದ ಅಪರಾಧ ವಿವರಗಳನ್ನು ಉಲ್ಲೇಖಿಸಲಾಗಿದೆ.

ರಾಜ್ಯದಲ್ಲಿ 2018ರಲ್ಲಿ 1,26,534 ಅಪರಾಧ ಪ್ರಕರಣಗಳು ದಾಖಲಾಗಿದ್ದವು. 2020ರಲ್ಲಿ ಅದರ ಪ್ರಮಾಣ 1,06,350 ಇದೆ. ಬೆಂಗಳೂರಿನಲ್ಲಿ 2018ರಲ್ಲಿ 39,976 ಪ್ರಕರಣಗಳು ವರದಿಯಾಗಿದ್ದವು. 2020ರಲ್ಲಿ 34,156 ಪ್ರಕರಣಗಳು ಮಾತ್ರ ದಾಖಲಾಗಿವೆ. ಸೈಬರ್ ಅಪರಾಧಗಳ ದಾಖಲಾತಿಯಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಮುಂದಿದೆ. ಅಪರಾಧ ಪ್ರಕರಣಗಳ ಅಂಕಿ–ಅಂಶ ವಿವರವನ್ನು ಇಲ್ಲಿ ನೀಡಲಾಗಿದೆ.


2020ರ ಅಪರಾಧ ಅಂಕಿ–ಅಂಶ


- **1,420** ಕೊಲೆಗಳು
- **3** ವೈದ್ಯಕೀಯ ನಿರ್ಲಕ್ಷ್ಯದಿಂದ ಸಾವು
- **12,090** ನಿರ್ಲಕ್ಷ್ಯದಿಂದ ಸಾವು
- **21** ಸ್ಥಳೀಯ ಸಂಸ್ಥೆಗಳ ನಿರ್ಲಕ್ಷ್ಯದಿಂದ ಸಾವು
- **11,573** ಅಪಘಾತದಲ್ಲಿ ಸಾವು
- **178** ವರದಕ್ಷಿಣೆ ಕಿರುಕುಳದಿಂದ ಸಾವು

ದಾಖಲಾದ ಅಪರಾಧ ಪ್ರಕರಣಗಳು (ಕರ್ನಾಟಕ)

ವರ್ಷ	ಪ್ರಕರಣಗಳು
2018	1,26,534
2019	1,20,165
2020	1,06,350

ಮಹಿಳೆಯರ ಮೇಲೆ ನಡೆದ ಅಪರಾಧಗಳು





ಗಲಭೆಗಳು	
ನೀರಿಗಾಗಿ	68
ಜಮೀನು/ಆಸ್ತಿಗಾಗಿ	1228
ಕೌಟುಂಬಿಕ ವಿಚಾರಕ್ಕಾಗಿ	176
ವೈಷಮ್ಯದಿಂದಾಗಿ	657
ವಿದ್ಯುತ್ ಸರಬರಾಜಿಗಾಗಿ	2
ಆಂದೋಲನಕ್ಕಾಗಿ	4

ಮಹಿಳೆಯರ ಮೇಲೆ ನಡೆದ ಅಪರಾಧಗಳು

ವರ್ಷ	ಪ್ರಕರಣಗಳು
2018	13,514
2019	13,828
2020	12,680

ಮಕ್ಕಳ ಮೇಲೆ ನಡೆದ ಅಪರಾಧಗಳು

ವರ್ಷ	ಪ್ರಕರಣಗಳು
2018	6131
2019	6305
2020	5471

ದಾಖಲಾದ ಅಪರಾಧ ಪ್ರಕರಣಗಳು (ಬೆಂಗಳೂರು)

ವರ್ಷ	ಪ್ರಕರಣಗಳು
2018	39,976
2019	41,854
2020	34,156

1,595 ಆಮ್ಲಜನಕ ಉತ್ಪಾದನಾ ಘಟಕಗಳಿಗೆ ಚಾಲನೆ: ಕೇಂದ್ರ

ನವದೆಹಲಿ: ಮುಂದಿನ ದಿನಗಳಲ್ಲಿ ಸಾಲುಸಾಲು ಹಬ್ಬಗಳಿದ್ದು, ಈ ಸಂದರ್ಭದಲ್ಲಿ ಕೊರೊನಾ ಸೋಂಕು ಪ್ರಸರಣ ಮತ್ತೆ ಹೆಚ್ಚಳವಾಗುವ ಸಾಧ್ಯತೆ ಇದೆ. ಹೀಗಾಗಿ ಕೇಂದ್ರ ಸರ್ಕಾರ ದೇಶದ ವಿವಿಧ ಆಸ್ಪತ್ರೆಗಳಲ್ಲಿ ಒಟ್ಟು 1,595 ಆಮ್ಲಜನಕ ಉತ್ಪಾದನಾ ಘಟಕಗಳಿಗೆ ಚಾಲನೆ ನೀಡಿದೆ.

ಇನ್ನೂ, 2,000ಕ್ಕೂ ಅಧಿಕ ಇಂಥ ಘಟಕಗಳ ಕಾರ್ಯಾರಂಭಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ.

'ಪ್ರತಿ ದಿನ 4,600 ಟನ್ ಆಮ್ಲಜನಕ ಉತ್ಪಾದಿಸುವ ಗುರಿ ಇದೆ. ಈಗ 1,595 ಆಮ್ಲಜನಕ ಉತ್ಪಾದನಾ ಘಟಕಗಳ (ಪ್ರೆಷರ್ ಸ್ವಿಂಗ್ ಅಡ್ಸಾರ್ಪ್‌ಷನ್ ಪ್ಲಾಂಟ್ಸ್) ಕಾರ್ಯಾರಂಭಕ್ಕೆ ಕ್ರಮ ಕೈಗೊಳ್ಳಲಾಗಿದೆ. ಇವುಗಳಿಂದ 2,100 ಟನ್‌ನಷ್ಟು ಆಮ್ಲಜನಕ ಉತ್ಪಾದನೆಯಾಗುತ್ತದೆ' ಎಂದು ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದ್ದಾರೆ.

ದೇಶದಲ್ಲಿ ಕೋವಿಡ್‌ನ ಎರಡನೇ ಅಲೆ ಕಾಣಿಸಿಕೊಂಡಾಗ, ಆಮ್ಲಜನಕದ ತೀವ್ರ ಕೊರತೆ ಕಾಣಿಸಿಕೊಂಡಿತ್ತು. ಇದರಿಂದಾಗಿ ಚಿಕಿತ್ಸೆ ನೀಡಲು ಆಸ್ಪತ್ರೆಗಳು ಪರದಾಡಿದವು.

ಅಸ್ಸಾಂ: ಘೇಂಡಾಮೃಗ ಕೊಂಬುಗಳ ದಹನಕ್ಕೆ ಸಂಪುಟ ಅಸ್ತು

ಗುವಾಹಟಿ: ರಾಜ್ಯದ ಸಂಗ್ರಹಾಗಾರಗಳಲ್ಲಿರುವ, ಘೇಂಡಾಮೃಗಗಳ 2,479 ಕೊಂಬುಗಳನ್ನು ಸುಡಬೇಕು ಎಂಬ ಪ್ರಸ್ತಾವನೆಗೆ ಅಸ್ಸಾಂ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ.

ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆ ಅನುಮೋದನೆ ನೀಡಿತು. ಘೇಂಡಾಮೃಗದ ಕೊಂಬಿನಲ್ಲಿ ಔಷಧೀಯ ಗುಣಗಳಿವೆ ಎಂಬ ನಂಬಿಕೆ ಇದೆ. ಕೊಂಬುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸಹ ಭಾರಿ ಬೇಡಿಕೆ. ಈ ಕಾರಣಕ್ಕೆ ಈ ಪ್ರಾಣಿಗಳ ಕಳ್ಳಬೇಟೆ ಅಸ್ಸಾಂನಲ್ಲಿ ಅಧಿಕ.

ಮಕ್ಕಳಲ್ಲಿ ಹೆಚ್ಚಿದ ವೈರಾಣು ಸೋಂಕು
ಆಸ್ಪತ್ರೆಯಲ್ಲಿ ಹಾಸಿಗೆ ಸಿಗದೆ ಪರದಾಟ

ಪ್ರಜಾವಾಣಿ ವಾರ್ತೆ


ಬಳ್ಳಾರಿ ಜಿಲ್ಲಾಸ್ಪತ್ರೆ ಆವರಣದಲ್ಲಿ ವೈರಾಣು ಸೋಂಕು ಕಾಣಿಸಿಕೊಂಡ ಮಕ್ಕಳಿಗೆ ಹಾಸಿಗೆ ಸಿಗದೆ ಆಸ್ಪತ್ರೆಯ ಆವರಣದ ರಸ್ತೆಯಲ್ಲೇ ಪೋಷಕರು ಮಕ್ಕಳನ್ನು ಮಲಗಿಸಿರುವುದು ಗುರುವಾರ ಕಂಡುಬಂತು

ಬಳ್ಳಾರಿ: ಜಿಲ್ಲೆಯ ಹೆಚ್ಚಿನ ಮಕ್ಕಳಲ್ಲಿ ವೈರಾಣು ಸೋಂಕು ಕಾಣಿಸಿಕೊಂಡಿದ್ದು, ಜಿಲ್ಲಾಸ್ಪತ್ರೆಯಲ್ಲಿ ಹಾಸಿಗೆ ಸಿಗದೆ ಪೋಷಕರು ಆಸ್ಪತ್ರೆ ಆವರಣದ ರಸ್ತೆಯಲ್ಲಿ ಚಿಕಿತ್ಸೆಗಾಗಿ ಗುರುವಾರ ಕಾದು ಕುಳಿತಿದ್ದರು.

ಕಳೆದ 20ದಿನಗಳಿಂದ ಬಹುತೇಕ ಮಕ್ಕಳು ಕಫ ಮತ್ತು ಉಸಿರಾಟ ತೊಂದರೆಯಿಂದ ಬಳಲುತ್ತಿದ್ದಾರೆ. ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಸಿಗದೆ ಅನಿವಾರ್ಯವಾಗಿ ಆಸ್ಪತ್ರೆ ಆವರಣವನ್ನೇ ಆವಲಂಬಿಸಿರುವುದಾಗಿ ಪೋಷಕರು ಅಳಲು ತೊಂಡಿಕೊಂಡರು.

ಮಕ್ಕಳು ಚಿಕಿತ್ಸೆಗಾಗಿ ಆಸ್ಪತ್ರೆ ಆವರಣದ ರಸ್ತೆಯಲ್ಲಿ ಕಾದು ಕುಳಿತಿದ್ದಾರೆ ಎನ್ನುವ ವರದಿಯನ್ನು ಜಿಲ್ಲಾ ಆರೋಗ್ಯ ಅಧಿಕಾರಿ ಜನಾರ್ಧನ ನಿರಾಕರಿಸಿದ್ದಾರೆ. ಈ ಮಧ್ಯೆ ಜಿಲ್ಲಾಧಿಕಾರಿ ಪವನ್‌ಕುಮಾರ ಮಾಲಪಾಟಿ, ಜಿಲ್ಲಾ ಸರ್ಜನ್ ಬಸರೆಡ್ಡಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದರು.

'ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ 230 ಹಾಸಿಗೆ ಸಾಮರ್ಥ್ಯ ಇದೆ. ಇದರಲ್ಲಿ 250 ಜನ ದಾಖಲಾಗಿದ್ದಾರೆ. ವೈದ್ಯಕೀಯ ದಂತ ಕಾಲೇಜಿನಲ್ಲಿ 160 ಹಾಸಿಗೆಗಳನ್ನು ವೈರಾಣು ಜ್ವರದಿಂದ ಬಳಲುವ ಮಕ್ಕಳ ಚಿಕಿತ್ಸೆಗಾಗಿ ಕಾಯ್ದಿರಿಸಲಾಗಿದೆ. ದಂತ ವೈದ್ಯಕೀಯ ಕಾಲೇಜಿನಲ್ಲಿ ಮಕ್ಕಳನ್ನು ದಾಖಿಸುವಂತೆ ಪೋಷಕರನ್ನು ಮನವೊಲಿಸಲಾಗುತ್ತಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಜನಾರ್ಧನ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

- **29,65,191** ಒಟ್ಟು ಸೋಂಕಿತರು (29,64,083 ನಿನ್ನೆಯ ವಿವರ)
- **16,174** ಸಕ್ರಿಯ ಪ್ರಕರಣಗಳು
- **29,11,434** ಗುಣಮುಖರಾದವರು
- **37,555** ಒಟ್ಟು ಸಾವು

ದಿನದ ಏರಿಕೆ	
ಹೊಸ ಪ್ರಕರಣ	1,116
ಗುಣಮುಖ	809
ಸಾವು	18

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಸೆ. 18ರಂದು ಪರಿಶೀಲನಾ ಸಭೆ

ನವದೆಹಲಿ (ಪಿಟಿಐ): ವಿವಿಧ ಸಚಿವಾಲಯಗಳು ಹಾಗೂ ಇಲಾಖೆಗಳ ಕಾರ್ಯದರ್ಶಿಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ (ಸೆ.18) ಪರಿಶೀಲನಾ ಸಭೆ ನಡೆಸುವರು ಎಂದು ಮೂಲಗಳು ತಿಳಿಸಿವೆ.

ಗುಜರಾತ್‌ನಲ್ಲಿ ಅ.2ಕ್ಕೆ ಕುರುಬರ ಸಮಾವೇಶ


ಕೋಲಾರ: 'ಕುರುಬ ಸಮುದಾಯಕ್ಕೆ ಸೇರಿದವರು ದೇಶದಲ್ಲಿ ಹಂಚಿ ಹೋಗಿದ್ದು, ಸಮುದಾಯದ ಎಲ್ಲರನ್ನೂ ಒಂದೇ ಹೆಸರಿನಲ್ಲಿ ಗುರುತಿಸುವ ಉದ್ದೇಶದೊಂದಿಗೆ ಗುಜರಾತ್‌ನ ಅಹಮದಾಬಾದ್‌ನಲ್ಲಿ ಅ.2ರಂದು ಕುರುಬರ ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದು ಶೆಫರ್ಡ್ ಇಂಡಿಯಾ ಇಂಟರ್ ನ್ಯಾಷನಲ್ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಸೋಮಶೇಖರ್ ತಿಳಿಸಿದರು.

ಗುರುವಾರ ನಡೆದ ಶೆಫರ್ಡ್ ಇಂಡಿಯಾ ಇಂಟರ್ ನ್ಯಾಷನಲ್ ಜಿಲ್ಲಾ ಸಮಿತಿಯ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿ, 'ಕುರುಬ ಸಮುದಾಯವನ್ನು ಸಂಘಟಿಸುವ ನಿಟ್ಟಿನಲ್ಲಿ ಅ.2ರಂದು 6ನೇ ಸಂಸ್ಥಾಪನಾ ದಿನ ಸಹ ಆಯೋಜಿಸಲಾಗಿದೆ' ಎಂದು ವಿವರಿಸಿದರು.

ಕಟಾವು ಮಾಡಿದ ಈರುಳ್ಳಿ ತಿಪ್ಪೆಗೆ ಸುರಿದ ರೈತರು

ಕೊಳೆ ರೋಗಕ್ಕೆ ಈರುಳ್ಳಿ ಗಡ್ಡೆ ನಾಶ

• ವಿಶ್ವನಾಥ ಡಿ.


ಹರಪನಹಳ್ಳಿ ತಾಲ್ಲೂಕಿನ ಲೋಲೇಶ್ವರ ಗ್ರಾಮದಲ್ಲಿ ಈರುಳ್ಳಿಯನ್ನು ತಿಪ್ಪೆಗೆ ಸುರಿದಿರುವುದು.

ಹರಪನಹಳ್ಳಿ: ತಾಲ್ಲೂಕಿನ ಚಿಗಟೇರಿ ಹೋಬಳಿಯ ಗ್ರಾಮಸ್ಥರ ಜೀವಾಳವಾಗಿರುವ ಈರುಳ್ಳಿ ಗಡ್ಡೆಗೆ ಕೊಳೆ ರೋಗ ಬಂದಿದ್ದು, ಕಟಾವು ಮಾಡಿದ ಈರುಳ್ಳಿ ರಾಶಿಗಳನ್ನು ರೈತರು ಟ್ರ್ಯಾಕ್ಟರ್‌ನಲ್ಲಿ ತಂದು ತಿಪ್ಪೆಗೆ ಸುರಿಯುತ್ತಿದ್ದಾರೆ.

ಲೋಲೇಶ್ವರ ಗ್ರಾಮದಲ್ಲಿ ಗುರುವಾರ ರೈತರಾದ ಬಸವರಾಜ್, ಮಂಜುನಾಥ್, ರಾಜಪ್ಪ ಅವರು ತಮ್ಮ ಹೊಲದಲ್ಲಿದ್ದ ಈರುಳ್ಳಿ ಬೆಳೆ ಕಿತ್ತು ಗಡ್ಡೆ ಬೇರ್ಪಡಿಸಿದ್ದರು. ಮೂರು ದಿನ ಬಿಟ್ಟು ನೋಡಿದರೆ, ಗಡ್ಡೆಯ ಒಳಭಾಗದ ಕಾಂಡ ಕೊಳೆತಿತ್ತು. ಬೇಸತ್ತ ರೈತರು ಟ್ರ್ಯಾಕ್ಟರ್‌ನಲ್ಲಿ ತುಂಬಿಕೊಂಡು ಬಂದು ತಿಪ್ಪೆಗೆ ಸುರಿದಿದ್ದಾರೆ. ಕೆಲವು ರೈತರು ಹೊಲದಲ್ಲಿಯೇ ಬಿಟ್ಟಿದ್ದಾರೆ.

ಕಳೆದ ವರ್ಷ ಸಾವಿರಾರು ಎಕರೆಯಲ್ಲಿ ಬೆಳೆದಿದ್ದ ಈರುಳ್ಳಿ ಗಿಡಕ್ಕೆ ಹುಳುಗಳ ಕಾಟ ಹೆಚ್ಚಾಗಿ ಹೊಲವೇ ನಾಶವಾಗಿತ್ತು. ಈರುಳ್ಳಿ ಕೀಳುವ ಗೋಜಿಗೆ ಹೋಗದ ನೂರಾರು ರೈತರು, ಹೊಲದಲ್ಲಿ ಗಿಡದ ಸಮೇತ ಮುರೆವು ಹರಗಿ, ಬೆಳೆ ನಾಶಪಡಿಸಿದ್ದರು. ಆದರೆ, ಪ್ರಸಕ್ತ ಸಾಲಿನಲ್ಲಿ ಗಡ್ಡೆ ಬರುವ ತನಕವೂ ಸೊಂಪಾಗಿದ್ದು, ನಂತರದಲ್ಲಿ ವಿಚಿತ್ರ ರೋಗ ಬಂದಿರುವುದು ರೈತರನ್ನು ಚಿಂತೆಗೀಡು ಮಾಡಿದೆ.

'ಈರುಳ್ಳಿ ಕಿತ್ತು ಮೂರು ದಿನಗಳ ನಂತರ ಗಡ್ಡೆಯನ್ನು ಬಳ್ಳಿಯಿಂದ ಬೇರ್ಪಡಿಸಿದೆವು. ಒಂದೇ ದಿನದಲ್ಲಿ ಗಡ್ಡೆಯ ಒಳಭಾಗ ಕೊಳೆತಿದೆ. ಬಿತ್ತಿದ ದಿನದಿಂದ ಕೀಳುವ ತನಕ ಮಾಡಿದ ಖರ್ಚು, ಸಾಲ ತೀರಿಸುವ ನಿರೀಕ್ಷೆ ಹುಸಿಯಾಗಿದೆ. ನೂರಾರು ಎಕರೆಯಲ್ಲಿ ಬೆಳೆದಿದ್ದ ಈರುಳ್ಳಿ ಬೆಳೆ ಸಂಪೂರ್ಣ ನಾಶವಾಗಿದೆ. ಮುಂದೇನು ಮಾಡಬೇಕೋ ದಾರಿ ತೋಚದಾಗಿದೆ' ಎಂದು ರೈತ ಬಸವರಾಜ್ ಅಳಲು ತೋಡಿಕೊಂಡರು.

'ಪೆಗಾಸಸ್: ಕೇಂದ್ರದ ನಡೆ ಶಂಕಾಸ್ಪದ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೆಗಾಸಸ್ ಗೂಢಚರ್ಯೆ ಪ್ರಕರಣದಲ್ಲಿ ಕೇಂದ್ರ ಸರ್ಕಾರದ ನಡೆಯೇ ಶಂಕಾಸ್ಪದವಾಗಿದೆ. ರಾಷ್ಟ್ರೀಯ ಭದ್ರತೆಯ ಕಾರಣ ನೀಡಿ ಗೂಢಚರ್ಯೆಗೆ ಸಂಬಂಧಿಸಿದ ಮಾಹಿತಿ ಬಹಿರಂಗಪಡಿಸದಿರುವ ಧೋರಣೆ ಸರಿಯಲ್ಲ' ಎಂಬ ಅಭಿಪ್ರಾಯ 'ಪ್ರಜಾವಾಣಿ' ಬಹುಮಾಧ್ಯಮ ವೇದಿಕೆಯಲ್ಲಿ ಗುರುವಾರ ನಡೆದ ಸಂವಾದದಲ್ಲಿ ವ್ಯಕ್ತವಾಯಿತು.

'ವ್ಯಕ್ತಿಗತ ಸ್ವಾತಂತ್ರ್ಯ, ಮೂಲಭೂತ ಹಕ್ಕುಗಳು, ರಾಷ್ಟ್ರೀಯ ಹಿತಾಸಕ್ತಿ, ದೇಶದ ಭದ್ರತೆಗಿಂತಲೂ ದೊಡ್ಡದಲ್ಲ. ಭದ್ರತೆ ದೃಷ್ಟಿಯಿಂದ ಗೂಢಚರ್ಯೆ ಸರಿ' ಎಂಬ ಸಮರ್ಥನೆಯೂ ಕೇಳಿಬಂದಿತು. 'ಪೆಗಾಸಸ್ ಗೂಢಚರ್ಯೆ: ಕೇಂದ್ರ ಸರ್ಕಾರದ ನಿಲುವು ಸರಿಯೇ?' ವಿಷಯ ಕುರಿತು ಈ ಸಂವಾದ ನಡೆಯಿತು. ಭಾಗವಹಿಸಿದ್ದ ಪ್ರಮುಖರ ಅಭಿಪ್ರಾಯಗಳು ಇಲ್ಲಿವೆ.

ಸಂವಾದ ವೀಕ್ಷಣೆಗೆ ಯೂಟ್ಯೂಬ್ ಲಿಂಕ್ ಇಲ್ಲಿದೆ: https://bit.ly/39eqAzo

ಪ್ರಜಾವಾಣಿ ಸಂವಾದ

'ಸಂವಿಧಾನಕ್ಕೆ ತೋರಿದ ಅಗೌರವ'



ಪೆಗಾಸಸ್ ವಿದೇಶದ ಖಾಸಗಿ ಕಂಪನಿಯೊಂದರ ತಂತ್ರಾಂಶ. ವಿಪಕ್ಷಗಳ ಮೂವರು ನಾಯಕರು, 40 ಪತ್ರಕರ್ತರು, ಸಂಪುಟದ ಇಬ್ಬರು ಸಚಿವರು, ಸುಪ್ರೀಂ ಕೋರ್ಟ್‌ನ ವಿಶ್ರಾಂತ ಮುಖ್ಯ ನ್ಯಾಯಮೂರ್ತಿ ಸೇರಿ ಪ್ರಮುಖರ ಚಲನವಲನ ಗುರುತಿಸಲು ಕೇಂದ್ರ ಸರ್ಕಾರ ಇದನ್ನು ಪ್ರಯೋಗಿಸಿದೆ ಎಂಬುದು ಪ್ರಬಲ ಆರೋಪ. ಈ ಬಗ್ಗೆ ವರದಿ ಸಲ್ಲಿಸಲು ಸುಪ್ರೀಂ ಕೋರ್ಟ್ ಕೇಂದ್ರಕ್ಕೆ ನೋಟಿಸ್ ನೀಡಿರುವುದು ಸ್ವಾಗತಾರ್ಹ. ಆದರೆ, ಕೇಂದ್ರ ಸರ್ಕಾರ ರಾಷ್ಟ್ರೀಯ ಭದ್ರತೆ ನೆಪಮಾಡಿ ಪ್ರಮಾಣಪತ್ರ ಸಲ್ಲಿಸದಿರುವುದು ಖಂಡನಾರ್ಹ. ಇದು, ಕೇಂದ್ರ ಸರ್ಕಾರದ ಅಧಃಪತನದ ಹೆಜ್ಜೆ. ಹೀಗೇ ನಿರಾಕರಣೆ ಮಾಡುವ ಮೂಲಕ ಸುಪ್ರೀಂ ಕೋರ್ಟ್ ಮತ್ತು ಸಂವಿಧಾನ ಎರಡಕ್ಕೂ ಕೇಂದ್ರ ಸರ್ಕಾರ ಅಗೌರವ ತೋರಿದೆ.

ರವಿವರ್ಮ ಕುಮಾರ್, ನಿವೃತ್ತ ಅಡ್ವೊಕೇಟ್ ಜನರಲ್

'ಕೇಂದ್ರ ಸರ್ಕಾರ ಉತ್ತರ ನೀಡಬೇಕು'



ಕೇಂದ್ರ ಸರ್ಕಾರ, ರಾಷ್ಟ್ರೀಯ ಭದ್ರತೆಯ ಕಾರಣ ನೀಡಿ ಮಾಹಿತಿ ಬಹಿರಂಗಪಡಿಸಲು ನಿರಾಕರಿಸುತ್ತಿದೆ. ಹಾಗಿದ್ದರೆ, ಗೂಢಚರ್ಯೆ ಮಾಡಲಾಗಿರುವ ಪಟ್ಟಿಯಲ್ಲಿ ಯಾವ ಉಗ್ರರ ಹೆಸರುಗಳಿವೆ? ಈಗ ಕೇಳಿಬಂದಿರುವಂತೆ ರಾಹುಲ್ ಗಾಂಧಿ, ಸುಪ್ರೀಂ ಕೋರ್ಟ್ ನಿವೃತ್ತ ಸಿಜೆಐ, ಪ್ರಮುಖ ಪತ್ರಕರ್ತರ ಚಲನವಲನಗಳ ಕುರಿತು ಗೂಢಚರ್ಯೆ ನಡೆದಿದೆ. ಈ ಕುರಿತು ಸರ್ಕಾರ ಸ್ಪಷ್ಟಪಡಿಸಬೇಕು. ಗೂಢಚರ್ಯೆ ನಡೆದಿದ್ದರೆ ಯಾವ ಕಾರಣಕ್ಕಾಗಿ ಎಂದು ತಿಳಿಸಬೇಕು. ಒಂದು ವೇಳೆ ಕೇಂದ್ರ ಮಾಡಿಲ್ಲವೆಂದಾದರೆ ಶತ್ರು ರಾಷ್ಟ್ರ ಮಾಡಿಸಿರಬೇಕು. ಆಗಲೂ ಕೇಂದ್ರದ ಹೊಣೆ ಹೆಚ್ಚಿದೆ. ಒಟ್ಟಿನಲ್ಲಿ ಕೇಂದ್ರ ಸರ್ಕಾರ ತಪ್ಪಿಸಿಕೊಳ್ಳುವಂತೆ ಇಲ್ಲ. ಚಲನವಲನ ಗಮನಿಸುವುದು ಕಾನೂನಿಗೆ ವಿರುದ್ಧ. ಈಗ ದೊಡ್ಡ ತಪ್ಪಾಗಿದೆ. ಸರ್ಕಾರ ಇದಕ್ಕೆ ಉತ್ತರ ನೀಡಬೇಕು. ಮುಂದೆ ಹೀಗಾಗದಂತೆ ಎಲ್ಲರೂ ಚಿಂತಿಸಬೇಕು.

ಬಿ.ಆರ್.ಮಂಜುನಾಥ್, ಸಾಮಾಜಿಕ ಕಾರ್ಯಕರ್ತ

'ಸುಪ್ರೀಂ'ಗೆ ವರದಿ ನೀಡಲಿ'



ಗುಪ್ತಚರ ಕಾರ್ಯ ಇದೇ ಮೊದಲಲ್ಲ. ಹಿಂದೆ ನಡೆದಿದೆ. ಮುಂದೆಯೂ ನಡೆಯುತ್ತದೆ. ರಾಷ್ಟ್ರೀಯ ಅಖಂಡತೆ, ಭದ್ರತೆಗೆ ಧಕ್ಕೆ, ಸಂಭವನೀಯ ಅಪರಾಧ ತಡೆಗೆ ಕೆಲವರ ಚಲನವಲನ ಗಮನಿಸುವುದು ಅಗತ್ಯ. ಆದರೆ, ದೂರವಾಣಿ ಕದ್ದಾಲಿಕೆಗಿಂತಲೂ ಈಗಿನ ಗೂಢಚರ್ಯೆ ಭಿನ್ನವಾದುದು. ಕದ್ದಾಲಿಕೆಗೂ ಮೊದಲು ನಿರ್ದಿಷ್ಟ ವ್ಯಕ್ತಿಯ ವಿವರ ನೀಡಿ ಅನುಮತಿ ಪಡೆದಿದ್ದು, ಬಳಿಕ ವರದಿಯನ್ನು ಸಲ್ಲಿಸಬೇಕು. ಆದರೆ, ಈಗ ಗೂಢಚರ್ಯೆ ನಡೆದಿದೆ ಎಂದು ಸಮಾಜದ ಕೆಲ ಪ್ರಮುಖರ, ಗಣ್ಯರ ಹೆಸರುಗಳು ಕೇಳಿಬಂದಿವೆ. ಅವರ ವಿರುದ್ಧ ಗೂಢಚರ್ಯೆ ಮಾಡಲಾಗಿದೆಯೇ, ಏಕೆ ಮಾಡಲಾಗಿದೆ ಎಂಬುದು ನಾಗರಿಕರಿಗೆ ತಿಳಿಯಬೇಕು. ರಾಷ್ಟ್ರದ ಭದ್ರತೆಯ ದೃಷ್ಟಿಯಿಂದಲೇ ಮಾಡಲಾಗಿದೆ ಎನ್ನುವುದಾದರೆ ಕೇಂದ್ರ ಸರ್ಕಾರ ಅದನ್ನು ಮುಚ್ಚಿದ ಲಕೋಟೆಯಲ್ಲಿಯಾದರೂ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕು. ಆಗ ಸರ್ಕಾರದ ಮೇಲೆ ವಿಶ್ವಾಸ ಮೂಡಲಿದೆ.

ಡಿ.ವಿ.ಗುರುಪ್ರಸಾದ್, ನಿವೃತ್ತ ಡಿಜಿಪಿ

'ರಾಷ್ಟ್ರದ ಹಿತಕ್ಕಿಂತ ದೊಡ್ಡದಲ್ಲ'



ದೇಶದ ಹಿತ ಮತ್ತು ರಾಷ್ಟ್ರೀಯ ಭದ್ರತೆ ದೃಷ್ಟಿಯಿಂದ ಕೆಲವರ ಚಲನವಲನ ಕುರಿತು ಕಣ್ಗಾವಲು ಇರಿಸುವುದು ಅಗತ್ಯ. ಯಾರ ಬಗ್ಗೆ ಮಾಡುತ್ತಿದ್ದಾರೆ ಎಂಬುದು ಪ್ರಶ್ನೆ. 'ಪೊಲೀಸರು ಮತ್ತು ನಾಯಿಗಳನ್ನು ಕಂಡಾಗ ಓಡಬಾರದು ಎಂಬ ಮಾತಿದೆ. ಓಡಲು ಶುರುಮಾಡಿದಾಗಲೇ ಬೆನ್ನು ಹತ್ತುವುದು. ಚಲನವಲನ ಅನುಮಾನಾಸ್ಪದ ರೀತಿಯಲ್ಲಿ ಇರುವವರ ಬಗ್ಗೆ, ಚೀನಾ–ಪಾಕ್ ಜೊತೆಗೆ ಸಂಪರ್ಕವುಳ್ಳವರ ಬಗ್ಗೆ ನಿಗಾವಹಿಸುವುದು ಅಗತ್ಯ. ದೇಶದ್ರೋಹಿಗಳ ಪತ್ತೆಗೆ ಗೂಢಚರ್ಯೆ ಬೆಂಬಲಿಸಬೇಕು. ಪ್ರಧಾನಿ ಮೋದಿ ಮತ್ತು ಬಿಜೆಪಿಯನ್ನು ಟೀಕಿಸಬೇಕು ಎಂಬ ಕಾರಣಕ್ಕೇ ಪ್ರಶ್ನಿಸುವುದು ಸರಿಯಲ್ಲ. ಮೂಲಭೂತ ಹಕ್ಕುಗಳು ರಾಷ್ಟ್ರದ ಹಿತಕ್ಕಿಂತ ದೊಡ್ಡದಲ್ಲ. ಈಗ ಗೂಢಚರ್ಯೆ ನಡೆದಿದೆ ಎನ್ನಲಾದ ಹೆಸರುಗಳನ್ನು ಕೇಂದ್ರ ತಿಳಿಸಿಲ್ಲ. ಅದು, ವೆಬ್‌ಸೈಟ್‌ನಲ್ಲಿ ಬಂದ ಸಂಗತಿ. ಪ್ರಸ್ತುತ ಆ ವೆಬ್‌ಸೈಟ್‌ನ ನಡೆಯೂ ಪ್ರಶ್ನಾರ್ಹವಾಗಿಯೇ ಇದೆ.

ಗೋ.ಮಧುಸೂದನ್, ಮಾಜಿ ಶಾಸಕ, ಬಿಜೆಪಿ

ಎನ್‌ಸಿಎಲ್‌ಎಟಿ ಅಧ್ಯಕ್ಷರಾಗಿ ನ್ಯಾ. ಚೀಮಾ ಮುಂದುವರಿಸಲು ಸಮ್ಮತಿ



ನವದೆಹಲಿ (ಪಿಟಿಐ): ನಿವೃತ್ತ ನ್ಯಾಯಮೂರ್ತಿ ಅಶೋಕ್ ಇಕ್ಬಾಲ್‌ಸಿಂಗ್ ಚೀಮಾ ಅವರು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ (ಎನ್‌ಸಿಎಲ್‌ಎಟಿ) ಅಧ್ಯಕ್ಷರಾಗಿ ಸೆ.20ರ ವರೆಗೆ ಮುಂದುವರಿಯಲು ಕೇಂದ್ರ ಸರ್ಕಾರ ಗುರುವಾರ ಸಮ್ಮತಿಸಿತು.

ಸುಪ್ರೀಂಕೋರ್ಟ್‌ನಲ್ಲಿ ನಡೆದ ವಿಚಾರಣೆ ವೇಳೆ ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ್ ಅವರು ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಸೂರ್ಯಕಾಂತ ಹಾಗೂ ಹಿಮಾ ಕೊಹ್ಲಿ ಅವರಿರುವ ನ್ಯಾಯಪೀಠಕ್ಕೆ ಈ ಮಾಹಿತಿ ನೀಡಿದರು.

'ನ್ಯಾಯಮೂರ್ತಿ ಚೀಮಾ ಅವರು ತಮ್ಮ ಅಧಿಕಾರಾವಧಿ ಮುಗಿಯುವವರೆಗೆ ಎನ್‌ಸಿಎಲ್‌ಎಟಿ ಅಧ್ಯಕ್ಷರಾಗಿ ಮುಂದುವರಿಯಲಿದ್ದು, ತೀರ್ಪುಗಳನ್ನು ಸಹ ಪ್ರಕಟಿಸಬಹುದು. ಹಂಗಾಮಿ ಅಧ್ಯಕ್ಷರಾಗಿರುವ ನ್ಯಾಯಮೂರ್ತಿ ವೇಣುಗೋಪಾಲ್ ಅವರನ್ನು ರಜೆ ಮೇಲೆ ಕಳಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ' ಎಂದು ಅವರು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ-ನ್ಯಾಯಮೂರ್ತಿ ಎನ್.ವಿ ರಮಣ, 'ಪ್ರಕರಣವನ್ನು ಮುಕ್ತಾಯಗೊಳಿಸುತ್ತೇವೆ' ಎಂದರು.

ಬಾಂಬೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಚೀಮಾ ಅವರು ಎನ್‌ಸಿಎಲ್‌ಎಟಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವರ ನಿವೃತ್ತಿಗೆ 10 ದಿನ ಮೊದಲೇ ನ್ಯಾಯಮೂರ್ತಿ ವೇಣುಗೋಪಾಲ್ ಅವರನ್ನು ಎನ್‌ಸಿಎಲ್‌ಎಟಿ ಹಂಗಾಮಿ ಅಧ್ಯಕ್ಷರನ್ನಾಗಿ ಕೇಂದ್ರ ಸರ್ಕಾರ ನೇಮಿಸಿತ್ತು.

ನ್ಯಾಯಮಂಡಳಿಗೆ ತರಾತುರಿಯಲ್ಲಿ ನೇಮಕಾತಿ ಮಾಡಿರುವುದಕ್ಕೆ ಸುಪ್ರೀಂಕೋರ್ಟ್ ಬುಧವಾರ ಅಸಮಾಧಾನ ವ್ಯಕ್ತಪಡಿಸಿತ್ತು.

ಹೊಸ ರಕ್ಷಣಾ ಕಚೇರಿ ಸಂಕೀರ್ಣ ಉದ್ಘಾಟನೆ ಬಳಿಕ ಮಾತನಾಡಿದ ಪ್ರಧಾನಿ ಮೋದಿ

ಸೆಂಟ್ರಲ್ ವಿಸ್ತಾ: ಟೀಕಾಕಾರರಿಗೆ ತಿರುಗೇಟು

ನವದೆಹಲಿ (ಪಿಟಿಐ): ಮಹತ್ವಾಕಾಂಕ್ಷಿ ಸೆಂಟ್ರಲ್ ವಿಸ್ತಾ ಯೋಜನೆಯನ್ನು ಟೀಕಿಸುವವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ತಿರುಗೇಟು ನೀಡಿದ್ದಾರೆ. ತಮ್ಮ ಸುಳ್ಳುಗಳು ಮತ್ತು ಅಪಪ್ರಚಾರಗಳು ಬಹಿರಂಗವಾಗುತ್ತವೆ ಎಂಬ ಕಾರಣಕ್ಕೆ ಟೀಕಾಕಾರರು ರಕ್ಷಣಾ ಕಚೇರಿ ಸಂಕೀರ್ಣದ ವಿಚಾರದಲ್ಲಿ ಉದ್ದೇಶಪೂರ್ವಕ ಮೌನ ವಹಿಸಿದ್ದರು ಎಂದು ಆರೋಪಿಸಿದ್ದಾರೆ.

ಕಸ್ತೂರ್‌ಬಾ ಗಾಂಧಿ ಮಾರ್ಗ ಮತ್ತು ಆಫ್ರಿಕಾ ಅವೆನ್ಯೂದಲ್ಲಿ ರಕ್ಷಣಾ ಸಚಿವಾಲಯ ಮತ್ತು ಸಶಸ್ತ್ರ ಪಡೆಗಳ 7,000ಕ್ಕೂ ಅಧಿಕ ಉದ್ಯೋಗಿಗಳಿಗಾಗಿ ಎರಡು ಹೊಸ ಬಹುಮಹಡಿ ಕಚೇರಿ ಸಂಕೀರ್ಣಗಳನ್ನು ಉದ್ಘಾಟಿಸಿದ ನಂತರ ಮೋದಿ ಮಾತನಾಡಿದರು. ಹೊಸ ಸಂಸತ್ ಭವನ ನಿರ್ಮಾಣ ಕಾಮಗಾರಿ ನಿಗದಿತ ಅವಧಿಯಲ್ಲಿ ಮುಗಿಯಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸೆಂಟ್ರಲ್ ವಿಸ್ತಾ ಯೋಜನೆಗೆ ಹಣ ಸುರಿಯುತ್ತಿರುವ ಕೇಂದ್ರದ ನಡೆಯನ್ನು ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ತೀವ್ರವಾಗಿ ಟೀಕಿಸಿದ್ದವು. ಈ ಹಣವನ್ನು ಕೋವಿಡ್ ನಿರ್ವಹಣೆಗೆ ಬಳಸುವಂತೆ ಸಲಹೆ ನೀಡಿದ್ದವು.

'ಸ್ವಾತಂತ್ರ್ಯದ 75ನೇ ವರ್ಷದಲ್ಲಿ ಹೊಸ ಭಾರತದ ಅಗತ್ಯ ಮತ್ತು ಆಕಾಂಕ್ಷೆಗಳಿಗೆ ಅನುಗುಣವಾಗಿ ನಮ್ಮ ದೇಶದ ರಾಜಧಾನಿಯನ್ನು ಅಭಿವೃದ್ಧಿಪಡಿಸುವತ್ತ ನಾವು ಇನ್ನೊಂದು ಹೆಜ್ಜೆ ಇಡುತ್ತಿದ್ದೇವೆ' ಎಂದು ಪ್ರಧಾನಿ ಸಮರ್ಥಿಸಿಕೊಂಡರು. 'ಹೊಸ ರಕ್ಷಣಾ ಕಚೇರಿ ಸಂಕೀರ್ಣಗಳು ಸೇನಾಪಡೆಗಳ ಕೆಲಸವನ್ನು ಹೆಚ್ಚು ಅನುಕೂಲಕರ ಮತ್ತು ಪರಿಣಾಮಕಾರಿಯಾಗಿಸುವ ನಮ್ಮ ಪ್ರಯತ್ನಗಳನ್ನು ಮತ್ತಷ್ಟು ಬಲಪಡಿಸಲಿವೆ' ಎಂದರು.

ಸೆಂಟ್ರಲ್ ವಿಸ್ತಾ ಯೋಜನೆಯನ್ನು ವಿರೋಧಿಸುವವರು, ರಕ್ಷಣಾ ಸಿಬ್ಬಂದಿ ಗುಡಿಸಲಿನಂತಹ ಜಾಗದಲ್ಲಿ ಹೇಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಯೋಚಿಸಲೂ ಹೋಗುವುದಿಲ್ಲ ಎಂದು ಮೋದಿ ಕುಟುಕಿದರು.

ರೈಸಿನಾ ಹಿಲ್ಸ್ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ನಿರ್ಮಾಣವಾದ ಕಟ್ಟಡಗಳಲ್ಲಿರುವ ರಕ್ಷಣಾ ಸಚಿವಾಲಯದ ಅಧಿಕಾರಿಗಳು, ಸಿಬ್ಬಂದಿ ಹೊಸ ಕಚೇರಿಗಳಿಗೆ ಸ್ಥಳಾಂತರವಾಗಲಿದ್ದಾರೆ.

'ದೆಹಲಿಯು ದೇಶದ ರಾಜಧಾನಿಯಾಗಿ 100 ವರ್ಷಗಳನ್ನು ದಾಟಿದ್ದು, ಈ ಅವಧಿಯಲ್ಲಿ ಅದರ ಜನಸಂಖ್ಯೆ ಮತ್ತು ಸನ್ನಿವೇಶಗಳು ಸಾಕಷ್ಟು ಬದಲಾಗಿವೆ. ನಾವು ರಾಜಧಾನಿಯ ಬಗ್ಗೆ ಮಾತನಾಡುವಾಗ ಅದು ಕೇವಲ ನಗರವಾಗಿರುವುದಿಲ್ಲ. ಯಾವುದೇ ದೇಶದ ರಾಜಧಾನಿಯು ಆ ರಾಷ್ಟ್ರದ ಚಿಂತನೆ, ಸಂಕಲ್ಪ, ಶಕ್ತಿ ಮತ್ತು ಸಂಸ್ಕೃತಿಯ ಸಂಕೇತವಾಗಿರುತ್ತದೆ' ಎಂದು ಪ್ರಧಾನಿ ಹೇಳಿದರು.



ಪ್ರಧಾನಿ ನರೇಂದ್ರ ಮೋದಿ ಅವರು ರಕ್ಷಣಾ ಕಚೇರಿಗಳ ಸಂಕೀರ್ಣವನ್ನು ಗುರುವಾರ ಉದ್ಘಾಟಿಸಿದರು–ಪಿಟಿಐ ಚಿತ್ರ

ಹೊಸ ಸಂಕೀರ್ಣ

- ಎರಡು ಕಟ್ಟಡಗಳನ್ನು ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯವು ರಕ್ಷಣಾ ಸಚಿವಾಲಯದಿಂದ ಮಂಜೂರಾದ ನೆರವಿನೊಂದಿಗೆ ನಿರ್ಮಿಸಿದೆ
- ಎರಡೂ ಕಟ್ಟಡಗಳಲ್ಲಿರುವ ಕಚೇರಿ ಸ್ಥಳಾವಕಾಶ 9.60 ಲಕ್ಷ ಚದರ ಅಡಿ
- ಕೆ.ಜಿ. ಮಾರ್ಗ ಸಂಕೀರ್ಣದ 4.52 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ 14 ಕಚೇರಿಗಳಿವೆ
- ಆಫ್ರಿಕಾ ಅವೆನ್ಯೂ ಕಟ್ಟಡದ 5.08 ಲಕ್ಷ ಚದರ ಅಡಿ ವಿಸ್ತೀರ್ಣದ ಜಾಗಕ್ಕೆ 13 ಕಚೇರಿ ಸ್ಥಳಾಂತರವಾಗಲಿವೆ
- 24 ತಿಂಗಳಲ್ಲಿ ಪೂರ್ಣಗೊಳ್ಳಬೇಕಿದ್ದ ರಕ್ಷಣಾ ಕಚೇರಿ ಸಂಕೀರ್ಣಗಳ ಕೆಲಸವನ್ನು 12 ತಿಂಗಳಲ್ಲಿ ಪೂರ್ಣಗೊಳಿಸಲಾಗಿದೆ
- ಈ ರಕ್ಷಣಾ ಕಚೇರಿ ಸಂಕೀರ್ಣಗಳನ್ನು 13 ಎಕರೆ ಭೂಪ್ರದೇಶದಲ್ಲಿ ನಿರ್ಮಿಸಲಾಗಿದೆ

ಗುಜರಾತ್ ಸಂಪುಟ: ಹಳಬರೆಲ್ಲರಿಗೂ ಕೊಕ್

ಗಾಂಧಿನಗರ (ಪಿಟಿಐ): ಗುಜರಾತ್‌ನ ನೂತನ ಸಚಿವ ಸಂಪುಟದ ಸದಸ್ಯರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ನಿಕಟಪೂರ್ವ ಮುಖ್ಯಮಂತ್ರಿ ವಿಜಯ ರೂಪಾಣಿ ಅವರ ಸಂಪುಟದಲ್ಲಿ ಇದ್ದ ಎಲ್ಲಾ ಸಚಿವರನ್ನು ಕೈಬಿಡಲಾಗಿದ್ದು, 24 ಜನ ಹೊಸಬರಿಗೆ ಸಚಿವ ಸ್ಥಾನ ನೀಡಲಾಗಿದೆ. ಮುಖ್ಯಮಂತ್ರಿಯೂ ಸೇರಿ ಸಚಿವ ಸಂಪುಟದ ಸದಸ್ಯರ ಸಂಖ್ಯೆ 25ಕ್ಕೆ ಏರಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯವಾದ ಗುಜರಾತ್‌ನಲ್ಲಿ ಮುಂದಿನ ವರ್ಷ ವಿಧಾನಸಭಾ ಚುನಾವಣೆ ನಡೆಯಲಿದೆ. ಚುನಾವಣೆಗೂ ಮುನ್ನವೇ ರಾಜ್ಯದ ಎಲ್ಲಾ ಜಾತಿ-ಸಮುದಾಯಗಳನ್ನು ಸಮಾಧಾನಪಡಿಸಲು ಬಿಜೆಪಿ ಯತ್ನಿಸಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ನೂತನ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಸೋಮವಾರ ಪ್ರಮಾಣ ವಚನ ಸ್ವೀಕರಿಸಿದ್ದರು. ಅವರ ಸಂಪುಟದ ಸದಸ್ಯರು ಬುಧವಾರ ಪ್ರಮಾಣ ವಚನ ಸ್ವೀಕರಿಸಬೇಕಿತ್ತು. ಹಿಂದಿನ ಸಂಪುಟದ ಸದಸ್ಯರು ಪ್ರತಿಭಟನೆ ನಡೆಸಿದ ಕಾರಣ ಬುಧವಾರದ ಕಾರ್ಯಕ್ರಮ ರದ್ದಾಗಿತ್ತು. ಗುರುವಾರ ನಡೆದ ಕಾರ್ಯಕ್ರಮದಲ್ಲಿ ಹಿಂದಿನ ಸಂಪುಟದ ಸದಸ್ಯರಲ್ಲಿ ಹಲವರಿಗೆ ಸ್ಥಾನ ನೀಡಲಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ನಿರೀಕ್ಷೆಗೆ ವ್ಯತಿರಿಕ್ತವಾಗಿ ಹಳಬರೆಲ್ಲರನ್ನೂ ನೂತನ ಸಂಪುಟದಿಂದ ಕೈಬಿಡಲಾಗಿದೆ.

10 ಜನರಿಗೆ ಸಂಪುಟ ದರ್ಜೆ, 14 ಜನರಿಗೆ ರಾಜ್ಯ ಸಚಿವರ ಸ್ಥಾನ ನೀಡಲಾಗಿದೆ. ರಾಜ್ಯ ಸಚಿವರಲ್ಲಿ ಐವರಿಗೆ ಸ್ವತಂತ್ರ ಹೊಣೆಗಾರಿಕೆ ಇದೆ. ಸಚಿವ ಸಂಪುಟದಲ್ಲಿ ಇರುವ ಮಹಿಳೆಯರ ಸಂಖ್ಯೆ ಎರಡು.

ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರನ್ನು ಹೊರತುಪಡಿಸಿ, ಪಾಟೀದಾರ್ ಸಮುದಾಯದ ಇನ್ನೂ ಆರು ಜನರಿಗೆ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ಇತರೆ ಹಿಂದುಳಿದ ವರ್ಗಗಳ ಆರು ಜನರಿಗೆ ಸಚಿವ ಸ್ಥಾನ ನೀಡಲಾಗಿದೆ. ಪರಿಶಿಷ್ಟ ಪಂಗಡದ ಆರು ಜನರಿಗೆ ಮತ್ತು ಪರಿಶಿಷ್ಟ ಜಾತಿಗಳ ಮೂವರಿಗೆ ಸಚಿವ ಸ್ಥಾನ ನೀಡಲಾಗಿದೆ. ಬ್ರಾಹ್ಮಣ ಮತ್ತು ಕ್ಷತ್ರಿಯ ಸಮುದಾಯದ ತಲಾ ಇಬ್ಬರಿಗೆ ಹಾಗೂ ಜೈನ ಸಮುದಾಯದ ಒಬ್ಬರಿಗೆ ಸಚಿವ ಸ್ಥಾನ ನೀಡಲಾಗಿದೆ.

ಪಾಟೀದಾರ್ ಸಮುದಾಯಕ್ಕೆ ಏಳು ಸಚಿವ ಸ್ಥಾನ ನೀಡುವ ಮೂಲಕ, ಸಮುದಾಯವನ್ನು ಓಲೈಸಲು ಬಿಜೆಪಿ ಯತ್ನಿಸಿದೆ. ಹಾರ್ದಿಕ್ ಪಟೇಲ್ ನೇತೃತ್ವದ ಪಾಟೀದಾರ್ ಮೀಸಲಾತಿ ಹೋರಾಟದಿಂದ ಪಕ್ಷದ ಮೇಲೆ ಉಂಟಾಗಿದ್ದ ಅಸಮಾಧಾನವನ್ನು ಹೋಗಲಾಡಿಸಲು ಯತ್ನಿಸಲಾಗಿದೆ. ಅಲ್ಲದೆ ರಾಜ್ಯದ ಬಹುತೇಕ ಎಲ್ಲಾ ಜಾತಿ-ಸಮುದಾಯಗಳಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಲಾಗಿದೆ. ಈ ಮೂಲಕ ಎಲ್ಲರನ್ನೂ ಓಲೈಸಲು ಬಿಜೆಪಿ ಮುಂದಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಕಳೆದ ಎರಡು ಚುನಾವಣೆಗಳಲ್ಲಿ ಕಾಡ್ವಾ ಪಾಟೀದಾರ್ ಸಮುದಾಯವು ಬಿಜೆಪಿಯಿಂದ ದೂರ ಸರಿದಿದೆ. ಈ ಸಮುದಾಯವನ್ನು ಮತ್ತೆ ತನ್ನತ್ತ ಸೆಳೆದುಕೊಳ್ಳಲು ಬಿಜೆಪಿ ದೊಡ್ಡ ಹೆಜ್ಜೆ ಇರಿಸಿದೆ. ಇದೇ ಮೊದಲ ಬಾರಿ ಶಾಸಕರಾಗಿದ್ದ ಭೂಪೇಂದ್ರ ಪಟೇಲ್ ಅವರು ಕಾಡ್ವಾ ಪಾಟೀದಾರ್ ಸಮುದಾಯದವರು. ಈ ಸಮುದಾಯವನ್ನು ಓಲೈಸುವ ಉದ್ದೇಶದಿಂದಲೇ ಭೂಪೇಂದ್ರ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಲಾಗಿದೆ. ಇದು ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ನೆರವಾಗಲಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ವಿಜಯ ರೂಪಾಣಿ ಅವರ ಸಂಪುಟದಲ್ಲಿ ರಾಜ್ಯದ ಎಲ್ಲಾ ಸಮುದಾಯಗಳಿಗೆ ಪ್ರಾತಿನಿಧ್ಯ ದೊರೆತಿರಲಿಲ್ಲ. ಅಲ್ಲದೆ, ಆ ಸಂಪುಟ ಸದಸ್ಯರು ಪಕ್ಷದ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡದ ಕಾರಣ ಅವರನ್ನು ನೂತನ ಸಂಪುಟದಿಂದ ಕೈಬಿಡಲಾಗಿದೆ. ಅಲ್ಲದೆ, ಹೊಸಬರಿಗೆ ಅವಕಾಶ ನೀಡಬೇಕು ಎಂಬುದು ಪಕ್ಷದ ನೀತಿ. ಹೀಗಾಗಿ ಹೊಸಬರಿಗೇ ಅವಕಾಶ ನೀಡಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಹಿಂದಿನ ಸಂಪುಟದಲ್ಲಿ ಇದ್ದ ಪಕ್ಷದ ಹಿರಿಯ ಮುಖಂಡ ಮತ್ತು ಉ ಪ ಮು ಖ್ಯ ಮ ೦ ತ್ರಿ ಯಾ ಗಿ ದ್ದ ನಿತಿನ್ ಪಟೇಲ್ ಮತ್ತಿತರರು ಈ ಬೆಳವಣಿಗೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು

- ಸಂಪೂರ್ಣ ಹೊಸಬರನ್ನು ಒಳಗೊಂಡ ಸಂಪುಟ ರಚನೆ
- ಎಲ್ಲಾ ಜಾತಿ-ಸಮುದಾಯಗಳಿಗೆ ಸಂಪುಟದಲ್ಲಿ ಪ್ರಾತಿನಿಧ್ಯ
- ಸ್ಥಾನ ನೀಡಿಕೆಯಲ್ಲಿ ಮುಂದಿನ ಚುನಾವಣೆಯ ಲೆಕ್ಕಾಚಾರ



ಗುಜರಾತ್‌ನ ನೂತನ ಸಚಿವ ಸಂಪುಟದ ಸದಸ್ಯರು – ಪಿಟಿಐ ಚಿತ್ರ

ಇವರೆಲ್ಲರೂ ತಮ್ಮ ಜೀವನವನ್ನು ಸಾರ್ವಜನಿಕ ಸೇವೆಗೆ ಮತ್ತು ಪಕ್ಷದ ಸಿದ್ಧಾಂತಗಳಿಗೆ ಮುಡಿಪಾಗಿಟ್ಟ ಅಸಾಧಾರಣ ಕಾರ್ಯಕರ್ತರು. ಅವರಿಗೆ ಅಭಿನಂದನೆಗಳು

ನರೇಂದ್ರ ಮೋದಿ, ಪ್ರಧಾನಿ

ಅಧಿಕಾರ ಬರುತ್ತದೆ, ಹೋಗುತ್ತದೆ ಇಂತಹ ಬೆಳವಣಿಗೆಯಿಂದ ಬೆಂಬಲಿಗರಿಗೆ ಬೇಸರವಾಗುತ್ತದೆ. ಸಮಾಧಾನಪಡಿಸುವ ಕೆಲಸ ಪಕ್ಷದ ವರಿಷ್ಠರದ್ದು

ನಿತಿನ್ ಪಟೇಲ್, ಗುಜರಾತ್‌ನ ನಿಕಟಪೂರ್ವ ಉಪಮುಖ್ಯಮಂತ್ರಿ

ಚೀನಾ ಪ್ರಾಬಲ್ಯಕ್ಕೆ ತಡೆಯೊಡ್ಡುವ ಉದ್ದೇಶ

ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ ನೂತನ ಮೈತ್ರಿಕೂಟ ಘೋಷಣೆ

ವಾಷಿಂಗ್ಟನ್ (ಪಿಟಿಐ): ಅಮೆರಿಕ, ಬ್ರಿಟನ್ ಮತ್ತು ಆಸ್ಟ್ರೇಲಿಯಾ ಗುರುವಾರ ನೂತನ ರಕ್ಷಣಾ ಮೈತ್ರಿಯನ್ನು ಘೋಷಿಸಿವೆ. ಹಿಂದೂ ಮಹಾಸಾಗರ--ಪೆಸಿಫಿಕ್ ಪ್ರದೇಶದಲ್ಲಿ ಚೀನಾ ಪ್ರಾಬಲ್ಯವನ್ನು ಎದುರಿಸುವ ಮತ್ತು ಮುಕ್ತ ಸಮುದ್ರ ಯಾನ ಸಾಧ್ಯವಾಗಿಸುವ ಉದ್ದೇಶದಿಂದ ಈ ಮೈತ್ರಿ ಮಾಡಿಕೊಳ್ಳಲಾಗಿದೆ ಎಂದು ಅಮೆರಿಕವು ಹೇಳಿದೆ.

ಆಸ್ಟ್ರೇಲಿಯಾವು ಅಣುಶಕ್ತಿ ಆಧಾರಿತ ಜಲಾಂತರ್ಗಾಮಿ ನೌಕೆಗಳನ್ನು ಹೊಂದಲು ಈ ರಕ್ಷಣಾ ಸಹಕಾರ ಮೈತ್ರಿಯು ನೆರವಾಗಲಿದೆ. ಇದರ ಬಗ್ಗೆ ಐರೋಪ್ಯ ಒಕ್ಕೂಟ ಮತ್ತು ಚೀನಾ ತೀವ್ರ ಕಳವಳ ವ್ಯಕ್ತಪಡಿಸಿವೆ.

ಇದೇ 24ರಂದು ಅಮೆರಿಕವು ಕ್ವಾಡ್ ಒಕ್ಕೂಟದ ಶೃಂಗಸಭೆ ನಡೆಸಲಿದೆ. ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾವು ಶೃಂಗಸಭೆಯಲ್ಲಿ ಭಾಗಿಯಾಗಲಿವೆ. ಆದರೆ, ಅದಕ್ಕೂ ಮುನ್ನವೇ ಅಮೆರಿಕವು ಈ ಮೈತ್ರಿಕೂಟವನ್ನು ರಚಿಸಿದೆ.

ಈ ರಕ್ಷಣಾ ಸಹಕಾರದ ಭಾಗವಾಗಿ ಬ್ರಿಟನ್, ಆಸ್ಟ್ರೇಲಿಯಾಕ್ಕೆ ಅಣುಶಕ್ತಿ ಆಧಾರಿತ ಜಲಾಂತರ್ಗಾಮಿ ನೌಕೆಗಳನ್ನು ನಿರ್ಮಿಸಿ ಕೊಡಲಿದೆ. ಇದಕ್ಕೂ ಮುನ್ನ ಅಣುಶಕ್ತಿ ಆಧಾರಿತ ಜಲಾಂತರ್ಗಾಮಿ ನೌಕೆಗಳ ಖರೀದಿಗಾಗಿ ಆಸ್ಟ್ರೇಲಿಯಾವು ಫ್ರಾನ್ಸ್ ಜತೆಗೆ ಒಪ್ಪಂದ ಮಾಡಿಕೊಂಡಿತ್ತು. ಈಗ ಮೈತ್ರಿಕೂಟ ಘೋಷಣೆಗೆ ಕೆಲವೇ ಗಂಟೆಗಳ ಮುನ್ನವೇ ಆ ಒಪ್ಪಂದವನ್ನು ಏಕಪಕ್ಷೀಯವಾಗಿ ರದ್ದುಪಡಿಸಿದೆ. ಫ್ರಾನ್ಸ್ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಫ್ರಾನ್ಸ್ ಆಕ್ಷೇಪವನ್ನು ಐರೋಪ್ಯ ಒಕ್ಕೂಟ ಬೆಂಬಲಿಸಿದೆ.

ನಮ್ಮ ಗಮನಕ್ಕೆ ತರದೆಯೇ ಈ ಮೈತ್ರಿಕೂಟ ರಚಿಸಲಾಗಿದೆ ಎಂದು ಐರೋಪ್ಯ ಒಕ್ಕೂಟವು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಈ ಮೈತ್ರಿಕೂಟವು ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶದಲ್ಲಿ ಅಣ್ವಸ್ತ್ರ ಪೈಪೋಟಿಗೆ ಕಾರಣವಾಗಲಿದೆ. ಇಲ್ಲಿನ ಸುಸ್ಥಿರತೆಯನ್ನು ಹಾಳುಗೆಡವಲಿದೆ. ಇದು ಕಳವಳಕಾರಿ ಬೆಳವಣಿಗೆ

ಚೀನಾ

ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಲು ಮೂರು ದೇಶಗಳ ಈ ಮೈತ್ರಿಕೂಟವು ನೆರವಾಗಲಿದೆ. ಇದು ಒಂದು ಒಳ್ಳೆಯ ಬೆಳವಣಿಗೆ

ಅಮೆರಿಕ

ನಾವು ಅಣುಶಕ್ತಿ ಆಧಾರಿತ ಜಲಾಂತರ್ಗಾಮಿ ನೌಕೆಗಳನ್ನು ಖರೀದಿಸುತ್ತಿದ್ದೇವೆಯೇ ಹೊರತು, ಅಣ್ವಸ್ತ್ರ ಇರುವ ನೌಕೆಯನ್ನಲ್ಲ. ಇದರಲ್ಲಿ ಕಳವಳ ವ್ಯಕ್ತಪಡಿಸುವ ಅವಶ್ಯಕತೆ ಇಲ್ಲ

ಆಸ್ಟ್ರೇಲಿಯಾ

3 ದೇಶಗಳ ರಕ್ಷಣಾ ಹಿತಾಸಕ್ತಿ ಮತ್ತು ವಾಣಿಜ್ಯ ಹಿತಾಸಕ್ತಿಯ ದೃಷ್ಟಿಯಿಂದ ಈ ಮೈತ್ರಿಕೂಟವು ಮಹತ್ವದಾದುದು. ಇದರಿಂದ ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶದಲ್ಲಿ ನಮ್ಮ ಬಲ ಹೆಚ್ಚಲಿದೆ


ಬ್ರಿಟನ್





ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು ಅಡಿಪಾಯ ಕಾಮಗಾರಿ ಪೂರ್ಣಗೊಳ್ಳುವ ಹಂತ ತಲುಪಿರುವುದು ಗುರುವಾರ ಕಂಡು ಬಂತು (ಎಡ ಚಿತ್ರ) ರಾಮ ಮಂದಿರದ ಅಡಿಪಾಯಕ್ಕೆ ಬಳಸಲು ತಂದಿರಿಸಿರುವ ಶಿಲೆಗಳು –ಪಿಟಿಐ ಚಿತ್ರಗಳು

ಟಿವಿಎಸ್ ರೈಡರ್ ಬಿಡುಗಡೆ: ಬೆಲೆ ₹ 77,500ರಿಂದ ಆರಂಭ



ಬೆಂಗಳೂರು: ಟಿವಿಎಸ್ ಮೋಟರ್ ಕಂಪನಿಯು ದೇಶದ ಮಾರುಕಟ್ಟೆಗೆ 125 ಸಿಸಿ ಸಾಮರ್ಥ್ಯದ ಮೋಟರ್ ಸೈಕಲ್ ಟಿವಿಎಸ್ ರೈಡರ್ ಬಿಡುಗಡೆ ಮಾಡಿದೆ.

ದೆಹಲಿಯಲ್ಲಿ ಎಕ್ಸ್ ಷೋರೂಂ ಬೆಲೆ ಡ್ರಮ್ ಬ್ರೇಕ್ ಆವೃತ್ತಿಗೆ ₹ 77,500 ಮತ್ತು ಡಿಸ್ಕ್ ಬ್ರೇಕ್ ಆವೃತ್ತಿಗೆ ₹ 85,469 ಇರಲಿದೆ. ಜುಪಿಟರ್ ಮಾದರಿಯಲ್ಲಿಯೂ 125 ಸಿಸಿ ಆವೃತ್ತಿ ಬಿಡುಗಡೆ ಮಾಡುವುದಾಗಿ ಕಂಪನಿ ತಿಳಿಸಿದೆ. ಬಿಡುಗಡೆ ಮಾಡಿದ ಒಂದು ವರ್ಷದ ಒಳಗಾಗಿ 5 ಲಕ್ಷ ಟಿವಿಎಸ್ ರೈಡರ್ ಮಾರಾಟ ಮಾಡುವ ಗುರಿಯನ್ನು ಕಂಪನಿ ಹೊಂದಿದೆ.


ದೇಶದಲ್ಲಿ ವೇಗವಾಗಿ ಬೆಳೆಯುತ್ತಿರುವ 125 ಸಿಸಿ ಮೋಟಾರ್ ಸೈಕಲ್ ಮತ್ತು ಸ್ಕೂಟರ್ ವಿಭಾಗದತ್ತ ಹೆಚ್ಚು ಗಮನ ಹರಿಸಿದ್ದು, ಇದು ಭವಿಷ್ಯದ ಲಾಭದಾಯಕ ಬೆಳವಣಿಗೆಯ ವಿಭಾಗ ಎಂದು ಕಂಪನಿ ಗುರುತಿಸಿದೆ ಎಂದು ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ಸುದರ್ಶನ್ ವೇಣು ಅವರು ತಿಳಿಸಿದ್ದಾರೆ.

ದೋಣಿ ದುರಂತ: 7 ಮೃತದೇಹ ಪತ್ತೆ

ಮುಂಬೈ (ಪಿಟಿಐ): ಎರಡು ದಿನಗಳ ಹಿಂದೆ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ವಾರ್ಧಾ ನದಿಯಲ್ಲಿ ದೋಣಿ ಮುಳುಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಏಳು ಮೃತದೇಹಗಳನ್ನು ಹೊರ ತೆಗೆಯಲಾಗಿದ್ದು, ಮೃತರ ಸಂಖ್ಯೆ 10ಕ್ಕೆ ಏರಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಗಳವಾರ ದೋಣಿ ದುರಂತ ಸಂಭವಿಸಿತ್ತು. ದೋಣಿಯಲ್ಲಿ ಒಟ್ಟು 13 ಜನರಿದ್ದರು. ಘಟನೆ ನಡೆದಾಗ ಇಬ್ಬರು ಈಜಿ ಸುರಕ್ಷಿತವಾಗಿ ದಡಸೇರಿದ್ದರು. ಅಂದು ಮೂವರ ಶವಗಳನ್ನು ಹೊರತೆಗೆಯಲಾಗಿತ್ತು. ರಕ್ಷಣಾ ತಂಡದವರು ಇಂದು ಏಳು ಮಂದಿಯ ಮೃತದೇಹಗಳನ್ನು ಪತ್ತೆ ಮಾಡಿದ್ದಾರೆ. 11 ವರ್ಷದ ಬಾಲಕಿಯೊಬ್ಬಳು ನಾಪತ್ತೆಯಾಗಿದ್ದಾಳೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,519
ಇಂದಿನ ಅಂತ್ಯ	17,629
▲	110
ದಿನದ ಗರಿಷ್ಠ	17,644

ವಿನಿಮಯ ದರ

$ ಡಾಲರ್	73.52
£ ಪೌಂಡ್	101.6
€ ಯುರೊ	86.53
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹462

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1555 (1560)
ಸೋಯಾ (ರಿಫೈನ್ಡ್)	₹1360(1353)
ಸೂರ್ಯಕಾಂತಿ(ರಿಫೈನ್ಡ್)	₹1390(1380)
ಪಾಮೋಲಿನ್	₹1215 (1270)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	390
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	22500-48000
ಹಳತು	42500-50500
ಕುಮಟ	
ಚಿಪ್ಪು	37569-41256
ಕೋಕ	27600-39099
ಹೊಸಚಾಲಿ	43456-47069
ಹಳೆಚಾಲಿ	46099-46099

ಪುತ್ತೂರು	
ಕೋಕ	10500-26000
ಹೊಸತು	33500-48000
ಸಿದ್ದಾಪುರ	
ಬಿಳಿಗೋಟು	37499-39099
ಚಾಲಿ	45099-46939
ಕೋಕ	28699-38890
ಕೆಂಪುಗೋಟು	33269-34199
ರಾಶಿ	47590-51459
ತಟ್ಟಿಬೆಟ್ಟೆ	34109-45899
ಶಿರಸಿ	
ಬೆಟ್ಟೆ	28099-47999
ಬಿಳಿಗೋಟು	32899-43649

ಚಾಲಿ	45199-47381
ರಾಶಿ	46222-52099
ಯಲ್ಲಾಪುರ	
ಬಿಳಿಗೋಟು	35812-40809
ಚಾಲಿ	41218-47699
ಕೋಕ	27618-34299
ಕೆಂಪುಗೋಟು	33019-36899
ರಾಶಿ	49019-54765
ತಟ್ಟಿಬೆಟ್ಟೆ	41999-48669
ರಾಶಿ	47069-55199
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	301-497
ದ್ವಿತಳಿ (ಬಿ.ವಿ)	336-581

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13800	13000	13100	187.35ಸೆಂಟ್ಸ್
ಎಸಿ	6300	4800	5250	
ಆರ್‌ಪಿ	6150	6100	6200	ಲಂಡನ್
ಆರ್‌ಸಿ	3535	3500	3625	2082 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

16-9-2021

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10700-10800
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1565 (1570)
ಒಂದು ವಾರದ ಡೆಲಿವರಿ	1560 (1565)
ಸೋಯಾ ಕಚ್ಚಾ	-- (1300)
ಪಾಮ್ ವಾರದ ಡೆಲಿವರಿ	1213 (1205)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1310)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,200 (46,950)
ಬೆಳ್ಳಿ ಕೆ.ಜಿ 61,800 (63,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬ್ಯಾಡ್ ಬ್ಯಾಂಕ್ ರಚನೆಗೆ ಮುಂದಡಿ, ₹ 30 ಸಾವಿರ ಕೋಟಿ ನಿಗದಿ

• ಅನ್ನಪೂರ್ಣಾ ಸಿಂಗ್

ನವದೆಹಲಿ: ಬ್ಯಾಂಕ್‌ಗಳಲ್ಲಿನ ವಸೂಲಾಗದ ಸಾಲವನ್ನು ತಾನು ವಹಿಸಿಕೊಳ್ಳುವ 'ಬ್ಯಾಡ್ ಬ್ಯಾಂಕ್' ಅಥವಾ 'ರಾಷ್ಟ್ರೀಯ ಆಸ್ತಿ ಪುನರ್ ರಚನಾ ಕಂಪನಿ ಲಿಮಿಟೆಡ್' (ಎನ್‌ಎ-ಆರ್‌ಸಿಎಲ್) ಸ್ಥಾಪನೆಗೆ ಕೇಂದ್ರ ಸರ್ಕಾರವು ಹಸಿರು ನಿಶಾನೆ ತೋರಿದೆ. ಬ್ಯಾಡ್ ಬ್ಯಾಂಕ್‌ನಿಂದಾಗಿ ಸಾಂಪ್ರದಾಯಿಕ ಬ್ಯಾಂಕ್‌ಗಳ ಎನ್‌ಪಿಎ ಪ್ರಮಾಣ ತಗ್ಗಿ, ಹೊಸ ಸಾಲ ನೀಡಲು ಹೆಚ್ಚು ಬಂಡವಾಳ ಲಭ್ಯವಾಗುವ ನಿರೀಕ್ಷೆ ಇದೆ.

ಬ್ಯಾಡ್ ಬ್ಯಾಂಕ್‌ಗೆ ಖಾತರಿ ರೂಪದಲ್ಲಿ ಕೇಂದ್ರ ಸರ್ಕಾರದಿಂದ ₹ 30,600 ಕೋಟಿ ನಿಗದಿ ಮಾಡಲು ಕೂಡ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಬ್ಯಾಡ್ ಬ್ಯಾಂಕ್ ರಚಿಸುವ ಘೋಷಣೆಯನ್ನು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಮಾಡಲಾಗಿತ್ತು.

'ಬ್ಯಾಂಕ್‌ಗಳಲ್ಲಿನ ಎನ್‌ಪಿಎಗಳನ್ನು ತಾನು ವಹಿಸಿಕೊಂಡು, ಅವುಗಳನ್ನು ವೃತ್ತಿಪರವಾಗಿ ಇತ್ಯರ್ಥಪಡಿಸುವ ಕೆಲಸವನ್ನು ಬ್ಯಾಡ್ ಬ್ಯಾಂಕ್ ಮಾಡಲಿದೆ. ಇದರಿಂದಾಗಿ ಸಾಂಪ್ರದಾಯಿಕ ಬ್ಯಾಂಕ್‌ಗಳ ಎನ್‌ಪಿಎ ಪ್ರಮಾಣ ತಗ್ಗಲಿದೆ' ಎಂದು ನಿರ್ಮಲಾ ಅವರು ವಿವರಿಸಿದರು. ವಸೂಲಾಗದ ಸಾಲವನ್ನು ವಹಿಸಿಕೊಳ್ಳುವ ಸಂದರ್ಭದಲ್ಲಿ ಬ್ಯಾಡ್ ಬ್ಯಾಂಕ್, ಸಾಂಪ್ರದಾಯಿಕ ಬ್ಯಾಂಕ್‌ಗೆ ಸಾಲದ ಶೇಕಡ 15ರಷ್ಟು ಮೊತ್ತವನ್ನು ನಗದು ರೂಪದಲ್ಲಿ ನೀಡುತ್ತದೆ. ಇನ್ನುಳಿದ ಶೇಕಡ 85ರಷ್ಟು ಮೊತ್ತವನ್ನು ಸರ್ಕಾರದ ಖಾತರಿ ಇರುವ ಭದ್ರತಾ ಪತ್ರದ ರೂಪದಲ್ಲಿ ನೀಡಲಾಗುತ್ತದೆ.

ಬ್ಯಾಡ್ ಬ್ಯಾಂಕ್ ಮೂಲಕ ₹ 500 ಕೋಟಿಗಿಂತ ಹೆಚ್ಚಿನ ಮೊತ್ತದ ಸಾಲಗಳನ್ನು ಇತ್ಯರ್ಥಪಡಿಸುವ ಉದ್ದೇಶ ಇದೆ. ಒಟ್ಟು ₹ 2 ಲಕ್ಷ ಕೋಟಿ ಮೌಲ್ಯದ ಸಾಲವನ್ನು ಹಂತ ಹಂತವಾಗಿ ಇತ್ಯರ್ಥಪಡಿಸಲಾಗುವುದು ಎಂದು ಸಚಿವರು ತಿಳಿಸಿದರು. ಮೊದಲ ಹಂತದಲ್ಲಿ ಒಟ್ಟು ₹ 90 ಸಾವಿರ ಕೋಟಿ ಮೌಲ್ಯದ ಸಾಲವನ್ನು ಬ್ಯಾಡ್ ಬ್ಯಾಂಕ್‌ಗೆ ವರ್ಗಾವಣೆ ಮಾಡುವ ಸಾಧ್ಯತೆ ಇದೆ.

'ಬ್ಯಾಡ್ ಬ್ಯಾಂಕ್‌ಗೆ ಸರ್ಕಾರದ ಕಡೆಯಿಂದ ಖಾತರಿ ಮೊತ್ತವನ್ನು ನಿಗದಿ ಮಾಡಿರುವುದು ಮಹತ್ವದ ತೀರ್ಮಾನ. ಇದು ಸಾಂಪ್ರದಾಯಿಕ ಬ್ಯಾಂಕ್‌ಗಳಿಗೆ ತ್ವರಿತವಾಗಿ ತೀರ್ಮಾನ ಕೈಗೊಳ್ಳಲು ನೆರವು ನೀಡಲಿದೆ. ಎನ್‌ಪಿಎ ಮೊತ್ತವನ್ನು ಗಮನಿಸಿದರೆ ಸರ್ಕಾರವು ಈಗ ನಿಗದಿ ಮಾಡಿರುವ ಮೊತ್ತವು ಸಾಕಾಗುವುದಿಲ್ಲ. ಆದರೆ ಸರ್ಕಾರದ ಹಣಕಾಸಿನ ಮಿತಿಗಳ ಕಾರಣದಿಂದಾಗಿ ಇಷ್ಟು ಮೊತ್ತ ನಿಗದಿಯಾಗಿದೆ' ಎಂದು ರಿಸರ್ಜೆಂಟ್ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಜ್ಯೋತಿಪ್ರಕಾಶ್ ಗಾಡಿಯಾ ಅಭಿಪ್ರಾಯ ವ್ಯಕ್ತಪಡಿಸಿದರು.

ಅಸೋಚಾಂ–ಕ್ರಿಸಿಲ್ ಅಧ್ಯಯನದ ಪ್ರಕಾರ ದೇಶದ ಬ್ಯಾಂಕ್‌ಗಳ ಎನ್‌ಪಿಎ ಮೊತ್ತವು ಮುಂದಿನ ವರ್ಷದ ಮಾರ್ಚ್ ವೇಳೆಗೆ ₹ 10 ಲಕ್ಷ ಕೋಟಿಯನ್ನು ದಾಟಲಿದೆ.

ಮುಖ್ಯಾಂಶಗಳು

- ₹ 2 ಲಕ್ಷ ಕೋಟಿ ಮೌಲ್ಯದ ಸಾಲ ಇತ್ಯರ್ಥ ಗುರಿ
- ಬ್ಯಾಡ್ ಬ್ಯಾಂಕ್‌ಗೆ ಸರ್ಕಾರದ ಖಾತರಿಯಾಗಿ ₹ 30 ಸಾವಿರ ಕೋಟಿ

59 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್



ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಗುರುವಾರದ ವಹಿವಾಟಿನಲ್ಲಿ ಮೊದಲ ಬಾರಿಗೆ 59 ಸಾವಿರದ ಗಡಿ ದಾಟಿತು.

ಸತತ ಮೂರನೇ ವಹಿವಾಟು ಅವಧಿಯಲ್ಲಿಯೂ ಏರಿಕೆ ಕಂಡ ಸೂಚ್ಯಂಕವು ಗುರುವಾರ 418 ಅಂಶ ಏರಿಕೆಯಾಗಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 59,141ಕ್ಕೆ ತಲುಪಿತು. ಮಧ್ಯಂತರ ವಹಿವಾಟಿನಲ್ಲಿ 59,204 ಅಂಶಗಳ ದಾಖಲೆಯ ಮಟ್ಟಕ್ಕೂ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 110 ಅಂಶ ಹೆಚ್ಚಾಗಿ ಹೊಸ ಎತ್ತರವಾದ 17,629 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು.

ಆರ್ಥಿಕ ಸುಧಾರಣಾ ಕ್ರಮಗಳಿಂದಾಗಿ ದೇಶದ ಷೇರುಪೇಟೆಗಳು ದಾಖಲೆ ಮಟ್ಟದಲ್ಲಿ ವಹಿವಾಟು ನಡೆಸುತ್ತಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಷೇರುಗಳ ಉತ್ತಮ ಖರೀದಿ ವಹಿವಾಟಿನಿಂದಾಗಿ ಗುರುವಾರ ಷೇರುಪೇಟೆಗಳಲ್ಲಿ ಈ ಮಟ್ಟದ ಏರಿಕೆ ಕಂಡುಬಂದಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 2 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 73.52ರಂತೆ ವಿನಿಮಯಗೊಂಡಿತು.

'ಸಿ3' ಹೊಸ ಮಾದರಿ ಪರಿಚಯಿಸಿದ ಸಿಟ್ರನ್



ಬೆಂಗಳೂರು: ವಾಹನ ತಯಾರಿಕಾ ಕಂಪನಿ ಸಿಟ್ರನ್, ಭಾರತದ ಮಾರುಕಟ್ಟೆಗೆ ತನ್ನ ಹೊಸ ಮಾದರಿ 'ಸಿ3'ಅನ್ನು ಗುರುವಾರ ಪರಿಚಯಿಸಿದೆ. ಮುಂದಿನ ವರ್ಷದ ಮೊದಲಾರ್ಧದಲ್ಲಿ ಇದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಆಲೋಚನೆ ಹೊಂದಿದೆ.

ಎಸ್‌ಯುವಿ ಇಂದ ಪ್ರೇರಿತ್ ಹ್ಯಾಚ್‌ಬ್ಯಾಕ್ ಇದಾಗಿದೆ. ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮೂರು ವಾಹನಗಳನ್ನು ಬಿಡುಗಡೆ ಮಾಡುವ ಗುರಿಯನ್ನು ಕಂಪನಿ ಇಟ್ಟುಕೊಂಡಿದ್ದು ಮೊದಲ ಮಾದರಿ ಇದಾಗಿದೆ.

ಈ ವಾಹನವು 4 ಮೀಟರ್‌ಗಿಂತ ಕಡಿಮೆ ಉದ್ದವಿದೆ ಎಂದು ಕಂಪನಿ ತಿಳಿಸಿದೆ. ಕಂಪನಿಯ ಚೆನ್ನೈ ಘಟಕದಿಂದ 2022ರ ಮೊದಲಾರ್ಧದಲ್ಲಿ ಹೊಸ ಮಾದರಿಯನ್ನು ಬಿಡುಗಡೆ ಮಾಡಲಾಗುವುದು ಎಂದು ಹೇಳಿದೆ.

ಚಿನ್ನ ₹ 491, ಬೆಳ್ಳಿ ₹ 724 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ದರವು ಗುರುವಾರ ₹ 491ರಷ್ಟು ಇಳಿಕೆ ಕಂಡಿದ್ದು, ₹ 45,735ರಂತೆ ಮಾರಾಟವಾಗಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 724ರಷ್ಟು ಕಡಿಮೆಯಾಗಿ ₹ 61,541ರಂತೆ ಮಾರಾಟವಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಹಾಗೂ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ಹೆಚ್ಚಳ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಭೂಮಿಯತ್ತ ಹೊರಟ ಚೀನಾ ಗಗನಯಾತ್ರಿಕರು

ಬೀಜಿಂಗ್ (ಎಪಿ): ಬಾಹ್ಯಾಕಾಶ ನಿಲ್ದಾಣ ನಿರ್ಮಾಣ, ದುರಸ್ತಿ ಸೇರಿದಂತೆ ವಿವಿಧ ಕಾರ್ಯಗಳಿಗಾಗಿ ಮೂರು ತಿಂಗಳ ಹಿಂದೆ ಬಾಹ್ಯಾಕಾಶಕ್ಕೆ ತೆರಳಿದ್ದ ಚೀನಾದ ಮೂವರು ಗಗನಾಯತ್ರಿಗಳು ಗುರುವಾರ ಭೂಮಿಯತ್ತ ಹೊರಟಿದ್ದಾರೆ. 90 ದಿನಗಳ ಕಾಲ ಬಾಹ್ಯಾಕಾಶ ನಿಲ್ದಾಣದಲ್ಲಿ ನೆಲೆಸಿದ್ದ ನೀ ಹೈಶೆಂಗ್, ಲಿಯು ಬೊಮಿಂಗ್ ಮತ್ತು ಟ್ಯಾಂಗ್ ಹಾಂಗೊ ಗಗನಯಾತ್ರಿಗಳು ಗುರುವಾರ ಬೆಳಿಗ್ಗೆ 8.56ಕ್ಕೆ (0056 ಜಿಎಂಟಿ)ಕ್ಕೆ ಶೆನ್‌ಶಾವ್–12 ಗಗನ ನೌಕೆ ಮೂಲಕ ಬಾಹ್ಯಾಕಾಶ ನಿಲ್ದಾಣದಿಂದ ಹೊರಟಿದ್ದಾರೆ ಎಂದು ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆ ತಿಳಿಸಿದೆ.

ಎನ್‌ಸಿಸಿ ಪುನರ್‌ರಚನೆ: ಸಮಿತಿಯಲ್ಲಿ ಧೋನಿಗೆ ಸ್ಥಾನ

ನವದೆಹಲಿ (ಪಿಟಿಐ): ನ್ಯಾಷನಲ್ ಕೆಡೆಟ್ ಕಾರ್ಪ್ಸ್ (ಎನ್‌ಸಿಸಿ) ಪುನರ್‌ರಚನೆಗಾಗಿ ರಕ್ಷಣಾ ಸಚಿವಾಲಯ ರಚಿಸಿರುವ 15 ಸದಸ್ಯರಿರುವ ಸಮಿತಿಯಲ್ಲಿ ಕ್ರಿಕೆಟ್ ದಿಗ್ಗಜ ಮಹೇಂದ್ರ ಸಿಂಗ್ ಧೋನಿ, ಉದ್ಯಮಿ ಆನಂದ್ ಮಹೀಂದ್ರ ಅವರಿಗೆ ಸ್ಥಾನ ನೀಡಲಾಗಿದೆ.



ಮಹೇಂದ್ರಸಿಂಗ್ ಧೋನಿ

ಧೋನಿ ಅವರು ಸೇನೆಯ ಗೌರವ ಲೆಫ್ಟಿನೆಂಟ್ ಕರ್ನಲ್ ಕೂಡ ಆಗಿದ್ದಾರೆ.

ಎನ್‌ಸಿಸಿಯನ್ನು ಹೆಚ್ಚು ಪ್ರಸ್ತುತವಾಗಬೇಕು. ಈ ಸಂಬಂಧ ಅದರ ಪುನರ್‌ರಚನೆಗಾಗಿ ರಚಿಸ ಲಾದ ಸಮಿತಿಯ ಅಧ್ಯಕ್ಷರನ್ನಾಗಿ ಮಾಜಿ ಸಂಸದ ಬೈಜಯಂತ್ ಪಾಂಡ ಅವರನ್ನು ನೇಮಕ ಮಾಡಲಾಗಿದೆ.

ನಿವೃತ್ತ ಕರ್ನಲ್ ರಾಜ್ಯವರ್ಧನ್ ಸಿಂಗ್ ರಾಠೋಡ್, ರಾಜ್ಯಸಭಾ ಸದಸ್ಯ ವಿನಯ್ ಸಹಸ್ರಬುದ್ಧೆ, ಹಣಕಾಸು ಸಚಿವಾಲಯದ ಪ್ರಧಾನ ಆರ್ಥಿಕ ಸಲಹೆಗಾರ ಸಂಜೀವ್ ಸನ್ಯಾಲ್, ಜಾಮಿಯಾ ಮಿಲಿಯಾ ಇಸ್ಲಾಮಿಯಾದ ಕುಲಪತಿ ನಜ್ಮಾ ಅಖ್ತರ್, ಎಸ್‌ಎನ್‌ಡಿಟಿ ಮಹಿಳಾ ವಿ.ವಿಯ ಮಾಜಿ ಕುಲಪತಿ ವಸುಧಾ ಕಾಮತ್, ಭಾರತೀಯ ಶಿಕ್ಷಣ ಮಂಡಲದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಮುಕುಲ್ ಕಾನಿಟ್ಕರ್, ಮೇಜರ್ ಜನರಲ್ (ನಿವೃತ್ತ) ಅಲೋಕ್ ರಾಜ್, ಎಸ್‌ಐಎಸ್ ಇಂಡಿಯಾ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ರಿತುರಾಜ್ ಸಿನ್ಹ, ಡಾಟಾಬುಕ್ ಕಂಪನಿಯ ಸಿಇಒ ಆನಂದ್ ಶಾ ಅವರು ಸಮಿತಿಯ ಸದಸ್ಯರಾಗಿದ್ದಾರೆ.

'ಅಂತರರಾಷ್ಟ್ರೀಯ ಯುವ ಸಂಘಟನೆಗಳಲ್ಲಿ ಪಾಲಿಸಲಾಗುತ್ತಿರುವ ನೀತಿಗಳನ್ನು ಸಮಿತಿ ಅಧ್ಯಯನ ಮಾಡಲಿದೆ. ಎನ್‌ಸಿಸಿ ಪಠ್ಯಕ್ರಮದಲ್ಲಿ ಅಳವಡಿಸುವ ಅಂಶಗಳ ಕುರಿತು ಸಮಿತಿ ಶಿಫಾರಸು ಮಾಡುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋನು ಸೂದ್ ವಿರುದ್ಧ ಐ.ಟಿ ದಾಳಿ: ವಿವಿಧ ಪಕ್ಷಗಳ ಖಂಡನೆ

ಮುಂಬೈ: ಬಾಲಿವುಡ್ ನಟ, ಸಮಾಜಸೇವಕ ಸೋನು ಸೂದ್ ಅವರ ವಿರುದ್ಧದ ಆದಾಯ ತೆರಿಗೆ ಇಲಾಖೆಯ ದಾಳಿ, ತಪಾಸಣೆ ಗುರುವಾರವೂ ಮುಂದುವರಿಯಿತು. ಈ ಮಧ್ಯೆ, ಅನೇಕ ರಾಜಕೀಯ ಪಕ್ಷಗಳು ನಟನ ನೆರವಿಗೆ ಬಂದಿದ್ದು, ಐ.ಟಿ ದಾಳಿಗಾಗಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ನಡೆಗೆ ಆಕ್ರೋಶ ವ್ಯಕ್ತಪಡಿಸಿವೆ.




ಎಎಪಿ ಸ್ಥಾಪಕ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಈಗಾಗಲೇ ಐ.ಟಿ ದಾಳಿಯನ್ನು ಖಂಡಿಸಿದ್ದು, ದೇಶದ ಅಸಂಖ್ಯ ಕುಟುಂಬಗಳು ಸೋನು ಸೂದ್ ಜೊತೆಗಿವೆ ಎಂದು ಹೇಳಿದ್ದಾರೆ.

ಅಕ್ರಮ ಹಣ ವರ್ಗಾವಣೆ ಆರೋಪ

ಹರ್ಷ ಮಂದರ್ ಮನೆ ಮೇಲೆ ಇ.ಡಿ ದಾಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಐಎಎಸ್ ಅಧಿಕಾರಿ ಹಾಗೂ ಸಾಮಾಜಿಕ ಕಾರ್ಯಕರ್ತ ಹರ್ಷ ಮಂದರ್ ಅವರಿಗೆ ಸೇರಿದ ಮನೆ ಹಾಗೂ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ (.ಇ.ಡಿ) ಅಧಿಕಾರಿಗಳು ಗುರುವಾರ ಶೋಧ ನಡೆಸಿದ್ದಾರೆ.



ಹರ್ಷ ಮಂದರ್

ಜರ್ಮನಿಯ ರಾಬರ್ಟ್ ಬಾಷ್ ಅಕಾಡೆಮಿಯ ಫೆಲೋಶಿಪ್ ಹಿನ್ನೆಲೆಯಲ್ಲಿ ಹರ್ಷ ಮಂದರ್ ಅವರು ಬೆಳಿಗ್ಗೆ ಬರ್ಲಿನ್‌ಗೆ ಪ್ರಯಾಣ ಬೆಳಸಿದ ಕೆಲವೇ ಗಂಟೆಗಳ ನಂತರ, ಈ ಶೋಧ ಕಾರ್ಯ ನಡೆದಿದೆ.

ಹರ್ಷ ಮಂದರ್ ವಿರುದ್ಧ ದೆಹಲಿ ಪೊಲೀಸ್‌ನ ಆರ್ಥಿಕ ಅಪರಾಧಗಳ ವಿಭಾಗವು ಎಫ್‌ಐಆರ್ ದಾಖಲಿಸಿದೆ. ಈ ಎಫ್‌ಐಆರ್‌ನ ಆಧಾರದ ಮೇಲೆ ಅವರ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿರುವ ಇ.ಡಿ. ಈಗ ಶೋಧ ನಡೆಸಿದೆ.

ವಸಂತ್ ಕುಂಜದಲ್ಲಿರುವ ಮನೆ, ಅಧ್ಚಿನಿಯಲ್ಲಿರುವ ಅವರ ಒಡೆತನದ ಎನ್‌ಜಿಒ ಸೆಂಟರ್ ಫಾರ್ ಈಕ್ವಿಟಿ ಸ್ಟಡೀಸ್‌ನ (ಸಿಇಎಸ್) ಕಚೇರಿಯಲ್ಲಿ ಶೋಧ ನಡೆಸಿದ್ದಾರೆ.

ಮೆಹ್ರೌಲಿಯಲ್ಲಿರುವ ಸಿಇಎಸ್ ಒಡೆತನದ ಬಾಲಮಂದಿರಗಳ ಮೇಲೂ ಇ.ಡಿ ಅಧಿಕಾರಿಗಳು ಶೋಧ ಕಾರ್ಯ ಕೈಗೊಂಡರು.

ಮಂದರ್ ಅವರು ಸಿಇಎಸ್‌ನ ನಿರ್ದೇಶಕರಾಗಿದ್ದಾರೆ. ಈ ಎನ್‌ಜಿಒ 'ಉಮೀದ್ ಅಮನ್ ಘರ್' ಹಾಗೂ 'ಖುಷಿ ರೇನ್‌ಬೊ ಹೋಂ' ಎಂಬ ಬಾಲಮಂದಿರಗಳನ್ನು ನಡೆಸುತ್ತಿದೆ. ರಾಜಕೀಯ ವಿಜ್ಞಾನಿ ಝೋಯಾ ಹಸನ್, ಸಾಮಾಜಿಕ ಕಾರ್ಯಕರ್ತ ಬೆಜವಾಡ ವಿಲ್ಸನ್ ಹಾಗೂ ಆರ್ಥಿಕ ತಜ್ಞೆ ದೀಪ ಸಿನ್ಹಾ ಅವರು ಸಂಸ್ಥೆಯ ನಿರ್ದೇಶಕ ಮಂಡಳಿ ಸದಸ್ಯರಾಗಿದ್ದಾರೆ.

ಈ ಬಾಲಮಂದಿರಗಳ ನಿರ್ವಹಣೆಯಲ್ಲಿ ಸಿಇಎಸ್‌ನಿಂದ ಕಾನೂನು ಉಲ್ಲಂಘನೆಯಾಗಿದೆ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಆರೋಪಿಸಿತ್ತು.

'ಸಿಎಎ ವಿರೋಧಿಸಿ ಜಂತರ್ ಮಂತರ್ ಸೇರಿದಂತೆ ವಿವಿಧೆಡೆ ಪ್ರತಿಭಟನೆಗಳು ನಡೆದ ಸ್ಥಳಗಳಿಗೆ ತಮ್ಮನ್ನು ಸಿಇಎಸ್ ಸದಸ್ಯರು ಕರೆದೊಯ್ದಿದ್ದರು ಎಂಬುದಾಗಿ ಬಾಲಮಂದಿರಗಳಲ್ಲಿರುವ ಮಕ್ಕಳು ತಿಳಿಸಿದ್ದಾರೆ' ಎಂಬುದಾಗಿ ಎನ್‌ಸಿಪಿಸಿಆರ್ ಆರೋಪಿಸಿತ್ತು.

ಈ ಸಂಬಂಧ ಎನ್‌ಸಿಪಿಸಿಆರ್ ಸಲ್ಲಿಸಿದ ದೂರಿನ ಅನ್ವಯ ದೆಹಲಿ ಪೊಲೀಸರು ಕಳೆದ ಫೆಬ್ರುವರಿಯಲ್ಲಿ ಸಿಇಎಸ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಆದರೆ, ಎನ್‌ಸಿಪಿಸಿಆರ್‌ನ ಆರೋಪಗಳನ್ನು ದೆಹಲಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಡಿಸಿಪಿಸಿಆರ್) ತಳ್ಳಿ ಹಾಕಿತ್ತು.

'ರಾಜಕೀಯ ಪ್ರತೀಕಾರದಿಂದಾಗಿ ತನ್ನ ಒಡೆತನದ ಎನ್‌ಜಿಒ ತೊಂದರೆ ಅನುಭವಿಸುತ್ತಿದೆ' ಎಂಬ ಹರ್ಷ ಮಂದರ್ ಅವರ ಹೇಳಿಕೆಯನ್ನು ಡಿಸಿಪಿಸಿಆರ್ ಬೆಂಬಲಿಸಿತ್ತು.

ಅಭಿಮಾನಿಗಳ ಆಕ್ರೋಶ

ಹರ್ಷ ಮಂದರ್ ಅವರ ಮನೆ ಹಾಗೂ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ ಶೋಧ ಕಾರ್ಯ ಕೈಗೊಂಡಿರುವುದಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ವಿರೋಧ ಪಕ್ಷಗಳ ಮುಖಂಡರು, ಸಾಮಾಜಿಕ ಹೋರಾಟಗಾರರು ಹಾಗೂ ಹರ್ಷ ಮಂದರ್ ಅವರ ಸ್ನೇಹಿತರು, ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನಾನು ಕಳೆದ 40 ವರ್ಷಗಳಿಂದ ಹರ್ಷ ಮಂದರ್ ಅವರನ್ನು ಬಲ್ಲೆ. ಮಧ್ಯಪ್ರದೇಶ ಕೇಡರ್‌ನ ಅಧಿಕಾರಿಯಾಗಿದ್ದ ಹರ್ಷ, ಪ್ರಾಮಾಣಿಕ ವ್ಯಕ್ತಿ' ಎಂದು ಕಾಂಗ್ರೆಸ್ ಮುಖಂಡ ದಿಗ್ವಿಜಯ್ ಸಿಂಗ್ ಹೇಳಿದ್ದಾರೆ.

'ಸಾರ್ವಜನಿಕ ಹಿತಾಸಕ್ತಿಗಾಗಿ ಹೋರಾಡುವವರನ್ನು ಹಾಗೂ ಸಂಘಟನೆಗಳನ್ನು ತುಳಿಯುವುದಕ್ಕಾಗಿ ಇ.ಡಿ ಯಂತಹ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ' ಎಂದು ಹೋರಾಟಗಾರ ಹಾಗೂ ವಕೀಲ ಪ್ರಶಾಂತಭೂಷಣ್ ಟ್ವೀಟ್ ಮಾಡಿದ್ದಾರೆ.

ಚಾರ್‌ಧಾಮ್ ಯಾತ್ರೆ ಮೇಲಿನ ನಿಷೇಧ ತೆರವು

ನೈನಿತಾಲ್: ಕೋವಿಡ್ ಹಿನ್ನೆಲೆಯಲ್ಲಿ ವಿಧಿಸಲಾಗಿದ್ದ ಉತ್ತರಾಖಂಡದ ಚಾರ್ ಧಾಮ್ ಯಾತ್ರೆ ಮೇಲಿನ ನಿಷೇಧವನ್ನು ನೈನಿತಾಲ್ ಹೈಕೋರ್ಟ್ ರದ್ದುಗೊಳಿಸಿದೆ.

ಕೋವಿಡ್ -19 ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಯಾತ್ರಾರ್ಥಿಗಳಿಗೆ ಸೂಚಿಸಿದೆ. ಪ್ರತಿ ದಿನ, ಕೇದಾರನಾಥದಲ್ಲಿ 800, ಬದರೀನಾಥದಲ್ಲಿ 1,200, ಗಂಗೋತ್ರಿಯಲ್ಲಿ 600 ಮತ್ತು ಯಮುನೋತ್ರಿ ಧಾಮದಲ್ಲಿ 400 ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಗಿದೆ.

ಇದೇವೇಳೆ, ಕೋವಿಡ್ ನೆಗೆಟಿವ್ ವರದಿ, ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡ ಪ್ರಮಾಣಪತ್ರ ತರುವುದನ್ನು ಭಕ್ತರಿಗೆ ಕೋರ್ಟ್ ಕಡ್ಡಾಯಗೊಳಿಸಿದೆ.



ಪ್ರತಿಭಟನೆ

ತಾಲಿಬಾನ್‌ಗೆ ಪಾಕಿಸ್ತಾನ ಬೆಂಬಲಿಸುತ್ತಿದೆ ಎಂದು ಆರೋಪಿಸಿ ಭಾರತದಲ್ಲಿರುವ ಅಫ್ಗಾನಿಸ್ತಾನ ಪ್ರಜೆಗಳು ನವದೆಹಲಿಯಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

ಕಾಬೂಲ್‌ನಲ್ಲಿ ಭಾರತೀಯನ ಅಪಹರಣ: ತಾಲಿಬಾನ್ ಜತೆ ಸಂಪರ್ಕ

ನವದೆಹಲಿ: ಕಾಬೂಲ್‌ನಲ್ಲಿ ಭಾರತದ ನಾಗರಿಕರೊಬ್ಬರನ್ನು ಅಪಹರಿಸಲಾಗಿದೆ.

ಬನ್ಸಾರಿ ಲಾಲ್ ಅರೆಂದೆಹ್ ಎನ್ನುವವರಿಗೆ ಬಂದೂಕು ತೋರಿಸಿ ಮಂಗಳವಾರ ಅಪಹರಿಸಲಾಗಿದೆ ಎಂದು ವರದಿಯಾಗಿದೆ. ಅರೆಂದೆಹ್ ಅವರ ಬಿಡುಗಡೆ ಕುರಿತಂತೆ ತಾಲಿಬಾನ್ ಸರ್ಕಾರದ ಜತೆ ಭಾರತ ಸರ್ಕಾರ ಸಂಪರ್ಕದಲ್ಲಿದೆ.

ಅರೆಂದೆಹ್ ಅವರ ಕುಟುಂಬ ಫರಿದಾಬಾದ್‌ನಲ್ಲಿದ್ದು, ಕಳೆದ ಎರಡು ದಶಕಗಳಿಂದ ಇವರು ಕಾಬೂಲ್‌ನಲ್ಲಿ ವ್ಯಾಪಾರ ನಡೆಸುತ್ತಿದ್ದಾರೆ.

'ಅಪಹರಣದ ಕುರಿತು ಸ್ಥಳೀಯ ಅಧಿಕಾರಿಗಳು ತನಿಖೆ ಕೈಗೊಂಡಿದ್ದಾರೆ. ನಾವು ಈ ಬಗ್ಗೆ ನಿರಂತರ ನಿಗಾವಹಿಸಿದ್ದು, ಸಂಬಂಧಪಟ್ಟವರ ಜತೆ ಸಂಪರ್ಕದಲ್ಲಿದ್ದೇವೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಕ್ತಾರ ಅರಿಂದಮ್ ಬಾಗಚಿ ತಿಳಿಸಿದ್ದಾರೆ.

ನಾಯಕತ್ವದಲ್ಲಿ ಬಿರುಕು ಅಲ್ಲಗಳೆದ ತಾಲಿಬಾನ್ ವಕ್ತಾರ

ತಾಲಿಬಾನ್: ಬಣ ಜಗಳ ಭುಗಿಲು

ಕಾಬೂಲ್ (ಎಪಿ): ತೀವ್ರವಾದಿಗಳಿಂದ ಕೂಡಿರುವ ಸಂಪುಟವನ್ನು ತಾಲಿಬಾನ್ ರಚಿಸಿರುವುದು ಸಂಘಟನೆಯ ವಾಸ್ತವವಾದಿಗಳು ಮತ್ತು ತೀವ್ರವಾದಿಗಳ ನಡುವಿನ ಘರ್ಷಣೆಗೆ ಕಾರಣವಾಗಿದೆ. ತೆರೆಮರೆಯಲ್ಲಿ ಜಗಳಗಳು ನಡೆದಿವೆ. ಆದರೆ ಅಧ್ಯಕ್ಷರ ಅರಮನೆಯಲ್ಲಿ ಎರಡು ಬಣಗಳ ನಡುವೆ ಇತ್ತೀಚೆಗೆ ನಡೆದ ಹಿಂಸಾತ್ಮಕ ಸಂಘರ್ಷದ ವದಂತಿಗಳು ಮಾತ್ರ ಬೇಗನೆ ಹರಡಿತು. ಒಂದು ಬಣದ ನಾಯಕ ಅಬ್ದುಲ್ ಘನಿ ಬರದರ್ ಹತ್ಯೆಯಾಯಿತು ಎಂಬಂತಹ ಸುದ್ದಿಗಳೂ ಹರಡಿದವು.

ವದಂತಿಗಳು ತೀವ್ರವಾಗಿ ಹರಡಿದ ಕಾರಣ, ಬರದರ್‌ನ ಧ್ವನಿಮುದ್ರಿಕೆ ಹಾಗೂ ಕೈಬರಹವನ್ನು ಬಿಡುಗಡೆ ಮಾಡಬೇಕಾಯಿತು. ದೇಶದ ರಾಷ್ಟ್ರೀಯ ಸುದ್ದಿವಾಹಿನಿಯಲ್ಲಿ ಬರದರ್ ಕಾಣಿಸಿಕೊಂಡು, ತಾನು ಬದುಕಿದ್ದೇನೆ ಎಂದು ಸಾಬೀತುಪಡಿಸಬೇಕಾಯಿತು.

ಅಮೆರಿಕ ಜೊತೆ ಸಂಧಾನ ಮಾತುಕತೆಯಲ್ಲಿ ಬರದರ್ ಮುಖ್ಯ ಸಂಧಾನಕಾರನ ಪಾತ್ರ ನಿರ್ವಹಿಸಿದ್ದರು. ಈ ಒಪ್ಪಂದದ ಬಳಿಕ ಅಮೆರಿಕದ ಸೇನೆಯು ಅಫ್ಗನ್‌ನಿಂದ ವಾಪಸಾಗಿದೆ.

ರಾಜಧಾನಿ ಕಾಬೂಲ್ ನಗರವನ್ನು ಸ್ವಾಧೀನಪಡಿಸಿಕೊಂಡ ಸ್ವಲ್ಪ ಸಮಯದ ನಂತರ, ಎಲ್ಲರನ್ನೂ ಒಳಗೊಳ್ಳುವ ಸರ್ಕಾರ ರಚನೆಯನ್ನು ಬರದರ್ ಮೊದಲಿಗೆ ಪ್ರಸ್ತಾಪಿಸಿದ್ದರು. ಆದರೆ ಕೇವಲ ಪುರುಷರು ಹಾಗೂ ತಾಲಿಬಾನಿಗಳಿಂದಲೇ ಕೂಡಿದ ಸರ್ಕಾರ ರಚನೆ ಮಾಡಿದ್ದರಿಂದ ಬರದರ್ ನೀಡಿದ್ದ ಭರವಸೆ ಹುಸಿಯಾಯಿತು. ತೀವ್ರವಾದಿಗಳ ಕೈ ಮೇಲಾಗಿದೆ ಎಂಬುದಕ್ಕೆ ಸಾಕ್ಷ್ಯವೆಂಬಂತೆ ಅಧ್ಯಕ್ಷರ ಅರಮನೆಯ ಮೇಲೆ ಅಫ್ಘಾನಿಸ್ತಾನದ ರಾಷ್ಟ್ರೀಯ ಧ್ವಜದ ಬದಲು ತಾಲಿಬಾನ್ನ ಬಿಳಿ ಧ್ವಜ ಹಾರಾಡುತ್ತಿದೆ.

ದೇಶದ ಜನಾಂಗೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರನ್ನು ದೂರವಿಟ್ಟು ತಾಲಿಬಾನ್ ಸರ್ಕಾರ ರಚನೆಯಾಗಿರುವುದನ್ನು ಖಂಡಿಸಿ ಸಚಿವರೊಬ್ಬರು ತಮಗೆ ನೀಡಿದ್ದ ಮಂತ್ರಿ ಪದವಿಯನ್ನು ನಿರಾಕರಿಸಿದ್ದಾರೆ ಎಂದು ಹೆಸರು ಹೇಳಲಿಚ್ಛಿಸದ ಇಬ್ಬರು ವ್ಯಕ್ತಿಗಳು ತಿಳಿಸಿದ್ದಾರೆ.

ಇತ್ತೀಚೆಗೆ ಪ್ರಮುಖ ಕಾರ್ಯಕ್ರಮಗಳಲ್ಲಿ ಬರದರ್ ಕಾಣಿಸಿಕೊಳ್ಳುತ್ತಿಲ್ಲ. ಕತಾರ್ ಉಪಪ್ರಧಾನಿ ಭೇಟಿ ನೀಡಿದಾಗಲೂ ಅಧ್ಯಕ್ಷರ ಅರಮನೆಯಲ್ಲಿ ಬರದರ್ ಇರಲಿಲ್ಲ. ಕಾಬೂಲ್‌ಗೆ ಕತಾರ್ ನಿಯೋಗ ಬರುತ್ತಿರುವ ಮಾಹಿತಿ ತನಗೆ ಇರಲಿಲ್ಲ ಎಂದು ಬರದರ್ ಸಂದರ್ಶನವೊಂದರಲ್ಲಿ ಸ್ಪಷ್ಟಪಡಿಸಿದ್ದಾರೆ. ಸಂಘಟನೆ ಮುಖ್ಯಸ್ಥ ಹೈಬತುಲ್ಲಾ ಅಖುಂಜಾದಾ ಭೇಟಿಯಾಗಲು ಬರದರ್ ಕಂದಹಾರ್‌ನಲ್ಲಿದ್ದಾನೆ ಎಂದು ಮೂಲಗಳು ತಿಳಿಸಿವೆ. 20 ವರ್ಷಗಳ ಯುದ್ಧದ ಬಳಿಕ ತನ್ನ ಕುಟುಂಬದ ಭೇಟಿಗೆ ಹೋಗಿದ್ದಾರೆ ಎಂದು ಮತ್ತೊಂದು ಮೂಲ ತಿಳಿಸಿದೆ.

ನಾಯಕತ್ವದಲ್ಲಿ ಬಿರುಕು?

ನಾಯಕತ್ವದಲ್ಲಿ ಬಿರುಕು ಮೂಡಿದೆ ಎಂಬುದನ್ನು ತಾಲಿಬಾನ್ ವಕ್ತಾರ ಜಬಿಹುಲ್ಲಾ ಮುಜಾಹಿದ್ ನಿರಾಕರಿಸಿದ್ದಾರೆ. ತಾಲಿಬಾನ್ ವಿದೇಶಾಂಗ ಸಚಿವ ಅಮೀರ್ ಖಾನ್ ಮುತಾಕಿ ಸಹ ಅಲ್ಲಗಳೆದಿದ್ದಾರೆ.

'ಪ್ರಸ್ತುತ ಆಂತರಿಕ ಭಿನ್ನಾಭಿಪ್ರಾಯಗಳನ್ನು ತಾಲಿಬಾನ್ ನಿರ್ವಹಿಸಬಹುದು. ಆದರೆ, ತನ್ನ ಶಕ್ತಿ ವೃದ್ಧಿಸಿಕೊಳ್ಳಲು, ಅಂತರರಾಷ್ಟ್ರೀಯ ಸಮುದಾಯದ ಬೆಂಬಲ ಪಡೆಯಲು ಹಾಗೂ ಪ್ರಮುಖ ನೀತಿಗಳನ್ನು ರೂಪಿಸುವ ಸವಾಲುಗಳು ತಾಲಿಬಾನ್ ಮುಂದಿವೆ. ಈ ಪ್ರಯತ್ನಗಳು ವಿಫಲವಾದರೆ, ಸಂಘಟನೆಯಲ್ಲಿ ಹೆಚ್ಚು ಹೆಚ್ಚು ಗಂಭೀರ ಅಂತಃಕಲಹಗಳು ಉಂಟಾಗಬಹುದು' ಎಂದು ಅಮೆರಿಕದ ವಿಲ್ಸನ್ ಸೆಂಟರ್‌ನ ವಿಶ್ಲೇಷಕ ಮೈಕೆಲ್ ಕುಗೆಲ್‌ಮನ್ ಅಭಿಪ್ರಾಯಪಟ್ಟಿದ್ದಾರೆ.

ಉತ್ತಮ ರಸ್ತೆಗಳು ಬೇಕು ಎಂದರೆ ಹಣ ನೀಡಬೇಕು: ಗಡ್ಕರಿ

ಒಂದನೇ ಪುಟದಿಂದ

'ದೇಶದ ಹಲವೆಡೆ ಎಕ್ಸ್‌ಪ್ರೆಸ್‌ವೇಗಳನ್ನು ನಿರ್ಮಿಸಲಾಗಿದೆ. ಇವುಗಳಿಂದಾಗಿ ಪ್ರಯಾಣದ ಅವಧಿ ಕಡಿಮೆಯಾಗಿದೆ. ಇಂಧನಗಳ ವೆಚ್ಚವೂ ತಗ್ಗಿದೆ' ಎಂದರು.

'ರೈತರು ಹೆದ್ದಾರಿಗಳಿಗೆ ಸಮೀಪವಿರುವ ತಮ್ಮ ಜಮೀನನ್ನು ರಿಯಲ್ ಎಸ್ಟೇಟ್ ಡೆವಲಪರ್‌ಗಳಿಗೆ ಮಾರಾಟ ಮಾಡಬಾರದು. ಅವರೊಂದಿಗೆ ಪಾಲುದಾರರಾಗಿ, ಹೆದ್ದಾರಿ ಪಕ್ಕ ವಿವಿಧ ಸೌಲಭ್ಯಗಳನ್ನು ನಿರ್ಮಿಸಬೇಕು' ಎಂದರು.

'ದೆಹಲಿ–ಮುಂಬೈ ಎಕ್ಸ್‌ಪ್ರೆಸ್‌ವೇಯಿಂದಾಗಿ ಪ್ರಯಾಣದ ಅವಧಿ 12 ಗಂಟೆಗೆ ಇಳಿಯಲಿದೆ. ದೆಹಲಿಯಿಂದ ಮುಂಬೈಗೆ ತೆರಳಲು ಟ್ರಕ್‌ವೊಂದು 48 ಗಂಟೆ ತೆಗೆದುಕೊಳ್ಳುತ್ತದೆ. ಅದೇ ಎಕ್ಸ್‌ಪ್ರೆಸ್‌ವೇನಲ್ಲಿ ಸಾಗಿದರೆ 18 ಗಂಟೆ ಸಾಕು' ಎಂದ ಅವರು, 'ಈ ಕಾರಣಗಳಿಂದಾಗಿ ಒಂದು ಟ್ರಕ್ ಹೆಚ್ಚು ಬಾರಿ ಸಂಚರಿಸಲು ಸಾಧ್ಯ. ಇದರಿಂದ ವ್ಯವಹಾರವೂ ಹೆಚ್ಚುವುದು' ಎಂದರು.

ಭಾರತ ಟಿ20 ಕ್ರಿಕೆಟ್ ತಂಡದ ಸಾರಥ್ಯ ರೋಹಿತ್ ಶರ್ಮಾಗೆ?

ನಾಯಕತ್ವದಿಂದ ನಿರ್ಗಮಿಸಲು ಕೊಹ್ಲಿ ನಿರ್ಧಾರ



ರೋಹಿತ್ ಶರ್ಮಾ (ಎಡ) ಮತ್ತು ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ದುಬೈ (ಪಿಟಿಐ): ಭಾರತ ಟ್ವೆಂಟಿ-20 ಕ್ರಿಕೆಟ್ ತಂಡದ ನಾಯಕತ್ವವನ್ನು ಬಿಟ್ಟುಕೊಟ್ಟು ಬ್ಯಾಟಿಂಗ್‌ನತ್ತ ಗಮನ ಹರಿಸಲು ವಿರಾಟ್ ಕೊಹ್ಲಿ ನಿರ್ಧರಿಸಿದ್ದಾರೆ.

ಮುಂದಿನ ತಿಂಗಳು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ನಂತರ ಅವರು ನಾಯಕತ್ವ ಬಿಡುವುದಾಗಿ ಗುರುವಾರ ಸಂಜೆ ಮಾಡಿರುವ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

'ನಾಯಕನಾಗಿ ಮತ್ತು ಆಟಗಾರನಾಗಿ ತಂಡಕ್ಕೆ ನನ್ನೆಲ್ಲ ಸಾಮರ್ಥ್ಯವನ್ನು ಧಾರೆಯೆರೆದಿದ್ದೇನೆ. ಇನ್ನು ಮುಂದೆಯೂ ಆಟಗಾರನಾಗಿ ಕಾಣಿಕೆ ನೀಡುತ್ತೇನೆ. ಕೋಚ್ ರವಿಶಾಸ್ತ್ರಿ, ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ, ಕಾರ್ಯದರ್ಶಿ ಜಯ್ ಶಾ ಮತ್ತು ರೋಹಿತ್ ಶರ್ಮಾ ಅವರೊಂದಿಗೆ ಈಕುರಿತು ಚರ್ಚಿಸಿ ನಿರ್ಧಾರ ಕೈಗೊಂಡಿದ್ದೇನೆ' ಎಂದೂ ಕೊಹ್ಲಿ ಹೇಳಿದ್ದಾರೆ.

ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಅವರಿಗೆ ನಾಯಕತ್ವದ ಪಟ್ಟ ಕಟ್ಟುವುದು ಬಹುತೇಕ ಖಚಿತವಾಗಿದೆ.

'ಟಿ20 ತಂಡದ ನಾಯಕತ್ವದಿಂದ ಕೆಳಗಿಳಿಯಲು ನಿರ್ಧರಿಸಿದ್ದೇನೆ. ದುಬೈನಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ನಂತರ ಏಕದಿನ ಮತ್ತು ಟೆಸ್ಟ್ ಕ್ರಿಕೆಟ್ ತಂಡಗಳಿಗೆ ಮಾತ್ರ ನಾಯಕನಾಗಿ ಮುಂದುವರಿಯುತ್ತೇನೆ. ಚುಟುಕು ಕ್ರಿಕೆಟ್ ತಂಡದಲ್ಲಿ ಬ್ಯಾಟ್ಸ್‌ಮನ್ ಆಗಿ ಉತ್ತಮ ಕಾಣಿಕೆ ಕೊಡುವ ಪ್ರಯತ್ನ ಮಾಡುತ್ತೇನೆ' ಎಂದು 32 ವರ್ಷದ ವಿರಾಟ್ ಬರೆದಿದ್ದಾರೆ.

'ನಮ್ಮ ಮೇಲಿರುವ ಕೆಲಸದೊತ್ತಡವನ್ನು ಅರಿತುಕೊಳ್ಳುವುದು ಮುಖ್ಯ. ಕಳೆದ 8–9 ವರ್ಷಗಳಿಂದ ಎಲ್ಲ ಮೂರು ಮಾದರಿಗಳಲ್ಲಿ ಆಡುವ ಮತ್ತು ಐದಾರು ವರ್ಷಗಳಿಂದ ನಾಯಕತ್ವ ವಹಿಸುವ ಒತ್ತಡವನ್ನು ನಿಭಾಯಿಸಿದ್ದೇನೆ. ಆದರೆ ಈಗ ನನಗೆ ಸ್ವಲ್ಪ ಬಿಡುವಿನ ಅವಕಾಶ ನೀಡಬೇಕಿದೆ. ಆದ್ದರಿಂದ ಚುಟುಕು ಕ್ರಿಕೆಟ್ ನಾಯಕತ್ವ ಬಿಟ್ಟುಕೊಡುತ್ತಿದ್ದೇನೆ' ಎಂದಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಯಶಸ್ವಿ ನಾಯಕರೆನಿಸಿಕೊಂಡಿರುವ ರೋಹಿತ್ ಶರ್ಮಾ ಅವರನ್ನು ಸೀಮಿತ ಓವರ್‌ಗಳ ಕ್ರಿಕೆಟ್ ತಂಡಗಳಿಗೆ ನಾಯಕರನ್ನಾಗಿ ಮಾಡುವ ಕುರಿತು ಮಾತುಗಳು ಕೆಲವು ತಿಂಗಳುಗಳಿಂದ ಕೇಳಿ ಬರುತ್ತಿದ್ದವು. ಅದರಲ್ಲಿ ಕಳೆದ ಕೆಲವು ತಿಂಗಳುಗಳಿಂದ ವಿರಾಟ್ ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಬ್ಯಾಟಿಂಗ್‌ನಲ್ಲಿ ಹೆಚ್ಚು ಯಶಸ್ಸು ಕಂಡಿಲ್ಲ. ಅಲ್ಲದೇ ಐಸಿಸಿಯ ಟ್ರೋಫಿಗಳನ್ನು ಜಯಿಸುವಲ್ಲಿಯೂ ವಿರಾಟ್ ನಾಯಕತ್ವ ಸಫಲವಾಗಿಲ್ಲ ಎಂಬ ಚರ್ಚೆಗಳು ಕೂಡ ನಡೆದಿದ್ದವು.

'ಕೆಲಸದೊತ್ತಡ ನಿರ್ವಹಣೆಯ ಕುರಿತು ಆಟಗಾರರಿಗೆ ಸ್ಪಷ್ಟ ಮಾರ್ಗಸೂಚಿಯನ್ನು ನೀಡಲಾಗಿದೆ. ಅದರಿಂದಾಗಿ ತಂಡದ ಕಾರ್ಯನಿರ್ವಹಣೆ ಚೆನ್ನಾಗಿರುತ್ತದೆ. ಇದೀಗ ವಿರಾಟ್ ಕೊಹ್ಲಿ ಅವರು ಟಿ20 ತಂಡದ ನಾಯಕತ್ವದಿಂದ ಕೆಳಗಿಳಿಯಲು ನಿರ್ಧರಿಸಿದ್ದಾರೆ. ಅವರೊಂದಿಗೆ ಕಳೆದ ಆರು ತಿಂಗಳುಗಳಿಂದ ತಂಡದ ನಾಯಕತ್ವದ ಕುರಿತು ಮಾತುಕತೆ ನಡೆಸಿದ್ದೇನೆ. ವಿರಾಟ್ ತಂಡದಲ್ಲಿ ಆಟಗಾರನಾಗಿ ಮುಂದುವರಿಯಲಿದ್ದು, ಉತ್ತಮ ಕಾಣಿಕೆ ನೀಡುವ ವಿಶ್ವಾಸವಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏಕದಿನ ನಾಯಕತ್ವ ಉಳಿಯುವುದೇ?: ಭಾರತ ಟಿ20 ತಂಡದ ನಾಯಕತ್ವ ಬಿಡುವುದಾಗಿ ಘೋಷಿಸಿರುವ ವಿರಾಟ್ ಕೊಹ್ಲಿಗೆ ಏಕದಿನ ಕ್ರಿಕೆಟ್ ತಂಡದ ಮುಂದಾಳತ್ವವೂ ಕೈತಪ್ಪುವ ಸಾಧ್ಯತೆ ಇದೆ.

ಗುರುವಾರ ವಿರಾಟ್ ಟ್ವೀಟ್ ಮಾಡಿರುವ ಸಂದೇಶದಲ್ಲಿ ತಾವು ಟೆಸ್ಟ್ ಮತ್ತು 50 ಓವರ್‌ಗಳ ಕ್ರಿಕೆಟ್‌ನಲ್ಲಿ ಮುಂದುವರಿಯುದಾಗಿ ತಿಳಿಸಿದ್ದರು.

'2023ರಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗೂ ಮುನ್ನವೇ ಏಕದಿನ ಕ್ರಿಕೆಟ್‌ನ ಬಿಳಿ ಚೆಂಡು ಕೂಡ ವಿರಾಟ್ ಕೈಜಾರುವ ಸಾಧ್ಯತೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಟಿ20 ನಾಯಕನಾಗಿ ವಿರಾಟ್

ಜಯ	27
ಸೋಲು	14
ಟೈ	2
ಫಲಿತಾಂಶವಿಲ್ಲ	2
ಪಂದ್ಯ	45
ಸರಾಸರಿ	65.11%
ಅವಧಿ	2017-2021

ಬ್ಯಾಟಿಂಗ್ ಸಾಧನೆ

ಅವಧಿ	2010-2021
ಪಂದ್ಯ	90
ರನ್	3,159
ಶ್ರೇಷ್ಠ	94*
ಅರ್ಧಶತಕ	28
ಬೌಂಡರಿ	285
ಸಿಕ್ಸರ್	90
ಸ್ಟ್ರೈಕ್‌ರೇಟ್	139.04



ಅಮೆರಿಕ ಸೆನೆಟ್ ನ್ಯಾಯಾಂಗ ಸಮಿತಿಯ ಮುಂದೆ ಹಾಜರಾದ ಜಿಮ್ನಾಸ್ಟ್‌ಗಳಾದ ಅಲ್ಲೈ ರೈಸ್‌ಮನ್, ಸಿಮೋನ್ ಬೈಲ್ಸ್, ಮೆಕೈಲಾ ಮೆರೊನಿ, ಮತ್ತು ಮ್ಯಾಗಿ ನಿಕೋಲ್ಸ್ –ರಾಯಿಟರ್ಸ್ ಚಿತ್ರ

ಲೈಂಗಿಕ ದೌರ್ಜನ್ಯ: ಎಫ್‌ಬಿಐ ವಿರುದ್ಧ ಹರಿಹಾಯ್ದ ಬೈಲ್ಸ್

ವಾಷಿಂಗ್ಟನ್ (ಎಎಫ್‌ಪಿ): ಒಲಿಂಪಿಕ್ಸ್‌ನಲ್ಲಿ ಕೊರಳ ತುಂಬಾ ಚಿನ್ನದ ಪದಕಗಳನ್ನು ಧರಿಸಿ ನಗುಬೀರುವ ಅಮೆರಿಕದ ಜಿಮ್ನಾಸ್ಟ್ ಸಿಮೋನ್ ಬೈಲ್ಸ್ ಬುಧವಾರ ಮಾತ್ರ ಕ್ರುದ್ಧರಾಗಿದ್ದರು, ಅವರ ದುಃಖದ ಕಟ್ಟೆಯೊಡೆದಿತ್ತು.

ಈ ಹಿಂದೆ ತಮ್ಮ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಘಟನೆಗಳನ್ನು ಸೆನೆಟ್ ನ್ಯಾಯಾಂಗ ಸಮಿತಿಯ ಮುಂದೆ ಎಳೆಎಳೆಯಾಗಿ ಬಿಡಿಸಿಟ್ಟರು.

ತಮ್ಮ ತಂಡದ ವೈದ್ಯ ಲ್ಯಾರಿ ನಾಸರ್ ಮಾಡಿದ ದೌರ್ಜನ್ಯಗಳ ಕುರಿತು ತಾವು ದೂರು ಕೊಟ್ಟಾಗ ಎಫ್‌ಬಿಐ ಅಧಿಕಾರಿಗಳು ಮತ್ತು ಅಮೆರಿಕ ಜಿಮ್ನಾಸ್ಟಿಕ್ಸ್ ಫೆಡರೇಷನ್ ಅಧಿಕಾರಿಗಳು ತೋರಿದ ನಿರ್ಲಕ್ಷ್ಯ ಧೋರಣೆಯ ಬಗ್ಗೆಯೂ ಆಕ್ರೋಶ ವ್ಯಕ್ತಪಡಿಸಿದರು. ಅವರೊಂದಿಗೆ ಇದ್ದ ಮೂವರು ಜಿಮ್ನಾಸ್ಟ್‌ಗಳೂ ತಮ್ಮ ಮೇಲಿನ ದೌರ್ಜನ್ಯದ ಘಟನೆಗಳನ್ನು ಬಹಿರಂಗಪಡಿಸಿದರು.

58 ವರ್ಷದ ಲ್ಯಾರಿ ನಾಸರ್‌ಗೆ 2018ರಲ್ಲಿಯೇ ಜೀವಾವಧಿ ಶಿಕ್ಷೆಯನ್ನು ವಿಧಿಸಿ ಜೈಲಿಗೆ ತಳ್ಳಲಾಗಿದೆ.

ಅಮೆರಿಕ ಜಿಮ್ನಾಸ್ಟಿಕ್ಸ್ ಮತ್ತು ಮಿಷಿಗನ್ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ (ಎಂಎಸ್‌ಯು) ವೈದ್ಯನಾಗಿದ್ದ ಲ್ಯಾರಿ 70ಕ್ಕೂ ಹೆಚ್ಚು ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಮಾಡಿದ್ದ. 2015ರಲ್ಲಿಯೇ ಅಮೆರಿಕ ಜಿಮ್ನಾಸ್ಟಿಕ್ಸ್ ಎಫ್‌ಬಿಐಗೆ ದೂರು ನೀಡಿತ್ತು. ಆದರೂ ನಾಸರ್ ತನ್ನ ಹುದ್ದೆಯಲ್ಲಿ ಮುಂದುವರಿದಿದ್ದ. 2016ರಲ್ಲಿ ಸುದ್ದಿಪತ್ರಿಕೆಯೊಂದು ಆತನ ಕರ್ಮಕಾಂಡಗಳ ಲೇಖನ ಪ್ರಕಟಿಸಿದಾಗ ಎಫ್‌ಬಿಐ ಗಂಭೀರ ಕ್ರಮಕ್ಕೆ ಮುಂದಾಯಿತು.

ಲ್ಯಾರಿಯಿಂದ ದೌರ್ಜನ್ಯಕ್ಕೊಳಗಾಗದ ಪ್ರಮುಖರಲ್ಲಿ ಬೈಲ್ಸ್ ಕೂಡ ಒಬ್ಬರು. ಅವರೊಂದಿಗೆ ಇನ್ನೂ ಮೂವರು ಜಿಮ್ನಾಸ್ಟ್‌ಗಳಾದ ಮೆಕೈಲಾ ಮೆರೊನಿ, ಅಲ್ಲೈ ರೈಸಮನ್ ಮತ್ತು ಮ್ಯಾಗಿ ನಿಕೋಲ್ಸ್ ಕೂಡ ತಮ್ಮ ಹೇಳಿಕೆಗಳನ್ನು ದಾಖಲಿಸಿದರು. ಅವರು ಕೂಡ ಎಫ್‌ಬಿಐ ಕಾರ್ಯವೈಖರಿಯನ್ನು ಖಂಡಿಸಿದರು.

'ನಾವು ದೂರುಗಳನ್ನು ಕೊಟ್ಟಾಗ ಯಾವುದೇ ಉತ್ತರಗಳನ್ನು ಪಡೆಯುವಲ್ಲಿ ಸಫಲರಾಗಿರಲಿಲ್ಲ. ಆದರೆ ಒಂದಂತೂ ಸ್ಪಷ್ಟವಾಗಿದ್ದು ಏನೆಂದರೆ, ನಾನು ಲ್ಯಾರಿಯನ್ನು ಖಂಡಿಸುವಷ್ಟೇ, ಇಡೀ ವ್ಯವಸ್ಥೆಯನ್ನೂ ದೂಷಿಸುತ್ತೇನೆ. ಅವನ ವಿಕೃತ ಕಾರ್ಯಗಳಿಗೆ ಕಡಿವಾಣ ಹಾಕದ ವ್ಯವಸ್ಥೆಗೆ ಧಿಕ್ಕಾರವಿದೆ' ಎಂದು 24 ವರ್ಷದ ಬೈಲ್ಸ್ ಆಕ್ರೋಶ ವ್ಯಕ್ತಪಡಿಸಿದರು.

'ಎಫ್‌ಬಿಐ, ಯುಎಸ್‌ಎಜಿ ಅಥವಾ ಯುಎಸ್‌ಒಪಿಸಿ ನಮ್ಮ ಅಹವಾಲುಗಳಿಗೆ ಸ್ಪಂದಿಸಲಿಲ್ಲ. ಅವರು ಅಗತ್ಯವಾದ ಕ್ರಮಕೈಗೊಳ್ಳದ ಕಾರಣದಿಂದಾಗಿಯೇ ನಾವು ಬಹಳಷ್ಟು ಯಾತನೆ ಅನುಭವಿಸಬೇಕಾಯಿತು' ಎಂದು ಬೈಲ್ಸ್ ಕಣ್ಣೀರು ಹಾಕಿದರು. ಬೈಲ್ಸ್ ಒಲಿಂಪಿಕ್ ಕೂಟಗಳಲ್ಲಿ ಏಳು ಪದಕಗಳನ್ನು ಗೆದ್ದಿರುವ ಜಿಮ್ನಾಸ್ಟ್.

ಇದೇ ಸಂದರ್ಭದಲ್ಲಿ ತಮ್ಮ ಹೇಳಿಕೆಯನ್ನು ದಾಖಲಿಸಿದ 2012ರ ಲಂಡನ್ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಿಮ್ನಾಸ್ಟ್ ಮರೊನಿ, 'ಫೆಡರಲ್ ಬ್ಯುರೊ ಆಫ್ ಇನ್ವೆಸ್ಟಿಗೇಷನ್ ಏಜೆಂಟ್ ಒಬ್ಬರಿಗೆ 2015ರಲ್ಲಿ ದೂರವಾಣಿ ಮೂಲಕ ಮೂರು ತಾಸುಗಳ ಕಾಲ ಮಾತನಾಡಿ ದೂರು ಕೊಟ್ಟಿದ್ದೆ. ಆದರೆ ಆಗ ಪ್ರಕರಣ ದಾಖಲಾಗಲಿಲ್ಲ. 17 ತಿಂಗಳುಗಳ ನಂತರ ದಾಖಲಾಯಿತು. ಅದರಲ್ಲಿ ನನ್ನ ಹೇಳಿಕೆಯನ್ನು ತಿರುಚಲಾಗಿತ್ತು' ಎಂದು ಅವರು ದೂರಿದರು.

'ನಾನು ಆಗಿನ್ನೂ ಬಾಲಕಿ. ಲ್ಯಾರಿ ಅಸಭ್ಯವಾಗಿ ವರ್ತಿಸುತ್ತಿದ್ದ. ಬಾಲಕಿಯರ ಮೇಲೆ ಆತನ ದೌರ್ಜನ್ಯದ ಕುರಿತು ಸಾಕ್ಷಿಗಳನ್ನು ಒದಗಿಸಿದ್ದರೂ ಎಫ್‌ಬಿಐ ಕ್ರಮ ಕೈಗೊಂಡಿರಲಿಲ್ಲ' ಎಂದು 25 ವರ್ಷದ ಮರೊನಿ ಅಸಮಾಧಾನ ವ್ಯಕ್ತಪಡಿಸಿದರು.

'2015ರಲ್ಲಿ ನಾನು ಲ್ಯಾರಿ ವಿರುದ್ಧ ದೂರು ದಾಖಲಿಸಿದ ನಂತರವೂ ಕ್ರಮ ಜರುಗಿಸಲಿಲ್ಲ. ಆದರಿಂದಾಗಿ ಮತ್ತಷ್ಟು ಹೆಣ್ಣುಮಕ್ಕಳು ಆತನ ದೌರ್ಜನ್ಯಕ್ಕೆ ತುತ್ತಾಗಬೇಕಾಯಿತು. ಅಮೆರಿಕ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ ಸಮಿತಿಯು ನಮಗೆ ದ್ರೋಹ ಬಗೆಯಿತು' ಎಂದು 2015ರ ವಿಶ್ವ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ ಚಾಂಪಿಯನ್‌ಷಿಪ್ ಚಿನ್ನದ ಪದಕ ವಿಜೇತ ಜಿಮ್ನಾಸ್ಟ್ ಮ್ಯಾಗಿ ನಿಕೋಲ್ಸ್ ದೂರಿದರು.

2012 ಮತ್ತು 2016ರಲ್ಲಿ ಅಮೆರಿಕ ಒಲಿಂಪಿಕ್ ತಂಡಗಳ ನಾಯಕಿಯಾಗಿದ್ದ ರೈಸ್‌ಮನ್ ಕೂಡ ಈ ಸಂದರ್ಭದಲ್ಲಿ ಹೇಳಿಕೆ ದಾಖಲಿಸಿದರು.

'ಆತನ ಮೇಲೆ ಕ್ರಮ ಕೈಗೊಳ್ಳುವುದನ್ನು ವಿಳಂಬ ಮಾಡಿದ್ದು, ಮುಗ್ಧ ಮಕ್ಕಳ ಮೇಲೆ ದೌರ್ಜನ್ಯ ಎಸಗಲು ವಿಕೃತಕಾಮಿಯೊಬ್ಬನಿಗೆ ಬೆಳ್ಳಿತಟ್ಟೆಯ ಔತಣ ಕೂಟ ನೀಡಿದಂತಾಯಿತು' ಎಂದು ರೈಸ್‌ಮನ್ ಹೇಳಿದರು.

ಕ್ಷಮೆ ಕೋರಿದ ಎಫ್‌ಬಿಐ ನಿರ್ದೇಶಕ

ಇದೇ ಸಂದರ್ಭದಲ್ಲಿ ಸೆನೆಟ್ ಮುಂದೆ ಹಾಜರಾಗಿದ್ದ ಎಫ್‌ಬಿಐ ನಿರ್ದೇಶಕ ಕ್ರಿಸ್ಟೋಫರ್ ವೆರಿ, 'ನಿಮ್ಮನ್ನೆಲ್ಲ ಪದೇ ಪದೇ ಅವಮಾನಿಸಿದ ಎಫ್‌ಬಿಐ ವ್ಯವಸ್ಥೆಯ ತಪ್ಪಿಗೆ ನಾನು ಕ್ಷಮೆಯಾಚಿಸುತ್ತೇನೆ. ಸಂಸ್ಥೆಯ ನಿರ್ಲಕ್ಷ್ಯ ಧೋರಣೆಯಿಂದಾಗಿ ಲ್ಯಾರಿ ತನ್ನ ಪೈಶಾಚಿಕ ಕೃತ್ಯಗಳನ್ನು ಮಾಡಲು ಸಾಧ್ಯವಾಯಿತು. 2015ರಲ್ಲಿಯೇ ಗಂಭೀರ ಕ್ರಮಕೈಗೊಂಡು ಮಟ್ಟ ಹಾಕಿದ್ದರೆ ನಂತರದ ವರ್ಷಗಳಲ್ಲಿ ಮುಗ್ಧರನ್ನು ಕಾಪಾಡಬಹುದಿತ್ತು' ಎಂದರು.

ಈ ಪ್ರಕರಣದಲ್ಲಿ ನಿರ್ಲಕ್ಷ್ಯ ತೋರಿದ್ದ ಅಧಿಕಾರಿಯನ್ನು ಆಗಲೇ ವಜಾ ಮಾಡಲಾಗಿತ್ತು ಎಂದೂ ಕ್ರಿಸ್ಟೋಫರ್ ಹೇಳಿದರು.

ಸ್ಕೈ ಸ್ಪೋರ್ಟ್ಸ್‌ನಲ್ಲಿ ಕಾರ್ಯನಿರ್ವಹಣೆ


ಹೋಲ್ಡಿಂಗ್ 60 ಟೆಸ್ಟ್ ಮತ್ತು 102 ಏಕದಿನ ಪಂದ್ಯಗಳಲ್ಲಿ ಆಡಿದ್ದರು. ಒಟ್ಟು 391 ಅಂತರರಾಷ್ಟ್ರೀಯ ವಿಕೆಟ್‌ಗಳು ಅವರ ಖಾತೆಯಲ್ಲಿವೆ.

ವೀಕ್ಷಕ ವಿವರಣೆಯಿಂದ ಹೋಲ್ಡಿಂಗ್ ನಿವೃತ್ತಿ

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್ ಮಾಜಿ ಕ್ರಿಕೆಟಿಗ ಮೈಕೆಲ್ ಹೋಲ್ಡಿಂಗ್ ವೀಕ್ಷಕ ವಿವರಣೆಗೆ ವಿದಾಯ ಘೋಷಿಸಿದ್ದಾರೆ.

66 ವರ್ಷದ ಹೋಲ್ಡಿಂಗ್ ಸ್ಕೈ ಸ್ಪೋರ್ಟ್ಸ್‌ನ ಕಾಮೆಂಟ್ರಿ ಪ್ಯಾನಲ್‌ನಲ್ಲಿ ಎರಡು ದಶಕಗಳಿಗೂ ಹೆಚ್ಚು ಸಮಯದಿಂದ ಇದ್ದರು.

ಇತ್ತೀಚೆಗೆ ಇಂಗ್ಲೆಂಡ್ ಮತ್ತು ಭಾರತ ತಂಡಗಳ ನಡುವಣ ಟೆಸ್ಟ್ ಸರಣಿಯಲ್ಲಿಯೂ ಅವರು ವೀಕ್ಷಕ ವಿವರಣೆ ನೀಡಿದ್ದರು.



ಮೈಕೆಲ್ ಹೋಲ್ಡಿಂಗ್

ವಿಶ್ವದ ಎಲ್ಲ ತಂಡಗಳ ದಿಗ್ಗಜ ಬ್ಯಾಟ್ಸ್‌ಮನ್‌ಗಳಿಗೆ ನಡುಕ ಮೂಡಿಸಿದ್ದ ವೆಸ್ಟ್ ಇಂಡೀಸ್ ತಂಡದ ಮಾಜಿ ವೇಗಿ ಕಾಮೆಂಟ್ರಿಯಲ್ಲಿಯೂ ಬಹಳಷ್ಟು ಜನಪ್ರಿಯತೆ ಗಳಿಸಿದ್ದಾರೆ. ತಮ್ಮ ನೇರ, ನಿಷ್ಠುರ ಹೇಳಿಕೆಗಳಿಂದ ಚರ್ಚೆಗಳನ್ನೂ ಹುಟ್ಟುಹಾಕಿದ್ದಾರೆ. ಅದರಲ್ಲೂ ಕ್ರೀಡೆಯಲ್ಲಿ ಜನಾಂಗೀಯ ನಿಂದನೆಗಳ ವಿರುದ್ಧ ಸದಾ ದನಿ ಎತ್ತಿದ್ದಾರೆ. ಇತ್ತೀಚೆಗೆ ಬ್ಲ್ಯಾಕ್ ಲೈವ್ಸ್ ಮ್ಯಾಟರ್ ಪ್ರತಿಭಟನೆಗಳ ಸಂದರ್ಭದಲ್ಲಿ ಅವರ ಭಾಷಣಗಳು ಗಮನಸೆಳೆದಿದ್ದವು.

'ಈಗ ಮೊದಲಿನಂತೆ ಹೆಚ್ಚೆಚ್ಚು ಪ್ರಯಾಣ ಮಾಡುವುದು ಸಾಧ್ಯವಾಗುತ್ತಿಲ್ಲ. ನನಗೀಗ 66 ವರ್ಷ. 36, 46 ಅಥವಾ 56 ಅಲ್ಲ. 2020ರ ನಂತರ ಕಾಮೆಂಟ್ರಿ ಮಾಡುವುದು ನನ್ನಿಂದ ಸಾಧ್ಯವಾಗಲಿಕ್ಕಿಲ್ಲ' ಎಂದು ಹೋದ ವರ್ಷವೇ ಹೋಲ್ಡಿಂಗ್ ಹೇಳಿದ್ದರು.

1991ರಲ್ಲಿ ಕ್ರಿಕೆಟ್ ಕಾಮೆಂಟ್ರಿ ಮಾಡಲು ಆರಂಭಿಸಿದ್ದರು.

'ಸ್ಕೈ ಸ್ಪೋರ್ಟ್ಸ್‌ನವರಿಗೆ ಮೊದಲೇ ಹೇಳಿದ್ದೆ. 2020ರಲ್ಲಿ ನಿಗದಿತ ಟೂರ್ನಿಗಳು ನಡೆಯದಿದ್ದರೆ, ನನ್ನ ಪಾಲಿನ ಕೋಟಾವನ್ನು ಮುಂದಿನ ವರ್ಷದಲ್ಲಿ ಮಾಡುವ ಬಗ್ಗೆ ಯೋಚಿಸುತ್ತೇನೆ ಎಂದಿದ್ದೆ. ನನಗೆ ಬಹಳಷ್ಟು ಉಪಕಾರ ಮತ್ತು ಬೆಂಬಲ ನೀಡಿರುವ ಈ ಸಂಸ್ಥೆಯಿಂದ ಹಾಗೆಯೇ ಹೊರನಡೆಯಲು ಸಾಧ್ಯವಿಲ್ಲ' ಎಂದರು.

1987ರಲ್ಲಿ ಹೋಲ್ಡಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದರು.

ಏಷ್ಯನ್ ಸ್ನೂಕರ್: ಪ್ರಶಸ್ತಿ ಗೆದ್ದ ಪಂಕಜ್

ದೋಹಾ (ಪಿಟಿಐ): ಎರಡು ವರ್ಷದ ಬಳಿಕ ಆಡಿದ ಕರ್ನಾಟಕದ ತಾರೆ ಪಂಕಜ್ ಅಡ್ವಾಣಿ ಏಷ್ಯನ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದರು.

2019ರಲ್ಲಿ ಏಷ್ಯನ್ ಕಿರೀಟ ಧರಿಸಿದ್ದ ಪಂಕಜ್, ಫೈನಲ್ ಪಂದ್ಯದಲ್ಲಿ ಗುರುವಾರ 6–3ಫ್ರೇಮ್‌ಗಳಿಂದ ಇರಾನ್‌ನ ಅಮೀರ್ ಸರ್ಕೋಶ್ ಅವರನ್ನು ಮಣಿಸಿದರು.

ಪಂಕಜ್‌ಗೆ 72(55)-42, 72(50)-0, 70-49, 41-66, 70-17, 30-68, 34-74, 50-12, 64(63)-44ರಿಂದ ಗೆಲುವು ಒಲಿಯಿತು.

ಕೋವಿಡ್ ಪಿಡುಗಿನ ಹಿನ್ನೆಲೆಯಲ್ಲಿ 2020ರ ಟೂರ್ನಿ ನಡೆದಿರಲಿಲ್ಲ.

ಸ್ನೂಕರ್ ಹಾಗೂ ಬಿಲಿಯರ್ಡ್ಸ್ ಎರಡೂ ಸೇರಿ ಏಷ್ಯನ್ ಟೂರ್ನಿಗಳಲ್ಲಿ ಅವರು ಗೆದ್ದ ಪ್ರಶಸ್ತಿಗಳ ಸಂಖ್ಯೆ 11ಕ್ಕೆ ತಲುಪಿತು. ಇದಲ್ಲದೆ 2006 ಮತ್ತು 2010ರ ಏಷ್ಯನ್ ಗೇಮ್ಸ್‌ಗಳಲ್ಲಿ ಅವರು ಚಿನ್ನದ ಪದಕಗಳನ್ನು ಗೆದ್ದಿದ್ದರು.

'ಪ್ರಶಸ್ತಿ ಉಳಿಸಿಕೊಂಡಿರುವುದಕ್ಕೆ ಖುಷಿಯಾಗಿದೆ. ಎರಡು ವರ್ಷಗಳ ಕೋವಿಡ್ ವಿರಾಮವು, ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿ ಗೆಲ್ಲುವ ಹಸಿವು ಹೆಚ್ಚಿಸಲು ಕಾರಣವಾಯಿತು' ಎಂದು ಪಂಕಜ್ ಹೇಳಿದ್ದಾರೆ.



ಪ್ರಶಸ್ತಿಯೊಂದಿಗೆ ಪಂಕಜ್ ಅಡ್ವಾಣಿ– ಟ್ವಿಟರ್ ಚಿತ್ರ

'ಡೆಲ್ಲಿಗೆ ಶುಭಾರಂಭದ ನಿರೀಕ್ಷೆ'

ದುಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಮೊದಲಾರ್ಧದಲ್ಲಿ ನಾವೇನು ಸಾಧನೆ ಮಾಡಿದ್ದೆವು ಎನ್ನುವುದು ಮುಖ್ಯವಲ್ಲ. ಮುಂದಿನ ಹಂತದಲ್ಲಿ ಮಾಡುವ ಸಾಧನೆಯೇ ಮಹತ್ವದ್ದಾಗಿದೆ ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮುಖ್ಯ ಕೋಚ್ ರಿಕಿ ಪಾಂಟಿಂಗ್ ಹೇಳಿದ್ದಾರೆ.

ಭಾನುವಾರ 14ನೇ ಆವೃತ್ತಿಯ ಐಪಿಎಲ್ ಟೂರ್ನಿಯ ದ್ವಿತೀಯಾರ್ಧದ ಟೂರ್ನಿಯು ಆರಂಭವಾಗಲಿದೆ. ಕಳೆದ ಏಪ್ರಿಲ್–ಮೇನಲ್ಲಿ ಭಾರತದಲ್ಲಿ ಆಯೋಜನೆಗೊಂಡಿದ್ದ ಟೂರ್ನಿಯಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗಿದ್ದರಿಂದ ಅರ್ಧಕ್ಕೆ ನಿಲ್ಲಿಸಲಾಗಿತ್ತು. ಇದೀಗ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ನಲ್ಲಿ ಟೂರ್ನಿಯ ಉಳಿದ ಭಾಗವು ನಡೆಯಲಿದೆ.

'ಮೊದಲಾರ್ಧದ ಟೂರ್ನಿ ನಡೆದು ನಾಲ್ಕು ತಿಂಗಳುಗಳು ಗತಿಸಿವೆ. ಈ ಅವಧಿಯಲ್ಲಿ ಒಂದಿಷ್ಟು ಉತ್ತಮ ಕ್ರಿಕೆಟ್ ಆಡುವ ಅವಕಾಶ ಆಟಗಾರರಿಗೆ ಲಭಿಸಿದೆ. ಆದ್ದರಿಂದ ಈಗ ಉತ್ತಮ ಆರಂಭ ಮಾಡುವ ಭರವಸೆ ಇದೆ' ಎಂದು ಪಾಂಟಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಿಕಿ ಪಾಂಟಿಂಗ್– ಎಎಫ್‌ಪಿ ಚಿತ್ರ



ರಿಷಭ್ ಪಂತ್

ಡೆಲ್ಲಿ ತಂಡವು ಮೊದಲಾರ್ಧದ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. 8 ಪಂದ್ಯ ಆಡಿ ಆರರಲ್ಲಿ ಗೆದ್ದಿದೆ.

'ಈ ಬಾರಿಯ ಪೂರ್ವಸಿದ್ಧತಾ ಶಿಬಿರದಲ್ಲಿ ತಂಡದ ಆಟಗಾರರು ಉತ್ತಮ ಸಾಮರ್ಥ್ಯ ತೋರಿದ್ದಾರೆ. ಅಲ್ಲದೇ ತಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಲು ಉತ್ಸುಕರಾಗಿದ್ದಾರೆ. ತಂಡದೊಂದಿಗೆ ಕಾರ್ಯನಿರ್ವಹಿಸಲು ಹರ್ಷವೆನಿಸುತ್ತಿದೆ' ಎಂದು ಆಸ್ಟ್ರೇಲಿಯಾ ತಂಡದ ಮಾಜಿ ನಾಯಕ ಪಾಂಟಿಂಗ್ ಅಭಿಪ್ರಾಯಪಟ್ಟಿದ್ದಾರೆ.


ಪಂತ್ ನಾಯಕ: ಡೆಲ್ಲಿ ತಂಡವನ್ನು ಐಪಿಎಲ್‌ನ ಉಳಿದರ್ಧ ಭಾಗದಲ್ಲಿ ರಿಷಭ್ ಪಂತ್ ಅವರೇ ನಾಯಕನಾಗಿ ಮುನ್ನಡೆಸಲಿದ್ದಾರೆ. ಫ್ರಾಂಚೈಸ್ ಈ ಕುರಿತು ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಚಾಹಲ್‌ಗೆ ಶ್ರೇಷ್ಠ ಸಾಮರ್ಥ್ಯ ತೋರುವ ಛಲ

ದುಬೈ: ಯುಎಇನಲ್ಲಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟ್ವೆಂಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಅತ್ಯುತ್ತಮ ಸಾಮರ್ಥ್ಯ ತೋರುವ ಗುರಿಯಿಟ್ಟುಕೊಂಡಿರುವೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಸ್ಪಿನ್ನರ್ ಯಜುವೇಂದ್ರ ಚಾಹಲ್ ಹೇಳಿದ್ದಾರೆ. ಟೂರ್ನಿಗಾಗಿ ಅಭ್ಯಾಸ ನಡೆಸುವ ವೇಳೆ ಅವರು ಮಾತನಾಡಿದರು.

ಮುಂಬರುವ ಟ್ವೆಂಟಿ-20 ವಿಶ್ವಕಪ್ ಟೂರ್ನಿಗೆ ಆಯ್ಕೆ ಮಾಡಲಾಗಿರುವ ಭಾರತ ತಂಡದಲ್ಲಿ ಚಾಹಲ್ ಇಲ್ಲ.

'ನಾನು ಉತ್ಸಾಹಿತನಾಗಿದ್ದೇನೆ. ವಿಶೇಷವಾಗಿ ಪಾಯಿಂಟ್ಸ್ ಪಟ್ಟಿಯಲ್ಲಿ ನಾವು (ಆರ್‌ಸಿಬಿ) ಮೂರನೇ ಸ್ಥಾನದಲ್ಲಿದ್ದು, ಇದೇ ರೀತಿಯ ಆಟ ಮುಂದುವರಿಸಿದರೆ ನಮಗೆ ಉತ್ತಮ ಅವಕಾಶವಿದೆ. ಅತ್ಯುತ್ತಮವಾಗಿ ಬೌಲಿಂಗ್ ಮಾಡಿದಾಗ ಒಳ್ಳೆಯ ಭಾವ ಮೂಡುತ್ತದೆ. 'ಯುಜಿ ಈಸ್ ಬ್ಯಾಕ್' ಎಂದಿದ್ದಾರೆ.



ಯಜುವೇಂದ್ರ ಚಾಹಲ್ – ಪಿಟಿಐ ಚಿತ್ರ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಟೆನಿಸ್ : ಫೈನಲ್‌ಗೆ ಸೆಹಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿನ್ನಡೆಯಿಂದ ಚೇತರಿಸಿಕೊಂಡು ಮುನ್ನಡೆದ ಸೆಹಜ್ ಸಿಂಗ್ ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಫೈನಲ್‌ಗೆ ಕಾಲಿಟ್ಟರು.

ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಗುರುವಾರ ಸೆಹಜ್ 4-6, 6-1, 7-6 (3) ರಿಂದ ಆರಾಧ್ಯ ದ್ವಿವೇದಿ ಅವರನ್ನು ಮಣಿಸಿದರು. ಫೈನಲ್‌ನಲ್ಲಿ ಸೆಹಜ್ ಅವರು ಲಿತಾಯಿಶ್ ಎದುರು ಆಡಲಿದ್ದಾರೆ.

ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಲಿತಾಯಿಶ್ 6-3, 4-6, 6-3ರಿಂದ ಅಭ್ರದೀಪ್ ಅವರನ್ನು ಮಣಿಸಿದರು.

ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಜಯದ ಓಟ ಮುಂದುವರಿಸಿದ ಕಾಶ್ವಿ ಸುನಿಲ್ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟರು. ಸೆಮಿಫೈನಲ್‌ನಲ್ಲಿ ಅವರು 6-2, 4-6, 6-0ರಿಂದ ಶ್ರೀನಿಧಿ ಚೌಧರಿ ಎದುರು ಜಯ ಸಾಧಿಸಿದರು.

ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಸುಶ್ಮಿತಾ ರವಿ 6-1, 6-4ರಿಂದ ಸಾನ್ವಿ ಮಿಶ್ರಾ ಅವರನ್ನು ಮಣಿಸಿದರು.



ಸೆಹಜ್ ಸಿಂಗ್ ಆಟದ ವೈಖರಿ

ಡೇವಿಸ್ ಕಪ್ ಟೆನಿಸ್: ಫಿನ್ಲೆಂಡ್ ಎದುರಿನ ಪಂದ್ಯ

ಗೆಲುವಿನ ವಿಶ್ವಾಸದಲ್ಲಿ ಭಾರತ

ಎಸ್ಪೊ, ಫಿನ್ಲೆಂಡ್ (ಪಿಟಿಐ): ಭಾರತ ತಂಡವು ಡೇವಿಸ್ ಕಪ್ ಟೂರ್ನಿಯ ವಿಶ್ವ ಗುಂಪು ಒಂದರ ಪಂದ್ಯದಲ್ಲಿ ಫಿನ್ಲೆಂಡ್ ಸವಾಲಿಗೆ ಸಜ್ಜಾಗಿದೆ. ಶುಕ್ರವಾರ ಆರಂಭವಾಗುವ ಪಂದ್ಯದಲ್ಲಿ ಬಲಿಷ್ಠ ಆತಿಥೇಯ ತಂಡವನ್ನು ಎದುರಿಸಲು ಸಿಂಗಲ್ಸ್ ವಿಭಾಗದ ಆಟಗಾರರು ಆಕ್ರಮಣಕಾರಿ ಆಟ ತೋರಬೇಕಿದೆ.

ಪ್ರಜ್ಞೇಶ್ ಗುಣೇಶ್ವರನ್ ಮತ್ತು ರಾಮ್‌ಕುಮಾರ್ ರಾಮನಾಥನ್ ಅವರು ಮಹತ್ವದ ಪಂದ್ಯಗಳನ್ನು ಆಡಿದ ಅನುಭವ ಹೊಂದಿದ್ದಾರೆ. ವಿಶ್ವದ ಪ್ರಮುಖ ಆಟಗಾರರನ್ನು ಎದುರಿಸಿ ಉತ್ತಮ ಪೈಪೋಟಿ ನೀಡಿರುವ ಅವರು ಈಗ ಇನ್ನಷ್ಟು ಮುಂದೆ ಸಾಗುವ ಸಮಯ ಬಂದಿದೆ. ಇಲ್ಲಿ ಅವರು ಶ್ರೇಷ್ಠ ಸಾಮರ್ಥ್ಯ ತೋರಿದರೆ ಭಾರತಕ್ಕೆ ಮುಂದಿನ ವರ್ಷದ ಅರ್ಹತಾ ಪಂದ್ಯಗಳಿಗೆ ರಹದಾರಿ ಸಿಗಲಿದೆ.

ದೇಶದ ಎರಡನೇ ರ‍್ಯಾಂಕಿನ ಆಟಗಾರನಾಗಿರುವ ರಾಮ್‌ಕುಮಾರ್ ಮೊದಲ ದಿನ ಫಿನ್ಲೆಂಡ್‌ನ ಅಗ್ರ ಕ್ರಮಾಂಕದ ಎಮಿಲ್ ರುಸುವೊರಿ ವಿರುದ್ಧ ಕಣಕ್ಕಿಳಿಯಲಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ 165ನೇ ಸ್ಥಾನದಲ್ಲಿರುವ ಪ್ರಜ್ಞೇಶ್ ಅವರು ಒಟ್ಟೊ ವಿರ್ಟಾನೆನ್ (419ನೇ ಕ್ರಮಾಂಕ) ಅವರನ್ನು ಎದುರಿಸುವ ಸಾಧ್ಯತೆಯಿದೆ.

ಲಿಯಾಂಡರ್ ಪೇಸ್ ಮತ್ತು ಮಹೇಶ್ ಭೂಪತಿ ಅವರು ಆಡುವ ಸಂದರ್ಭದಲ್ಲಿ ಭಾರತದ ಜೇಬಿಗೆ ಡಬಲ್ಸ್ ಪಾಯಿಂಟ್ಸ್ ಖಚಿತ ಎನ್ನುವ ಸ್ಥಿತಿಯಿತ್ತು. ಆದರೆ ಈಗ ಹಾಗಿಲ್ಲ.



ರೋಹನ್ ಬೋಪಣ್ಣ (ಎಡ) ಹಾಗೂ ದಿವಿಜ್ ಶರಣ್ – ಪಿಟಿಐ ಚಿತ್ರ

> **ಪರಿಸ್ಥಿತಿ ಸಂಪೂರ್ಣವಾಗಿ ಆತಿಥೇಯರ ಪರವಾಗಿಲ್ಲ. ಅಂಗಣದಲ್ಲಿ ಚೆಂಡು ಹೆಚ್ಚು ಬೌನ್ಸ್ ಆಗದ ಕಾರಣ ನಮ್ಮ ಆಟಗಾರರಿಗೆ ಅನುಕೂಲ ಆಗಲಿದೆ.**
> **ರೋಹಿತ್ ರಾಜ್‌ಪಾಲ್**
> ಭಾರತ ತಂಡದ ನಾಯಕ

ಡಬಲ್ಸ್‌ನಲ್ಲಿ ಕಣಕ್ಕಿಳಿಯುತ್ತಿರುವ ಕನ್ನಡಿಗ ರೋಹನ್ ಬೋಪಣ್ಣ–ದಿವಿಜ್ ಶರಣ್ ಜೋಡಿ ಮೊದಲ ಹಣಾಹಣಿಯಲ್ಲಿ ಹೆನ್ರಿ ಕೊಂಟಿನೆನ್ ಮತ್ತು ಹ್ಯಾರಿ ಹೆಲಿವೊವಾರ ಅವರನ್ನು ಎದುರಿಸಲಿದೆ. ಈ ಜೋಡಿ ಜೊತೆಯಾಗಿ 2019 ಮಾರ್ಚ್‌ನಲ್ಲಿ ಇಟಲಿ ಎದುರು ಕೇವಲ ಒಂದು ಪಂದ್ಯದಲ್ಲಿ ಮಾತ್ರ ಆಡಿದ್ದಾರೆ. ಹೀಗಾಗಿ ಹೊಂದಾಣಿಕೆಯ ಅಗತ್ಯವಿದೆ.

ತಂಡದ ಆಟವಾಡದ ನಾಯಕ ರೋಹಿತ್ ರಾಜ್‌ಪಾಲ್ ಅವರು ಬೋಪಣ್ಣ ಅವರಿಗೆ ಜೊತೆಯಾಗಿ ಶರಣ್ ಅವರನ್ನು ಕಣಕ್ಕಿಳಿಸುತ್ತಾರೊ ಅಥವಾ ತಂಡದ ಐದನೇ ಸದಸ್ಯರಾಗಿರುವ ಸಾಕೇತ್ ಮೈನೇನಿ ಅವರಿಗೆ ಅವಕಾಶ ನೀಡುತ್ತಾರೊ ಕಾದುನೋಡಬೇಕಿದೆ.

ವಿಶ್ವ ಟಿಟಿ ಕಂಟೆಂಡರ್ ಟೂರ್ನಿ: ಬೆಳ್ಳಿ ಗೆದ್ದ ಕರ್ನಾಟಕದ ಯಶಸ್ವಿನಿ

ಭಾರತದ ಆಟಗಾರ್ತಿಯರ ಪದಕ ಬೇಟೆ

ನವದೆಹಲಿ (ಪಿಟಿಐ): ಶ್ರೇಷ್ಠ ಸಾಮರ್ಥ್ಯ ತೋರಿದ ಭಾರತದ ಆಟಗಾರ್ತಿಯರು ಟ್ಯೂನಿಷಿಯಾದ ಟ್ಯುನಿಸ್‌ನಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಕಂಟೆಂಡರ್ ಟೂರ್ನಿಯಲ್ಲಿ ಚಿನ್ನದ ಪದಕಗಳನ್ನು ಬಾಚಿಕೊಂಡರು.

ಟೂರ್ನಿಯಲ್ಲಿ ಲಭ್ಯವಿದ್ದ ಎಲ್ಲ ಚಿನ್ನದ ಪದಕಗಳು ಅಲ್ಲದೆ ಕೆಲವು ಬೆಳ್ಳಿ ಮತ್ತು ಕಂಚಿನ ಪದಕಗಳೂ ಭಾರತದವರ ಪಾಲಾದವು.

19 ವರ್ಷದೊಳಗಿನವರ ವಿಭಾಗದಲ್ಲಿ ಸ್ವಸ್ತಿಕಾ ಘೋಷ್, ಯಶಸ್ವಿನಿ ಘೋರ್ಪಡೆ (17 ವರ್ಷದೊಳಗಿನವರು), ಸುಹಾನಾ ಸೈನಿ (15 ವರ್ಷದೊಳಗಿನವರು), ಹಸ್ನಿನಿ ರಾಜನ್ (13 ವರ್ಷದೊಳಗಿನವರು) ಮತ್ತು ಧಾನಿ ಜೈನ್ (11 ವರ್ಷದೊಳಗಿನವರು) ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ಭಾರತದ ಸ್ಪರ್ಧಿಗಳೇ ಇದ್ದ 19 ವರ್ಷದೊಳಗಿನವರ ಫೈನಲ್‌ನಲ್ಲಿ ಸ್ವಸ್ತಿಕಾ ಘೋಷ್ 6-11 11-6 6-11 11-6 11-8ರಿಂದ ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರನ್ನು ಮಣಿಸಿದರು. ಇದಕ್ಕೂ ಮೊದಲು ಯಶಸ್ವಿನಿ 17 ವರ್ಷದೊಳಗಿನವರ ವಿಭಾಗದಲ್ಲಿ ಈಜಿಪ್ಟ್‌ನ ಫರೀದಾ ಬಾದವಿ ಎದುರು 11-6 14-12 11-7ರಿಂದ ಗೆದ್ದು ಅಗ್ರಸ್ಥಾನ ಗಳಿಸಿದ್ದರು.

15 ವರ್ಷದೊಳಗಿನವರ ವಿಭಾಗದ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಸುಹಾನಾ 11-3, 9-11, 11-8, 9-11, 11-7ರಿಂದ ಭಾರತದವರೇ ಆದ ಪ್ರೀತಾ ವರ್ತಿಕರ್ ಸವಾಲು ಮೀರಿದರು. ಸುಹಾನಾ ಅವರಿಗೆ ಇದು ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಎರಡನೇ ಚಿನ್ನ. ಸ್ಲೊವೇನಿಯಾ ನಿವಾಸಿಯಾಗಿದ್ದ ವೇಳೆ ಅವರು ಟೂರ್ನಿಯೊಂದರಲ್ಲಿ ಅಗ್ರಸ್ಥಾನ ಗಳಿಸಿದ್ದರು.

ಹಸ್ನಿನಿ ರಾಜನ್ 13 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ಭಾರತದವರೇ ಆದ ಪ್ರೀಶಾ ಗೋಯಲ್ ಎದುರು 11-5 11-8 11-8ರಿಂದ ಜಯಭೇರಿ ಮೊಳಗಿಸಿದರು. ಜಿದ್ದಾಜಿದ್ದಿನ ಪೈಪೋಟಿ ಕಂಡುಬಂದ 11 ವರ್ಷದೊಳಗಿನವರ ವಿಭಾಗದಲ್ಲಿ ಧಾನಿ 11-4 11-6 9-11 10-12 11-7ರಿಂದ ಭಾರತದ ಅನನ್ಯಾ ಮುರಳೀಧರನ್ ಎದುರು ಗೆದ್ದು ಸಂಭ್ರಮಿಸಿದರು.

ಇದಕ್ಕೂ ಮೊದಲು ನಡೆದ 19 ವರ್ಷದೊಳಗಿನವರ ಸೆಮಿಫೈನಲ್ ಪಂದ್ಯಗಳಲ್ಲಿ ಯಶಸ್ವಿನಿ ಅವರು ನಿತ್ಯಾಶ್ರೀ ಮಣಿ ಎದುರು 9-11 11-4 11-8 11-5ರಿಂದ, ಸ್ವಸ್ತಿಕಾ 11-4 10-12 11-8 11-7ರಿಂದ ಲಕ್ಷಿತಾ ನಾರಂಗ್ ಎದುರು ಜಯಿಸಿದ್ದರು. ನಿತ್ಯಶ್ರೀ ಹಾಗೂ ಲಕ್ಷಿತಾ ಕಂಚಿನ ಪದಕ ಗಳಿಸಿದರು.

15 ವರ್ಷದೊಳಗಿನವರ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ ಸಯಲಿ ವಾಣಿ 7-11 10-12 11-13ರಿಂದ ಸುಹಾನಾ ಎದುರು ಸೋತು ಕಂಚು ತಮ್ಮದಾಗಿಸಿಕೊಂಡಿದ್ದರು.


ಯಶಸ್ವಿನಿ ಘೋರ್ಪಡೆ– ಪ್ರಜಾವಾಣಿ ಸಂಗ್ರಹ ಚಿತ್ರ


ಸ್ವಸ್ತಿಕಾ ಘೋಷ್– ಪಿಟಿಐ ಚಿತ್ರ

ಕ್ರಿಕೆಟ್: ಕರ್ನಾಟಕ ತಂಡಕ್ಕೆ ಚಾಂದಸಿ ನಾಯಕಿ

ಬೆಂಗಳೂರು: ಬಿಸಿಸಿಐ 19 ವರ್ಷದೊಳಗಿನ ಮಹಿಳೆಯರ ಕ್ರಿಕೆಟ್ ಟೂರ್ನಿಗೆ ಕರ್ನಾಟಕ ತಂಡವನ್ನು ಗುರುವಾರ ಪ್ರಕಟಿಸಲಾಗಿದೆ. ಜೈಪುರದಲ್ಲಿ ಇದೇ 28ರಿಂದ ಅಕ್ಟೋಬರ್ 4ರವರೆಗೆ ನಡೆಯುವ ಟೂರ್ನಿಯಲ್ಲಿ ರಾಜ್ಯ ತಂಡವನ್ನು ಚಾಂದಸಿ ಕೃಷ್ಣಮೂರ್ತಿ ಮುನ್ನಡೆಸಲಿದ್ದಾರೆ.

ತಂಡ: ಚಾಂದಸಿ ಕೃಷ್ಣಮೂರ್ತಿ (ನಾಯಕಿ), ರೋಶಿನಿ ಕಿರಣ್ (ಉಪನಾಯಕಿ), ಕೃಷಿಕಾ ರೆಡ್ಡಿ, ಪೂಜಾ ಧನಂಜಯ್, ರಕ್ಷಿತಾ ನಾಯಕ, ಮಿಥಿಲಾ ವಿನೋದ್, ಸ್ನೇಹಾ ಜಗದೀಶ್, ಪೂಜಾ ಕುಮಾರಿ ಎಂ, ಪ್ರೇರಣಾ ಜಿ.ಆರ್, ಸೌಮ್ಯಾ ವರ್ಮಾ, ಸವಿ ಸುರೇಂದ್ರ, ರೀಮಾ ಫರೀದ್, ನಿರ್ಮಿತಾ ಸಿ.ಜೆ, ರೋಹಿತಾ ಚೌಧರಿ ಪಿ, ನಗ್ಮಾ ಉನ್ನೀಸಾ, ಅನ್ನಪೂರ್ಣಾ ಬಿ. ಭೋಸ್ಲೆ, ಸಲೋನಿ ಪಿ, ಹರ್ಷಿತಾ ಶೇಖರ್, ಅನುಶ್ರೀ ಸಮಗೊಂಡ. ಕೋಚ್: ಲಕ್ಷ್ಮಿ ಹರಿಹರನ್, ಸಹಾಯಕ ಕೋಚ್ ಮತ್ತು ವ್ಯವಸ್ಥಾಪಕ: ರಾಖಿ ಗಂಗಲ್, ಫಿಜಿಯೊ: ಸಲೋನಿ ಅಗರವಾಲ್, ಟ್ರೇನರ್: ಪ್ರೀತಿ ಬಿ. ವಿಡಿಯೊ ಅನಾಲಿಸ್ಟ್: ಮಾಲಾ ರಂಗಸ್ವಾಮಿ.

ಬ್ಯಾಸ್ಕೆಟ್‌ಬಾಲ್: ಆರ್ಯನ್ಸ್, ಬುಲ್ಸ್ ಜಯಭೇರಿ

ಬೆಂಗಳೂರು: ಭರ್ಜರಿ ಆಟವಾಡಿದ ಆರ್ಯನ್ಸ್ ಬಿಸಿ ಮೈಸೂರು ಮತ್ತು ಯಂಗ್ ಬುಲ್ಸ್ ಬಿಸಿ ತಂಡಗಳು ಎಸ್. ರಂಗರಾಜನ್ ಸ್ಮಾರ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಸಿ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಆರ್ಯನ್ಸ್ 59–29ರಿಂದ ಮರ್ಚಂಟ್ಸ್ ಬಿಸಿ ದಾವಣಗೆರೆ ವಿರುದ್ಧ ಜಯಿಸಿತು. ಯಂಗ್ ಬುಲ್ಸ್ 59–34ರಿಂದ ವೈಸಿಎಸ್‌ಸಿ ತಂಡವನ್ನು ಪರಾಭವಗೊಳಿಸಿತು. ಇನ್ನುಳಿದ ಪಂದ್ಯಗಳಲ್ಲಿ ಡಿಆರ್‌ಡಿಒ 48–20ರಿಂದ ಪ್ರೊಟೆಕ್ ಚಾಲೆಂಜರ್ಸ್ ಮೈಸೂರು ಎದುರು, ವೈಎಂಎಂಎ 57–20ರಿಂದ ಮಿರಾಕಲ್ಸ್ ಬಿಸಿ ಹುಬ್ಬಳ್ಳಿ ಎದುರು, ಮಲ್ಲಸಜ್ಜನ ಬಿಸಿ ಧಾರವಾಡ 39–35ರಿಂದ ಪಟ್ಟಾಭಿರಾಮ ನಗರ ಬಿಸಿ ವಿರುದ್ಧ, ವೈಎಫ್‌ಬಿಸಿ ಕೋಲಾರ 77–65ರಿಂದ ಅಪ್ಪಯ್ಯ ಬಿಸಿ ಎದುರು ಗೆದ್ದವು. ಗ್ರೀನ್ಸ್ ದಾವಣಗೆರೆ ತಂಡವು 79–63ರಿಂದ ಬೆಂಗಳೂರು ಸ್ಪೋರ್ಟಿಂಗ್ ಎದುರು, ಕೆ.ಎಸ್.ಹೆಗ್ಡೆ, ನಿಟ್ಟೆ 77–51ರಿಂದ ಶಂಕರನಗರ ಬಿಸಿ ವಿರುದ್ಧ, ಭರತ್ ಎಸ್‌ಯು ತಂಡ 64–29ರಿಂದ ವಿಜಯನಗರ ಬಿಸಿ ಎದುರು, ಬ್ರದರ್ಸ್ ಬಿಸಿ 37–18ರಿಂದ ವೈಸಿಬಿಸಿ ಬಳ್ಳಾರಿ ಎದುರು ಜಯ ಸಾಧಿಸಿದವು. ಪಿನಾಕಿನಿ ಬಿಸಿ 69–55ರಿಂದ ಮೌಂಟ್ಸ್ ಕ್ಲಬ್ ಎದುರು, ಹಾಸನ ಎದುರು, ನ್ಯಾಷನಲ್ ಬಿಸಿ ಮೈಸೂರು 74–26ರಿಂದ ಎಸ್‌ಬಿಐ ತಂಡದ ಎದುರು, ನ್ಯೂ ವೇ ಆಫ್ ಲೈಫ್ ಬಿಸಿ ಕನಕಪುರ, ಒಮೇಗಾ ಬಿಸಿ ಎದುರು ಗೆದ್ದಿತು.

ಅಥ್ಲೆಟಿಕ್ಸ್: ಚಿನ್ನ ಗೆದ್ದ ತರಣ್‌ಜೀತ್

ವಾರಂಗಲ್ (ಪಿಟಿಐ): ದೆಹಲಿಯ ತರಣ್‌ಜೀತ್ ಕೌರ್ ಇಲ್ಲಿ ನಡೆಯುತ್ತಿರುವ 60ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ 100 ಮೀಟರ್ಸ್ ಓಟದಲ್ಲಿ ಮೊದಲಿಗರಾದರು.

ಪಂಜಾಬ್‌ನ ಹರ್ಮಿಲನ್ ಕೌರ್ ಬೇನ್ಸ್ 1500 ಮೀ. ಓಟದಲ್ಲಿ 19 ವರ್ಷ ಹಳೆಯ ದಾಖಲೆ ಮುರಿದರು.

ಎರಡು ವರ್ಷಗಳ ಹಿಂದೆ ಕಾರು ಡಿಕ್ಕಿ ಹೊಡೆದ ಪರಿಣಾಮ ತರಣ್‌ಜೀತ್ ಕುತ್ತಿಗೆಯ ಮೂಳೆ ಮುರಿದಿತ್ತು. ಚೇತರಿಸಿಕೊಂಡ ನಂತರ ಅವರು ಕಠಿಣ ಅಭ್ಯಾಸ ಮಾಡಿದ್ದರು. ಇಲ್ಲಿ 11.50 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ವೇಗದ ರಾಣಿಯಾದರು.

ಹರ್ಮಿಲನ್ ಕೌರ್ ಬೇನ್ಸ್ 1500 ಮೀ. ಓಟದಲ್ಲಿ 4 ನಿಮಿಷ, 5.39ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. 19 ವರ್ಷಗಳ ಹಿಂದೆ ಸುನಿತಾರಾಣಿ (4ನಿ, 06.03ಸೆ) ಅವರ ದಾಖಲೆಯನ್ನು ಮೀರಿದರು.


ರೂಟ್ಸ್ ಎಫ್‌ಸಿ ತಂಡದ ಮೈಥಿಲಿ (ಬಲ) ಹಾಗೂ ಜಿಆರ್‌ಕೆ ಗರ್ಲ್ಸ್ ಎಫ್‌ಸಿ ತಂಡದ ವೈಷ್ಣವಿ ಸುಭಾಷ್ ಅವರು ಚೆಂಡಿನ ಮೇಲೆ ಹತೋಟಿ ಸಾಧಿಸಲು ಪ್ರಯತ್ನಿಸಿದರು

ರೂಟ್ಸ್ ತಂಡಕ್ಕೆ ಭರ್ಜರಿ ಜಯ

ಬೆಂಗಳೂರು: ಮೈಥಿಲಿ ಗಳಿಸಿದ ಹ್ಯಾಟ್ರಿಕ್ ಗೋಲುಗಳು ರೂಟ್ಸ್ ಫುಟ್‌ಬಾಲ್ ಸ್ಕೂಲ್ ತಂಡದ ಗೆಲುವಿಗೆ ಕಾರಣವಾದವು. ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ ಸ್ಪೋರ್ಟಿಂಗ್ ಪ್ಲಾನೆಟ್ ಮಹಿಳೆಯರ 'ಎ' ಡಿವಿಷನ್ ಲೀಗ್ ಟೂರ್ನಿಯಲ್ಲಿ ಆ ತಂಡವು 7–1ರಿಂದ ಜಿಆರ್‌ಕೆ ಎಫ್‌ಸಿ ತಂಡವನ್ನು ಸೋಲಿಸಿತು. ಮೈಥಿಲಿ 12, 37 ಮತ್ತು 42ನೇ ನಿಮಿಷಗಳಲ್ಲಿ ವಿಜೇತ ತಂಡದ ಪರ ಯಶಸ್ಸು ಸಾಧಿಸಿದರು. ಸಂಜನಾ (13 ಮತ್ತು 60ನೇ ನಿ.), ಶ್ರಾವ್ಯಾ (24ನೇ ನಿ.) ಮತ್ತು ತ್ರಿಶಾ (54ನೇ ನಿ.) ಮಿಂಚಿದರು. ಜಿಆರ್‌ಕೆ ಪರ ರುಚಿ (59ನೇ ನಿ.) ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಪಿಎಎಸ್‌ಎಸ್ ಎಫ್‌ಸಿ 3–2ರಿಂದ ಯುನೈಟೆಡ್ ಎಫ್‌ಸಿ ಕೊಡಗು ತಂಡವನ್ನು ಸೋಲಿಸಿತು. ವಿಜೇತ ತಂಡದ ರಫಿಯಾ (36 ಮತ್ತು 44ನೇ ನಿ.) ಗುಂಜನ್ (14ನೇ ನಿ.) ಗೋಲು ಹೊಡೆದರೆ, ಕೊಡಗು ತಂಡದ ಪರ ಹರ್ಷಾ (30+1), ತನು ವಿಜಯ್ ಗಾವಡೆ (42ನೇ ನಿ.) ಗೋಲು ಗಳಿಸಿದರು.

ಬಳ್ಳಾರಿಯಲ್ಲಿ ರಾಷ್ಟ್ರೀಯ ಬಾಕ್ಸಿಂಗ್

ಕರ್ನಾಟಕದ ಕಿರಣ, ರಯಾನ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ/ಬೆಂಗಳೂರು: ಕರ್ನಾಟಕದ ಬಿ.ಕೆ. ಕಿರಣ್ ಮತ್ತು ಎಂ.ಡಿ. ರಯಾನ್ ಇಲ್ಲಿ ನಡೆಯುತ್ತಿರುವ ಪುರುಷರ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಬೌಟ್‌ಗಳಲ್ಲಿ ಜಯಿಸಿದರು.

57 ಕೆಜಿ ವಿಭಾಗದಲ್ಲಿ ಕಿರಣ್ 5–0ಯಿಂದ ಲಡಾಕ್‌ನ ಜಾಕೀರ್ ಹುಸೇನ್ ವಿರುದ್ಧ ಜಯಿಸಿದರು. 67 ಕೆಜಿ ವಿಭಾಗದಲ್ಲಿ ರಯಾನ್ 4–0ಯಿಂದ ದೆಹಲಿಯ ಭೂಪೇಶ್ ರುಹಾಲ್ ವಿರುದ್ಧ ಗೆದ್ದರು.

ಅಂತರರಾಷ್ಟ್ರೀಯ ಪದಕ ವಿಜೇತ, ಸರ್ವಿಸಸ್‌ನ ದೀಪಕ್ ಕುಮಾರ್ 51 ಕೆಜಿ ವಿಭಾಗದಲ್ಲಿ 5–0ಯಿಂದ ಬಿಹಾರದ ಅಮನ್ ಕುಮಾರ್ ವಿರುದ್ಧ ಜಯಿಸಿದರು.

ಈ ದಿನದಲ್ಲಿ ಸರ್ವಿಸಸ್ ಬಾಕ್ಸರ್‌ಗಳೇ ಹೆಚ್ಚು ಪಂದ್ಯಗಳಲ್ಲಿ ಮೇಲುಗೈ ಸಾಧಿಸಿದರು. ಅದರಲ್ಲಿ ಬಾರುನ್ ಸಿಂಗ್ (48ಕೆಜಿ) ಮತ್ತು ಆಕಾಶ್ (54ಕೆಜಿ) ಕ್ರಮವಾಗಿ ತೆಲಂಗಾಣದ ಡೋನಾಲ್ಡ್ ಜನುಮಾಲಾ ಮತ್ತು ಆಲ್ ಇಂಡಿಯಾ ಪೊಲೀಸ್‌ನ ರಾಕಿ ವಿರುದ್ಧ ಗೆದ್ದರು.

ದಳವೀರ್ ಸಿಂಗ್ ತೋಮರ್ (64ಕೆಜಿ) ಮತ್ತು ನವೀನ್ ಬೂರಾ (71ಕೆಜಿ) ಅವರೂ ಗೆದ್ದರು.

ಮಹಾರಾಷ್ಟ್ರದ ಅಜಯ್ ಪೆಂಡೊರ್ ಮಣಿಪುರದ ಇರಾಬೊತ್ ಹೀಗರುಜಮ್ ವಿರುದ್ಧ 51 ಕೆಜಿ ವಿಭಾಗದ ಬೌಟ್‌ನಲ್ಲಿ ಜಯಿಸಿದರು. 64ಕೆಜಿ ವಿಭಾಗದಲ್ಲಿ ಯಶ್ ಗೌಡ ಲಡಾಕ್‌ನ ಸೈಲೆಮ್ ಮಲಿಕ್ ವಿರುದ್ಧ ಮೇಲುಗೈ ಸಾಧಿಸಿದರು.

ಉತ್ತರಪ್ರದೇಶದ ಜಾವೇದ್ ಮತ್ತು ಚಂಡೀಗಡದ ರೋಹಿತ್ ಕುಮಾರ್ ಅವರು ಕ್ರಮವಾಗಿ 51ಕೆಜಿ ಹಾಗೂ 64ಕೆಜಿ ವಿಭಾಗದಲ್ಲಿ ಎರಡನೇ ಸುತ್ತಿಗೆ ಪ್ರವೇಶಿಸಿದರು.